


Scanned with CamScanner

# ನೆಮ್ಮದಿ ಬದುಕಿಗೆ ಇಷ್ಟಲಿಂಗ ಪೂಜೆ ಅವಶ್ಯ: ಮಲ್ಲಯ್ಯಸ್ವಾಮಿ



ಬಸವಕಲ್ಯಾಣ: ಮೋರಖಂಡಿ ಗ್ರಾಮದ ಸಿದ್ದೇಶ್ವರ ದೇವಾಲಯದಲ್ಲಿ ನಡೆದ ಸಾಮೂಹಿಕ ಲಿಂಗದೀಕ್ಷಾ ಕಾರ್ಯಕ್ರಮದಲ್ಲಿ ಮಲ್ಲಯ್ಯ ಸ್ವಾಮಿ ಹಿರೇಮಠ ಮಾತನಾಡಿದರು.

**ಬಸವಕಲ್ಯಾಣ:** ಮನುಷ್ಯನ ಬದುಕಿಗೆ ಇಷ್ಟಲಿಂಗಪೂಜೆ ಅವಶ್ಯವಾಗಿದೆ ಎಂದು ತ್ರಿಪುರಾಂತ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು. ತಾಲೂಕಿನ ಮೋರಖಂಡಿ ಗ್ರಾಮದ ಸಿದ್ದೇಶ್ವರ ದೇವಾಲಯದಲ್ಲಿ ನಡೆದ ಸಾಮೂಹಿಕ ಲಿಂಗದೀಕ್ಷಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಸ್ವಾಮೀಜಿ ಆಶೀರ್ವಚನ ನೀಡಿದರು.

ಜೀವನದಲ್ಲಿ ಆಸ್ತಿ-ಐಶ್ವರ್ಯ, ಅಧಿಕಾರ ಏನೆಲ್ಲ ಇದ್ದರು ಜೀವನದಲ್ಲಿ ನೆಮ್ಮದಿ ಇಲ್ಲದಾಗಿದೆ. ನೆಮ್ಮದಿ ಬದುಕಿಗೆ ಲಿಂಗಪೂಜೆ ಅವಶ್ಯವಾಗಿದೆ ಎಂದು ಹೇಳಿದರು.

ಇಷ್ಟಲಿಂಗ ವೀರಶೈವ ಲಿಂಗಾಯತ ಧರ್ಮದ ಕುರುಹು. ಜೀವಾತ್ಮವನ್ನು ಪರಮಾತ್ಮನ ಕಡೆಗೆ ಕೊಂಡಯ್ಯುವ ಮಾರ್ಗವೇ ಇಷ್ಟಲಿಂಗ ಪೂಜೆ. ಪ್ರತಿಯೊಬ್ಬರು ಲಿಂಗಪೂಜೆ ಮಾಡಬಹುದಾಗಿದೆ ಎಂದು ಹೇಳಿದರು.

ಹನ್ನೆರಡನೇ ಶತಮಾನದಲ್ಲಿ ಗುರು ಬಸವಣ್ಣನವರು ಎಲ್ಲ ಸಮಾಜದ ಶರಣರಿಗೆ ಲಿಂಗದೀಕ್ಷೆ ಕೊಡಿಸಿದ ನಂತರ ಅನುಭವ ಮಂಟಪದಲ್ಲಿ ಪ್ರವೇಶ ಮಾಡಿಸುತ್ತಿದ್ದರು. ಇಷ್ಟಲಿಂಗ ವೈಜ್ಞಾನಿಕವಾಗಿದೆ. ಪ್ರತಿಯೊಬ್ಬರು ಲಿಂಗ ಧರಿಸಬೇಕು. ನಿತ್ಯ ಇಷ್ಟಲಿಂಗ ಪೂಜೆ ಮಾಡಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ರೇವಣಪ್ಪ ವಾಂಜರಖೇಡೆ ಮಾತನಾಡಿ, ಬಹಿರಂಗ ಶುದ್ಧಿಗಿಂತಲೂ ಅಂತರಂಗದ ಶುದ್ಧಿ ಮಹತ್ವದ್ದಾಗಿದೆ. ಇಷ್ಟಲಿಂಗ ಪೂಜೆ ಅಂತರಂಗ ಶುದ್ಧಿ ಮಾಡುವ ಪೂಜೆಯಾಗಿದೆ ಎಂದು ಹೇಳಿದರು.

ಬಸವೇಶ್ವರ ದೇವಸ್ಥಾನ ವಿಶ್ವಸ್ಥ ಸಮಿತಿ ಸದಸ್ಯ ಮಲ್ಲಯ್ಯ ಸ್ವಾಮಿ ಹಿರೇಮಠ ಮಾತನಾಡಿ, ವೀರಶೈವ ಲಿಂಗಾಯತ ಧರ್ಮಕ್ಕೆ ಆದಿ-ಅನಾದಿ ಕಾಲದ ಇತಿಹಾಸವಿದೆ. ಇಷ್ಟಲಿಂಗದ ಮಹತ್ವವನ್ನು ಪ್ರತಿಯೊಬ್ಬರು ಅರಿತುಕೊಳ್ಳಬೇಕಿದೆ ಎಂದು ಹೇಳಿದರು.

ಬಸವಕಲ್ಯಾಣ ನಂದಿಧ್ವಜ ಸೇವಾ ಸಮಿತಿ ಅಧ್ಯಕ್ಷ ಸುಭಾಷ ಭಾವಗೆ, ಆನಂದ ಖಂಡಾಳೆ, ಮಾದವರಾವ ಬಿ., ಗುರುಪಾದಪ್ಪ ಖರುಣೆ, ಗಣೇಶ ಬುಂಜಗೆ, ಸಂಗಯ್ಯ ಸ್ವಾಮಿ ಖಟಗಿಮಠ, ರೇವಣಸಿದ್ದಯ್ಯ ಸ್ವಾಮಿ ಇದ್ದರು.

ಕಲಬುರಗಿ ಉದಯವಾಣಿ
ಶುಕ್ರವಾರ | ಜುಲೈ | 31 | 2015

■ ಜಾಫರವಾಡಿಯಲ್ಲಿ ಗಣೇಶೋತ್ಸವ ನಿಮಿತ್ತ ಗಣೇಶ ಯುವಕ ಮಂಡಳಿಯಿಂದ ಧಾರ್ಮಿಕ ಸಭೆ

# ಆರೋಗ್ಯಕರ ಸಮಾಜ ನಿರ್ಮಿಸಿ

**ಬಸವಕಲ್ಯಾಣ:** ಆರೋಗ್ಯಕ್ಕೆ ಹಾನಿಕರವಾದ ಗುಟಕಾ ಸೇರಿದಂತೆ ಇತರ ಚಟಗಳಿಗೆ ಯುವಕರು ಆಕರ್ಷಿತರಾಗದೇ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವ ಜತೆಗೆ ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಯುವಕರೆಲ್ಲರೂ ಕೈಜೋಡಿಸಬೇಕು ಎಂದು ಜಿಪಂ ಸದಸ್ಯೆ ಲತಾ ಶಾಂತಕುಮಾರ ಹಾರಕೂಡೆ ಯುವ ಸಮೂಹದಲ್ಲಿ ಮನವಿ ಮಾಡಿದರು.

ಗಣೇಶ ಉತ್ಸವ ನಿಮಿತ್ತ ತಾಲೂಕಿನ ಜಾಫರವಾಡಿಯಲ್ಲಿ ಗಣೇಶ ಯುವಕ ಮಂಡಳಿಯಿಂದ ಆಯೋಜಿಸಿದ ಧಾರ್ಮಿಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಇಲ್ಲಿ ಯಾರಿಗಾದರೂ ಗುಟಕಾ ಸೇರಿದಂತೆ ಯಾವುದೇ ಚಟಗಳು ಇದ್ದರೆ ಇಂದೇ ಬಿಡುತ್ತೇನೆ ಎಂದು ಗಣೇಶನ ಮುಂದೆ ಪ್ರತಿಜ್ಞೆ ಮಾಡಬೇಕು ಎಂದು ಕೋರಿದರು.

ಕುಟುಂಬ ಹಾಗೂ ಸಮಾಜದ ಮತ್ತು ದೇಶದ ಪ್ರಗತಿಯಲ್ಲಿ ಯುವಶಕ್ತಿ ಪಾತ್ರ ಅತ್ಯಂತ ಮಹತ್ವದ್ದಾಗಿದೆ, ಪ್ರತಿಯೊಬ್ಬ ಯುವಕರು ಜಾಗೃತರಾಗಿ ತಮ್ಮಲ್ಲಿರುವ ಶಕ್ತಿಯನ್ನು ಸಮರ್ಪಕವಾಗಿ ಬಳಸಿಕೊಂಡು ಗ್ರಾಮದ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ಜೆಡಿಎಸ್ ಮುಖಂಡ ಪುಷ್ಪರಾಜ ಹಾರಕೂಡೆ ಮಾತನಾಡಿ, ಕೃಷಿ, ಶಿಕ್ಷಣ ಹಾಗೂ ಸಾಮಾಜಿಕ ಭದ್ರತೆ ಸೇರಿದಂತೆ ವಿವಿಧ ಕಾರಣಕ್ಕಾಗಿ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಅರ್ಹಫಲಾನುಭವಿಗಳಿಗೆ ಕಲ್ಪಿಸಿಕೊಡಲು ಯುವಕರು ಶ್ರಮಿಸಬೇಕು ಎಂದರು.



ಗಣೇಶ ಉತ್ಸವ ನಿಮಿತ್ತ ಬಸವಕಲ್ಯಾಣ ತಾಲೂಕಿನ ಜಾಫರವಾಡಿಯಲ್ಲಿ ಗಣೇಶ ಯುವಕ ಮಂಡಳಿ ಆಯೋಜಿಸಿದ ಧಾರ್ಮಿಕ ಸಭೆ ಜಿಪಂ ಸದಸ್ಯೆ ಲತಾ ಶಾಂತಕುಮಾರ ಹಾರಕೂಡೆ ಉದ್ಘಾಟಿಸಿದರು. ತ್ರಿಪುರಾಂತ ಶ್ರೀಗಳು ಇತರರಿದ್ದರು.

ಸಾನ್ನಿಧ್ಯ ವಹಿಸಿದ ತ್ರೀಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಗಣೇಶ ಉತ್ಸವ ನಿಮಿತ್ತ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಧರ್ಮ, ಸಂಸ್ಕೃತಿ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸಿದ ಯುವಕರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಪಂ ಸದಸ್ಯರಾದ ಚಂದ್ರಕಾಂತ ಮುಳೆ, ಮಂಜುಳಾ ಉದಯಕುಮಾರ ಮುಳೆ, ಗ್ರಾಮದ ಪ್ರಮುಖರಾದ ಶಾಂತವಿಜಯ ಪಾಟೀಲ್, ಮಹಾರಾಜಪ್ಪ ಮುಳೆ, ಅಂಬಾರಾಯ ಮೇತ್ರೆ, ಗಣಪತಿ ದಾಸೂರೆ, ಚನ್ನಪ್ಪ ಪೊಲೀಸ್ ಪಾಟೀಲ್, ನಿವೃತ್ತ ಪಿಎಸ್ಐ ಸೋಮಶೇಖರ ಮಠಪತಿ, ಯುವಕ ಮಂಡಲದ ಅಧ್ಯಕ್ಷ ಭೀಮಾಶಂಕರ ಪಾಟೀಲ್, ಉಪಾಧ್ಯಕ್ಷ ಅಂಬ್ರೀಷ್ ಮುಳೆ, ಕಾರ್ಯದರ್ಶಿ ಷಣ್ಮುಕಯ್ಯ ಮಠಪತಿ, ಪ್ರಮುಖರಾದ ಸುರೇಶ ಮುಳೆ, ಶಿವರಾಜ ಮುಳೆ, ಅನೀಲ ಮುಳೆ, ಬಸವರಾಜ ಮುಳೆ, ಶಿವಾನಂದ ಪಾಟೀಲ್, ಮಲ್ಲಿಕಾರ್ಜುನ ಮುಳೆ, ಒಂಕಾರ ಮುಳೆ, ಶರಣು ಮುಳೆ, ಶರಣಪ್ಪ ಬೆಳಮಗೆ, ನಿಂಗರಾಜ ಬಿರಾದಾರ್, ಪ್ರಕಾಶ ಪಾಟೀಲ್, ಭಿಮಣ್ಣ ಭಗಲೆ, ಶ್ರೀಶೈಲ್ ಮೇತ್ರೆ, ಪವನ ಮುಳೆ ಭಾಗವಹಿಸಿದ್ದರು.

■ ಕುಟುಂಬ ಹಾಗೂ ಸಮಾಜದ ಮತ್ತು ದೇಶದ ಪ್ರಗತಿಯಲ್ಲಿ ಯುವಶಕ್ತಿ ಪಾತ್ರ ಅತ್ಯಂತ ಮಹತ್ವದ್ದಾಗಿದೆ, ಯುವಕರು ಜಾಗೃತರಾಗಿ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕು

ನಾಗರಾಜ ಬಿರಾದಾರ್ ಸ್ವಾಗತಿಸಿದರು. ಕಮಲಾಕರ ಬಿರಾದಾರ್ ವಂದಿಸಿದರು. ಸಿದ್ಧಲಿಂಗ ಬಿರಾದಾರ್ ನಿರೂಪಿಸಿದರು.

ಕಾರ್ಯಕ್ರಮದ ನಂತರ ಪ್ರಸಾದ ವಿತರಣೆ ಜರುಗಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಶುಕ್ರವಾರ 25 ಸೆಪ್ಟೆಂಬರ್ 2015 5
25 SEPTEMBER 2015

Scanned with CamScanner

# ಗುರುವಿನ ಮಹಿಮೆ ಅಗಾಧ: ಶ್ರೀ



ಬಸವಕಲ್ಯಾಣ ತಾಲೂಕಿನ ಕಾಂಬಳೆವಾಡಿ ಸಮೀಪದ ಆದಿನಾಥೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ತ್ರಿಪುರಾಂತ ಅಭಿನವ ಘನಲಿಂಗ ರುದ್ರುಮುನಿ ಶಿವಾಚಾರ್ಯರು ಮಾತನಾಡಿದರು.

**ವಿಕಸುದ್ದಿಲೋಕ** ಬಸವಕಲ್ಯಾಣ ಗ್ರಾಮೀಣ

ಹರ ಮುನಿದರೆ ಗುರುಕಾಯುವನು.ಗುರು ಮುನಿದರೆ ಯಾರು ಕಾಯುವರು. ದ್ದರಿಂದ ಗುರುವಿನ ಮಹಿಮೆ ನಿಜಕ್ಕೂ ಅಗಾಧವಾದದ್ದು ಎಂದು ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರುಮುನಿ ಶಿವಾಚಾರ್ಯರು ಹೇಳಿದರು.

ತಾಲೂಕಿನ ಕಾಂಬಳೆವಾಡಿ ಉರ್ಕಿ ಮಧ್ಯದ ನಿಸರ್ಗ ತಾಣವಾದ ಆದಿನಾಥೇಶ್ವರ ದೇವಸ್ಥಾನದಲ್ಲಿ ಅಧಿಕ ಮಾಸ ನಿಮಿತ್ತ ಹಮ್ಮಿಕೊಂಡಿದ್ದ ಆರನೇ ದಿವಸದ ಸತ್ಸಂಗ ಸಮಾರಂಭದ ಮಾತನಾಡಿದರು. ಪೂಜ್ಯರು ಗುರುವಿನ ವಾಣಿ, ದರ್ಶನ ಇವೆಲ್ಲಾ ಸಿಗಬೇಕಾದರೆ ನಾವು ಇಂತಹ ಆಶ್ರಮಗಳಲ್ಲಿ ಸಿಗುತ್ತದೆ ಎಂದರು. ಅನೇಕ ದೃಷ್ಟಾಂತ ನೀಡಿ ನಾವು ಧರ್ಮದ ಮಾರ್ಗದಲ್ಲಿ ಸಾಗಬೇಕು. ಇಂತಹ ಕಾರ್ಯಕ್ರಮ ಹಮ್ಮಿಕೊಂಡಿರುವ ನಾರಾಯಣ ಮಹಾರಾಜರ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದರು.

ತ್ರಿಪುರಾಂತದ ಶ್ರೀ ,ಕೀರ್ತನಕಾರರಾದ ಲಾತೂರಿನ ಬಾಬಾ ಮಹಾರಜ ಕಾಟಗಾಂವಕರ, ಚೆಂಡಕಾಪುರದ ಉಭಯ ಶ್ರೀಗಳು ಅಲ್ಲದೇ ಪತ್ರಕರ್ತರಾದ ನಾಗಪ್ಪಾ ನಿಣ್ಣೆ ಅವರನ್ನು ಸನ್ಮಾನಿಸಲಾಯಿತು.

ಸತ್ಸಂಗ ಕಾರ್ಯಕ್ರಮಕ್ಕೆ ಹಾರಕೂಡ ಹಿರೇಮಠ ಸಂಸ್ಥಾನದ ಡಾ.ಚನ್ನವೀರ ಶಿವಾಚಾರ್ಯರು, ಸಂಸದ ಭಗವಂತ ಖೂಬಾ ಇನ್ನಿತರರು ಆಗಮಿಸಿ ದರ್ಶನ ಪಡೆದರು. ಗ್ರಾಮದ ಹಿರಿಯರಾದ ಗೋವಿಂದರಾವ ಪಿಲ್ಲಂಗೋಲೆ, ವೆಂಕಟರಾವ ಪಾಶಾಮೆ, ವಿಶ್ವನಾಥ ಗೋಡೆ, ರಾಘವೇದ್ರ ಬೌದ್ಧೆ, ಉಪ ಪ್ರಾಚಾರ್ಯ ಶಾಹುರಾಜ ಪಾಶ್ಮೆ, ಭೀಮಾಶಂಕರ ಬೋಯಸಿ, ಭಾಗವತ ಬೌದ್ಧೆ, ವೀರನಾಥ ಸೇರಿದಂತೆ ಅನೇಕರಿದ್ದರು. ದಶರಥ ವಂದಿಸಿದರು.

ವಿಜಯ ಕರ್ನಾಟಕ VK

ಬುಧವಾರ, 15 ಜುಲೈ 2015, ಕಲಬುರಗಿ

---

ಸಾವಳಗಿ(ಕೆ): ಬಸವೇಶ್ವರ ಮೂರ್ತಿ ಅನಾವರಣ

# ‘ಕಾಯಕದಿಂದ ಗ್ರಾಮ ಸಮೃದ್ಧಿ’

ಪ್ರಜಾವಾಣಿ ವಾರ್ತೆ

ಆಳಂದ: ದೇಶದ ಅಭಿವೃದ್ಧಿ ಹಳ್ಳಿಗಳಿಂದ ಮಾತ್ರ ಸಾಧ್ಯ. ಗ್ರಾಮಗಳು ರೈತಾಪಿ ಸಂಸ್ಕೃತಿ ಹಾಗೂ ಕಾಯಕತತ್ವದಿಂದ ಮಾತ್ರ ಸಮೃದ್ಧಿ ಹೊಂದಲಿವೆ ಎಂದು ರಾಜ್ಯಸಭಾ ಸದಸ್ಯ ಬಸವರಾಜ ಪಾಟೀಲ ಸೇಡಂ ಹೇಳಿದರು.

ತಾಲ್ಲೂಕಿನ ಸಾವಳಗಿ (ಕೆ) ಗ್ರಾಮದಲ್ಲಿ ಶುಕ್ರವಾರ ಮಹಾದೇವ ದೇವರ ಜಾತ್ರೆ ಹಾಗೂ ಜಗಜ್ಯೋತಿ ಬಸವೇಶ್ವರರ ಮೂರ್ತಿ ಅನಾವರಣ ಗೊಳಿಸಿ ಮಾತನಾಡಿದರು.

ದುಡಿಯುವ ವರ್ಗ ಸೋಮಾರಿಗಳಾದರೆ ದೇಶ ಬಡವಾಗಲಿದೆ ಎಂದ ಅವರು ಗ್ರಾಮಗಳು ಮದ್ಯಪಾನ, ಜೂಜಾಟದಿಂದ ಮುಕ್ತವಾಗಿ ಸ್ವಚ್ಛತೆ, ನೈರ್ಮಲೀಕರಣ, ಸಮನ್ವಯ ಹಾಗೂ ಸಮೃದ್ಧ ಗ್ರಾಮಗಳಾಗಿ ರೂಪಗೊಳ್ಳಬೇಕಾದರೆ ಗ್ರಾಮದ ಪ್ರತಿಯೊಬ್ಬರ ಶ್ರಮ ಮತ್ತು ಸೇವೆ ಅಗತ್ಯ ಎಂದರು.

ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಸ್ವಾಮೀಜಿ ಮಾತನಾಡಿ, 12ನೇ ಶತಮಾನದ ಶರಣರು ಕಾಯಕಜೀವಿಗಳಾಗಿದಲ್ಲದೇ ಅವರು ಯಾವ ಕಾಯಕವನ್ನು ಮೇಲು, ಕೀಳು ಎಂದು ಭಾವಿಸಲಿಲ್ಲ. ಕಾಯಕದಲ್ಲಿ ಶುದ್ಧತೆ, ಪಾವಿತ್ರ್ಯಯನ್ನು ನೀಡಿದ ಬಸವಾದಿ ಶರಣರು ಪ್ರಸ್ತುತ ಸಮಾಜಕ್ಕೆ ಆದರ್ಶ ಎಂದರು.

ಜಿಲ್ಲಾ ಪಂಚಾಯಿತಿ ಸದಸ್ಯೆ ಜ್ಯೋತಿ ಲಕ್ಷ್ಮಿ ಎಸ್.ಶೆಟ್ಟಿ ಮಾತನಾಡಿ, ಜಗಜ್ಯೋತಿ ಬಸವೇಶ್ವರರು ಸಮಾಜದಲ್ಲಿ ಅಸಮಾನತೆ, ಅಜ್ಞಾನ ಹಾಗೂ ಮೂಢನಂಬಿಕೆ ಹೋಗಲಾಡಿಸಲು ಹೋರಾಡಿದ ಮಾನವತಾವಾದಿ ಅವರ ವಚನಗಳ ಮೌಲ್ಯಗಳನ್ನು ಆಚರಣೆಗೆ ತರಲು ಪ್ರಯತ್ನಿಸಬೇಕು ಎಂದು ತಿಳಿಸಿದರು.

ಹಾರಕೂಡ ಡಾ.ಚನ್ನವೀರ ಶಿವಾಚಾರ್ಯರು ಸಾನಿಧ್ಯ ವಹಿಸಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಲಕ್ಷ್ಮಿ ಪಾಟೀಲ, ಉಪಾಧ್ಯಕ್ಷ ಮಹಾಂತೇಶ ಮೂಲಿಮನಿ, ಶರಣಗೌಡ ಪಾಟೀಲ, ಶರಣು ಸಲಗರ, ಸುಭಾಷ ಮುರುಡ, ಅಂಬಾರಾಯ ಉಗಾದೆ, ಚಂದ್ರಾಮಪ್ಪ ಪೊ.ಪಾಟೀಲ, ಲಕ್ಷ್ಮಿಣರಾವ ಜವಳಗಿ, ಬಸವರಾಜ ಪಾಟೀಲ, ದಿಗಂಬರ ಬಿಲಗುಂದಿ, ಶಿವರಾಜ ಮಹಾಗಾಂವ, ಗೊರಕನಾಥ ಸಜ್ಜನ ಇದ್ದರು.

ಶಿವಪುತ್ರಪ್ಪ ಬೆಳಮಗಿ ನಿರೂಪಿಸಿದರು. ಮಹಾಂತೇಶ ಮೂಲಿಮನಿ ಸ್ವಾಗತಿಸಿದರು. ಶಿವಪುತ್ರಪ್ಪ ಬೋಳೆಗಾಂವ ವಂದಿಸಿದರು.

**ಮುಖ್ಯಾಂಶಗಳು**

- ಸಾವಳಗಿ(ಕೆ) ಮಹಾದೇವ ದೇವರ ಜಾತ್ರೆ
- ಭಕ್ತರಿಂದ ಹಾರಕೂಡ ಶ್ರೀಗಳಿಗೆ ಅದ್ದೂರಿ ಸ್ವಾಗತ
- ಗ್ರಾಮದ ಪ್ರಮುಖ ಬೀದಿಗಳಲ್ಲಿ ಕುಂಭಕಳಸ, ಪಲ್ಲಕ್ಕಿ ಮೆರವಣಿಗೆ

**ಸ್ವಾವಲಂಬನೆ ಹೊಂದಲು ಗ್ರಾಮದ ಯುವಕರು, ಮಹಿಳೆಯರು ಸ್ವಯಂ ಉದ್ಯೋಗದ ಜೊತೆ ಸ್ವಸಹಾಯ ಸಂಘ ಕಟ್ಟಿಕೊಳ್ಳಬೇಕು**

**ಬಸವರಾಜ ಪಾಟೀಲ ಸೇಡಂ**

ರಾಜ್ಯಸಭಾ ಸದಸ್ಯ



ಆಳಂದ ತಾಲ್ಲೂಕಿನ ಸಾವಳಗಿ(ಕೆ) ಗ್ರಾಮದಲ್ಲಿ ಬಸವೇಶ್ವರ ಮೂರ್ತಿ ಅನಾವರಣಗೊಳಿಸಿ ಅಭಿನವ ಘನಲಿಂಗ ರುದ್ರಮುನಿ ಸ್ವಾಮೀಜಿ ಮಾತನಾಡಿದರು

ಪ್ರಜಾವಾಣಿ

ಶನಿವಾರ • ಏಪ್ರಿಲ್ 4, 2015

Scanned with CamScanner

ಭಾನುವಾರ, 23 ಆಗಸ್ಟ್ 2015, ಕಲಬುರಗಿ ವಿಜಯ ಕರ್ನಾಟಕ ನಮ್ಮ

# ಸಿದ್ಧಾಂತ ಶಿಖಾಮಣಿ ಮೋಕ್ಷಕ್ಕೆ ದಾರಿದೀಪ



ಬಸವಕಲ್ಯಾಣದ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ಜರುಗಿದ 'ಸಿದ್ಧಾಂತ ಶಿಖಾಮಣಿ ಪಾರಾಯಣ'ದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಬಾಬುರಾವ ಬಿರಾದಾರ, ಷಣ್ಮುಖಪ್ಪ ಕಣಸೂರೆ, ಮಲ್ಲಿಕಾರ್ಜುನ ಕಲ್ಯಾಣಪ್ಪ ನಂದಿ ಉಪಸ್ಥಿತರಿದ್ದರು.

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ವೀರಶೈವ ಧರ್ಮದ ಸಂಸ್ಥಾಪಕ ರೇಣುಕಾಚಾರ್ಯರ ಬೋಧಿಸಿದ ಸಿದ್ಧಾಂತ ಶಿಖಾಮಣಿಯು ಮೋಕ್ಷಕ್ಕೆ ದಾರಿದೀಪವಾಗಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭೆ ಭಾಲ್ಕಿ ತಾಲೂಕು ಅಧ್ಯಕ್ಷ ಬಾಬುರಾವ ಬಿರಾದಾರ ಹೇಳಿದರು.

ಶ್ರಾವಣ ನಿಮಿತ್ತ ಮದ್ವೀರಶೈವ ಸದ್ಬೋಧನ ಸಂಸ್ಥೆ ಹಾಗೂ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಟ್ರಸ್ಟ್ ಸಹಯೋಗದಲ್ಲಿ ಸ್ಥಳೀಯ ತ್ರಿಪುರಾಂತದ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ 'ಸಿದ್ಧಾಂತ ಶಿಖಾಮಣಿ' ಕುರಿತು ನಡೆಯುತ್ತಿರುವ ಪಾರಾಯಣದಲ್ಲಿ ಅವರು 'ಶಿಕ್ಷಾ-ಗುರು- ಸ್ಥಳ' ವಿಷಯವಾಗಿ ಉಪನ್ಯಾಸ ನೀಡಿದರು.ತ್ರಿಪುರಾಂತ ಗವಿ ಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಉದ್ಯಮಿ ಷಣ್ಮುಖಪ್ಪ ಕಣಸೂರೆ ಮುಖ್ಯ ಅತಿಥಿಗಳಾಗಿದ್ದರು. ಜಲಾನಯನ ಇಲಾಖೆ ನಿವೃತ್ತ ಅಧಿಕಾರಿ ಮಲ್ಲಿಕಾರ್ಜುನ ಕಲ್ಯಾಣಪ್ಪ ನಂದಿ ಅಧ್ಯಕ್ಷತೆ ವಹಿಸಿದ್ದರು.

ಗವಿಮಠ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಗುಂಡಪ್ಪ ಬಿರಾದಾರ, ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಅಧ್ಯಕ್ಷ ವೀರಣ್ಣ ಶೀಲವಂತ. ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ. ಬಸವಂತಪ್ಪ ಲವಾರೆ. ಬಸವರಾಜ ಸ್ವಾಮಿ, ಸೂರ್ಯಕಾಂತ ಶೀಲವಂತ ಉಪಸ್ಥಿತರಿದ್ದರು.

ರುದ್ರೇಶ್ವರ ವಿರುಪಾಕ್ಷ ಸ್ವಾಮಿ ಗೋಟ್ರಾ ಪ್ರಾರ್ಥಿಸಿದರು. ರೇವಣ ಸಿದ್ಧಯ್ಯ ಮಠಪತಿ ಸ್ವಾಗತಿಸಿದರು. ಕಾಶಿನಾಥ ಸ್ವಾಮಿ ನಿರೂಪಿಸಿದರು. ರೇವಣಸಿದ್ಧಯ್ಯ ವಸ್ತ್ರದ ವಂದಿಸಿದರು.

# ಪೂಜೆ-ಪುನಸ್ಕಾರದಿಂದ ಮಾನಸಿಕ ನೆಮ್ಮದಿ:ತ್ರಿಪುರಾಂತಶ್ರೀ



ಬಸವಕಲ್ಯಾಣ ತಾಲೂಕಿನ ಮೋರಖಂಡಿ ಗ್ರಾಮದ ಶ್ರೀ ಸಿದ್ದೇಶ್ವರ ದೇವಾಲಯದಲ್ಲಿ ನಡೆದ ಇಷ್ಟಲಿಂಗ ಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಭಕ್ತ ಸಮೂಹ.

■ **ವಿಕ ಸುದ್ದಿಲೋಕ** ಬಸವಕಲ್ಯಾಣ (ಗ್ರಾಮೀಣ )

ನಿತ್ಯ ಪೂಜೆ-ಪುನಸ್ಕಾರಗಳಲ್ಲಿ ತೊಡ ಗುವುದರಿಂದ ನಮ್ಮ ಮನಸ್ಸಿಗೆ ಶಾಂತಿ-ನೆಮ್ಮದಿ ಹಾಗೂ ಮನಸ್ಸು ಏಕಾಗ್ರತೆಗೊಳ್ಳಲಿದೆ ಎಂದು ತ್ರಿಪುರಾಂತದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತಾಲೂಕಿನ ಮೋರಖಂಡಿ ಗ್ರಾಮದ ಶ್ರೀ ಸಿದ್ದೇಶ್ವರ ದೇವಾಲಯದಲ್ಲಿ ಹಮ್ಮಿಕೊಂಡಿದ್ದ ಸಾಮೂಹಿಕ ಲಿಂಗ ದೀಕ್ಷಾ ಕಾರ್ಯಕ್ರಮದಲ್ಲಿ ನೇತೃತ್ವ ವಹಿಸಿ ಮಾತನಾಡಿದರು.

ಇಂದಿನ ವೈಜ್ಞಾನಿಕ ಯುಗದಲ್ಲಿ ಇಷ್ಟಲಿಂಗಗಳು ಮಾಯವಾಗುತ್ತಿರುವುದು ನಮ್ಮ ದುರ್ದೈವದ ಸಂಗತಿಯಾಗಿದೆ. ಇಷ್ಟಲಿಂಗವು ವೀರಶೈವ ಲಿಂಗಾಯತ ಧರ್ಮದ ಕುರುಹು.ಹೀಗಾಗಿ ಪ್ರತಿಯೊಬ್ಬರು ಲಿಂಗಪೂಜೆ ಮಾಡಬೇಕು ಎಂದು ಸಲಹೆ ನೀಡಿದರು.ಜೀವಾತ್ಮವನ್ನು ಪರಮಾತ್ಮಾನ ಕಡೆಗೆ ಕೊಂಡೊಯ್ಯುವ ಮಾರ್ಗವೇ ಲಿಂಗಪೂಜೆ. 12ನೇ ಶತಮಾನದಲ್ಲಿ ಬಸವಣ್ಣನವರು ಎಲ್ಲಾ ಶರಣರಿಗೆ ಲಿಂಗ ದೀಕ್ಷೆ ಕೊಡಿಸಿದ ನಂತರವೇ ಅನುಭವ ಮಂಟಪ ಪ್ರವೇಶಕ್ಕೆ ಅವಕಾಶ ನೀಡಿದ್ದರು ಎಂದರು.ಅಧ್ಯಕ್ಷತೆ ವಹಿಸಿದ್ದ ರೇವಣಪ್ಪಾ ವಾಂಜರಖೇಡೆ ಮಾತನಾಡಿ, ಇಷ್ಟಲಿಂಗವು ನಮ್ಮ ಅಂತರಂಗವನ್ನು ಶುದ್ಧಿ ಮಾಡುತ್ತದೆ. ತಮ್ಮ ತಮ್ಮ ಕಾಯಕದಲ್ಲಿಯೇ ದೇವರನ್ನು ಕಾಣಬಹುದು ಎಂದು ಹೇಳಿದರು. ಮಲ್ಲಯ್ಯ ಸ್ವಾಮಿ ಹಿರೇಮಠ ಮಾತನಾಡಿ, ವೀರಶೈವ ಲಿಂಗಾಯತ ಧರ್ಮ ಆದಿ ಅನಾದಿ ಕಾಲದಿಂದ ಬಂದಿದೆ ಎಂದರು.ಈ ಸಂದರ್ಭದಲ್ಲಿ ಬಸವಕಲ್ಯಾಣ ನಂದಿಧ್ವಜ ಸೇವಾ ಸಮಿತಿಯ ಅಧ್ಯಕ್ಷ ಸುಭಾಷ ಬಾವಗೆ, ಆನಂದ ಖಂಡಾಳೆ, ಮಾದವರಾವ ಭೋಚಲೆ, ಗುರುಪಾದಪ್ಪ ಖರುಣೆ, ಗಣೇಶ ಬುಂಜಗೆ, ಸಂಗಯ್ಯ ಸ್ವಾಮಿ ಖಟಗಿಮಠ, ರೇವಣಸಿದ್ಧಯ್ಯ ಸ್ವಾಮಿ ಸೇರಿದಂತೆ ಅನೇಕರಿದ್ದರು.

ವಿಜಯ ಕರ್ನಾಟಕ ಗುರುವಾರ,30 ಜುಲೈ 2015, ಕಲಬುರಗಿ

Scanned with CamScanner



# ಧರ್ಮದ ಮಾರ್ಗದಲ್ಲಿ ನಡೆಯಬೇಕು : ತ್ರಿಪುರಾಂತ ಶ್ರೀ

**ಬಸವಕಲ್ಯಾಣ**

ಧಮದ ಮಾರ್ಗದಲ್ಲಿ ನಡೆದರೆ ಸುಖ,ಶಾಂತಿ,ನೆಮ್ಮದಿ ಪ್ರಾಪ್ತಿಯಾಗುತ್ತದೆ. ಹೀಗಾಗಿ ಪ್ರತಿಯೊಬ್ಬರು ಧರ್ಮದ ಮಾರ್ಗದಲ್ಲಿ ನಡೆಯಬೇಕು ಎಂದು ತ್ರಿಪುರಾಂತ ಗವಿಮಠದ ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದರು.

ತಾಲೂಕಿನ ಕಾಂಬಳೆವಾಡಿ ಉರ್ಕಿ ಮಧ್ಯದಲ್ಲಿರುವ ನಿಸರ್ಗ ತಾಣವಾದ ಆದಿನಾಥೇಶ್ವರ ದೇವಸ್ಥಾನದಲ್ಲಿ ಅಧಿಕ ಮಾಸ ನೀಮಿತ್ಯ ಆರನೇ ದಿವಸದ ಸತ್ಸಂಗ ಸಮಾರಂಭದ ಪ್ರವಚನದಲ್ಲಿ ಭಾಗವಹಿಸಿ ಮಾತನಾಡಿದ ಪೂಜ್ಯರು ಗುರುವಿನ ವಾಣಿ, ದರ್ಶನ ಇವೆಲ್ಲ ಸಿಗಬೇಕಾದರೆ ಇಂತಹ ಆಶ್ರಮಗಳಲ್ಲಿ ಸತ್ಸಂಗದಲ್ಲಿ ಸಿಗುತ್ತದೆ ಎಂದು ಅನೇಕ ದೃಷ್ಟಾಂತ ನೀಡಿ ನಾವು ಧರ್ಮದ ಮಾರ್ಗದಲ್ಲಿ ಸಾಗಬೇಕು. ಇಂತಹ ಕಾರ್ಯಕ್ರಮ ಹಮ್ಮಿಕೊಂಡ ಪೂಜ್ಯ ನಾರಾಯಣ ಮಹಾರಾಜರ ಕಾರ್ಯ ನಿಜಕ್ಕೂ ಶ್ಲಾಘನೀಯವೆಂದರು.



ಬಸವಕಲ್ಯಾಣ ತಾಲೂಕಿನ ಕಾಂಬಳೆವಾಡಿ ಸಮೀಪದ ಆದಿನಾಥೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡ ಆದೀಕ ಮಾಸದ ಆರನೇ ಸತ್ಸಂಗದಲ್ಲಿ ತ್ರಿಪುರಾಂತ ಪೂಜ್ಯ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ತ್ರಿಪುರಾಂತದ ಪೂಜ್ಯರನ್ನು ಕೀರ್ತನಕಾರರಾದ ಲಾತೂರಿನ ಬಾಬಾ ಮಹಾರಜ ಕಾಟಗಾಂವಕರ, ಚಂಡಕಾಪೂರದ ಉಭಯ ಪೂಜ್ಯರನ್ನು ಅಲ್ಲದೆ ಪತ್ರಕರ್ತರಾದ ನಾಗಪ್ಪಾ ನಿಣ್ಣೆಯವರನ್ನು ಪೂಜ್ಯ ನಾರಾಯಣ ಮಹಾರಾಜರು ಶಾಲು ಹೊದಿಸಿ ಸನ್ಮಾನಿಸಿ ಎಲ್ಲರ ಸಹಕಾರದಿಂದ ದೇವಸ್ಥಾನದ ವಾತವರಣ ಉತ್ತಮಗೊಂಡಿದೆ ಎಂದರು.

ಸತ್ಸಂಗ ಕಾರ್ಯಕ್ರಮಕ್ಕೆ ಹಾರಕೂಡ ಹಿರೇಮಠ ಸಂಸ್ಥಾನದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು, ಬೀದರ ಲೋಕಸಭಾ ಸದಸ್ಯ ಭಗವಂತ ಖೂಬಾ ಇನ್ನಿತರರು ಆಗಮಿಸಿ ದರ್ಶನ ಪಡೆದು ಪೂಜ್ಯರ ಕಾರ್ಯಕ್ಕೆ ಸಹಕಾರ ನೀಡುವುದಾಗಿ ತಿಳಿಸಿದರು.

ಗ್ರಾಮದ ಹಿರಿಯರಾದ ಗೋವಿಂದರಾವ ಪಿಲ್ಲಂಗೋಲೆ, ವೆಂಕಟರಾವ ಪಾಶಾಮೆ, ವಿಶ್ವನಾಥ ಗೋಡೆ, ರಾಘವೇಂದ್ರ ಬೌದ್ಧೆ, ಉಪ ಪ್ರಾಚಾರ್ಯ ಶಾಹುರಾಜ ಪಾಶ್ಮೆ, ಭೀಮಾಶಂಕರ ಬೋಯಿಸಿ, ಭಾಗವತ ಬೌದ್ಧೆ, ವೀರನಾಥ ಸೇರಿದಂತೆ ಇನ್ನಿತರರು ಭಾಗವಹಿಸಿ ಪೂಜ್ಯರ ಕಾರ್ಯಕ್ಕೆ ಸಹಕರಿಸಿದರು. ವಂದನಾರ್ಪಣೆ ದಶರಥ ಸಲ್ಲಿಸಿದರು.



ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಸೋಮವಾರ
26 ಅಕ್ಟೋಬರ್ 2015
26 OCTOBER 2015

Scanned with CamScanner

# ಜಮಾತೆ ಇಸ್ಲಾಮಿ ಹಿಂದ್‌ನಿಂದ ಇಫ್ತಾರ್ ಕೂಟ

ಬಸವಕಲ್ಯಾಣ: ಒಳ್ಳೆಯ ಮಾತುಗಳನ್ನು ಪಾಲನೆ ಮಾಡುವರ ಸಂಖ್ಯೆ ಕಡಿಮೆಯಾಗುತ್ತದೆ ಎಂದು ಬೀದರ್‌ನ ಮೌಲಾನಾ ಮುಹ್ಮದ್ ಫೈಹಿಮೊದ್ದೀನ್ ಕಳವಳ ವ್ಯಕ್ತಪಡಿಸಿದರು.

ಜಮಾತೆ ಇಸ್ಲಾಮಿ ಹಿಂದ್ ಸ್ಥಳೀಯ ಘಟಕದಿಂದ ನಗರದ ಹಳೇ ತಹಸಿಲ್ ಬಳಿಯ ಸರ್ಕಾರಿ ಸಮುದಾಯ ಭವನದಲ್ಲಿ ಆಯೋಜಿಸಿದ ಇಫ್ತಾರ್ ಸೌಹಾರ್ಧ ಕೂಟದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸೃಷ್ಟಿಕರ್ತ ಬಯಸಿದಂತೆ ಎಲ್ಲರೂ ಬದುಕುತ್ತಿದ್ದೇವೆಯೇ ಎನ್ನುವ ಚಿಂತನೆ ಮಾಡುವುದು ಅಗತ್ಯವಾಗಿದೆ ಎಂದರು.

ಗೋರ್ಟಾದ ಡಾ.ರಾಜಶೇಖರ್ ಶ್ರೀ ಮಾತನಾಡಿ, ಜನಕಲ್ಯಾಣ ಬಯಸುವುದೇ ಧರ್ಮ. ಒಳ್ಳೆಯದನ್ನು ಸ್ವೀಕಾರ ಮಾಡುವ ಮನೋಭಾವ




ಬಸವಕಲ್ಯಾಣ ಹಳೇ ತಹಸಿಲ್ ಬಳಿಯ ಸಕಾರಿ ಸಮುದಾಯ ಭವನದಲ್ಲಿ ಆಯೋಜಿಸಿದ ಇಫ್ತಾರ್ ಸೌಹಾರ್ಧ ಕೂಟದಲ್ಲಿ ಮೌಲಾನಾ ಮಹ್ಮದ್ ಫೈಹಿಮೊದ್ದೀನ್ ಮಾತನಾಡಿದರು.

ಎಲ್ಲರು ಬೆಳೆಸಿಕೊಳ್ಳಬೇಕು. ಏಕದೇವೋಪಾಸನೆ ಆತ್ಮಬಲ ಮತ್ತು ಶ್ರದ್ಧೆ ಹೆಚ್ಚಿಸುತ್ತದೆ. ಆಚರಣೆಗೆ ಎಲ್ಲ ಧರ್ಮದಲ್ಲಿಯೂ ಮಹತ್ವ ನೀಡಲಾಗಿದೆ ಎಂದರು. ಘನಲಿಂಗರುದ್ರಮುನಿ ಶ್ರೀ ಮಾತನಾಡಿ, ರಂಜಾನ್ ಪವಿತ್ರವಾದ ಮಾಸವಾಗಿದೆ. ನಾವೆಲ್ಲರೂ ಒಂದು ಎನ್ನುವ ಭಾವನೆಯನ್ನು ಮೂಡಿಸುವ ಮಹತ್ವದ ಕಾರ್ಯ ಜಮಾತೆ ಇಸ್ಲಾಮಿ ಹಿಂದ್ ಸಂಘಟನೆ ಮಾಡಿಕೊಂಡು ಬರುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕೆಪಿಸಿಸಿ ಕಾರ್ಯದರ್ಶಿ ಬಿ. ನಾರಾಯಣರಾವ, ಪ್ರಾಚಾರ್ಯ ನಿಜಾಮೊದ್ದೀನ್, ವಕೀಲರ ಸಂಘದ ತಾಲೂಕು ಅಧ್ಯಕ್ಷ ಗಿರಿಧರ ಗುರ್ಜಾರ ಮಾತನಾಡಿದರು.

ಸಹಾಯಕ ಆಯುಕ್ತ ಡಾ.ಶಂಕರ ವಣಿಕ್ಯಾಳ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಆಶೀಫ್ ಹಾಜಿ, ಸಿಪಿಐ ಟಿ. ಸಂಜಬುಕುಮಾರ, ಡಾ. ಜಿ.ಎಸ್ .ಭುರಾಳೆ, ಪ್ರೌಢ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಯೋಗಿರಾಜ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ದಿಲೀಪ ಸಾಗಾಂವೆ ಉಪಸ್ಥಿತರಿದ್ದರು.

ಪವಿತ್ರ ಕುರ್‌ಆನ್ ಪಠಣವನ್ನು ಇಜಾರುಲ್ ಹಕ್ ಮಾಡಿದರು. ಜಮಾತೆ ಇಸ್ಲಾಮಿ ಹಿಂದ್ ಸ್ಥಳೀಯ ಘಟಕದ ಅಧ್ಯಕ್ಷ ಯುಸುಫೊದ್ದೀನ್ ನೀಲಂಗೆಕರ್ ಸ್ವಾಗತಿಸಿದರು. ಮುಜಾಹಿದ ಪಾಶಾ ಖುರೇಶಿ ವಂದಿಸಿದರು. ಕಲೀಮ್ ಆಬೇದ್ ನಿರೂಪಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಮಂಗಳವಾರ
7 ಜುಲೈ 2015
7 JULY 2015

# ಸಮಾಜಕ್ಕೆ ಧಾರ್ಮಿಕ ಸಂಸ್ಕಾರ ಅಗತ್ಯ



ಬಸವಕಲ್ಯಾಣದ ಶಿವಪೂರನಲ್ಲಿ ಆಯೋಜಿಸಿದ ಶ್ರೀ ಬಾಬಾ ಸಾಹೇಬ ವಾರದ ಅವರ ಸ್ಮರಣೋತ್ಸವ ಹಾಗೂ ಹತ್ತನೇ ನಂದಿ ಧ್ವಜ ತರಬೇತಿ ಸಮಾರೋಪದಲ್ಲಿ ರೇವಣಪ್ಪ ವಾಂಜರಖೇಡೆ ಅವರ ತುಲಾಭಾರ ನಡೆಯಿತು.

ಬಸವಕಲ್ಯಾಣ: ಆಧುನಿಕತೆಯ ಆಕರ್ಷಣೆಯಲ್ಲಿ ನೈತಿಕ ಮೌಲ್ಯಗಳು ಕುಸಿಯುತ್ತಿದ್ದು, ಜನರಲ್ಲಿ ಮಾನವೀಯ ಮೌಲ್ಯಗಳು ಮಾಯವಾಗುತ್ತಿವೆ. ಹೀಗಾಗಿ ಸಮಾಜಕ್ಕೆ ಧಾರ್ಮಿಕ ಸಂಸ್ಕಾರ ಆಗತ್ಯವಾಗಿದೆ ಎಂದು ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಕಳವಳ ವ್ಯಕ್ತಪಡಿಸಿದರು.

ಶಿವಪೂರನ ಉಮಾಕಾಂತ ಬಿರಾದಾರ ಅವರ ನಿವಾಸದ ಆವರಣದಲ್ಲಿ ನವ ತರುಣ ನಂದಿ ಧ್ವಜ ಸೇವಾ ಸಮಿತಿಯಿಂದ ಆಯೋಜಿಸಿದ ಶ್ರೀ ಬಾಬಾ ಸಾಹೇಬ ವಾರದ ಅವರ ಸ್ಮರಣೋತ್ಸವ ಹಾಗೂ ಹತ್ತನೇ ನಂದಿ ಧ್ವಜ ತರಬೇತಿ ಸಮಾರೋಪ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಬಸವೇಶ್ವರರ ಜಾತ್ರೆಗೆ ಭದ್ರ ಬುನಾದಿ ಹಾಕಿಕೊಟ್ಟವರು ಲಿಂ. ಬಾಬಾ ಸಾಹೇಬ ವಾರದ ಅವರು ಎಂದು ಸ್ಮರಿಸಿದರು. ಸಮಾಜ ದಾರಿ ತಪ್ಪುತ್ತಿದ್ದಾಗ ತಿದ್ದುವ ಕೆಲಸ ಗುರುವಿನದಾಗಿದೆ. ಅಂತೆಯೇ ಪುರ್ವಜರು ಮನೆಗೊಬ್ಬರು ಗುರು, ಊರಿಗೊಂದು ಮಠ ಕಟ್ಟಿದ್ದಾರೆ ಎಂದ ಶ್ರೀಗಳು, ಪೂಜ್ಯ ವಾರದ ಅವರ ಪುಣ್ಯ ಸ್ಮರಣೋತ್ಸವ ಆಚರಿಸುತ್ತಿರುವ ಸಂಘಟಕ ಕಾರ್ಯಕ್ಕೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಕಲಬುರಗಿಯ ಉಪನ್ಯಾಸಕಿ ಡಾ. ನೀಲಾಂಬಿಕಾ ಪೊಲೀಸ್ ಪಾಟೀಲ್ ಮಾತನಾಡಿ, ಗುರು ಬಸವಣ್ಣನವರ ಕಾಯಕ ಕ್ಷೇತ್ರವಾದ ಬಸವಕಲ್ಯಾಣ ಅತ್ಯಂತ ಪವಿತ್ರ. ಈ ಸ್ಥಳವನ್ನು ಭಕ್ತಿಯಿಂದ ಕಾಣಬೇಕು. ಇಲ್ಲಿ ನಡೆಯುವ ಧಾರ್ಮಿಕ, ಸಾಹಿತ್ಯಿಕ ಮತ್ತು ಸಾಮಾಜಿಕ ಕಾರ್ಯಗಳಿಗೆ ಜನರು ಬೆಂಬಲಿಸಬೇಕು ಎಂದು ಸಲಹೆ ನೀಡಿದರು.

ಬೀದರ್ ರಜೀಯಾ ಬಳಬಟ್ಟೆ ಮಾತನಾಡಿ, 12ನೇ ಶತಮಾನದಲ್ಲಿ ಮಹಿಳೆಯರಿಗೆ ವಿಶಿಷ್ಟ ಸ್ಥಾನಮಾನ ನೀಡಿದವರು ಬಸವಾದಿ ಶರಣರು. ಅಂದು ಸ್ತ್ರೀ ಸಮಾನತೆ ಮತ್ತು ಸ್ವಾತಂತ್ರ್ಯತೆಯನ್ನು ಶರಣರು ಕಲ್ಪಿಸಿದ್ದರು. ಇಂಥಹ ನಮ್ಮ ಭವ್ಯ ಸಂಸ್ಕೃತಿಯಿಂದ ವಿಮುಖರಾಗಬಾರದು ಎಂದು ಹೇಳಿದರು. ಪ್ರೀತಿ ನರೇಂದ್ರ ಮಾತನಾಡಿದರು.

ಇದೇ ಸಂದರ್ಭದಲ್ಲಿ ಹಿರಿಯ ಜೀವಿ ರೇವಣಪ್ಪ ವಾಂಜರಖೇಡೆ ದಂಪತಿಯನ್ನು ತುಲಾಭಾರ ಮಾಡಿ, ಸನ್ಮಾನಿಸಲಾಯಿತು. ಬಿಡಿಪಿಸಿ ಅಧ್ಯಕ್ಷ ದೇವಸ್ಥಾನ ಅಧ್ಯಕ್ಷ ಮಲ್ಲಪ್ಪ ಲಾತೂರೆ, ಕಾರ್ಯದರ್ಶಿ ರೇವಣಪ್ಪ ರಾಯವಾಡೆ, ವಿಶ್ವಸ್ಥ ಸಮಿತಿ ಅಧ್ಯಕ್ಷ ಗುರುಪಾದಪ್ಪ ಗಡಿಯಾಳ ಸ್ವಾಮಿ, ಬಸಣ್ಣ ಧನ್ನೂರೆ, ಜಗನ್ನಾಥ ಕನಶೆಟ್ಟೆ, ವೈಜಪ್ಪ ಬುಡಗೆ, ಬಸಮ್ಮ ಧಮಾರೆ, ಶಿವಪ್ಪ ಚಪಾತೆ, ಬಾಬುರಾವ ಧುಮಾಳೆ, ಗುರುಪಾದಪ್ಪ ಖರೂಣೆ, ಬಸಣ್ಣ ಭದಾಡೆ, ಮಡಿವಾಳಪ್ಪ ಪಾಟೀಲ್, ಸುಶೀಲಾಬಾಯಿ ಧನ್ನೂರೆ ಹಾಗೂ ದಾಸೋಹ ಸೇವೆ ಮಾಡಿದ ಶಿವಲಿಲಾ ಉಮಾಕಾಂತ ಬಿರಾದಾರ, ಪತ್ರಕರ್ತ ನಾಗಪ್ಪ ನಿಣ್ಣೆ ಹಾಗೂ ವ್ರತ ಆಚರಿಸುವ ನಂದಿ ಧ್ವಜದ ಯುವಕರಿಗೆ ಸನ್ಮಾನಿಸಲಾಯಿತು.

ನಂದಿ ಧ್ವಜದ ಗೌರವಾಧ್ಯಕ್ಷ ಸುಭಾಷ ಬಾವಗೆ, ಅಧ್ಯಕ್ಷ ಕಲ್ಲಯ್ಯಾ ಮಠಪತಿ, ಕಾರ್ಯದರ್ಶಿ ಸಂಜು ಶಾಶಟ್ಟೆ, ಖಜಾಂಚಿ ಸಾಗರ ಲಾಡಕುಂಬಾರ ಉಪಸ್ಥಿತರಿದ್ದರು. ಕವಿತಾ ಮಶೆಟ್ಟೆ ಸ್ವಾಗತಿಸಿದರು. ಬಸವರಾಜ ಖಂಡಾಳೆ ನಿರೂಪಿಸಿದರು. ಶಿಕ್ಷಕ ಮಲ್ಲಪ್ಪ ಕೋಟೆ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಗುರುಬಸವ ತಬಲಾ ಸಾಥ್ ನೀಡಿದರು. ನಂದಿ ಧ್ವಜ ಸಮಿತಿ ಸದಸ್ಯ ದಿ. ಶ್ರೀಕಾಂತ ಸದಾನಂದ ಮೆಟಗೆ ಅವರ ಅಕಾಲಿಕ ಮರಣಕ್ಕಾಗಿ ಎರಡು ನಿಮಿಷ ಮೌನಾಚಾರಣೆ ಮಾಡಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಇದಕ್ಕೂ ಮುನ್ನ ಬೆಳಗ್ಗೆ ಅಲ್ಲಮ ಪ್ರಭುದೇವರ ಗದ್ದುಗೆ ಮಠದಲ್ಲಿ ನಂದಿ ಧ್ವಜಗಳ ಪೂಜೆ ನೆರವೇರಿಸಿದ ನಂತರ ನಂದಿ ಧ್ವಜಗಳ ಮೆರವಣಿ ಜರುಗಿತು. ಅರಿವಿನ ಮನೆ, ಅಕ್ಕನಾಗಮ್ಮನ ಗವಿ, ತ್ರಿಪುರಾಂತಕೇಶ್ವರ ದೇವಾಲಯ, ಶ್ರೀ ಮಡಿವಾಳ ಮಾಚೀದೇವರ ವೃತ್ತ, ಶಿವಪೂರ ರಸ್ತೆ ಮೂಲಕ ನಾಗಣ್ಣ ಕಟ್ಟೆ ವರೆಗೆ ಮೆರವಣಿಗೆ ಮಾಡಲಾಯಿತು. ನಂತರ ಇಲ್ಲಿ ನಂದಿ ಧ್ವಜಗಳನ್ನು ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಶ್ರೀ ಸಿದ್ದೇಶ್ವರ ಮಂದಿರ ಮಾರ್ಗವಾಗಿ ಮಹಾದೇವ ಮಂದಿರಕ್ಕೆ ಮೆರವಣಿಗೆ ತಲುಪಿತು.

ಮಂಗಳವಾರ
7 ಏಪ್ರಿಲ್ 2015
7 APRIL 2015
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI

Scanned with CamScanner

# ಸೃಜನಶೀಲ ಚಿಂತನೆ ಅವಶ್ಯ




ಬಸವಕಲ್ಯಾಣ ಪುಣ್ಯಕೋಟಿ ಕಾಲೇಜಿನಲ್ಲಿ ಉದ್ಯಮಿ ಸುನೀಲ ಪಾಟೀಲ್ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇತರರಿದ್ದರು.

**ಬಸವಕಲ್ಯಾಣ:** ಕಾವ್ಯ ರಚನೆಗೆ ಸೃಜನಶೀಲ ಚಿಂತನೆ ಅವಶ್ಯಕ ಎಂದು ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಪುಣ್ಯಕೋಟಿ ಸ್ವತಂತ್ರ ಪಿಯು ಕಾಲೇಜಿನಲ್ಲಿ ಬೆಳಕಿನ ಹಬ್ಬ ದೀಪಾವಳಿ ನಿಮಿತ್ತ ಸಾಂಸ್ಕೃತಿಕ ಸೌರಭ ಅಡಿಯಲ್ಲಿ ಆಯೋಜಿಸಿದ ಕಾವ್ಯ ಸಂಕಥನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಸಮಾಜ ಮತ್ತು ಬದುಕಿನ ಏಳು ಬೀಳುಗಳನ್ನು ನಿಜವಾಗಿ ಹಂಚಿಕೊಂಡವರಿಗೆ ಮಾತ್ರ ಕಾವ್ಯ ರಚಿಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಉದ್ಯಮಿ ಸುನೀಲ ಪಾಟೀಲ್, ಕಾಲೇಜಿನ ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಸ್ವಾವಲಂಬಿಗಳಾಗಿ ಬದುಕುವ ಕಲೆಗಳನ್ನು ಕಲಿತುಕೊಳ್ಳಲು ಪ್ರಯತ್ನಿಸಬೇಕು. ಅಂದಾಗ ಮಾತ್ರ ಜೀವನದಲ್ಲಿ ಯಶಸ್ವಿಯಾಗಲು ಸಾಧ್ಯವಾಗುತ್ತದೆ ಎಂದರು.

ನಗರ ಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಅನೀಲ ಕುಲಕರ್ಣಿ ಮಾತನಾಡಿ, ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವ ದೊಡ್ಡ ಜವಬ್ದಾರಿ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಮೇಲಿದೆ ಎಂದು ಹೇಳಿದರು.

ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ ನೀಡುವಲ್ಲಿಯೂ ಕಾಳಜಿ ವಹಿಸಬೇಕಾದ ಅವಶ್ಯಕತೆ ಇದೆ ಎಂದರು.

ಸಂಸ್ಥೆ ಅಧ್ಯಕ್ಷ ಪ್ರೊ.ಸೂರ್ಯಕಾಂತ ಶೀಲವಂತ ಅಧ್ಯಕ್ಷತೆ ವಹಿಸಿದ್ದರು.

ಉಪಾಧ್ಯಕ್ಷ ಸುಭಾಶ್ಚಂದ್ರ ಪಾಟೀಲ್, ಕೋಶಾಧ್ಯಕ್ಷ ಶಶಿಕಾಂತ ಶೀಲವಂತ, ಸುರೇಖಾ ಶೀಲವಂತ, ಚಂದ್ರಕಾಂತ ಶೀಲವಂತ, ಕಾವೇರಿ ಶೀಲವಂತ, ಪ್ರಕಾಶ ರಾಠೋಡ ಉಪಸ್ಥಿತರಿದ್ದರು.

ಉಮಾಕಾಂತ ಶೀಲವಂತ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಕಲ್ಪನಾ ಚುಡೆ ನಿರೂಪಿಸಿದರು. ರಕ್ಷಿತಾ ವಚನ ಗಾಯನ, ಅಶ್ವಿನಿ ಪ್ರಾರ್ಥನಾ ಗೀತೆ ಹಾಡಿದರು. ವಿಜಯಲಕ್ಷ್ಮೀ ಸ್ವ ರಚಿತ ಕವನ ವಾಚನ ಮಾಡಿದರು. ಆನಂದ ಚಾಕುರೆ ವಂದಿಸಿದರು.

**ಸನ್ಮಾನ:** ಶ್ರೀಮದ್ ರಂಭಾಪುರಿ ಪೀಠದಿಂದ ವಿರಶೈವ ಸಿರಿ ಪ್ರಶಸ್ತಿ ಪುರಸ್ಕೃತರಾದ ಉದ್ಯಮಿ ಸುನೀಲ ಪಾಟೀಲ್ ಅವರಿಗೆ ಕಾರ್ಯಕ್ರಮದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
6
ಸೋಮವಾರ
9 ನವೆಂಬರ್ 2015
9 NOVEMBER 2015

■ ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಅಭಿನವ ಘನಲಿಂಗ ಶೀಗಳ ಜನ್ಮ ದಿನಾಚರಣೆ

# ರೈತರ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸಲಿ



ಬಸವಕಲ್ಯಾಣ ಗವಿ ಮಠದಲ್ಲಿ ಶ್ರೀ ಅಭಿನವ ಘನಲಿಂಗ ಸ್ವಾಮೀಜಿಯವರ ಜನ್ಮ ದಿನಾಚರಣೆ ಕಾರ್ಯಕ್ರಮಕ್ಕೆ ಸಸಿಗೆ ನೀರೆರೆವ ಮೂಲಕ ಶ್ರೀಗಳು ಚಾಲನೆ ನೀಡಿದರು. ಶ್ರೀ ಶಾಂತವೀರ ಶೀವಾಚಾರ್ಯರು ಇದ್ದರು.

**ಬಸವಕಲ್ಯಾಣ:** ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕಾ ಘಟಕದಿಂದ ತ್ರಿಪುರಾಂತ ಗವಿ ಮಠದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನಾಚರಣೆ ಸರಳವಾಗಿ ಅಚರಿಸಲಾಯಿತು.

ಸಾನ್ನಿಧ್ಯ ವಹಿಸಿದ್ದ ಗಡಿಗೌಂಡಗಾಂವ್‌ನ ಶ್ರೀ ಶಾಂತವೀರ ಶೀವಾಚಾರ್ಯರು ಆಶೀರ್ವಚನ ನೀಡಿ, ತ್ರಿಪುರಾಂತ ಶ್ರೀಗಳು ಚಿಕ್ಕವಯಸ್ಸಿನಲ್ಲಿಯೇ ಮಹತ್ವದ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮಠದ ಪರಂಪರೆ ಉಳಿಸಿ, ಬೆಳೆಸಿಕೊಂಡು ಹೋಗುವ ಜತೆಗೆ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತ ಭಕ್ತರಿಗೆ ಧರ್ಮದ ಮಾರ್ಗ ತೋರಿಸುತ್ತಿದ್ದಾರೆ ಎಂದು ಶ್ರೀಗಳ ಸಮಾಜಪರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ತ್ರಿಪುರಾಂತ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಸಂಕಷ್ಟದಲ್ಲಿರುವ ರೈತರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಸರ್ಕಾರ ಹೆಚ್ಚಿನ ಕಾಳಜಿ ವಹಿಸಬೇಕು. ರೈತರು ಆತ್ಮಸ್ಥೈರ್ಯ ಬೆಳೆಸಿಕೊಳ್ಳಬೇಕು ಎಂದು ಕೋರಿದರು.

ಡಾ.ಗವಿಸಿದ್ದಪ್ಪಪಾಟೀಲ್, ಬಸ್ ಡಿಪೋ ವ್ಯವಸ್ಥಾಪಕ ಅಶೋಕ ಪಾಟೀಲ್, ಟ್ರಸ್ಟ ಕಾರ್ಯಧ್ಯಕ್ಷ ಶರಣಪ್ಪ ಬಿರಾದಾರ್, ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ನಂದಿ, ಬಸವಂತಪ್ಪ ಲವಾರೆ,ಪ್ರೊ. ಸೂರ್ಯಕಾಂತ ಶೀಲವಂತ, ರಮೇಶ ರಾಜೋಳೆ, ಕಾಶೀನಾಥ ಸ್ವಾಮಿ, ಪ್ರೊ.ರುದ್ರೇಶ್ವರ ಗೋರ್ಟಾ ಭಾಗವಹಿಸಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
IAYAVANI • KALABURAGI
ಗುರುವಾರ
1 ಅಕ್ಟೋಬರ್ 2015
1 OCTOBER 2015



ಬಸವಕಲ್ಯಾಣ ತ್ರಿಪುರಾಂತ ಗವಿಮಠದಲ್ಲಿ ಎಬಿವಿಪಿಯಿಂದ ರಾಜೋತ್ಸವ ಆಚರಿಸಲಾಯಿತು.ಶ್ರೀ ಅಭಿನವ ಘನಲಿಂಗ ರುದ್ರಮುನಿ ಸ್ವಾಮೀಜಿ, ಅಂಬರೀಶ ಸ್ವಾಮಿ, ನವನಾಥ ಮೇತ್ರೆ, ಲೋಕೆಶ ಮೊಳಕೆರಾ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
IAYAVANI • KALABURAGI
ಸೋಮವಾರ
2 ನವೆಂಬರ್ 2015
2 NOVEMBER 2015

Scanned with CamScanner

ಬಸವೇಶ್ವರ ನಂದಿ ಧ್ವಜದ ತರಬೇತಿ ಸಮಾರೋಪದ ಸಮಾರಂಭ

# 'ಬಸವಣ್ಣನವರ ಜಾತ್ರೆಗೆ ಭದ್ರ ಬುನಾದಿ ಹಾಕಿದ್ದು ವಾರದ್'

■ ವಿಕಸುದ್ದಿಲೋಕ ಬಸವಕಲ್ಯಾಣ (ಗ್ರಾಮೀಣ)

ಮಹಾತ್ಮ ಬಸವೇಶ್ವರರ ಕರ್ಮ ಭೂಮಿಯಲ್ಲಿ ಅದ್ದೂರಿಯಾಗಿ ನಡೆಯುವ ವಿಶ್ವಗುರು ಬಸವಣ್ಣನವರ ಜಾತ್ರೆಗೆ ಭದ್ರ ಬುನಾದಿ ಹಾಕಿದ ಕೀರ್ತಿ ಸೋಲಾಪುರದ ಬಾಬಾ ಸಾಹೇಬ ವಾರದ್ ಅವರಿಗೆ ಸಲ್ಲುತ್ತದೆ ಎಂದು ತ್ರಿಪುರಾಂತದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತಾಲೂಕಿನ ಶಿವಪುರ ಗ್ರಾಮದ ಬಿರಾದಾರ ನಿವಾಸದ ಆವರಣದಲ್ಲಿ ಹಮ್ಮಿಕೊಂಡ ಬಾಬಾ ಸಾಹೇಬ ವಾರದ್ ಅವರ ಸ್ಮರಣೋತ್ಸವ ಹಾಗೂ ಬಸವೇಶ್ವರ ನಂದಿ ಧ್ವಜದ ತರಬೇತಿಯ ಸಮಾರೋಪದ ಸಮಾರಂಭದಲ್ಲಿ ಸಾನ್ನಿಧ್ಯವಹಿಸಿ ಮಾತನಾಡಿದರು. ಕಲಬುರಗಿಯ ಉಪನ್ಯಾಸಕಿ ಡಾ.ನೀಲಾಂಬಿಕಾ ಪೊಲೀಸ್ ಪಾಟೀಲ್ ಮಾತನಾಡಿ,ಇಲ್ಲಿನ ಜನರು ಒಳ್ಳೆಯ ಕಾರ್ಯಗಳಿಗೆ ಏಕೆ ಬೆಂಬಲಿಸುತ್ತಿಲ್ಲ, ಹೊರಗಿನವರು ಭಾಗವಹಿಸಿ ಅದರ ಲಾಭ ಪಡೆದುಕೊಳ್ಳುತ್ತಿದ್ದಾರೆ ಎಂದರು. ಬಸವಣ್ಣನವರನ್ನು ವ್ಯಾಪಾರಿ ದೃಷ್ಟಿಯಿಂದ ನೋಡದೇ ಭಕ್ತಿಯಿಂದ ಕಾಣಿರಿ ಎಂದರು. ಬೀದರ್‌ನ ರಜೀಯಾ ಬಳಬಟ್ಟೆ ಮಾತನಾಡಿ, ಮಹಿಳೆಯರಿಗೆ ವಿಶೇಷ ಸ್ಥಾನಮಾನ ನೀಡಿದ್ದು ಬಸವಾದಿ ಶಿವಶರಣರು. ನಮ್ಮ ಭವ್ಯ ಸಂಸ್ಕೃತಿ ಯಿಂದ ವಿಮುಖರಾಗಬಾರದು ಎಂದರು.ಪ್ರೀತಿ ನರೇಂದ್ರ ಮಾತನಾಡಿದರು.ಹಿರಿಯ ಜೀವಿ ರೇವಣಪ್ಪ ವಾಂಜರಖೆಡೆ ದಂಪತಿಗಳನ್ನು ಸನ್ಮಾನಿಸಿ ತುಲಾಭಾರ ಮಾಡಲಾಯಿತು. ಇದೇ ಸಂದರ್ಭದಲ್ಲಿ ವಿಶೇಷ ಸೇವೆ ಸಲ್ಲಿಸಿದ ಗುರುಪಾದಪ್ಪ ಗಡಿಯಾಳ ಸ್ವಾಮಿ, ಬಸಣ್ಣಾ ಧನ್ನೂರೆ, ಜಗನ್ನಾಥ ಕನಶೆಟ್ಟೆ, ವೈಜಪ್ಪ ಬುಡಗೆ, ಬಸ್ಸಮ್ಮ ಧಮಾರೆ, ಶಿವಪ್ಪ ಚಪಾತೆ, ಬಾಬುರಾವ ಧುಮಾಳೆ, ಗುರುಪಾದಪ್ಪ ಖರೂಣೆ, ಬಸ್ಸಣ್ಣ ಭದಾಡೆ, ಮಡಿವಾಳಪ್ಪ ಪಾಟೀಲ್, ದೇವಸ್ಥಾನ ಅಧ್ಯಕ್ಷ ಮಲ್ಲಪ್ಪ ಲಾತೂರೆ, ಕಾರ್ಯದರ್ಶಿ ರೇವಣಪ್ಪ ರಾಯವಾಡೆ, ಸುಶೀಲಾಬಾಯಿ ಧನ್ನೂರೆ ಹಾಗೂ ದಾಸೋಹ ಸೇವೆ ಮಾಡಿದ ಶೀವಲಿಲಾ ಉಮಾಕಾಂತ ಬಿರಾದಾರ, ಪತ್ರಕರ್ತ ನಾಗಪ್ಪ ನಿಣ್ಣೆ ಅಲ್ಲದೆ ವ್ರತ ಹಿಡಿದ ನಂದಿ ಧ್ವಜ ಯುವಕರಿಗೆ ಸಹ ಸನ್ಮಾನಿ ಸಲಾಯಿತು. ನಂದಿ ಧ್ವಜದ ಗೌರವಾಧ್ಯಕ್ಷಸುಭಾಷ ಬಾವಗೆ,ಅಧ್ಯಕ್ಷಕಲ್ಲಯ್ಯ ಮಠಪತಿ, ಕಾರ್ಯದರ್ಶಿ ಸಂಜು ಶಾಶಟ್ಟೆ, ಖಜಾಂಚಿ ಸಾಗರ ಲಾಡಕುಂಬಾರ ಸೇರಿದಂತೆ ಅನೇಕರಿದ್ದರು.ಶಿಕ್ಷಕ ಮಲ್ಲಪ್ಪ ಕೋಟೆ ಸಂಗೀತ ಸೇವೆ ನಡೆಸಿದರು. ಗುರುಬಸವ ತಬಲಾ ಸಾಥ್ ನೀಡಿದರು. ಕವಿತಾ ಮಶೆಟ್ಟಿಸ್ವಾಗತಿಸಿದರು.ಬಸವರಾಜ ಖಂಡಾಳೆ ವಂದಿಸಿದರು.

ನಂದಿ ಧ್ವಜದ ಸಮಿತಿಯ ಸದಸ್ಯರಾಗಿದ್ದ ಶ್ರೀಕಾಂತ ಸದಾನಂದ ಮೆಟಗೆ ಅವರು ಅಕಾಲಿಕ ನಿಧನ ಹೊಂದಿದ ಹಿನ್ನಲೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಇದಕ್ಕೂ ಮುನ್ನ ಅಲ್ಲಮ ಪ್ರಭುದೇವರ ಗದಗ್ಗಿನ ಮಠದಿಂದ ಮಹಾದೇವ ಮಂದಿರದವರೆಗೆ ಮೆರವಣಿಗೆ ನಡೆಯಿತು.



ಬಸವಕಲ್ಯಾಣ ತಾಲೂಕಿನ ಶಿವಪುರ ಗ್ರಾಮದಲ್ಲಿ ಹಮ್ಮಿಕೊಂಡ ಬಾಬಾ ಸಾಹೇಬ ವಾರದರ ಸ್ಮರಣೋತ್ಸವ ಹಾಗೂ ಬಸವೇಶ್ವರ ನಂದಿ ಧ್ವಜದ ತರಬೇತಿಯ ಸಮಾರೋಪ ಸಮಾರಂಭದಲ್ಲಿ ರೇವಣಪ್ಪಾ ವಾಂಜರಖೆಡೆ ಅವರ ತುಲಾಭಾರ ನಡೆಸಲಾಯಿತು. ತ್ರಿಪುರಾಂತನ ಅಭಿನವ ಶ್ರೀ, ನೀಲಾಂಬಿಕಾ ಪೊಲೀಸ್ ಪಾಟೀಲ್ ಸೇರಿದಂತೆ ಅನೇಕರಿದ್ದರು.

ವಿಜಯ ಕರ್ನಾಟಕ ಮಂಗಳವಾರ, 7 ಏಪ್ರಿಲ್ 2015, ಕಲಬುರ

## ಜಮಾತೆ ಇಸ್ಲಾಮಿ ಹಿಂದ್ ಇಫ್ತಾರ್ ಕೂಟ

ಬಸವಕಲ್ಯಾಣ: ಜಮಾತೆ ಇಸ್ಲಾಮಿ ಹಿಂದ್‌ನ ಸ್ಥಳೀಯ ಘಟಕದಿಂದ ಇಫ್ತಾರ್ ಕೂಟವನ್ನು ನಗರದ ಹಳೇ ತಹಸಿಲ್ ಸರ್ಕಾರಿ ಸಮುದಾಯ ಭವನದಲ್ಲಿ ಶನಿವಾರ ಸಂಜೆ 5ಕ್ಕೆ ಏರ್ಪಡಿಸಲಾಗಿದೆ ಎಂದು ಸ್ಥಳೀಯ ಘಟಕದ ಅಧ್ಯಕ್ಷ ಯುಸುಫೋದ್ದಿನ್ ನೀಲಂಗೇಕರ್ ತಿಳಿಸಿದ್ದಾರೆ. ಬೀದರ್‌ನ ಮೌಲಾನಾ ಮಹ್ಮದ್ ಫೈಹಿಮೊದ್ದೀನ್ ಅಧ್ಯಕ್ಷತೆ ವಹಿಸುವರು. ಶಾಸಕ ಮಲ್ಲಿಕಾರ್ಜುನ ಖೂಬಾ, ಗೋರ್ಟಾದ ಶ್ರೀ ಡಾ. ರಾಜಶೇಖರ್ ಸ್ವಾಮೀಜಿ, ಕೆಪಿಸಿಸಿ ಕಾರ್ಯದರ್ಶಿ ಬಿ.ನಾರಾಯಣರಾವ, ತ್ರಿಪುರಾಂತನ ಅಭಿನವ ಘನಲಿಂಗರುದ್ರಮುನಿ ಶ್ರೀ, ಸಹಾಯಕ ಆಯುಕ್ತ ಡಾ.ಶಂಕರ ವಣಿಕ್ಯಾಳ, ಪ್ರಾಚಾರ್ಯ ನಿಜಾಮೊದ್ದೀನ್, ಮಿಲಿಂದ ಗುರೂಜಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಆಶೀಫ್ ಹಾಜಿ ಭಾಗವಹಿಸಲಿದ್ದಾರೆ.

## ಹತ್ಯಾಳದಲ್ಲಿ ಹರಿನಾಮ ಸಪ್ತಾಹ

ಬಸವಕಲ್ಯಾಣ: ತಾಲೂಕಿನ ಹತ್ಯಾಳ ಗ್ರಾಮದ ಶ್ರೀ ಜೈ ಹನುಮಾನ ಮಂದಿರದ ಕಳಸಾರೋಹಣ ಮತ್ತು ಅಕ್ಕಂದ ಹರಿನಾಮ ಪಸ್ತಾಹ ಕಾರ್ಯಕ್ರಮ 27ರವರೆಗೆ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ. ಹಾರಕೂಡದ ಡಾ.ಚನ್ನವೀರ ಶಿವಾಚಾರ್ಯರು ಸಪ್ತಾಹಕ್ಕೆ ಚಾಲನೆ ನೀಡಿದ್ದು, ಹಿರೇನಾಗಾಂವ ದೇಶಾಂತಲಿಂಗ ಶ್ರೀ ಪ್ರವಚನ ನಡೆಸಿಕೊಡುತ್ತಿದ್ದಾರೆ. 22ರಂದು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ಶಿವಾಚಾರ್ಯರ ಪ್ರವಚನವಿದೆ. ಪುಣೆಯ ಸಾಂಬಾಜಿರಾವ ಮಹಾರಾಜ ದೇವಕರ್ ಅವರಿಂದ ಕೀರ್ತನಾ ಸೇವೆ ನಡೆಯಲಿದೆ.

Scanned with CamScanner

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI • KALABURAGI
ಬುಧವಾರ 19 ಆಗಸ್ಟ್ 2015
19 AUGUST 2015

■ ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಕುರಿತ ಉಪನ್ಯಾಸ ಮಾಲೆಗೆ ಬಿರಾದಾರ್ ಚಾಲನೆ

# ಗುರುವಿನ ಕೃಪೆ ಇದ್ದರೆ ಮನುಷ್ಯನಿಗೆ ಸಿಗಲಿದೆ ಭವ ಬಂಧನದಿಂದ ಮುಕ್ತಿ

**ಬಸವಕಲ್ಯಾಣ:** ವೀರಶೈವ ಧರ್ಮ ಸ್ಥಾಪಕ ಶ್ರೀ ಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯ ಮಹಾಋಷಿಗೆ ಬೋಧಿಸಿದ ಸಿದ್ಧಾಂತ ಶಿಖಾಮಣಿ ವೀರಶೈವ ಧರ್ಮದ ಮೂಲ ಗ್ರಂಥವಾಗಿದ್ದು, ಇದರ ಪಠಣದಿಂದ ಭವರೋಗ ನಿವಾರಣೆಯಾಗಲಿದೆ ಎಂದು ಹಿರಿಯ ಜನಪದ ಸಾಹಿತಿ ಎಚ್.ಕಾಶೀನಾಥ ರೆಡ್ಡಿ ಹೇಳಿದರು.

ಶ್ರಾವಣ ನಿಮಿತ್ತ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ಹಾಗೂ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠ ಟ್ರಸ್ಟ್ ಸಹಯೋಗದೊಂದಿಗೆ ತ್ರಿಪುರಾಂತದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಭಕ್ತಸ್ಥಲ ಕುರಿತ ಉಪನ್ಯಾಸ ಮಾಲೆ ಉದ್ಘಾಟನಾ ಕಾರ್ಯಕ್ರಮದಲ್ಲಿ ದೀಕ್ಷಾ ಗುರುಸ್ಥಲ ವಿಷಯ ಕುರಿತು ಉಪನ್ಯಾಸ ನೀಡಿದರು.

ಗುರು ಜಗತ್ತಿನಲ್ಲಿಯೇ ಶ್ರೇಷ್ಠ. ಗುರುವಿನ ಕೃಪೆಯಿಂದ ಮಾನವ ಭವ ಬಂಧನದಿಂದ ಮುಕ್ತಿ ಪಡೆಯಲು ಸಾಧ್ಯ. ಸಿದ್ಧಾಂತ ಶಿಖಾಮಣಿಯು ಅಂತರಂಗವನ್ನು ಶುದ್ಧಗೊಳಿಸುತ್ತದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶರಣಬಸಪ್ಪ ಬಿರಾದಾರ್, ಸಿದ್ಧಾಂತ ಶಿಖಾಮಣಿ ಕುರಿತು ಕಳೆದ ಮೂರು ವರ್ಷಗಳಿಂದ ಉಪನ್ಯಾಸ ಮಾಲೆ ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯ ಎಂದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಆಯೋಜಿಸಿದ ಉಪನ್ಯಾಸ ಮಾಲೆ ಕಾರ್ಯಕ್ರಮವನ್ನು ಶರಣಬಸಪ್ಪ ಬಿರಾದಾರ್ ಉದ್ಘಾಟಿಸಿದರು. ಡಾ.ನಾಗಭೂಷಣ ಶ್ರೀಗಳು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶ್ರೀ ಇದ್ದರು.

ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಗುಂಡಪ್ಪ ಬಿರಾದಾರ್ ಮಾತನಾಡಿ, ಪ್ರಾಚೀನ ವೀರಶೈವ ಧರ್ಮದ ಬಗ್ಗೆ ಎಲ್ಲರೂ ಅಭಿಮಾನ ಹೊಂದಬೇಕು. ಅಲ್ಲದೆ ಧರ್ಮಗ್ರಂಥದ ಬಗ್ಗೆ ಎಲ್ಲರೂ ಅರಿಯಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ಹಳೆಂಬರದ ಡಾ.ನಾಗಭೂಷಣ ಶಿವಾಚಾರ್ಯರು ಆಶೀರ್ವಚನ ನೀಡಿ, ಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ಮುಕ್ತಿ ಮಾರ್ಗದ 101 ಸ್ಥಲಗಳನ್ನು ಷಟ್‌ಸ್ಥಲಗಳಲ್ಲಿ ಸಂಗ್ರಹಿಸಲಾಗಿದೆ. ಈ ಬೋಧನೆಯನ್ನೇ ಕಾಲಾಂತರದಲ್ಲಿ ಶಿವಯೋಗಿ ಶಿವಾಚಾರ್ಯರು ಸಿದ್ಧಾಂತ ಶಿಖಾಮಣಿ ರೂಪದಲ್ಲಿ ರಚಿಸಿ ಮುಕ್ತಿ ಮಾರ್ಗದಲ್ಲಿ ನಡೆಯಲು ಅವಕಾಶ ಕಲ್ಪಿಸಿದ್ದಾರೆ ಎಂದು ನುಡಿದರು.

ನೇತೃತ್ವ ವಹಿಸಿದ್ದ ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಅಧ್ಯಕ್ಷ ವೀರಣ್ಣ ಶೀಲವಂತ, ಬಸವರಾಜ ಸ್ವಾಮಿ, ಮಲ್ಲಿಕಾರ್ಜುನ ನಂದಿ, ರಮೇಶ ಸ್ವಾಮಿ, ರಾಜಕುಮಾರ ಪಾಲ್ಲಾಪುರೆ, ರೇವಣಸಿದ್ದಯ್ಯ ಮಠಪತಿ, ಪ್ರಭುಲಿಂಗಯ್ಯ ಟಂಕಸಾಲಿಮಠ, ಸೂರ್ಯಕಾಂತ ಶೀಲವಂತ, ರಾಜಕುಮಾರ ದೇಗಾಂವ, ಕಾಶಿನಾಥ ಸ್ವಾಮಿ, ರೇವಣಸಿದ್ದಯ್ಯ ವಸ್ತ್ರದ, ನಾಗನಾಥ ಚಾಮಲ್ಲೆ, ಜಗನ್ನಾಥ ಪಂಚಾಳ, ಹಾವಯ್ಯ ಸ್ವಾಮಿ, ಶಿವನಗೌಡ ಪಾಟೀಲ್ ಕೊಳಕೂರ, ಭವಾನಿ ಪಾಟೀಲ್ ಬೀದರ್, ಚಂದ್ರಕಾಂತ ಜೋಕಾರೆ, ಶಾಂತಕುಮಾರ ಬಿರಾದಾರ್ ಉಪಸ್ಥಿತರಿದ್ದರು.

ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ಪ್ರಾರ್ಥನಾಗೀತೆ ಹಾಡಿದರು. ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಸ್ವಾಗತಿಸಿದರು. ಶಿಕ್ಷಣ ಸಂಯೋಜಕ ರಮೇಶ ರಾಜೋಳೆ ನಿರೂಪಿಸಿದರು. ಬಸವಂತಪ್ಪ ಲವಾರೆ ವಂದಿಸಿದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI • KALABURAGI
ಬುಧವಾರ 20 ಮೇ 2015
20 MAY 2015

# ಮಕ್ಕಳಿಗೆ ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ಅಗತ್ಯ

**ಬಸವಕಲ್ಯಾಣ:** ಇಂದಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರವೂ ಅಗತ್ಯವಾಗಿದೆ ಎಂದು ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶ್ರೀಗಳು ನುಡಿದರು.

ನಗರದ ಶಾಹಾಪುರ ಬಡಾವಣೆಯಲ್ಲಿ ಲಿಟಲ್ ಆರ್ಚಿಡ್ಸ್ ಶಾಲೆ ಪ್ರಾರಂಭೋತ್ಸವದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ನಮ್ಮ ದೇಶದ ಸಂಸ್ಕೃತಿ, ನಾಡು ನುಡಿಯ ಮಹತ್ವ ಕುರಿತು ಮಕ್ಕಳಿಗೆ ತಿಳಿ ಹೇಳಬೇಕು ಎಂದರು.

ಮಲ್ಲಯ್ಯ ಸ್ವಾಮಿ ಹಿರೇಮಠ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬದಲಾಗುತ್ತಿರುವ ಪರಿಸ್ಥಿತಿಗೆ ಅನುಗುಣವಾಗಿ ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವನೆ ಬೆಳೆಸುವ ಕಾಳಜಿ ಶಿಕ್ಷಕರು ವಹಿಸಬೇಕು ಎಂದು ಕಿವಿ ಮಾತು ಹೇಳಿದರು. ಕಾಶಿ ರಾಮಲಿಂಗ ಶಿಕಣ ಸಂಸ್ಥೆ ಅಧ್ಯಕ್ಷ



ಬಸವಕಲ್ಯಾಣದ ಶಾಹಾಪುರ ಓಣಿಯಲ್ಲಿ ಲಿಟಲ್ ಆರ್ಚಿಡ್ಸ್ ಶಾಲೆ ಪ್ರಾರಂಭೋತ್ಸವಕ್ಕೆ ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶ್ರೀ ಚಾಲನೆ ನೀಡಿದರು.

ಕಾಶಿನಾಥ ಸ್ವಾಮಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ನಿವೃತ್ತ ಶಿಕ್ಷಣಾಧಿಕಾರಿ ಗುಂಡಪ್ಪ ಮಡಕೆ, ನಿವೃತ್ತ ಡಿಎಚ್‌ಒ ಮಹಾದೇವ ಸ್ವಾಮಿ, ರಸ್ತೆ ಸಾರಿಗೆ ಸಂಸ್ಥೆ ನಿವೃತ್ತ ನಿಯಂತ್ರಕ ಗುರುಲಿಂಗಯ್ಯ ಸ್ವಾಮಿ, ಸಿಂಡಿಕೇಟ್ ಬ್ಯಾಂಕ್ ನಿವೃತ್ತ ಪ್ರಬಂಧಕ ಬಸವರಾಜ ಸ್ವಾಮಿ ಮಾತನಾಡಿದರು.

ಶಿವಶರಣಯ್ಯ ಮಠಪತಿ ಸ್ವಾಗತಿಸಿದರು. ಪುಷ್ಪಾ ಕಾಶಿನಾಥ ಸ್ವಾಮಿ ಮತ್ತು ರಮೇಶ ರಾಜೋಳೆ ನಿರೂಪಿಸಿದರು. ಸುಲೋಚನಾ ಸ್ವಾಮಿ ಪ್ರಾರ್ಥನಾ ಗೀತೆ ಹಾಡಿದರು. ಸಂಗೀತಾ ಕುಂಟೆ ಅವರ ನೃತ್ಯ ಗಮನ ಸೆಳೆಯಿತು. ಪ್ರದೀಪ ಕೌವಳೆ ಸಂತ ಶಿಶುನಾಳ ಶರೀಫ್‌ರ ತತ್ವಪದ ಹಾಡಿದರು.

ಕಸಾಪ ತಾಲೂಕಾಧ್ಯಕ್ಷ ಚಂದ್ರಕಾಂತ ಸ್ವಾಮಿ, ಚಿತ್ರಕಲಾ ಕಾಲೇಜಿನ ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ, ಪುಣ್ಯಕೋಟಿ ಕಾಲೇಜಿನ ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ಪ್ರೊ. ದಯಾನಂದ ಶೀಲವಂತ, ವಿಶ್ವನಾಥ ಸ್ವಾಮಿ, ಮಂಜುನಾಥ ಸ್ವಾಮಿ, ಓಂಕಾರ ಮಜಗೆ, ಶಿವಾನಂದ ಶೀಲವಂತ, ಕಲ್ಪನಾ ಶೀಲವಂತ, ರೇವಣಸಿದ್ದಯ್ಯ ಹೊಸಮಠ, ವಿನೋದ ಪಾಟೀಲ, ಸಂತೋಷ ಮಜಗೆ ಭಾಗವಹಿಸಿದರು.

Scanned with CamScanner

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
JAYAVANI • KALABURAGI
ಬುಧವಾರ 8 ಏಪ್ರಿಲ್ 2015
8 APRIL 2015

# ಸಮಾಜದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಹಿರಿದು

**ಹಳ್ಳಿಯಲ್ಲಿ ಯುವ ಸಂಸತ್ ರಾಷ್ಟ್ರೀಯ ಯುವ ನಾಯಕತ್ವ ಕಾರ್ಯಕ್ರಮ**

ಬಸವಕಲ್ಯಾಣ: ಆರೋಗ್ಯಪೂರ್ಣ ಸಮಾಜ ನಿರ್ಮಾಣ ಮಾಡುವಲ್ಲಿ ಯುವಕರ ಪಾತ್ರ ಹಿರಿದಾಗಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ. ಶರಣಪ್ಪ ಮುಡಬಿ ಹೇಳಿದರು.

ತಾಲೂಕಿನ ಹಳ್ಳಿ ಗ್ರಾಮದಲ್ಲಿ ಬೀದರ್ ನೇಹರು ಯುವ ಕೇಂದ್ರ, ಸ್ಥಳೀಯ ಗಣೇಶ ಯುವ ರೈತ ಸಂಘ ಮತ್ತು ಮಂಠಾಳನ ಶ್ರೀ ಗುರುಲಿಂಗೇಶ್ವರ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಯುವ ಸಂಘದಿಂದ ಇತ್ತೀಚೆಗೆ ಆಯೋಜಿಸಿದ ತಾಲೂಕು ಮಟ್ಟದ ನೆರೆ ಹೊರೆ ಯುವ ಸಂಸತ್ ರಾಷ್ಟ್ರೀಯ ಯುವ ನಾಯಕತ್ವ ಕಾರ್ಯಕ್ರಮ ಉದ್ಘಾಟಿಸಿದ ಅವರು, ಯುವಕರು ಗುಟಕಾ ಸೇರಿದಂತೆ ಯಾವುದೇ ದುಶ್ಚಟಗಳಿಗೆ ಆಕರ್ಷಿತರಾಗದೇ ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದ ಅವರು, ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ ನೀಡಿ, ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವ ಕೆಲಸವಾಗಬೇಕು ಎಂದರು.

ಚಂಡಕಾಪೂರ ಗ್ರಾಪಂ ಪಿಡಿಒ ಚಂದ್ರವ ಢೋಳೆ, ಮೋರಖಂಡಿ ಪಶು ವೈದ್ಯಾಧಿಕಾರಿ ಡಾ. ಮಂಜುನಾಥ ಮುಂಗಳೆ, ಮಿರಕಲ್ ಪಿಡಿಒ ಮಲ್ಲನಗೌಡಾ ಮಾತನಾಡಿದರು.

ಗ್ರಾಪಂ ಅಧ್ಯಕ್ಷ ಅನೀಲ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಪಿಕೆಪಿಎಸ್ ಬ್ಯಾಂಕ್ ಅಧ್ಯಕ್ಷ ಗೋವಿಂದರೆಡ್ಡಿ, ಯುವ ಸಂಘದ ಅಧ್ಯಕ್ಷ ಮಲ್ಲಯ್ಯಾ ಸ್ವಾಮಿ, ಸಂತೋಷ ಬಿರಾದಾರ, ಷಣ್ಮುಖ, ಶಿವಶರಣ ಬಿರಾದಾರ, ಬಂಡೆಪ್ಪ ಶಾಯಪ್ಪನೋರ, ವೀರಶೆಟ್ಟಿ ಪಾಟೀಲ್, ಪ್ರಮೋದ ಪಾಟೀಲ್, ಅನೀಲ ಪಾಟೀಲ, ರವಿ ಪಾಟೀಲ್, ಹಣಮಂತ ಪಾಟೀಲ್, ಮಂಜು ಪಾಟೀಲ್ ಭಾಗವಹಿಸಿದ್ದರು. ರಾಜಶೇಖರ ಸೀಗೆ ಸ್ವಾಗತಿಸಿದರು. ಚನ್ನಪ್ಪ ಬಿರಾದಾರ ವಂದಿಸಿದರು. ಬಂಡೆಪ್ಪ ಮಾಳಿ ನಿರೂಪಿಸಿದರು.



ಹಳ್ಳಿ ಗ್ರಾಮದಲ್ಲಿ ಆಯೋಜಿಸಿದ ತಾಲೂಕು ಮಟ್ಟದ ನೇರೆ ಹೊರೆ ಯುವ ಸಂಸತ್ ರಾಷ್ಟ್ರೀಯ ಯುವ ನಾಯಕತ್ವ ಕಾರ್ಯಕ್ರಮದಲ್ಲಿ ಟಿಎಚ್‌ಒ ಡಾ.ಶರಣಪ್ಪ ಮುಡಬಿ ಮಾತನಾಡಿದರು.

**ಉಪನ್ಯಾಸ ಮಾಲೆ** ■ ಆತ್ಮವನ್ನು ಪರಮಾತ್ಮನಲ್ಲಿ ಲೀನ ಮಾಡುವುದೇ ಜ್ಞಾನಲಿಂಗ

# ಸಿದ್ಧಾಂತ ಶಿಖಾಮಣಿ ತತ್ವದಂತೆ ನಡೆಯಿರಿ

ಬಸವಕಲ್ಯಾಣ: ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿಯ ತತ್ವದಂತೆ ನಡೆದರೆ ಬದುಕು ಸಾರ್ಥಕವಾಗುತ್ತದೆ ಎಂದು ಶಿಕ್ಷಕಿ ಶ್ರೀದೇವಿ ಖಂಡಾಳೆ ಹೇಳಿದರು.

ಶ್ರಾವಣ ಮಾಸದ ನಿಮಿತ್ತ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಹಾಗೂ ಜಗದ್ಗುರು ಘನಲಿಂಗ ರುದ್ರಮುನಿ ಶಿವಚಾರ್ಯರ ಗವಿಮಠ ಟ್ರಸ್ಟ್ ತ್ರಿಪುರಾಂತದ ಗವಿಮಠದಲ್ಲಿ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಉಪನ್ಯಾಸ ಮಾಲೆಯ ಜ್ಞಾನಲಿಂಗ ಸ್ಥಲ ವಿಷಯ ಕುರಿತು ಅವರು ಉಪನ್ಯಾಸ ನೀಡಿರು.

ಆತ್ಮವನ್ನು ಪರಮಾತ್ಮನಲ್ಲಿ ಲೀನ ಮಾಡುವುದೆ ಜ್ಞಾನಲಿಂಗ. ಈ ಜ್ಞಾನಲಿಂಗವು ಬ್ರಹ್ಮ ವಿಷ್ಣು ರುದ್ರರಿಂದ ಭಿನ್ನವಾಗಿದೆ. ಜ್ಞಾನಲಿಂಗವನ್ನು ವೇದ ಉಪನಿಷತ್ತುಗಳು ಬ್ರಹ್ಮ ಎಂದು ಕರೆದರೆ ಆಗಮಗಳು ಪರಮಾತ್ಮ ಎಂದು ಕರೆದಿವೆ ಎಂದರು.

ಸಾನ್ನಿಧ್ಯ ವಹಿಸಿದ್ದ ಡೊಂಗರಗಾವದ ಉದಯ ರಾಜಯೋಗೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿ, ಲಿಂಗದಲ್ಲಿ ಐಕ್ಯಗೊಳ್ಳುವುದು ಹೇಗೆ ಎಂಬುದನ್ನು ಸಿದ್ಧಾಂಥ ಶಿಖಾಮಣಿ ಮೂಲಕ ಭೋದಿಸಿದ ರೇಣುಕಾಚಾರ್ಯರು ಜಗದ ಆದಿ ಜಗದ್ಗುರುಗಳು ಎಂದು ನುಡಿದರು.

ಬಿಡಿಪಿಸಿ ನಿರ್ದೇಶಕಿ ಕಲ್ಪನಾ ಶೀಲವಂತ ಮಾತನಾಡಿದರು. ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಸವಿತಾ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ, ವಿಶ್ವನಾಥ ಬಿರಾದಾರ, ಬಸವರಾಜ ಸ್ವಾಮಿ, ರುದ್ರಮುನಿ ಮಠ, ಬಸವಂತಪ್ಪ ಲವಾರೆ, ಡಾ। ಮಲ್ಲಿಕಾರ್ಜುನ ಬಿರಾದಾರ, ಶೈಲಜಾ ಬಿರಾದಾರ, ವಿ.ಎಸ್. ರಾಜೋಳೆ, ಬಸವರಾಜ ಮೈಲಾರೆ, ವೀರಯ್ಯ ಮಠಪತಿ, ಸಿದ್ಧಲಿಂಗಯ್ಯ ಹಿರೇಮಠ, ಶಿಪ್ಪಣ್ಣ ಜಮಾದಾರ, ಸಂತೋಷ ಬಿರಾದಾರ, ಮಲ್ಲಿಕಾರ್ಜುನ ನಂದಿ ಇದ್ದರು.

ರುದ್ರೇಶ್ವರ ಸ್ವಾಮಿ ಪ್ರಾರ್ಥಿಸಿದರು. ಸರಸ್ವತಿ ಬೆಂಬಳೆ ಸ್ವಾಗತಿಸಿದರು. ಸುರೇಖಾ ಶೀಲವಂತ ನಿರೂಪಿಸಿದರು. ಸೂರ್ಯಕಾಂತ ಶೀಲವಂತ ವಂದಿಸಿದರು.



ಬಸವಕಲ್ಯಾಣ: ಶ್ರಾವಣ ಮಾಸದ ನಿಮಿತ್ತ ತ್ರಿಪೂರಾಂತದ ಗವಿಮಠದಲ್ಲಿ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಶ್ರೀದೇವಿ ಖಂಡಾಳೆ ಮಾತನಾಡಿದರು.

ಬುರಗಿ ಉದಯವಾಣಿ
ಮಂಗಳವಾರ, ಸೆಪ್ಟೆಂಬರ್ | 8 | 2015

Scanned with CamScanner



ಭಾಲ್ಕಿ ತಾಲೂಕಿನ ಜ್ಯಾಂತಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಗುರು-ಪೂರ್ಣಿಮಾ ಹಾಗೂ ದೀಪೋತ್ಸವ ಕಾರ್ಯಕ್ರಮದಲ್ಲಿಹಾವಲಿಂಗೇಶ್ವರಮಹಾಸ್ವಾಮಿಮಾತನಾಡಿದರು.ಅಭಿನವರುದ್ರಮುನಿಶಿವಾಚಾರ್ಯ,ಚಾಂಬೋಳ ಶ್ರೀಗಳು ಇದ್ದರು.

# 'ಗುರುವಿಗಿಂತ ಶ್ರೇಷ್ಠ ಯಾರೂ ಇಲ್ಲ'

**ಭಾಲ್ಕಿ**

ಜಗತ್ತಿನಲ್ಲಿ ಗುರುವು ಅತ್ಯುನ್ನತ ಸ್ಥಾನದಲ್ಲಿದ್ದು,ಅವನಿಗಿಂತ ಶ್ರೇಷ್ಠ ಯಾರು ಇಲ್ಲ ಎಂದು ಹಾವಲಿಂಗೇಶ್ವರ ಮಹಾಸ್ವಾಮಿ ಹೇಳಿದರು.

ತಾಲೂಕಿನ ಜ್ಯಾಂತಿ ಗ್ರಾಮದಲ್ಲಿ ಆಯೋಜಿಸಿದ್ದ ಗುರು-ಪೂರ್ಣಿಮಾ ಹಾಗೂ ದೀಪೋತ್ಸವ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದ ಅವರು,ಅತ್ಯಮೂಲ್ಯ ಆಧ್ಯಾತ್ಮಿಕ ಶಕ್ತಿಯನ್ನು ಹೊಂದಿರುವ ಭಾರತ ಒಂದು ಶ್ರೇಷ್ಠ ರಾಷ್ಟ್ರ.ಶರಣರು, ದಾಸರು ಹುಟ್ಟಿ ಬೆಳೆದ ಈ ನಾಡಿನಲ್ಲಿ ಮುಕ್ತಿ ಪಡೆಯಬೇಕಾದರೆ ಗುರುವಿನ ಗುಲಾಮನಾಗಲೇಬೇಕು ಎಂದು ಹೇಳಿದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ,ಜನರಲ್ಲಿರುವ ಮೂಢನಂಬಿಕೆಗಳ ಅಂಧಕಾರವನ್ನು ಹೊಗಲಾಡಿಸಬೇಕಾದರೆ ಗುರುವಿನ ಮಾರ್ಗದರ್ಶನ ಅಗತ್ಯ.ಮನಸ್ಸುಗಳು ಶಾಂತಿಯಿಂದ ಬೆಳಗಬೇಕಾದರೆ ಇಂತಹ ದೀಪೋತ್ಸವ ಕಾರ್ಯಕ್ರಮಗಳು ಅವಶ್ಯಕ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಚಾಂಬೋಳ ಶ್ರೀಗಳು,ರವೀಂದ್ರ ಪಾಟೀಲ, ಶಿವರಾಜ ಬಿಲಗುಂದೆ, ಗಣೇಶ ಪಾಟೀಲ, ಗಿರೀಶ ಕುಲಕರ್ಣಿ, ರಮೇಶ ಸುತಾರ,ವಿಜಯ ಹಣಮಶೆಟ್ಟಿ, ಸಂತೋಷ ಪಾಟೀಲ, ವೀರಶೆಟ್ಟಿ ನೀಡವಾದೆ, ಸಿದ್ಧಪ್ಪ, ಸೂರ್ಯಕಾಂತ ಪಾಟೀಲ, ಸೋಮನಾಥ ಪಾಟೀಲ, ಶಿವಕುಮಾರ ಕಣಜಿ, ರಾಜಕುಮಾರ ಬಲಗುಂದೆ ಸೇರಿದಂತೆ ನೂರಾರು ಗ್ರಾಮಸ್ಥರು ಭಾಗವಹಿಸಿದ್ದರು.

ಶನಿವಾರ, 1, ಆಗಸ್ಟ್, 2015,ಕಲಬುರಗಿ ಸಂಯುಕ್ತ ಕರ್ನಾಟಕ

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI • KALABURAGI
ಸೋಮವಾರ 11 ಮೇ 2015
11 MAY 2015



ಬಸವಕಲ್ಯಾಣದ ಬಿಕೆಡಿಬಿ ಸಭಾಂಗಣದಲ್ಲಿ ಆಯೋಜಿಸಿದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವ ತಾಪಂ ಅಧ್ಯಕ್ಷ ಗುಂಡುರೆಡ್ಡಿ ಉದ್ಘಾಟಿಸಿದರು. ಎನ್.ಬಿ.ರೆಡ್ಡಿ ಗುರೂಜಿ, ಅಭಿನವ ಘನಲಿಂಗ ರುದ್ರಮುನಿ ಶ್ರೀ, ಎಂ.ಜಿ.ಮುಳೆ, ಸಿದ್ರಾಮಪ್ಪ ಗುದಗೆ, ವೀರಾರೆಡ್ಡಿ ಪಾಟೀಲ್, ಬಾಬುಹೊನ್ನಾನಾಯಕ, ರವಿರೆಡ್ಡಿ ಪಾಟೀಲ್, ಅರ್ಜುನ ಕನಕ ಇದ್ದರು.

ಬಸವಕಲ್ಯಾಣ: ರೆಡ್ಡಿ ಸಮಾಜದ ಜನರು ಶ್ರಮಜೀವಿಗಳು, ಸ್ವಾಭಿಮಾನಿಗಳು. ದೇಶದ ಪ್ರಗತಿಯಲ್ಲಿ ಈ ಸಮಾಜದ ಕೊಡುಗೆ ಮಹತ್ವದ್ದಾಗಿದೆ ಎಂದು ಮಾಜಿ ಶಾಸಕ ಎಂ.ಜಿ.ಮುಳೆ ಅಭಿಪ್ರಾಯಪಟ್ಟರು.

ರೆಡ್ಡಿ ಸಮಾಜದ ಸಹಯೋಗದಲ್ಲಿ ಹೇಮರೆಡ್ಡಿ ಮಲ್ಲಮ್ಮ ಎಂಟರ್ ಪ್ರೈಜಸ್‌ನಿಂದ ನಗರದ ಬಿಕೆಡಿಬಿ ಸಭಾಂಗಣದಲ್ಲಿ ಆಯೋಜಿಸಿದ್ದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ 593ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಾ ಶಿವರಣೆ ಹೇಮರೆಡ್ಡಿ ಮಲ್ಲಮ್ಮನವರ ತಪಸ್ಸು, ತ್ಯಾಗ ಸಮಾಜಕ್ಕೆ ಆದರ್ಶವಾಗಿದೆ ಎಂದರು.

ನೇತೃತ್ವ ವಹಿಸಿದ ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶ್ರೀ ಆಶೀರ್ವಚನ ನೀಡಿ, ಧರ್ಮದ ಮಾರ್ಗದಲ್ಲಿ ಜೀವನದಲ್ಲಿ ಶಾಂತಿ ಸಮೃದ್ಧಿ ಮತ್ತು ಪ್ರಗತಿ ಕಾಣಲು ಸಾಧ್ಯವಿದೆ. ಧರ್ಮದ ಕಾರ್ಯಗಳಲ್ಲಿ ಎಲ್ಲರೂ ಒಂದಾಗಿ ದುಡಿದಾಗ ಸಂಘಟನೆ ಬೆಳೆಯಲು ಸಾಧ್ಯವಾಗುತ್ತದೆ ಎಂದರು.

> ಬಸವಕಲ್ಯಾಣ ತಾಲೂಕಿನಲ್ಲಿ ರೆಡ್ಡಿ ಸಮಾಜದ ಜನರು ವಾಸಿಸುವ ಪ್ರತಿ ಗ್ರಾಮದಲ್ಲಿಯೂ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಜಯಂತಿ ಆಚರಿಸಬೇಕು. ಪ್ರತಿ ಗ್ರಾಮದಲ್ಲಿ ಹತ್ತು ಜನ ಯುವಕರನ್ನೊಳಗೊಂಡ ಟ್ರಸ್ಟ್ ರಚಿಸಿಕೊಳ್ಳಬೇಕು. ಸಮಾಜದಿಂದ ಹಣವನ್ನು ದೇಣಿಗೆ ರೂಪದಲ್ಲಿ ಸಂಗ್ರಹಿಸಿ, ಈ ಹಣದಿಂದ ಪ್ರತಿ ವರ್ಷ ಬರುವ ಆದಾಯದಲ್ಲಿ ಜಯಂತಿ ಆಚರಿಸಬೇಕು.
>
> । ಮಲ್ಲರೆಡ್ಡಿ ಪಾಟೀಲ್ ಕಿಟ್ಟಾ

ತಾಪಂ ಅಧ್ಯಕ್ಷ ಗುಂಡುರೆಡ್ಡಿ ಕಾರ್ಯಕ್ರಮ ಉದ್ಘಾಟಿಸಿದರು. ರೆಕುಳಗಿ ಸಂಸ್ಥಾನ ಮಠದ ಪೂಜ್ಯ ಎನ್.ಬಿ.ರೆಡ್ಡಿ ಗುರೂಜಿ ಸಾನ್ನಿಧ್ಯ ವಹಿಸಿದ್ದರು. ರೆಡ್ಡಿ ಸಮಾಜದ ಅಧ್ಯಕ್ಷ ವೀರಾರೆಡ್ಡಿ ಪಾಟೀಲ್ ಧನ್ನೂರ ಅಧ್ಯಕ್ಷತೆ ವಹಿಸಿದ್ದರು. ಕಾಂಗ್ರೆಸ್ ಮುಖಂಡ ಬಾಬುಹೊನ್ನಾನಾಯಕ ಮಾತನಾಡಿದರು. ಕಿಟ್ಟಾದ ಹೇಮರೆಡ್ಡಿ ಮಲ್ಲಮ್ಮ ಟ್ರಸ್ಟ್ ಅಧ್ಯಕ್ಷ ಮಲ್ಲರೆಡ್ಡಿ ಪಾಟೀಲ್ ಪ್ರಾಸ್ತಾವಿಕ ಮಾತನಾಡಿದರು.

ಎಪಿಎಂಸಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಜಿಪಂ ಸದಸ್ಯ ರವಿರೆಡ್ಡಿ ಪಾಟೀಲ್, ತಾಪಂ ಸದಸ್ಯ ರಾಮಲಿಂಗರೆಡ್ಡಿ ಕೊರಕಲ್ಲೆ, ಪಿಎಸ್‌ಐ ಖಾಜಾ ಹುಸೇನ್, ತಾಲೂಕು ಕಾಂಗ್ರೆಸ್ ಮಾಜಿ ಅಧ್ಯಕ್ಷ ಅರ್ಜುನ ಕನಕ, ಉತ್ತರ ಕರ್ನಾಟಕ ಹಿಂದಿ ಉಪನ್ಯಾಸಕರ ಸಂಘದ ಅಧ್ಯಕ್ಷ ನರಸಿಂಗರೆಡ್ಡಿ ಗದಲೇಗಾಂವ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ದಿಲೀಪ ಸಾಗಾವೆ, ಪ್ರಮುಖರಾದ ಕೃಷ್ಣಾರೆಡ್ಡಿ, ವಿಜಯಕುಮಾರರೆಡ್ಡಿ, ಶಂಕರರೆಡ್ಡಿ, ಸಾಯಿರೆಡ್ಡಿ, ರಾಜರೆಡ್ಡಿ ಮಂಠಾಳ, ಜಿಪಂ ಮಾಜಿ ಸದಸ್ಯ ಬಾಬುರೆಡ್ಡಿ ಪಾಟೀಲ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಗಣೇಶರೆಡ್ಡಿ, ಮಹಾದೇವ ಪಾಟೀಲ್, ಸಂಗಾರೆಡ್ಡಿ, ವಿಷ್ಣುರೆಡ್ಡಿ ಪೀನಾಟೆ, ವೀರಾರೆಡ್ಡಿ ಪಾಟೀಲ್ ಕಿಟ್ಟಾ, ಬಸ್ ಡಿಪೋ ವ್ಯವಸ್ಥಾಪಕ ಅಶೋಕ ಪಾಟೀಲ್, ನಾಗೇಶ ಕಲ್ಯಾಣಕರ್, ಕೆಎಸ್‌ಆರ್‌ಟಿಸಿ ನೌಕರ ಸಂಘದ

Scanned with CamScanner



ರಾಜ್ಯ ಮಟ್ಟದ ವೈದ್ಯಕೀಯ(ಆಯುರ್ವೇದ) ಪರೀಕ್ಷೆಯಲ್ಲಿ 14ನೇ ರ್‍ಯಾಂಕ್ ನೊಂದಿಗೆ ಬೆಳ್ಳಿ ಪದಕ ಪಡೆದಿರುವ ಆಖಿಬ್ ಜಾವೇದ್ ಅವರನ್ನು ಬಸವಕಲ್ಯಾಣದಲ್ಲಿ ಶಾಸಕ ಮಲ್ಲಿಕಾರ್ಜುನ ಖೂಬಾ ಸನ್ಮಾನಿಸಿದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ ಗುರುವಾರ 23 ಏಪ್ರಿಲ್ 2015
VIJAYAVANI • KALABURAGI 23 APRIL 2015



ಬಸವಕಲ್ಯಾಣ ನಗರದ ರವೀಂದ್ರನಾಥ ಟ್ಯಾಗೋರ ಕೋಚಿಂಗ್ ಕ್ಲಾಸ್‌ನಲ್ಲಿ ಬೇಸಿಗೆ ತರಬೇತಿ ಶಿಬಿರದ ಸಮಾರೋಪ ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ಕೋಚಿಂಗ್ ಕ್ಲಾಸ್‌ನ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ಸಾಧನಾ ಪುರಸ್ಕಾರ ಕಾರ್ಯಕ್ರಮದಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ ಶುಕ್ರವಾರ 29 ಮೇ 2015
VIJAYAVANI • KALABURAGI 29 MAY 2015

ಭಾನುವಾರ 9 ಆಗಸ್ಟ್ 2015 ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
9 AUGUST 2015 JAYAVANI • KALABURAGI

# ಮಹಾದೇವ ಮೂರ್ತಿ ಸ್ಥಾಪನೆ

**ಬಸವಕಲ್ಯಾಣ:** ಅರಿವಿನ ಕಣ್ಣು ತೆರೆಸುವವನೇ ಗುರು. ಮನದೊಳಗಿನ ಅಜ್ಞಾನವನ್ನು ಅಳಿಸಿ, ಜ್ಞಾನದ ಬೆಳಕಿನ ದಾರಿ ತೋರುವ ಅದಮ್ಯ ಶಕ್ತಿ ಗುರು ಎಂದು ಹಿರನಾಗಾಂವನ ಶ್ರೀ ಜಯಶಾಂತಲಿಂಗ ಮಹಾಸ್ವಾಮೀಜಿ ನುಡಿದರು.

ತಾಲೂಕಿನ ಹಿರನಾಗಾಂವನಲ್ಲಿ ಇತ್ತೀಚೆಗೆ ನಡೆದ ಶ್ರೀ ಮಹಾದೇವ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಗುರು ಪೂರ್ಣಿಮೆಯ ಮಹತ್ವ ತಿಳಿಸಿದರು.

ಮಹಾರಾಷ್ಟ್ರದ ಶ್ರೀ ಶಂಭುಲಿಂಗ ಶ್ರೀಗಳು ಅಧ್ಯಕ್ಷತೆ ವಹಿಸಿ ಮಾತನಾಡಿ, ಕತ್ತಲೆಯಿಂದ ಬೆಳಕಿನ ಕಡೆಗೆ ಒಯ್ಯುವಾತನೇ ನಿಜವಾದ ಗುರು. ಗು ಎಂದರೆ ಕತ್ತಲೆ, ರು ಎಂದರೆ ಬೆಳಕು. ದೀಪ ಇದ್ದಲ್ಲಿ ಕತ್ತಲೆ ಇರುವುದಿಲ್ಲ, ಗುರು ಇದ್ದಲ್ಲಿ ಅಧಃಪತನವಾಗುವುದಿಲ್ಲ ಎಂದು ವ್ಯಾಖ್ಯಾನಿಸಿದರು.

ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶ್ರೀಗಳು ಮಾತನಾಡಿದರು. ರಾಜೋಳದ ಕಾರ್ತಿಕಯ್ಯಾ ಸ್ವಾಮಿ ಪೂಜೆ ನಡೆಸಿಕೊಟ್ಟರು. ಶಿವಕುಮಾರ ಭಕ್ತ ಕುಂಬಾರ ನಿರೂಪಿಸಿದರು.



ಬಸವಕಲ್ಯಾಣ ತಾಲೂಕಿನ ಹಿರನಾಗಾಂವನಲ್ಲಿ ಶ್ರೀ ಮಹಾದೇವ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮ ನಡೆಯಿತು.

## ಲಿಂಗದೀಕ್ಷೆ 27ರಂದು

**ಬಸವಕಲ್ಯಾಣ:** ತಾಲೂಕಿನ ಮೋರಖಂಡಿ ಗ್ರಾಮದ ಸಿದ್ದೇಶ್ವರ ದೇವಾಲಯದಲ್ಲಿ 27ರಂದು ಬೆಳಗ್ಗೆ 8ಕ್ಕೆ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಸಾಮೂಹಿಕ ಲಿಂಗದೀಕ್ಷಾ ಕಾರ್ಯಕ್ರಮ ಜರುಗಲಿದೆ. ಮಲ್ಲಯ್ಯಾ ಸ್ವಾಮಿ ಹಿರೇಮಠ, ರೇವಣಪ್ಪಾ ವಾಂಜರಖೇಡೆ, ಗುರುಪಾದಪ್ಪಾ ಖಿರುಣೆ, ಮಾಧವರಾವ ಮೋರಖಂಡಿ, ಆನಂದ ಖಂಡಾಳೆ ಮೋರಖಂಡಿ, ಶಿವರಾಜ ಬೊಂಟಗಾಂವ, ಸುಭಾಷ ಬಾವಗೆ ಹಾಗೂ ಸಂಗಯ್ಯಾ ಸ್ವಾಮಿ ಖಿಟಗಿಮಠ ಅವರ ಸಹಕಾರದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಇದರ ಲಾಭ ಪಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ ಶನಿವಾರ 25 ಜುಲೈ 2015
VIJAYAVANI • KALABURAGI 25 JULY 2015

## ಗವಿಮಠದಲ್ಲಿ ಬನ್ನಿ ಪೂಜೆ

■ ಬನ್ನಿ ಪೂಜೆ ಪೂಜೆ: ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕ ಘಟಕ ಸಹಯೋಗ: ಸಾನ್ನಿಧ್ಯ: ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು. ಉಪಸ್ಥಿತಿ: ವೀರಣ್ಣ ಶೀಲವಂತ. ಸ್ಥಳ: ತ್ರಿಪುರಾಂತನ ಗವಿಮಠ ಬಸವಕಲ್ಯಾಣ. ಸಮಯ: ಸಂಜೆ 5.30ಕ್ಕೆ

■ ಬಸವ ಸೇವಾ ಪ್ರತಿಷ್ಠಾನದಿಂದ ವಿಜಯ ದಶಮಿ ನಿಮಿತ್ತ ಕಲ್ಯಾಣ ಕ್ರಾಂತಿ ವಿಜಯೋತ್ಸವ. ಸಾನ್ನಿಧ್ಯ: ಅಕ್ಕ ಅನ್ನಪೂರ್ಣ, ಡಾ. ಗಂಗಾಂಬಿಕೆ ಅಕ್ಕ. ಸ್ಥಳ: ಶರಣ ಉದ್ಯಾನ, ಬೀದರ್. ಸಮಯ: ಸಾಯಂಕಾಲ 5ಕ್ಕೆ.

Scanned with CamScanner



ಭಾಲ್ಕಿ ತಾಲೂಕಿನ ಜ್ಯಾಂತಿ ಗ್ರಾಮದ ಲಕ್ಷ್ಮೀ ದೇವಸ್ಥಾನದಲ್ಲಿ ಗುರು ಪೂರ್ಣಿಮಾ ನಿಮಿತ್ತ ಆಯೋಜಿಸಿದ್ದ ದೀಪೋತ್ಸವ ಕಾರ್ಯಕ್ರಮ ನಡೆಯಿತು. ಹಲಬರ್ಗಾದ ಹಾವಗಿಲಿಂಗೇಶ್ವರ ಶ್ರೀ, ಅಭಿನವ ಘನಲಿಂಗ ರುದ್ರಮನಿ ಶ್ರೀ, ಗಣೇಶ ಪಾಟೀಲ್ ಇದ್ದರು.

ತೊಲಗಿಸಲು ಗುರುವಿನ ಅಗತ್ಯ ಇದೆ ಎಂದು ಹಲಬರ್ಗಾ ರಾಚೋಟೇಶ್ವರ ವಿರಕ್ತ ಮಠದ ಹಾವಗಿಲಿಂಗೇಶ್ವರ ಶ್ರೀ ನುಡಿದರು. ತಾಲೂಕಿನ ಜ್ಯಾಂತಿ ಗ್ರಾಮದ ಲಕ್ಷ್ಮೀ ದೇವಸ್ಥಾನದಲ್ಲಿ ಗುರು ಪೂರ್ಣಿಮಾ ನಿಮಿತ್ತ ಆಯೋಜಿಸಿದ್ದ ದೀಪೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಭಗವಂತನ ನಾಮ ಸ್ಮರಣೆಯನ್ನು ಭಕ್ತಿಯಿಂದ ಮಾಡಬೇಕು ಜಿವನದ ಗುರಿ ಸಾಧಿಸಲು ಗುರು ಬೇಕು ಮೋಕ್ಷ ಸಾಧಿಸಲು ಆತ್ಮಜ್ಞಾನ ಬೇಕು ಅದು ನಮಗೆ ದೊರಕುವುದು ಗುರುವಿನಿಂದ ಮಾತ್ರ ಸಾಧ್ಯ ಎಂದರು.

ಬಸವಕಲ್ಯಾಣದ ಅಭಿನವ ಘನಲಿಂಗ ರುದ್ರಮನಿ ಶ್ರೀ ಮಾತನಾಡಿದರು. ರವೀಂದ್ರ ಪಾಟೀಲ್, ಶಿವರಾಜ ಬಿಲಗುಂದೆ, ಗಣೇಶ ಪಾಟೀಲ್, ಗಿರೀಶ ಕುಲಕರ್ಣಿ, ರಮೇಶ ಸುತಾರ್, ವಿಜಯಕುಮಾರ ಹಣಮಶೆಟ್ಟಿ, ಸಂತೋಷ ಪಾಟೀಲ್, ಸಿದ್ದಪ್ಪ ಮುದಕಾ, ಸೂರ್ಯಕಾಂತ ಪಾಟೀಲ್, ಶಿವಕುಮಾರ ಕಣಜೆ, ರಾಜಕುಮಾರ ಬಿಲಗುಂದೆ ಭಾಗವಹಿಸಿದ್ದರು. ಸೋಮನಾಥ ಪಾಟೀಲ್ ನಿರೂಪಿಸಿ ವಂದಿಸಿದರು.

ನಂ. 1 ಕನ್ನಡ ದಿನಪತ್ರಿಕೆ ಶನಿವಾರ
ವಿಜಯವಾಣಿ 1 ಆಗಸ್ಟ್ 2015
VIJAYAVANI • KALABURAGI 1 AUGUST 2015



ಬಸವಕಲ್ಯಾಣ ತಾಲೂಕಿನ ತ್ರಿಪುರಾಂತದ ಗವಿಮಠದಲ್ಲಿ ಬಸವ ಜಯಂತ್ಯುತ್ಸವ ಜರುಗಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ನಾಗನಾಥ ಬಾವಲ್ಲೆ, ರುದ್ರಮುನಿ ಸ್ವಾಮಿ, ಪ್ರೊ.ವಿ.ಎಸ್.ರಾಜೋಳೆ, ಪ್ರೊ.ರುದ್ರೇಶ್ವರ ಸ್ವಾಮಿ ಗೋಟೂರ್, ಕಾರ್ತಿಕ ಬಿರಾದಾರ, ಹಣಮಂತ ಮರೋಳೆ, ವೀರೇಶ ಮುಚಳಂಬೆ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ ಬುಧವಾರ
ವಿಜಯವಾಣಿ 22 ಏಪ್ರಿಲ್ 2015
VIJAYAVANI • KALABURAGI 22 APRIL 2015

# ಸಿದ್ಧಾಂತ ಶಿಖಾಮಣಿ ಜ್ಞಾನದ ಪ್ರತೀಕ

## ತ್ರಿಪುರಾಂತ ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ

ಬಸವಕಲ್ಯಾಣ: ವೀರಶೈವ ಧರ್ಮದ ಮೂಲ ಗ್ರಂಥ ಸಿದ್ಧಾಂತ ಶಿಖಾಮಣಿ ಮನುಷ್ಯನನ್ನು ಮುಕ್ತಿಯೆಡೆಗೆ ಕೊಂಡೊಯ್ಯಲು ಸನ್ಮಾರ್ಗ ತೋರಿದ ಪರಿಪೂರ್ಣ ಗ್ರಂಥವಾಗಿದೆ ಎಂದು ಡಾ.ಚಿತ್ರಶೇಖರ ಚಿರಳ್ಳಿ ಹೇಳಿದರು.

ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಹಾಗೂ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠ ಟ್ರಸ್ಟ್ ಆಶ್ರಯದಲ್ಲಿ ತ್ರಿಪುರಾಂತ ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಭಾವಲಿಂಗ ಸ್ಥಲ ವಿಷಯ ಕುರಿತ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ಸಾನ್ನಿಧ್ಯ ವಹಿಸಿದ್ದ ಹಿರನಾಗಾಂವ್‌ನ ಶ್ರೀ ಜಯಶಾಂತಲಿಂಗ ಮಹಾಸ್ವಾಮೀಜಿ, ಅರಿವು ಇದ್ದಲ್ಲಿ ಪರಮಾತ್ಮನಿದ್ದಾನೆ. ಹೃದಯ ಮಂದಿರವೇ ಆತನ ವಾಸಸ್ಥಾನ. ಗುರುವಿನಿಂದ ಅಂತರಾತ್ಮದ ಭಾವಲಿಂಗ ಕಾಣಲು ಸಾಧ್ಯ ಎಂದರು.

ನೇತೃತ್ವ ವಹಿಸಿದ್ದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಬಸವಾ ಬೆರಳಚ್ಚು ಸಂಸ್ಥೆ ಪ್ರಾಚಾರ್ಯ ಎ.ಜಿ.ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಭಾವಲಿಂಗ ಸ್ಥಲ ವಿಷಯ ಕುರಿತ ಕಾರ್ಯಕ್ರಮದಲ್ಲಿ ಶ್ರೀ ಜಯಶಾಂತಲಿಂಗ ಮಹಾಸ್ವಾಮೀಜಿ ಮಾತನಾಡಿದರು.

- ಅರಿವು ಇದ್ದಲ್ಲಿ ಪರಮಾತ್ಮನಿದ್ದಾನೆ. ಹೃದಯ ಮಂದಿರವೇ ಆತನ ವಾಸಸ್ಥಾನ. ಗುರುವಿನಿಂದ ಅಂತರಾತ್ಮದ ಭಾವಲಿಂಗ ಕಾಣಲು ಸಾಧ್ಯ

ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ್, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ಸ್ವಾಮಿ, ಷಣ್ಮುಖಪ್ಪ ಕಣಸೂರೆ, ವಿಶ್ವನಾಥಪ್ಪ ಬಿರಾದಾರ್, ಮಲ್ಲಿಕಾರ್ಜುನ ನಂದಿ, ರೇವಣಸಿದ್ದಯ್ಯ ಮಠಪತಿ, ಚಂದ್ರಕಾಂತ ಸ್ವಾಮಿ, ಬಸವರಾಜ ಸ್ವಾಮಿ, ಚಂದ್ರಶೇಖರ ಗಚ್ಚಿನಮಠ ಉಡುಚಣ, ವೀರಣಗೌಡ ಪಾಟೀಲ್ ಕೋಳಕುರ, ರುದ್ರಮಣಿ ಮಠ, ಕಾಶಿನಾಥ ಬಸವರಾಜ ಸ್ವಾಮಿ, ಬಸಯ್ಯ ಖಟಗಿಮಠ ಉಪಸ್ಥಿತರಿದ್ದರು.

ಪ್ರೊ.ರುದ್ರೇಶ್ವರ ಸ್ವಾಮಿ ಗೋಟೂರ್ ಪ್ರಾರ್ಥಿಸಿದರು. ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ ಸ್ವಾಗತಿಸಿದರು. ಬಸತೀರ್ಥಯ್ಯ ಕಾಡಾದಿ ನಿರೂಪಿಸಿದರು. ಪ್ರೊ. ಸೂರ್ಯಕಾಂತ ಶೀಲವಂತ ವಂದಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ ಶನಿವಾರ | 29 ಆಗಸ್ಟ್ 2015 29 AUGUST 2015

Scanned with CamScanner

■ ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ

# ಸಿದ್ಧಾಂತ ಶಿಖಾಮಣಿಯಿಂದ ಅಂತರಂಗ ಶುದ್ಧಿ ಸಾಧ್ಯ

**ಬಸವಕಲ್ಯಾಣ:** ಸಿದ್ಧಾಂತ ಶಿಖಾಮಣಿ ಅಂತರಂಗ ಶುದ್ಧಗೊಳಿಸುತ್ತದೆ ಎಂದು ಸಾಹಿತಿ ಡಾ.ಗವಿಸಿದ್ದಪ್ಪ ಪಾಟೀಲ್ ಹೇಳಿದರು.

ತ್ರಿಪುರಾಂತ ಗವಿಮಠದಲ್ಲಿ ಶ್ರಾವಣ ಮಾಸ ನಿಮಿತ್ತ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಹಾಗೂ ಜಗದ್ಗುರು ಘನಲಿಂಗ ರುದ್ರಮುನಿ ಶಿವಚಾರ್ಯರ ಗವಿಮಠ ಟ್ರಸ್ಟ್ ಸಹಯೋಗದಡಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಕ್ರಿಯಾಲಿಂಗ ಸ್ಥಲ ವಿಷಯ ಕುರಿತು ಉಪನ್ಯಾಸ ನೀಡಿದ ಅವರು, ಕ್ರೀಯಾಲಿಂಗ ಸ್ಥಲ ಮಹತ್ವದ ವಿಷಯವಾಗಿದ್ದು, ಗುರುವಿನ ಮೂಲಕ ಜೀವಾತ್ಮ ಪರಮಾತ್ಮನಾಗುವ ಬಗೆಯೇ ಕ್ರಿಯಾಲಿಂಗ ಸ್ಥಲವಾಗಿದೆ ಎಂದರು.

ನೇತೃತ್ವ ವಹಿಸಿದ್ದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಚಾರ್ಯರು, ಸಿದ್ಧಾಂತ ಶಿಖಾಮಣಿ ಅದ್ಭುತ ಧರ್ಮ ಗ್ರಂಥ. ಅದರಲ್ಲಿನ ಕ್ರಿಯಾಲಿಂಗ ಸ್ಥಲವೆಂದರೆ ಇಷ್ಟಲಿಂಗ ಪೂಜೆ ಮೂಲಕ ಮನುಷ್ಯ ಮಹಾಮಾನವನಾಗಿ ಹೇಗೆ ಪರಮಾತ್ಮನಾಗಬಲ್ಲ ಎಂಬುದನ್ನು ಬೋಧಿಸುವ ಸದ್ಬೋಧನೆಯಾಗಿದೆ ಎಂದರು.



ತ್ರಿಪುರಾಂತ ಗವಿ ಮಠದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ.ಗವಿಸಿದ್ದಪ್ಪ ಪಾಟೀಲ್ ಮಾತನಾಡಿದರು. ತ್ರಿಪುರಾಂತ ಶ್ರೀಗಳು ಇದ್ದರು.

ಸಂಸ್ಥೆ ಅಧ್ಯಕ್ಷ ವೀರಣ್ಣಾ ಶೀಲವಂತ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ್, ಷಣ್ಮುಖಪ್ಪ ಕಣಸೂರೆ, ವಿಶ್ವನಾಥಪ್ಪ ಬಿರಾದಾರ, ಬಸವರಾಜ ಸ್ವಾಮಿ, ಮಾಣಿಕಪ್ಪ ಬಿರಾದಾರ್, ಮಲ್ಲಿಕಾರ್ಜುನ ನಂದಿ, ಬಸತೀರ್ಥಯ್ಯ ಕಾಡಾದಿ, ರೇವಣಸಿದ್ದಯ್ಯ ಮಠಪತಿ, ಪ್ರೊ.ವಿ.ಎಸ್. ರಾಜೋಳೆ, ರೇವಣಸಿದ್ದಯ್ಯ ವಸ್ತ್ರದ, ಕಾಶೀನಾಥ ಸ್ವಾಮಿ, ರುದ್ರಮಣಿ ಮಠ, ಸುಭದ್ರಾಬಾಯಿ ಸ್ವಾಮಿ, ವಿಮಲಾಬಾಯಿ ಮಾಣಿಕಪ್ಪ ಬಿರಾದಾರ್, ಸರಸ್ವತಿ ಬೆಂಬಳೆ, ಜಗದೇವಿ ಬಸವರಾಜ ಸ್ವಾಮಿ ಉಪಸ್ಥಿತರಿದ್ದರು.

ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ಪ್ರಾರ್ಥಿಸಿದರು. ಬಸವಂತಪ್ಪ ಲವಾರೆ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ಪ್ರೊ.ಸೂರ್ಯಕಾಂತ ಶೀಲವಂತ ವಂದಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಶುಕ್ರವಾರ
4 ಸೆಪ್ಟೆಂಬರ್ 2015
4 SEPTEMBER 2015



ಬಸವಕಲ್ಯಾಣದ ತ್ರಿಪುರಾಂತನ ಹನುಮಾನ ಮಂದಿರದ ಆವರಣದಲ್ಲಿ ಶನಿವಾರ ನೂತನ ಮೂರ್ತಿಗಳ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ತಡೋಳಾದ ರಾಚೋಟಿ ಶಿವಾಚಾರ್ಯ ಹಾಗೂ ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಚಾಲನೆ ನೀಡಿದರು. ಟ್ರಸ್ಟ್‌ನ ಅಧ್ಯಕ್ಷ ಮರೆಪ್ಪ ಪಾಟೀಲ್ ಇದ್ದರು.

# ನೂತನ ಮೂರ್ತಿ ಪ್ರತಿಷ್ಠಾಪನೆ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಇಲ್ಲಿಯ ತ್ರಿಪುರಾಂತನ ಹನುಮಾನ ಮಂದಿರದ ಮುಂಭಾಗದಲ್ಲಿರುವ ನವಗ್ರಹಗಳನ್ನು ಕಿಡಿಗೇಡಿಗಳು ಕಳೆದ ಅಕ್ಟೋಬರ್ 26ರಂದು ಧ್ವಂಸಗೊಳಿಸಿದ ಹಿನ್ನೆಲೆಯಲ್ಲಿ ಶನಿವಾರ ದೇವಸ್ಥಾನದ ಆವರಣದಲ್ಲಿ ಮತ್ತೆ ನೂತನ ಮೂರ್ತಿಗಳ ಪ್ರತಿಷ್ಠಾಪನೆ ಕಾರ್ಯಕ್ರಮ ಜರುಗಿತು.

ಬೆಳಗ್ಗೆಯಿಂದ ದೇವಸ್ಥಾನದಲ್ಲಿ ಪೂಜೆ ಹೋಮ-ಹವನ ನಡೆದವು. ನಂತರ ತಡೋಳಾದ ರಾಚೋಟಿ ಶಿವಾಚಾರ್ಯರು ಹಾಗೂ ತ್ರೀಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನವಗ್ರಹಗಳ ಮೂರ್ತಿಗಳಿಗೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ನಂತರ ದೇವಸ್ಥಾನದ ಆವರಣದಲ್ಲಿ ಭಕ್ತರು ಅನ್ನ, ಸಾಂಬಾರು, ಹುಗ್ಗಿ ಪ್ರಸಾದ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಟ್ರಸ್ಟ್‌ನ ಅಧ್ಯಕ್ಷ ಮರೆಪ್ಪ ಪಾಟೀಲ್, ಸದಸ್ಯರಾದ ನಾಗಣ್ಣ ಸ್ವಾಮಿ, ಸಂತೋಷ ರಾಜೋಳೆ, ರಾಜು ಪಾಟೀಲ್, ವಿಪಿನ ಶ್ರೀವಾಸ್ತವ, ಗುಂಡಪ್ಪ ಬಿರಾದಾರ, ಬಸವರಾಜ ಮಾಲಿ ಪಾಟೀಲ್, ಸಂತೋಷ ಬಿರಾದಾರ, ಶರಣಪ್ಪ ರಾಜೋಳೆ, ಮಹೇಶ ರಾಜೋಳೆ, ಸಚೀನ ಶ್ರೀವಾಸ್ತವ, ಗುರುಬಸಪ್ಪ ಚನಮಲ್ಲೆ, ದಯಾನಂದ ಪರ್ತಾಪುರೆ, ಲಿಂಗರಾಜ ಚನಮಲ್ಲೆ, ಹಣಮಂತ ಮಾಳಿ, ದೀಪಕ ರಾಜೋಳೆ, ಮಹಾದೇವ ಬಿರಾದಾರ, ರಾಮ ಸಂಕರರಾವ ಭೂವೆ ಇದ್ದರು.

ವಿಜಯ ಕರ್ನಾಟಕ ಭಾನುವಾರ,28 ಜೂನ್ 2015, ಕಲಬುರಗಿ

## ಮೌನಾನುಷ್ಠಾನ ಮಂಗಲ 22ಕ್ಕೆ

**ಬಸವಕಲ್ಯಾಣ:** ನವರಾತ್ರಿ ನಿಮಿತ್ತ ತ್ರಿಪುರಾಂತದ ಜಗದ್ಗುರು ಮೌನೇಶ್ವರ ಮಂದಿರದಲ್ಲಿ ಶ್ರೀ ಸಂಗಮೇಶ ಆಚಾರ್ಯರು ನಡೆಸುತ್ತಿರುವ ಮೌನಾನುಷ್ಠಾನ ಮಂಗಲೋತ್ಸವ ಅ.22ರಂದು ಜರುಗಲಿದೆ. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ, ಪಂಚ ಕಮಿಟಿ ಅಧ್ಯಕ್ಷ ತಿಪ್ಪಣ್ಣ ಪಂಚಾಳ ಅಧ್ಯಕ್ಷತೆ ವಹಿಸುವರು ಎಂದು ಕಮಿಟಿಯ ಹರಿಶ್ಚಂದ್ರ ಪಂಚಾಳ, ವೀರಭದ್ರ ಪಂಚಾಳ, ವಿಜಯಕುಮಾರ ಪಂಚಾಳ, ಕಾಶೀನಾಥ ಪಂಚಾಳ ತಿಳಿಸಿದ್ದಾರೆ.



ತ್ರಿಪುರಾಂತದ ಜಗದ್ಗುರು ಮೌನೇಶ್ವರ ಮಂದಿರದಲ್ಲಿ ನವರಾತ್ರಿ ನಿಮಿತ್ತ ಶ್ರೀ ಸಂಗಮೇಶ ಆಚಾರ್ಯರು ಮೌನಾನುಷ್ಠಾನ ನಡೆಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಮಂಗಳವಾರ
20 ಅಕ್ಟೋಬರ್ 2015
20 OCTOBER 2015

Scanned with CamScanner

■ ಸಾವಳಗಿ (ಕೆ) ಗ್ರಾಮದಲ್ಲಿ ರಾಜ್ಯ ಸಭೆ ಸದಸ್ಯ ಬಸವರಾಜ ಪಾಟೀಲ್ ಸೇಡಂ ಅವರಿಂದ ಬಸವೇಶ್ವರ ಮೂರ್ತಿ ಅನಾವರಣ

# ಮಹಾತ್ಮರ ತತ್ವಾದರ್ಶ ಪಾಲನೆಗೆ ಸಲಹೆ

**ಆಳಂದ:** ಸಮಾನತೆ ತಳಹದಿ ಮೇಲೆ ಜಾತ್ಯತೀತ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಮಹಾತ್ಮರ ತತ್ವಾದರ್ಶಗಳು ಬದುಕಿಗೆ ದಾರಿದೀಪವಾಗಿವೆ. ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸನ್ಮಾರ್ಗದಲ್ಲಿ ಸಾಗಬೇಕು ಎಂದು ರಾಜ್ಯಸಭಾ ಸದಸ್ಯ ಬಸವರಾಜ ಪಾಟೀಲ್ ಸೇಡಂ ಹೇಳಿದರು.

ತಾಲೂಕಿನ ಸಾವಳಗಿ ಕೆ ಗ್ರಾಮದಲ್ಲಿ ಮಹಾದೇವ ಜಾತ್ರಾ ಮಹೋತ್ಸವ ಅಂಗವಾಗಿ ಶುಕ್ರವಾರ ಜಗಜ್ಯೋತಿ ಬಸವೇಶ್ವರರ ಮೂರ್ತಿ ಅನಾವರಣಗೊಳಿಸಿ ಮಾತನಾಡಿದ ಅವರು, ಸಮಾಜದ ಪ್ರತಿಯೊಬ್ಬರಲ್ಲಿ ಏಕತೆ ಮನೋಭಾವ ಬೆಳೆಸಿಕೊಂಡಾಗ ಮಾತ್ರ ಪ್ರತಿಯೊಂದು ಹಂತದಲ್ಲಿ ಗ್ರಾಮಗಳ ಅಭಿವೃದ್ಧಿ ಕಾಣಲು ಸಾಧ್ಯ ಎಂದರು.

ಬಸವೇಶ್ವರರು ಈ ದೇಶ ಕಂಡ ಮಹಾ ಮಾನವತಾವಾದಿ. ಅವರ ವಚನಗಳಲ್ಲಿ ಬದುಕಿನ ನೀತಿ ಹಾಗೂ ಮಾರ್ಗದರ್ಶನವಿದೆ. ವಚನಗಳು ಸಾರ್ವಕಾಲಿಕವಾಗಿವೆ ಎಂದು ಹೇಳಿದರು.

ಹಾರಕೂಡ ಮಠದ ಡಾ.ಚನ್ನವೀರ ಶಿವಾಚಾರ್ಯರು ಸಾನ್ನಿಧ್ಯವಹಿಸಿದ್ದರು. ಗವಿ ಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಗ್ರಾಪಂ ಅಧ್ಯಕ್ಷ ಎ.ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು.

ಜಿಪಂ ಸದಸ್ಯೆ ಜ್ಯೋತಿಲಕ್ಷ್ಮೀ ಶೆಟ್ಟಿ, ಶರಣು ಸಲಗರ, ನಾಮದೇವ ರಾಠೋಡ, ಎಪಿಎಂಸಿ ಸದಸ್ಯ ಸುಭಾಷ್ ಮುರುಡ, ಗೋರಕನಾಥ ಸಜ್ಜನ್, ಬಸವರಾಜ ಮುನ್ನಳ್ಳಿ, ಲಕ್ಷ್ಮಣರಾವ್ ಜವಳಗಿ, ಬಸವ ಸಮಿತಿ ಅಧ್ಯಕ್ಷ ಶಂಕರ ಮುಲಗೆ, ಉಪಾಧ್ಯಕ್ಷ ಬಸವರಾಜ ಸಂಬಾಜಿ ಇತರರಿದ್ದರು.

ಶಿವಪುತ್ರ ಬೆಳಮಗಿ ಸ್ವಾಗತಿಸಿದರು. ಮಹಾಂತೇಶ ಮೂಲಿಮನಿ ವಂದಿಸಿದರು. ಗ್ರಾಮದಲ್ಲಿ ಕುಂಭ ಮೇಳ ಹಾಗೂ ಪಲ್ಲಕ್ಕಿಯೊಂದಿಗೆ ಹಾರಕೂಡ ಶ್ರೀಗಳ ಭವ್ಯ ಮೆರವಣಿಗೆ ಮಾಡಲಾಯಿತು.



ಸಾವಳಗಿ ಕೆ ಗ್ರಾಮದಲ್ಲಿ ಜಗಜ್ಯೋತಿ ಬಸವೇಶ್ವರರ ಮೂರ್ತಿ ಅನಾವರಣ ಕಾರ್ಯಕ್ರಮದಲ್ಲಿ ಹಾರಕೂಡ ಮಠದ ಡಾ.ಚನ್ನವೀರ ಶ್ರೀ ಸಾನ್ನಿಧ್ಯವಹಿಸಿದ್ದರು. ರಾಜ್ಯಸಭಾ ಸದಸ್ಯ ಬಸವರಾಜ ಪಾಟೀಲ್ ಸೇಡಂ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಶನಿವಾರ 4 ಏಪ್ರಿಲ್ 2015
VIJAYAVANI ● KALABURAGI 4 APRIL 2015

# ತ್ರಿಪುರಾಂತ ಗವಿಮಠದಲ್ಲಿ ಶ್ರಾವಣ ಪ್ರವಚನ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಜಗದ್ಗುರು ರೇಣುಕಾಚಾರ್ಯರು ಮಾನವ ಕಲ್ಯಾಣಕ್ಕಾಗಿ ಬೋಧಿಸಿದ ಸಿದ್ಧಾಂತ ಶಿಖಾಮಣಿ ಅತ್ಯಂತ ಶ್ರೇಷ್ಠ ಗ್ರಂಥವಾಗಿದೆ ಎಂದು ಮೇಹಕರ್ ಹಾಗೂ ತಡೋಳಾದ ರಾಜೇಶ್ವರ ಶಿವಾಚಾರ್ಯರು ಹೇಳಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕು ಘಟಕ ಹಾಗೂ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠ ಟ್ರಸ್ಟ್ ಸಹಯೋಗದಲ್ಲಿ ನಡೆಯುತ್ತಿರುವ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಸಾನ್ನಿಧ್ಯವಹಿಸಿ ಮಾತನಾಡಿದರು.

ಹುಮನಾಬಾದ್‌ನ ಶಿಕ್ಷಣ ಸಂಯೋಜಕ ರಮೇಶ ಟಿ ರಾಜೋಳೆ ಮಾತನಾಡಿದರು. ಅಧ್ಯಕ್ಷತೆ ವಹಿಸಿದ ಬಸವ 'ಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನ ವಿಭಾಗದ ಮುಖ್ಯಸ್ಥ ಪ್ರೊ. ದಯಾನಂದ ಶೀಲವಂತ ಮಾತ ನಾಡಿದರು.ನೇತೃತ್ವ ವಹಿಸಿದ್ದ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ವಿಶ್ವನಾಥಪ್ಪ ಬಿರಾದಾರ, ಶೀಲವಂತ ಸಮಾಜ ಅಧ್ಯಕ್ಷ ಚೆನ್ನಪ್ಪ ರಾಜಾಪುರೆ ಟ್ರಸ್ಟ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆಯ ಅಧ್ಯಕ್ಷ ವೀರಣ್ಣ ಶೀಲವಂತ, ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ, ಬಸವರಾಜ ಸ್ವಾಮಿ, ಮಲ್ಲಿಕಾರ್ಜುನ ನಂದಿ, ರೇವಣ ಮಠಪತಿ, ರುದ್ರಮುನಿ ಮಠ, ಹಾವಯ್ಯ ಸ್ವಾಮಿ, ಪ್ರೊ. ಸೂರ್ಯಕಾಂತ ಶೀಲವಂತ ಸೇರಿದಂತೆ ಅನೇಕರಿದ್ದರು.

ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ಪ್ರಾರ್ಥಿಸಿದರು. ಶಿಕ್ಷಕಿ ಸರಸ್ವತಿ ಬೆಂಬಳೆ ನಿರೂಪಿಸಿದರು.ಬಸವಂತಪ್ಪಾ ಲವಾರೆ ವಂದಿಸಿದರು.



ಬಸವಕಲ್ಯಾಣದ ತ್ರಿಪುರಾಂತದ ಗವಿಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಶಿಕ್ಷಣ ಸಂಯೋಜಕ ರಮೇಶ ಟಿ ರಾಜೋಳೆ ಮಾತನಾಡಿದರು. ರಾಜೇಶ್ವರ ಶಿವಾಚಾರ್ಯರು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು.

ವಿಜಯ ಕರ್ನಾಟಕ
ಭಾನುವಾರ,13 ಸೆಪ್ಟೆಂಬರ್ 2015, ಕಲಬುರಗಿ

Scanned with CamScanner

# ಗುರಿ ಸಾಧನೆಗೆ ಗುರುವಿನ ಮಾರ್ಗದರ್ಶನ ಬೇಕೇ ಬೇಕು

ಬಸವಕಲ್ಯಾಣ: ಜೀವನದಲ್ಲಿ ಶಾಂತಿ, ನೆಮ್ಮದಿ ಪಡೆಯಬೇಕಾದರೆ ಧರ್ಮ ಮತ್ತು ಮಾರ್ಗದರ್ಶನ ತೋರುವ ಗುರುವಿನ ಅಗತ್ಯ ಪ್ರತಿಯೊಬ್ಬರಿಗೂ ಇದೆ ಎಂದು ಅಭಿನವ ಘನಲಿಂಗ ರುದ್ರಮುನಿ ಶ್ರೀ ನುಡಿದರು.

ಗುರು ಪೂರ್ಣಿಮಾ ನಿಮಿತ್ತ ತ್ರಿಪುರಾಂತನ ಜಗದ್ಗುರು ಘನಲಿಂಗ ರುದ್ರಮುನಿ ಶ್ರೀ ಗವಿಮಠದಲ್ಲಿ ಗುರುವಂದನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಬದುಕಿಗೆ ಬೇಕಾದ ವಿದ್ಯೆ ಕಲಿಸಿದ ಗುರುವಿಗೆ ಕೃತಜ್ಞತೆ ಸಲ್ಲಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಗುರುವನ್ನು ಆರಾಧಿಸುವ ಪರ್ವ ದಿನವೇ ಗುರು ಪೂರ್ಣಿಮೆಯಾಗಿದೆ ಎಂದರು.



ತ್ರಿಪುರಾಂತನ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠದಲ್ಲಿ ಗುರುವಂದನಾ ಕಾರ್ಯಕ್ರಮದಲ್ಲಿ ತ್ರಿಪುರಾಂತ ಶ್ರೀಗಳಿಗೆ ಗುರು ವಂದನೆ ಸಲ್ಲಿಸಲಾಯಿತು.

ಬದುಕಿನಲ್ಲಿ ಬರುವ ಕಷ್ಟಗಳನ್ನು ಪರಿಹರಿಸಿ ಬಾಳಿನಲ್ಲಿ ಬೆಳಕು ತೋರುವವರೇ ನಿಜವಾದ .ಗುರು. ಗುರುವಿನ ಬಳಿ ಪಡೆದ ಜ್ಞಾನ ಜೀವನದಲ್ಲಿ ದಾರಿದೀಪವಾಗುತ್ತದೆ. ಪಾರಮಾರ್ಥಿಕ ಉನ್ನತಿ ಸಾಧಿಸಲಿ ಎನ್ನುವುದೇ ಗುರುವಿನ ಆಶಯವಾಗುತ್ತದೆ ಎಂದರು.

ಮಹಾರಾಷ್ಟ್ರದ ಶಹಾಜನಿ ಔರಾದ್ ಮಹಿಳಾ ಮಂಡಳದ ಭಕ್ತರಿಂದ ಅಭಿನವ ಘನಲಿಂಗ ರುದ್ರಮುನಿ ಶ್ರೀ ಪಾದಪೂಜೆ ನೆರವೇರಿಸಿದರು. ರೇವಣಸಿದ್ದಯ್ಯ ಮಠಪತಿ, ಮಲ್ಲಿಕಾರ್ಜುನ ನಂದಿ, ಬಸವಂತಪ್ಪ ಲವಾರೆ, ಬಾಬುರಾವ ಉಳ್ಳೆ, ಚಂದ್ರಕಾಂತ ಸ್ವಾಮಿ, ಷಣ್ಮುಖ, ಹಲಗೆಪ್ಪ, ರುದ್ರೇಶ ಉಡಚಣ, ಶಿವಾನಂದ ಪಾಟೀಲ ಜೇವರ್ಗಿ ಭಾಗವಹಿಸಿದ್ದರು.

ವಿಜಯವಾಣಿ
VIJAYAVANI • KALABURAGI
ಭಾನುವಾರ | 2 ಆಗಸ್ಟ್ 2015
2 AUGUST 2015

# ನಂದಿ ಧ್ವಜ ತರಬೇತಿ ಸಮಾರೋಪ ನಾಳೆ

ಬಸವಕಲ್ಯಾಣ: ಶ್ರೀ ಬಾಬಾ ಸಾಹೇಬ್ ವಾರದ ಅವರ ಸ್ಮರಣೋತ್ಸವ ಹಾಗೂ ಹತ್ತನೇ ನಂದಿ ಧ್ವಜ ತರಬೇತಿಯ ಸಮಾರೋಪ ಸಮಾರಂಭ ಭಾನುವಾರ ನಡೆಯಲಿದೆ.

ಬೆಳಗ್ಗೆ 6ಕ್ಕೆ ಅಲ್ಲಮ ಪ್ರಭುದೇವರ ಗದ್ದುಗೆ ಮಠದಿಂದ ಪ್ರಾರಂಭವಾಗುವ ನಂದಿ ಧ್ವಜಗಳ ಮೆರವಣಿಗೆ, ಗುರು ಬಸವಣ್ಣನವರ ಅರಿವಿನ ಮನೆ, ಅಕ್ಕನಾಗಮ್ಮನ ಗವಿ, ತ್ರಿಪುರಾಂತಕೇಶ್ವರ ದೇವಾಲಯ, ಶ್ರೀ ಮಡಿವಾಳ ಮಾಚೀದೇವರ ವೃತ್ತ, ಶಿವಪೂರ ರಸ್ತೆ ಮೂಲಕ ಸಂಚರಿಸಿ, ನಾಗಣ್ಣ ಕಟ್ಟೆಗೆ ತಲುಪುವದು. ನಂದಿಧ್ವಜಗಳನ್ನು ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಗುವುದು.

ಮಧ್ಯಾಹ್ನ 1ಕ್ಕೆ ಶಿವಪೂರದ ಉಮಾಕಾಂತ ಬಿರಾದಾರ್ ನಿವಾಸದ ಬಳಿ ಸಮಾರೋಪ ಕಾರ್ಯಕ್ರಮ ಜರುಗಲಿದೆ.

ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ, ಬಿಡಿಪಿಸಿ ಅಧ್ಯಕ್ಷ ಮಲ್ಲಪ್ಪ ಲಾತೂರೆ ಅಧ್ಯಕ್ಷತೆ ವಹಿಸುವರು. ಮಹೇಂದ್ರ ವಾರದ ಸೋಲ್ಲಾಪೂರ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಡಾ.ನೀಲಾಂಬಿಕಾ ಪೊಲೀಸ್ ಪಾಟೀಲ್, ರಜೀಯಾ ಬಳಬಟ್ಟೆ ವಿಶೇಷ ಉಪನ್ಯಾಸ ನೀಡುವರು. ಬಿಡಿಪಿಸಿ ಉಪಾಧ್ಯಕ್ಷ ರೇವಣಪ್ಪ ರಾಯವಾಡೆ ಸೇರಿದಂತೆ ಪ್ರಮುಖರು ಭಾಗವಹಿಸಲಿದ್ದಾರೆ ಎಂದು ನವತರುಣ ನಂದಿ ಧ್ವಜ ಸೇವಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI 4 APRIL 2015
ಶನಿವಾರ 4 ಏಪ್ರಿಲ್ 2015

# ಸ್ಪರ್ಧಾತ್ಮಕ ಮನೋಭಾವ ಬೆಳೆಯಲಿ

ಬಸವಕಲ್ಯಾಣ: ಗುಣಮಟ್ಟದ ಶಿಕ್ಷಣದ ಜತೆಗೆ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಯಬೇಕಾದ ಅಗತ್ಯವಿದೆ ಎಂದು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಸಸ್ತಾಪುರ ಗ್ರಾಮದ ನವೋದಯ ಪೂರ್ವ ಮತ್ತು ಪ್ರಾಥಮಿಕ ಶಾಲೆಯ ಪ್ರಥಮ ವಾರ್ಷಿಕೋತ್ಸವಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ಪ್ರಾಥಮಿಕ ಶಿಕ್ಷಣ ಅತಿ ಮಹತ್ವದ ಘಟ್ಟ, ಗುಣಮಟ್ಟದ ಶಿಕ್ಷಣದ ಜತೆಗೆ ನೈತಿಕ ಶಿಕ್ಷಣ ನೀಡಬೇಕು. ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯ ಬೆಳೆಸುವ ಕೆಲಸ ನಡೆಯಬೇಕು ಎಂದರು.

ಉದ್ಘಾಟನೆ ನೆರವೇರಿಸಿದ ಬಿಜೆಪಿ ತಾಲೂಕಾಧ್ಯಕ್ಷ ಸೂರ್ಯಕಾಂತ ಚಿಲ್ಲಾಬಟ್ಟೆ, ಜೀವನದಲ್ಲಿ ಶಿಸ್ತು ಮತ್ತು ಸಮಯಪ್ರಜ್ಞೆ ಅವಶ್ಯಕ. ವಿದ್ಯಾರ್ಥಿಗಳು ಶ್ರಮವಹಿಸಿ ಅಭ್ಯಸಿಸುವ ಜತೆಗೆ ಗುರು ಹಿರಿಯರನ್ನು ಗೌರವಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಬಸವಕಲ್ಯಾಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಡಾ.ಚಿತ್ರಶೇಖರ ಚಿರಳ್ಳಿ ಮಾತನಾಡಿ, ಗ್ರಾಮೀಣ ವಿದ್ಯಾರ್ಥಿಗಳು ಉತ್ತಮವಾಗಿ ವಿದ್ಯಾಭ್ಯಾಸ ಮಾಡಿ ಶಾಲೆಗೆ ಕೀರ್ತಿ ತರಬೇಕು ಎಂದು ಸಲಹೆ ನೀಡಿದರು. ತಾಪಂ ಮಾಜಿ ಸದಸ್ಯ ಶಂಕರ ನಾಗದೆ ಮಾತನಾಡಿದರು.



ಬಸವಕಲ್ಯಾಣ ತಾಲೂಕಿನ ಸಸ್ತಾಪುರ ಗ್ರಾಮದ ನವೋದಯ ಪೂರ್ವ ಮತ್ತು ಪ್ರಾಥಮಿಕ ಶಾಲೆಯ ಪ್ರಥಮ ವಾರ್ಷಿಕೋತ್ಸವವನ್ನು ಬಿಜೆಪಿ ತಾಲೂಕು ಅಧ್ಯಕ್ಷ ಸೂರ್ಯಕಾಂತ ಚಿಲ್ಲಾಬಟ್ಟೆ ಉದ್ಘಾಟಿಸಿದರು.

ಗ್ರಾಪಂ ಅಧ್ಯಕ್ಷೆ ಸಂಪತಾಬಾಯಿ ತ್ರೀಮುಖೆ, ತಾಪಂ ಮಾಜಿ ಅಧ್ಯಕ್ಷ ದಿಲೀಪ ಗಿರಗಂಟೆ, ಬಿಜೆಪಿ ಮುಖಂಡ ಚನ್ನಪ್ಪ ಪಾಟೀಲ, ಮಾಜಿ ಅಧ್ಯಕ್ಷ ಬಾಬುರಡ್ಡಿ ಚಾಮಲೆ, ಸಂಸ್ಥೆ ಅಧ್ಯಕ್ಷ ರವೀಂದ್ರ ಎಸ್.ಟೋಣಪೆ, ಕಾರ್ಯದರ್ಶಿ ಶಿವಕುಮಾರ ಬೆಟ್ಟದ, ವೆಂಕಟರಡ್ಡಿ ಕೆ., ರಾಮಣ್ಣ ಕಾಂಬಳೆ, ಮುಖ್ಯಗುರು ವೈಶಾಲಿ ಪಾಟೀಲ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ಗಮನ ಸೆಳೆಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಶುಕ್ರವಾರ
3 ಏಪ್ರಿಲ್ 2015
3 APRIL 2015

Scanned with CamScanner

# ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಸಾಧನಾ ಪುರಸ್ಕಾರ

**ಬಸವಕಲ್ಯಾಣ**

ನಗರದ ರವೀಂದ್ರನಾಥ ಠ್ಯಾಗೋರ ಕೋಚಿಂಗ ಕ್ಲಾಸನಲ್ಲಿ 2014-15ನೇ ಸಾಲಿನ ಗಣಿತದ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ಎಸ್.ಎಸ್.ಎಲ್.ಸಿ ವಿಧ್ಯಾರ್ಥಿಗಳಿಗೆ ಸಾಧನಾ ಪುರಸ್ಕಾರ ಹಾಗೂ ಬೇಸಿಗೆ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಹಮ್ಮಿಕೊಳ್ಳಲಾಯಿತು.

ಸಮಾರಂಭದ ದಿವ್ಯಸಾನಿಧ್ಯವನ್ನು ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಚಾರ್ಯರು,

ಮುಖ್ಯ ಅತಿಥಿಗಳಾಗಿ ಮುಗು ಮಾಣಿಕರಾವ ಗೋರಮಡೆ, ಅತಿಥಿಗಳಾಗಿ ಮುಗು ಶಿವರಾಜಯ್ಯಾ ಸ್ವಾಮಿ, ಸಂಚಾಲಕರು ಪಂಡಿತ ಬಾಳೂರೆ ಉಪಸ್ಥಿತರಿದ್ದರು.

ಗಣಿತ ವಿಷಯದಲ್ಲಿ 2014-15ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸುಮಾರು 25 ವಿಧ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ನಂತರ ಕೋಚಿಂಗ ಕ್ಲಾಸೆಸನ ವಿಧ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಅಲ್ಲಮ ಪ್ರಭು ಪಿಯು ಕಾಲೇಜಿನ ಕಾರ್ಯದರ್ಶಿ ಚಂದ್ರಕಾಂತ ಅಕ್ಕಣ್ಣರವರು ಮಾತನಾಡಿ ವಿಧ್ಯಾರ್ಥಿಗಳು ಯಶಸ್ವಿಯಾಗಬೇಕಾದರೆ ಪಾಲಕರು ಕೂಡ ಮಕ್ಕಳ ಬಗ್ಗೆ ಗಮನ ಹರಿಸಬೇಕು ಎಂದು ತಿಳಿಸಿದರು.

ಅಧ್ಯಕ್ಷ ರವಿ ಬಿರಾದಾರ ಮಾತನಾಡಿ ಮಕ್ಕಳು ಉನ್ನತ ಮಟ್ಟದಲ್ಲಿ ಬೆಳೆಯಬೇಕಾದರೆ ಇಂತಹ ಶಿಕ್ಷಕರು ಮತ್ತು ಕೊಚಿಂಗನ ಅವಶ್ಯಕತೆ ಇದೆ ಎಂದರು.

ದಿವ್ಯಸಾನಿಧ್ಯವನ್ನು ವಹಿಸಿದ ಶ್ರೀ ಘನಲಿಂಗ ರುದ್ರಮುನಿ ಶಿವಚಾರ್ಯರು ಆಶಿರ್ವಚನ ನೀಡಿದರು.

ಪ್ರಾರ್ಥನಾ ಗೀತೆ ಕು. ಮಾಲಾಶ್ರೀ, ಸ್ವಾಗತ ಗೀತೆ ಕು. ವೈಷ್ಣವಿ ಮತ್ತು ಸಂಗಡಿಗರು, ಸ್ವಾಗತ ಶಶಿಕಾಂತ ಮಂಠಾಳೆ, ನಿರೂಪಣೆ ಖೀರಾಲಿಂಗ ಭಾಗೇಳ್ಳಿ, ವಂದನಾರ್ಪಣೆ ಮಲ್ಲಿಕಾರ್ಜುನ ವಸೂತಿ ಸಲ್ಲಿಸಿದರು.



ಬಸವಕಲ್ಯಾಣ: ನಗರದ ರವೀಂದ್ರನಾಥ ಠ್ಯಾಗೋರ ಕೋಚಿಂಗ ಕ್ಲಾಸನಲ್ಲಿ 2014-15ನೇ ಸಾಲಿನ ಗಣಿತದ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ಎಸ್.ಎಸ್.ಎಲ್.ಸಿ ವಿಧ್ಯಾರ್ಥಿಗಳಿಗೆ ಸಾಧನಾ ಪುರಸ್ಕಾರ ಹಮ್ಮಿಕೊಳ್ಳಲಾಯಿತು.

ಕಲ್ಯಾಣ ಕರ್ನಾಟಕ ಬುಧವಾರ, 27, ಮೇ, 2015, ಕಲಬುರಗಿ

# ಸಿದ್ಧಾಂತ ಶಿಖಾಮಣಿ ಬೋಧನೆಯಿಂದ ಅಂತರಂಗ ಶುದ್ಧಿ

**ವಿಕ ಸುದ್ದಿಲೋಕ** ಬಸವಕಲ್ಯಾಣ

ವೀರಶೈವ ಲಿಂಗಾಯತ ಧರ್ಮ ಸಂಸ್ಥಾಪಕ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿ ಅಧ್ಯಯನದಿಂದ ಅಂತರಂಗ ಶುದ್ಧವಾಗಲಿದೆ ಎಂದು ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ. ಗವಿಸಿದ್ದಪ್ಪ ಪಾಟೀಲ್ ಹೇಳಿದರು.

ನಗರದ ತ್ರಿಪುರಾಂತದ ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಹಾಗೂಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠ ಟ್ರಸ್ಟ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವೀರಶೈವ ಲಿಂಗಾಯತ ಧರ್ಮದ ಮೂಲ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಕ್ರಿಯಾಲಿಂಗ ಸ್ಥಳ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ನೇತೃತ್ವ ವಹಿಸಿದ್ದ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಚಾರ್ಯರು ಆಶೀರ್ವಚನ ನೀಡಿ, ಜಗದ್ಗುರು ರೇಣುಕಾಚಾರ್ಯರು ಮಹಾಋಷಿ ಅಗಸ್ತ್ಯರನ್ನು ನಿಮಿತ್ತ ಮಾಡಿಕೊಂಡು ಮನುಕುಲಕ್ಕೆ ಭೋದಿಸಿರುವ ಸಿದ್ಧಾಂತ ಶಿಖಾಮಣಿ ಅದ್ಭುತವಾದ ಧರ್ಮ ಗ್ರಂಥವಾಗಿದೆ. ಅದರಲ್ಲಿಯ ಕ್ರೀಯಾಲಿಂಗ ಸ್ಥಲವು ಅಂದರೆ ಇಷ್ಟಲಿಂಗ ಪೂಜೆಯ ಮೂಲಕ ಮನುಷ್ಯ ಮಹಾಮಾನವನಾಗಿ ಹೇಗೆ ಪರಮಾತ್ಮನಾಗಬಲ್ಲ ಎಂಬುದನ್ನೇ ಭೋದಿಸುವ ಸದ್ಬೋಧನೆಯಾಗಿದೆ. ಈ ಕ್ರೀಯಾಲಿಂಗವು ಗುರುವಿನ ಮೂಲಕ ಯಾವುದೇ ಜಾತಿ- ಮತ ಭೇದವಿಲ್ಲದೆ ಎಲ್ಲರು ಅನುಸರಿಸಿ ಆ ಮೂಲಕ ಪರಮಾತ್ಮನಾಗಬಹುದು ಎಂದರು.

ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆಯ ಅಧ್ಯಕ್ಷ ವೀರಣ್ಣ ಎಸ್ ಶೀಲವಂತ ಅಧ್ಯಕ್ಷತೆ ವಹಿಸಿದ್ದರು. ಗವಿಮಠ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಷಣ್ಮುಕಪ್ಪಾ ಕಣಸೂರೆ, ವಿಶ್ವನಾಥಪ್ಪ ಬಿರಾದಾರ, ಬಸವರಾಜ ಸ್ವಾಮಿ, ಮಾಣಿಕಪ್ಪಾ ಬಿರಾದಾರ, ಮಲ್ಲಿಕಾರ್ಜುನ ನಂದಿ, ಬಸತೀರ್ಥಯ್ಯ ಕಾಡಾದಿ, ರೇವಣಸಿದ್ದಯ್ಯ ಮಠಪತಿ, ಪ್ರೊ.ವಿ.ಎಸ್, ರಾಜೋಳೆ, ರೇವಣಸಿದ್ದಯ್ಯ ವಸ್ತ್ರದ, ಕಾಶಿನಾಥ ಸ್ವಾಮಿ, ರುದ್ರಮಣಿ ಮಠ, ಸುಭದ್ರಾಬಾಯಿ ಸ್ವಾಮಿ, ವಿಮಲಾಬಾಯಿ ಬಿರಾದಾರ, ಸರಸ್ವತಿ ಬೆಂಬಳೆ, ಜಗದೇವಿ ಸ್ವಾಮಿ, ಸುರೇಖಾ ಎಸ್ ಶೀಲವಂತ, ರೇಣುಕಾ ಮಠಪತಿ ಸೇರಿ ಅನೇಕರಿದ್ದರು.

ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ಪ್ರಾರ್ಥಿಸಿದರು, ಬಸವಂತಪ್ಪಾ ಲವಾರೆ ಸ್ವಾಗತಿಸಿದರು, ಶಿಕ್ಷಣ ಸಂಯೋಜಕ ರಮೇಶ ಟಿ ರಾಜೋಳೆ ನಿರೂಪಿಸಿದರು, ಪ್ರೊ. ಸೂರ್ಯಕಾಂತ ಶೀಲವಂತ ವಂದಿಸಿದರು.



ಬಸವಕಲ್ಯಾಣ ತ್ರಿಪುರಾಂತದ ಗವಿಮಠದಲ್ಲಿ ಪವಿತ್ರ ಶ್ರಾವಣ ಮಾಸದ ನಿಮಿತ್ತ ನಡೆದ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ಡಾ.ಗವಿಸಿದ್ದಪ್ಪ ಪಾಟೀಲ್ ಮಾತನಾಡಿದರು. ಅಭಿನವ ಘನಲಿಂಗ ರುದ್ರಮುನಿ ಶಿವಚಾರ್ಯರು, ವೀರಣ್ಣ ಎಸ್.ಶೀಲವಂತ ಇದ್ದರು.

ವಿಜಯ ಕರ್ನಾಟಕ VK ಗುರುವಾರ, 3 ಸೆಪ್ಟೆಂಬರ್ 2015, ಕಲಬುರಗಿ

Scanned with CamScanner

ಜನ ಜಾಗೃತಿ ಕಾರ್ಯಕ್ರಮದಲ್ಲಿ ತ್ರಿಪುರಾಂತ ರುದ್ರಮುನಿ ಶಿವಾಚಾರ್ಯರ ಹೇಳಿಕೆ

# ಹೇಮರೆಡ್ಡಿ ಮಲ್ಲಮ್ಮ ಮಂದಿರ ನಿರ್ಮಾಣಕ್ಕೆ ನಿರ್ಧಾರ



ಬಸವಕಲ್ಯಾಣದ ಹಳೆ ತಹಸಿಲ್ ಕಚೇರಿ ಹಿಂಬಾಗದ ಸಮುದಾಯ ಭವನದಲ್ಲಿ ಭಾನುವಾರ ನಡೆದ ತಾಲೂಕು ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಟ್ರಸ್ಟ್ ವತಿಯಿಂದ ನಡೆದ ಜಾಗೃತಿ ಹಾಗೂ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ತಾಪಂ ಅಧ್ಯಕ್ಷ ಗುಂಡುರಡ್ಡಿ ಮಾತನಾಡಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸೇರಿದಂತೆ ಮತ್ತಿತರು ಇದ್ದರು.

**ವಿಕ ಸುದ್ದಿಲೋಕ** ಬಸವಕಲ್ಯಾಣ ಪಟ್ಟಣದಲ್ಲಿ ಹೇಮರಡ್ಡಿ ಮಲ್ಲಮ್ಮ ಮಂದಿರ ನಿರ್ಮಾಣಕ್ಕೆ ಸಮಾಜದ ಬಾಂಧವರು ನಿರ್ಧರಿಸಿ, ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕೆಂದು ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿನ ಹಳೆ ತಹಸಿಲ್ ಕಚೇರಿ ಹಿಂಭಾಗದ ಸಮುದಾಯ ಭವನದಲ್ಲಿ ಭಾನುವಾರ ತಾಲೂಕು ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಟ್ರಸ್ಟ್ ವತಿಯಿಂದ ನಡೆದ ಸಮಾಜದ ಜಾಗೃತಿ ಹಾಗೂ ಸನ್ಮಾನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು. ನಗರದಲ್ಲಿ ಬಹುತೇಕ ಎಲ್ಲ ಶರಣರ ಮಂದಿರಗಳಿದ್ದು, ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಮಂದಿರ ಮಾತ್ರ ಇಲ್ಲದಿರುವುದು ಕಂಡು ಬರುತ್ತದೆ.ಹೀಗಾಗಿ ಸಮಾಜದ ಜನರು ಬರುವ ಮೇ 10ರೊಳಗೆ ಹೇಮರೆಡ್ಡಿ ಮಲ್ಲಮ್ಮ ಅವರ ಮಂದಿರ ನಿರ್ಮಾಣ ಗುದ್ದಲಿ ಪೂಜೆ, ನೆರವೇರಿಸಬೇಕೆಂದು ಸಮಾಜದ ಬಾಂಧವರಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ತಾಲೂಕು ಪಂಚಾಯಿತಿ ಅಧ್ಯಕ್ಷ ಗುಂಡುರಡ್ಡಿ ಮಾತನಾಡಿ, ಹೇಮರಡ್ಡಿ ಮಲ್ಲಮ್ಮ ಅವರ ಮಂದಿರ ಕಟ್ಟಲು ಮುಂದಾದರೆ ತನು,ಮನದಿಂದ ಸಹಾಯ ಮಾಡುವುದಲ್ಲದೇ ಸ್ಥಳ ಖರೀದಿಗೆ 51 ಸಾವಿರ ರೂ ವೈಯಕ್ತಿಕವಾಗಿ ದೇಣಿಗೆ ನೀಡುವದಲ್ಲದೆ ಹೇಮರೆಡ್ಡಿ ಮಲ್ಲಮ್ಮ ಅವರ ಮೂರ್ತಿ ಯ ಸಂಪೂರ್ಣ ವೆಚ್ಚ ಭರಿಸುವುದಾಗಿ ಭರವಸೆ ನೀಡಿದರು.

ನರಸಿಂಗ ರೆಡ್ಡಿ ಗದಲೇಗಾಂವ ಮಾತನಾಡಿ, ತಾಲೂಕು ರೆಡ್ಡಿ ಸಮಾಜದ ಸರಕಾರಿ ನೌಕರರಿಂದ ಬರುವ ದಿನಗಳಲ್ಲಿ ಐದು ಲಕ್ಷ ರೂಪಾಯಿ ದೇಣಿಗೆ ಸಂಗ್ರಹಿಸಿ ಮಂದಿರ ನಿರ್ಮಾಣಕ್ಕೆ ನೀಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷ ವಹಿಸಿದ ತಾಲೂಕು ರೆಡ್ಡಿ ಸಮಾಜದ ಅಧ್ಯಕ್ಷ ಮಲ್ಲರೆಡ್ಡಿ ಪಾಟೀಲ ಮಾತನಾಡಿ, ಸಮಾಜದ ಬಾಂಧವರು ಒಗ್ಗಟಾಗಿ ಸ್ವಇಚ್ಛೆಯಿಂದ ಸಹಕಾರ ನೀಡಿದರೆ 2 ಎಕರೆ ಜಮೀನಿನಲ್ಲಿ ಮಂದಿರ ಹಾಗೂ ಮಂಗಲ ಕಾರ್ಯಾಲಯ ನಿರ್ಮಿಸುವುದಾಗಿ ಹೇಳಿದರು.

ವೇದಿಕೆ ಮೇಲೆ ವೀರಾರೆಡ್ಡಿ ಯದಲಾಪುರ, ಮಲ್ಲರೆಡ್ಡಿ ನಿಂಗಾವರೆ, ಕೃಷ್ಣಾ ರೆಡ್ಡಿ, ವಿಜಯ ರೆಡ್ಡಿ, ಶಂಕರ ರೆಡ್ಡಿ, ಸಂಜೀವ ರೆಡ್ಡಿ ಯರಬಾಗ, ಬಾಲಾಜಿ ರೆಡ್ಡಿ, ಗುರುನಾಥ ರೆಡ್ಡಿ, ಬಸವರಾಜ ಸ್ವಾಮಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಮಲ್ಲಿಕಾರ್ಜುನ ರೆಡ್ಡಿ ಕಲಬುರಗಿ ಅವರು ಒಂದು ಲಕ್ಷರೂಪಾಯಿ ದೇಣಿಗೆ ನೀಡಿದರು. ನೂತನವಾಗಿ ಆಯ್ಕೆಗೊಂಡ ಗ್ರಾಪಂ ಸದಸ್ಯರಿಗೆ ಸನ್ಮಾನಿಸಲಾಯಿತು.ವಿರೇಂದ್ರ ರಡ್ಡಿ ಸ್ವಾಗತಿಸಿದರೆ, ಸಂಗಾರಡ್ಡಿ ಗದಲೇಗಾಂವ ನಿರೂಪಿಸಿದರು ಹಾಗೂ ಬಾಲಾಜಿ ರಡ್ಡಿ ವಂದಿಸಿದರು.

ವಿಜಯ ಕರ್ನಾಟಕ ಮಂಗಳವಾರ,22 ಸೆಪ್ಟೆಂಬರ್ 2015, ಗುಲ್ಬರ್ಗ

# ಮಕ್ಕಳ ಕಾಳಜಿ ಶಿಕ್ಷಕರ ಕರ್ತವ್ಯ: ಸ್ವಾಮೀಜಿ

ಬಸವಕಲ್ಯಾಣ: ಮಕ್ಕಳ ಬಗ್ಗೆ ಕಾಳಜಿವಹಿಸಿ ಶಿಕ್ಷಣ ನೀಡುವುದು ಶಿಕ್ಷಕರ ಜವಾಬ್ದಾರಿಯಾಗಿದೆ ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಪಟ್ಟಣದ ಶ್ರೀಗುರು ಮಹಾಲಿಂಗೇಶ್ವರ ಪ್ರಾಥಮಿಕ ಶಾಲೆಯಲ್ಲಿ ಈಚೆಗೆ ಹಮ್ಮಿಕೊಂಡಿದ್ದ . ಗುರುವಂದನಾ ಕಾರ್ಯ ಕ್ರಮದಲ್ಲಿ ಕಂಪ್ಯೂಟರ್ ಕೋಣೆ ಉದ್ಘಾಟಿಸಿ ಅವರು ಮಾತನಾಡಿದರು.

ಸಂಸ್ಥೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ದೊರಕಬೇಕು. ಮಕ್ಕಳ ಭವಿಷ್ಯ ಉಜ್ವಲಗೊಳಿಸಲು ಎಲ್ಲರೂ ಪ್ರಯತ್ನಿಸಬೇಕು ಎಂದು ಹೇಳಿದರು.



ಬಸವಕಲ್ಯಾಣದ ಶ್ರೀಗುರು ಮಹಾಲಿಂಗೇಶ್ವರ ಪ್ರಾಥಮಿಕ ಶಾಲೆಯಲ್ಲಿ ಈಚೆಗೆ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಕಂಪ್ಯೂಟರ್ ಕೋಣೆಯನ್ನು ಉದ್ಘಾಟಿಸಿದರು

ಸುನಿತಾ ಸ್ವಾಮಿ, ಸುಭದ್ರಾಬಾಯಿ, ಪಾರ್ವತಿ ರೋಜಾ, ಮಲ್ಲಿಕಾರ್ಜುನ ನಂದಿ, ರಮೇಶ ಸ್ವಾಮಿ, ರುದ್ರೇಶ್ವರ ಗೋರಟಾ, ವಲಿಪಾಶಾ, ಬಾಬುರಾವ ಉಪಸ್ಥಿತರಿದ್ದರು. ಬಸವಂತಪ್ಪ ಲವಾರೆ ನಿರೂಪಿಸಿದರು.

ಬುಧವಾರ • ಆಗಸ್ಟ್ 5, 2015 ಪ್ರಜಾವಾಣಿ

Scanned with CamScanner

ತ್ರಿಪುರಾಂತ ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ

# ಸಿದ್ಧಾಂತ ಸಿಖಾಮಣಿ ಶ್ರೇಷ್ಠ ಧರ್ಮ ಗ್ರಂಥ



ತ್ರಿಪುರಾಂತ ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮ ಜರುಗಿತು. ಶ್ರೀ ಸದಾನಂದ ಸ್ವಾಮೀಜಿ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು.

ಬಸವಕಲ್ಯಾಣ: ವೀರಶೈವ ಧರ್ಮದ ಮೂಲ ಗ್ರಂಥ ಸಿದ್ಧಾಂತ ಶಿಖಾಮಣಿ ಜ್ಞಾನ ಬೋಧಕವೂ ಆಗಿದೆ ಎಂದು ಬಸವಕಲ್ಯಾಣ ಸಂಜೀವಿನಿ ಆಸ್ಪತ್ರೆಯ ಡಾ.ಬಸವರಾಜ ಬಕ್ಕಯ್ಯ ಸ್ವಾಮಿ ಹೇಳಿದರು.

ಶ್ರಾವಣ ಮಾಸದ ನಿಮಿತ್ತ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ಹಾಗೂ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠ ಟ್ರಸ್ಟ್ ಸಹಯೋಗದಡಿ ತ್ರಿಪುರಾಂತ ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಜ್ಞಾನಗುರು ಸ್ಥಲ ವಿಷಯ ಕುರಿತು ಉಪನ್ಯಾಸ ನೀಡಿದರು.

ಆದಿ ಜಗದ್ಗುರು ರೇಣುಕಾಚಾರ್ಯರು ಶಿಷ್ಯರಾದ ಅಗಸ್ತ್ಯ ಮಹಾಋಷಿಗೆ ಜ್ಞಾನದ ಕುರಿತು ಬೋಧಿಸಿದ ಒಂದು ಶ್ರೇಷ್ಠ ಧರ್ಮ ಗ್ರಂಥ. ಈ ಗ್ರಂಥವು ಜ್ಞಾನ ಉಳ್ಳವನೇ ಗುರು. ಆತ ಮನುಷ್ಯರನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯಬೇಕು. ಮನುಷ್ಯ ಮೂಲ ಸಹ ಪಶುವಿನಂತೆಯೇ. ಗುರು ಜ್ಞಾನ ಬೋಧಿಸಿದಾಗ ಮಾತ್ರ ಮನುಷ್ಯ ಪಶುಗಳಿಂದ ಭಿನ್ನನಾಗಿ ಬದುಕಲು ಸಾಧ್ಯ ಎಂದರು.

ಶ್ರೀ ಸದಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ, ಉದ್ಯಮಿ ರಮೇಶ ವೀರಯ್ಯ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ನಿವೃತ್ತ ಕೃಷಿ ಅಧಿಕಾರಿ ಮಾಣಿಕಪ್ಪ ಬಿರಾದಾರ್, ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ನಿರ್ದೇಶಕ ಚಂದ್ರಶೇಖರ ಪಾಟೀಲ್, ಶ್ರೀಮದ್ವೀರಶೈವ ಸದ್ಬೋದನ ಸಂಸ್ಥೆ ತಾಲೂಕು ಅಧ್ಯಕ್ಷ ವೀರಣ್ಣ ಶಿಲವಂತ, ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ, ಷಣ್ಮುಕಪ್ಪ ಕಣಸೂರೆ, ವಿಶ್ವನಾಥ ಬಿರಾದಾರ, ಪ್ರೊ. ಸೂರ್ಯಕಾಂತ ಶೀಲವಂತ, ಮಲ್ಲಿಕಾರ್ಜುನ ನಂದಿ, ಬಸವಂತಪ್ಪ ಲವಾರೆ, ಬಸವ ತೀರ್ಥಯ್ಯ ಕಾಡಾದಿ, ಶಾಂತಲಿಂಗ ಮಠಪತಿ, ಡಾ.ಚಿತ್ರಶೇಖರ ಚಿರಳ್ಳಿ, ರೇವಣಸಿದ್ದಯ್ಯ ಮಠಪತಿ, ಮಹಾದೇವ ಕಾಮಶೆಟ್ಟಿ, ರುದ್ರಮಣಿ ಮಠ, ಸಂತೋಷ ಬಿರಾದಾರ್, ದಿಲೀಪ ಪಾಟೀಲ್ ಬೇಲೂರ ಇದ್ದರು.

ಕಸಾಪ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಸ್ವಾಗತಿಸಿದರು. ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ನಿರೂಪಿಸಿದರು. ಕಾಶೀನಾಥ ಸ್ವಾಮಿ ವಂದಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಬುಧವಾರ
26 ಆಗಸ್ಟ್ 2015
26 AUGUST 2015

# ಪಾಠದ ಜತೆಗೆ ಆಟವೂ ಬೇಕು



ಬಸವಕಲ್ಯಾಣದಲ್ಲಿ ಏರ್ಪಡಿಸಿದ ಯುವ ನಾಯಕತ್ವ ಹಾಗೂ ಸಮುದಾಯ ಅಭಿವೃದ್ಧಿ ತರಬೇತಿ ಶಿಬಿರವನ್ನು ತಾಪಂ ಸದಸ್ಯೆ ಗೀತಾ ಅಂಬಾದಾಸ ಉದ್ಘಾಟಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಸ್ವಾಮೀಜಿ ಇದ್ದರು.

ಬಸವಕಲ್ಯಾಣ: ಪಾಠದ ಜತೆಗೆ ಆಟವೂ ಬೇಕಿದೆ. ದೈಹಿಕ ಬೆಳವಣಿಗೆಗೆ ಕ್ರೀಡೆಗಳು ಸಹಕಾರಿಯಾಗಿವೆ ಎಂದು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನೆಹರು ಯುವ ಕೇಂದ್ರ, ಗುರುಲಿಂಗೇಶ್ವರ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಯುವ ಸಂಘ, ಬಸವೇಶ್ವರ ಯುತ್ ಕ್ಲಬ್ ಹಾಗೂ ಸ್ಥಳೀಯ ಕನಕಶ್ರೀ ಹೇಮರೆಡ್ಡಿ ಮಲ್ಲಮ್ಮ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಸಂಘಗಳ ಸಹಯೋಗದಡಿ ನಗರದ ಯುಎನ್‌ಎಸ್‌ಟಿ ಕಂಪ್ಯೂಟರ್ ತರಬೇತಿ ಕೇಂದ್ರದ ಆವರಣದಲ್ಲಿ ಏರ್ಪಡಿಸಿದ ಯುವ ನಾಯಕತ್ವ ಹಾಗೂ ಸಮುದಾಯ ಅಭಿವೃದ್ಧಿ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಶ್ರೀಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಆಧುನಿಕ ತಂತ್ರಜ್ಞಾನದ ಜತೆಗೆ ಯುವಕರು ಕ್ರೀಡೆಗಳಲ್ಲಿ ಸಕ್ರಿಯರಾಗಬೇಕು ಎಂದ ಶ್ರೀಗಳು, ಯುವಕರಲ್ಲಿ ಜಾಗೃತಿ ಮೂಡಿಸುವಲ್ಲಿ ಇಂತಹ ಶಿಬಿರಗಳು ಸಹಕಾರಿಯಾಗಲಿವೆ ಎಂದರು. ತರಬೇತಿಗೆ ಚಾಲನೆ ನೀಡಿದ ತಾಪಂ ಸದಸ್ಯೆ ಗೀತಾ ಅಂಬಾದಾಸ, ದೇಶದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು. ಮೋರಖಂಡಿ ಪಶುಪಾಲನಾ ಕೇಂದ್ರದ ವೈದ್ಯ ಮಂಜುನಾಥ ಮುಂಗಲೆ, ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಶಿವಕುಮಾರ ಸ್ವಾಮಿ ಪ್ರಾಸ್ತಾವಿಕ ಮಾತನಾಡಿದರು. ರಾಜ್ಯ ಸಂಪನ್ಮೂಲ ವ್ಯಕ್ತಿ ಪ್ರತಿಭಾ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು.

ಕನಕಶ್ರೀ ಹೇಮರೆಡ್ಡಿ ಮಲ್ಲಮ್ಮ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಸಂಘದ ಅಧ್ಯಕ್ಷ ಮಹಾಲಿಂಗ ಮಡ್ಡೆ ಸ್ವಾಗತಿಸಿದರು. ಗುರುಲಿಂಗೇಶ್ವರ ಗ್ರಾಮೀಣ ಯುವ ಸಂಘದ ಕಾರ್ಯದರ್ಶಿ ಬಂಡೆಪ್ಪ ಮಾಳಿ ನಿರೂಪಿಸಿದರು. ಸಂಘದ ಕಾರ್ಯದರ್ಶಿ ನರಸಿಂಹ ರೆಡ್ಡಿ ವಂದಿಸಿದರು.

ಬಮ್ಮಯ್ಯ ಸ್ವಾಮಿ, ರಾಜಶೇಖರ ಸೀಗೆ, ಅಶೋಕ ನಿರಗುಡಿ, ಮಲ್ಲಯ್ಯ ಸ್ವಾಮಿ, ಬಂಡೆಪ್ಪ ಶಾಯಪನೋರ್, ರಾಣಿ ಬೋಂಡಗೆ, ಪಲ್ಲವಿ ಪಾಟೀಲ ಮೊದಲಾದವರು ಭಾಗವಹಿಸಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಭಾನುವಾರ
29 ಮಾರ್ಚ್ 2015
29 MARCH 2015

Scanned with CamScanner



ಬಸವಕಲ್ಯಾಣ ತಾಲೂಕಿನ ಮಂಠಾಳ ಮಹಾದೇವ ದೇವಸ್ಥಾನದಲ್ಲಿ ಶ್ರೀ ಹಾರಕೂಡ ಚನ್ನಬಸವ ಶಿವಯೋಗಿಗಳ ಪುರಾಣ ಕಾರ್ಯಕ್ರಮ ಉದ್ಘಾಟಿಸಲಾಯಿತು. ತ್ರಿಪುರಾಂತ ಶ್ರೀ, ಜಿಪಂ ಮಾಜಿ ಸದಸ್ಯ ಜಗನ್ನಾಥ ಪಾಟೀಲ್ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಭಾನುವಾರ
23 ಆಗಸ್ಟ್ 2015
23 AUGUST 2015



ಶ್ರಾವಣದ ನಿಮಿತ್ತ ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಶಿಕ್ಷಕಿ ಶ್ರೀದೇವಿ ಖಂಡಾಳೆ ಮಾತನಾಡಿದರು. ಬಿಡಿಪಿಸಿ ನಿರ್ದೇಶಕಿ ಕಲ್ಪನಾ ಶೀಲವಂತ, ಶ್ರೀ ಉದಯರಾಜಯೋಗೆಂದ್ರ ಸ್ವಾಮೀಜಿ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURA
2 ಮಂಗಳವಾರ
1 ಸೆಪ್ಟೆಂಬರ್ 2015
1 SEPTEMBER 2015

ಸುದ್ದಿ | ಹನಿ

## ಯಾತ್ರಿ ನಿವಾಸಕ್ಕೆ ಒಂದು ಕೋಟಿ ರೂ.



ಬಸವಕಲ್ಯಾಣ: ಹೊಸದಾಗಿ ಎರಡು ಯಾತ್ರಿ ನಿವಾಸನಿರ್ಮಾಣಕ್ಕಾಗಿ ಪ್ರವಾಸೋದ್ಯಮ ಇಲಾಖೆಯಿಂದ 15-16ನೇ ಸಾಲಿನ ಬಂಡವಾಳ ಲೆಕ್ಕ ಶಿರ್ಷಿಕೆಯಡಿ 1 ಕೋಟಿ ರೂ. ವೆಚ್ಚದ ಕಾಮಗಾರಿಯ ಕ್ರಿಯಾಯೋಜನೆಗೆ ಅನುಮೋದನೆ ದೊರೆತಿದೆ ಎಂದು ಶಾಸಕ ಮಲ್ಲಿಕಾರ್ಜುನ ಖೂಬಾ ತಿಳಿಸಿದ್ದಾರೆ. ಇಲ್ಲಿಯ ಅನುಭವ ಮಂಟಪ ಪರಿಸರದಲ್ಲಿ ಯಾತ್ರಿ ನಿವಾಸಕ್ಕಾಗಿ 50 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಅನುಮೋದನೆ ಸಿಕ್ಕಿದ್ದು, ಈ ಪೈಕಿ 30 ಲಕ್ಷ ರೂ. ಮೊದಲ ಹಂತದಲ್ಲಿ ಬಿಡುಗಡೆಯಾಗಲಿದೆ. ಅದೇ ರೀತಿ ತ್ರಿಪುರಾಂತ ಕೆರೆ ಬಳಿಯ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿ ಮಠದ ಪರಿಸರದಲ್ಲಿ 50 ಲಕ್ಷ ರೂ. ವೆಚ್ಚದ ಯಾತ್ರಿ ನಿವಾಸ ನಿರ್ಮಾಣಕ್ಕೆ ಅನುಮೋದನೆ ಸಿಕ್ಕಿದ್ದು, ಪ್ರಥಮ ಹಂತದಲ್ಲಿ 30 ಲಕ್ಷ ರೂ. ಬಿಡುಗಡೆಯಾಗಲಿದೆ ಎಂದು ಅವರು ತಿಳಿಸಿದ್ದಾರೆ.

# ಉಪನ್ಯಾಸ: ಪೂರ್ವ ಸಿದ್ಧತಾ ಸಭೆ



ಬಸವಕಲ್ಯಾಣದ ತ್ರಿಪುರಾಂತದ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಪೂರ್ವ ಸಿದ್ಧತಾ ಸಭೆ ಜರುಗಿತು. ಪ್ರಮುಖರು ಉಪಸ್ಥಿತರಿದ್ದರು.

**ವಿಕ ಸುದ್ದಿಲೋಕ** ಬಸವಕಲ್ಯಾಣ

ವೀರಶೈವ ಧರ್ಮದ ಪಂಚ ಪೀಠಗಳಲ್ಲೊಂದಾದ ಶ್ರೀಮದ್ ರಂಭಾಪುರಿ ಜಗದ್ಗುರು ಮಹಾಪೀಠ ಬಾಳೆಹೊನ್ನೂರು ಸಂಚಾಲಿತ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ಬಸವಕಲ್ಯಾಣ ತಾಲೂಕು ಘಟಕವು ಶ್ರಾವಣ ಮಾಸದಲ್ಲಿ ರಂಭಾಪುರಿ ಮಹಾ ಪೀಠದ ಶಾಖಾ ಮಠವಾದ ತ್ರಿಪುರಾಂತದ ಪವಿತ್ರ ಕ್ಷೇತ್ರ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಪೂರ್ವ ಸಿದ್ಧತಾ ಸಭೆ ಸೇರಿ ವೀರಶೈವ - ಲಿಂಗಾಯತ ಧರ್ಮದ ಮೂಲ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮವನ್ನು ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಶ್ರದ್ಧಾ ಭಕ್ತಿಯಿಂದ ನಡೆಸಿಕೊಂಡು ಬರಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಪ್ರತಿವರ್ಷದಂತೆ ಮಠದ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಕರ್ತು ಗದ್ದುಗೆಗೆ ಪವಿತ್ರ ಶ್ರಾವಣ ಮಾಸ ಪರಿಯಂತ ನಿತ್ಯ ಮಹಾರುದ್ರಾಭೀಷೇಕ ನೆರವೇರಿಸಿ ಭಜನೆ ಹಮ್ಮಿಕೊಂಡು ಪ್ರಸಾದ ವ್ಯವಸ್ಥೆ ಮುಂದುವರೆಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಭೆಯಲ್ಲಿ ಶರಣಪ್ಪ ಬಿರಾದಾರ, ಶ್ರೀಮದ್ ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷ ವೀರಣ್ಣಾ ಶೀಲವಂತ, ಮುಖಂಡರಾದ ಸುನೀಲ ಎಂ ಪಾಟೀಲ್, ಬಸವಂತಪ್ಪ ಲವಾರೆ, ಕಸಾಪ ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ಪ್ರಭುಲಿಂಗಯ್ಯ ಟಂಕಸಾಲಿಮಠ, ರಮೇಶ ವೀರಯ್ಯ ಸ್ವಾಮಿ, ಚಂದ್ರಶೇಖರ ಪಾಟೀಲ್, ಸೂರ್ಯಕಾಂತ ಶೀಲವಂತ, ರಮೇಶ ರಾಜೋಳೆ, ಸುರೇಶ ವೀರಯ್ಯ ಸ್ವಾಮಿ, ರುದ್ರೇಶ್ವರ ಗೋರ್ಟಾ, ಕಾಶಿನಾಥ ಸ್ವಾಮಿ, ರುದ್ರಮಣಿ ಹೀರೆಮಠ, ರಾಜಕುಮಾರ ದೇಗಾಂವ ಉಪಸ್ಥಿತರಿದ್ದರು.

ವಿಜಯ ಕರ್ನಾಟಕ VK
ಬುಧವಾರ, 5 ಆಗಸ್ಟ್ 2015, ಕಲಬುರಗಿ

Scanned with CamScanner

■ ಬಸವಕಲ್ಯಾಣ ಹೊರವಲಯದ ತ್ರಿಪುರಾಂತ ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆಯ ಸಮಾರೋಪ

# ಜಗದ್ಗುರು ರೇಣುಕಾಚಾರ್ಯರು ಸಮಾನತೆ ಸಾರಿದ ಮೊದಲ ಹರಿಕಾರರು

**ಬಸವಕಲ್ಯಾಣ:** ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿ ವೀರಶೈವ ಲಿಂಗಾಯತ ಧರ್ಮಶಾಸನ ಗ್ರಂಥವಾಗಿದೆ ಎಂದು ಕಲಬುರಗಿ ಜಿಲ್ಲೆ ಶ್ರೀನಿವಾಸ ಸರಡಗಿಯ ಶ್ರೀ ರೇವಣಸಿದ್ಧ ಶಿವಾಚಾರ್ಯರು ನುಡಿದರು.

ಶ್ರಾವಣ ನಿಮಿತ್ತ ತ್ರಿಪುರಾಂತ ಗವಿಮಠದಲ್ಲಿ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ಹಾಗೂ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠ ಟ್ರಸ್ಟ್ ಸಹಯೋಗದಡಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಸಮಾರೋಪದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಅಗಸ್ತ್ಯರಿಗೆ ಸಿದ್ಧಾಂತ ಶಿಖಾಮಣಿ ಬೋಧಿಸುವ ಮೂಲಕ ಜಗದ್ಗುರು ರೇಣುಕಾಚಾರ್ಯರು ಸಮಾನತೆ ಸಾರಿದ ಮೊದಲ ಹರಿಕಾರರು ಎಂದರು.



ತ್ರಿಪುರಾಂತ ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಸಮಾರೋಪದಲ್ಲಿ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಸಿದ್ಧಾಂತ ಶಿಖಾಮಣಿಯ ಪರಸ್ಥಲ ವಿಷಯ ಕುರಿತು ಉಪನ್ಯಾಸ ನೀಡಿದ ಡಾ.ಸೋಮಶಂಕರ ವಿಶ್ವನಾಥ ಮಠ, ಅಂಗವನ್ನು ಲಿಂಗವನ್ನಾಗಿಸುವುದೇ ಸಿದ್ಧಾಂತ ಶಿಖಾಮಣಿ. ಲಿಂಗವಾದಾತನೇ ಪರಸ್ಥಲಿ. ಕೇವಲ ನುಡಿಯುವುದನ್ನು ಬಿಟ್ಟು, ನುಡಿದಂತೆ ನಡೆದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ ಎಂದರು.

ವಚನ ಸಾಹಿತ್ಯ ಸಂರಕ್ಷಣೆಯಲ್ಲಿ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಾತ್ರ ವಿಷಯ ಕುರಿತು ಪ್ರೊ.ಸೂರ್ಯಕಾಂತ ಶೀಲವಂತ ಉಪನ್ಯಾಸ ನೀಡಿದರು.

ತ್ರಿಪುರಾಂತದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಪದಾಧಿಕಾರಿಗಳು ಶ್ರದ್ಧೆ, ಭಕ್ತಿಯಿಂದ ಶ್ರಮವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು.

ಮುಖಂಡರಾದ ಜಗನ್ನಾಥ ಪಾಟೀಲ ಮಾತನಾಡಿದರು. ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ ಅಧ್ಯಕ್ಷತೆ ವಹಿಸಿದ್ದರು.

ಅಖಿಲ ಭಾರತ ವೀರಶೈವ ಮಹಾಸಭೆ ತಾಲೂಕಾಧ್ಯಕ್ಷ ಶಶಿಕಾಂತ ದುರ್ಗೆ, ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಚನ್ನವೀರಯ್ಯ ಹಿರೇಮಠ ಖಾನಾಪುರ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ, ಮಲ್ಲಿಕಾರ್ಜುನ ನಂದಿ, ವಿಶ್ವನಾಥಪ್ಪ ಬಿರಾದಾರ, ನಾಗನಾಥ ಚಾಮಲ್ಲೆ, ರೇವಣಸಿದ್ದಯ್ಯ ಹಿರೇಮಠ, ರುದ್ರಮಣಿ ಉಡಚಣ, ಬಸವರಾಜ ಪಾಟೀಲ ಕೊಳಕೂರ, ರುದ್ರಮಣಿ ಮಠ, ರೇವಣಸಿದ್ದಯ್ಯ ವಸ್ತ್ರದ, ಕಾಶೀನಾಥ ಸ್ವಾಮಿ, ಸುನಂದಾ ನಂದಿ, ಶೀಲಾದೇವಿ ಲವಾರೆ, ರೇಣುಕಾ ಮಠಪತಿ, ಸರಸ್ವತಿ ಬೆಂಬಳೆ, ಪ್ರಾಚಾರ್ಯ ರಾಚಯ್ಯ ಮಠಪತಿ, ಬಸವರಾಜ ಸೇರಿ, ಕಲ್ಯಾಣಪ್ಪ ನಾವದಗಿ, ನೀಲೇಶ ಟೊಂಪೆ ಉಪಸ್ಥಿತರಿದ್ದರು.

ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ಪ್ರಾರ್ಥಿಸಿದರು. ವಿಶ್ವನಾಥ ಬಿರಾದಾರ ಸ್ವಾಗತಿಸಿದರು. ಬಸವಂತಪ್ಪ ಲವಾರೆ ವಂದಿಸಿದರು. ಶಿಕ್ಷಣ ಸಂಯೋಜಕ ರಮೇಶ ರಾಜೋಳೆ ನಿರೂಪಿಸಿದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
ಬುಧವಾರ 16 ಸೆಪ್ಟೆಂಬರ್ 2015
VIJAYAVANI • KALABURAGI 16 SEPTEMBER 2015

■ ಮಂತಾಳದಲ್ಲಿ ಶ್ರೀ ಗುರುಲಿಂಗೇಶ್ವರ ಮೂರ್ತಿ ಪ್ರತಿಷ್ಠಾಪನೆ

# ಪರಿಪೂರ್ಣತೆಗೆ ಸಂಸ್ಕಾರ ಅವಶ್ಯಕ



ಮಂತಾಳದಲ್ಲಿ ಆಯೋಜಿಸಿದ ಧಾರ್ಮಿಕ ಸಭೆಯಲ್ಲಿ ಶ್ರೀ ಶಿವಾನಂದ ಮಹಾಸ್ವಾಮೀಜಿ ಮಾತನಾಡಿದರು. ಶ್ರೀ ಗುಹೇಶ್ವರ ಮಹಾಸ್ವಾಮೀಜಿ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
ಸೋಮವಾರ 24 ಆಗಸ್ಟ್ 2015
VIJAYAVANI • KALABURAGI 24 AUGUST 2015



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಭಾವಚಿತ್ರವನ್ನು ಬಿಡುಗಡೆಗೊಳಿಸಲಾಯಿತು. ಶ್ರೀ ಸದಾನಂದ ಮಹಾಸ್ವಾಮೀಜಿ, ತ್ರಿಪುರಾಂತ ಶ್ರೀ, ವೀರಣ್ಣ ಶೀಲವಂತ, ಮಾಣಿಕಪ್ಪ ಬಿರಾದಾರ್, ಬಸವರಾಜ ಸ್ವಾಮಿ, ಸೂರ್ಯಕಾಂತ ಶೀಲವಂತ, ಪ್ರೊ. ರುದ್ರೇಶ್ವರ ಸ್ವಾಮಿ ಗೋರ್ಟಾ, ರಮೇಶ ಸ್ವಾಮಿ, ಚಂದ್ರಶೇಖರ ಪಾಟೀಲ್ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI • KALABURAGI
ಶುಕ್ರವಾರ 28 ಆಗಸ್ಟ್ 2015
28 AUGUST 2015

Scanned with CamScanner

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI • KALABURAGI
ಶನಿವಾರ 22 ಆಗಸ್ಟ್ 2015
22 AUGUST 2015

■ ತ್ರಿಪೂರಾಂತ ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಶಿಕ್ಷಾಗುರು ಸ್ಥಲ ಉಪನ್ಯಾಸ ಮಾಲೆ

# ಸಿದ್ಧಾಂತ ಶಿಖಾಮಣಿಯು ಮೋಕ್ಷಕ್ಕೆ ದಾರಿದೀಪ

ಬಸವಕಲ್ಯಾಣ: ವೀರಶೈವ ಧರ್ಮದ ಆದಿ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿಯು ಮೋಕ್ಷಕ್ಕೆ ದಾರಿ ದೀಪವಾಗಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭೆ ಭಾಲ್ಕಿ ತಾಲೂಕು ಘಟಕದ ಅಧ್ಯಕ್ಷ ಬಾಬುರಾವ ಬಿರಾದಾರ್ ಹೇಳಿದರು.

ಶ್ರಾವಣ ಮಾಸ ನಿಮಿತ್ತ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಹಾಗೂ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಟ್ರಸ್ಟ್ ಸಹಯೋಗದಲ್ಲಿ ತ್ರಿಪೂರಾಂತನ ಗವಿಮಠದಲ್ಲಿ ನಡೆಯುತ್ತಿರುವ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಶಿಕ್ಷಾಗುರು ಸ್ಥಲ ಎಂಬ ವಿಷಯ ಕುರಿತ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು, ಸಿದ್ಧಾಂತ ಶಿಖಾಮಣಿಯು ಮನುಷ್ಯರನ್ನು ಪಾರಮಾರ್ಥದ ಕಡೆಗೆ ಕೊಂಡ್ಯೊಯುವ ಶ್ರೇಷ್ಠ ಗ್ರಂಥವಾಗಿದೆ ಎಂದರು.



ತ್ರಿಪೂರಾಂತನ ಗವಿಮಠದಲ್ಲಿ ನಡೆಯುತ್ತಿರುವ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶ್ರೀಗಳು ಮಾತನಾಡಿದರು.

ಸಾನ್ನಿಧ್ಯ ವಹಿಸಿದ್ದ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಗುರು ಬೋಧಕನು ಹಾಗೂ ಶಿಷ್ಯ ಬೋಧ್ಯನು ಅಂದರೆ ಗುರುವಿನ ಬೋಧವನ್ನು ಗ್ರಹಿಸುವವನು ಎಂದರ್ಥ. ಹೀಗೆ ಶಿಷ್ಯನನ್ನು ಭೋಧ್ಯನನಾಗಿ ನಿಯೋಜಿಸಿ ಅವನಿಗೆ ಉತ್ತಮ ಧರ್ಮ-ಆಧ್ಯಾತ್ಮಿಕ ಶಿಕ್ಷಣವನ್ನು ನೀಡುವವನೆ ಶಿಕ್ಷಾಗುರು ಎಂದು ವಿಶ್ಲೇಷಿಸಿದರು.

ನಿವೃತ್ತ ಕೃಷಿ ಅಧಿಕಾರಿ ಮಲ್ಲಿಕಾರ್ಜುನ ನಂದಿ ಅಧ್ಯಕ್ಷತೆ ವಹಿಸಿದ್ದರು. ಉದ್ಯಮಿ ಷಣ್ಮುಖಪ್ಪ ಕಣಸೂರೆ, ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ್, ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷ ವೀರಣ್ಣ ಶೀಲವಂತ, ಕಸಾಪ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ಬಸವರಾಜ ಸ್ವಾಮಿ, ಪ್ರೊ.ಸೂರ್ಯಕಾಂತ ಶೀಲವಂತ, ಹಾವಯ್ಯ ಸ್ವಾಮಿ, ಮಲ್ಲಿಕಾರ್ಜುನ ಸಕ್ಕರಬಾವಿ, ರುದ್ರಮಣಿ ಮಠ, ಸಂತೋಷ ಬಿರಾದಾರ್ ಉಪಸ್ಥಿತರಿದ್ದರು.

ಪ್ರೊ. ರುದ್ರೇಶ್ವರ ಸ್ವಾಮಿ ಗೋರ್ಟಾ ಪ್ರಾರ್ಥನಾ ಗೀತೆ ಹಾಡಿದರು. ರೇವಣಸಿದ್ಧಯ್ಯ ಮಠಪತಿ ಸ್ವಾಗತಿಸಿದರು. ಕಾಶಿನಾಥ ಬಸವರಾಜ ಸ್ವಾಮಿ ನಿರೂಪಿಸಿದರು. ರೇವಣಸಿದ್ಧಯ್ಯ ವಸ್ತ್ರದ ವಂದಿಸಿದರು.

ವಿಜಯ ಕರ್ನಾಟಕ
ಬುಧವಾರ, 22, ಏಪ್ರಿಲ್, 2015, ಕಲಬುರಗಿ



ಬಸವಕಲ್ಯಾಣದ ತ್ರಿಪುರಾಂತನ ಮರಿದೇವರ ಗುಡ್ಡದಲ್ಲಿ ಬಸವ ಜಯಂತಿ ಆಚರಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣಪ್ಪ ಬಿರಾ ದಾರ,ವೀರಣ್ಣ ಶೀಲವಂತ,ನಾಗನಾಥ ಸಿದ್ರಾಮ ಚಾಮಲ್ಲೆ, ವೇದಮೂರ್ತಿ ರುದ್ರ ಮುನಿಸ್ವಾಮಿ,ಪ್ರೊ.ವಿ.ಎಸ್ ರಾಜೋಳೆ,ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ, ಕಾರ್ತಿಕ ನಟ ರಾಜ ಬಿರಾದಾರ, ಹಣಮಂತ ಮಾಳಿ, ವೀರೇಶ ಮುಚಳಂಬೆ ಸೇರಿ ಅನೇಕರಿದ್ದರು.



ಡಾ.ಗುರುಪಾದಪ್ಪ ನಾಗಮಾರಪಳ್ಳಿ ಅವರಿಗೆ ಅವರ ಬೀದರ್‌ನ ಸ್ವಗೃಹದಲ್ಲಿ ಹಲಬರ್ಗಾ ಶ್ರೀ, ಬಸವಕಲ್ಯಾಣ ಶ್ರೀ, ಚಾಂಬಳ ಶ್ರೀಗಳು ಜನ್ಮದಿನದ ಶುಭಾಶಯ ಕೋರಿದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI • KALABURAGI
ಶನಿವಾರ 14 ನವೆಂಬರ್ 2015
14 NOVEMBER 2015

Scanned with CamScanner

# ಪರಿಶ್ರಮದಿಂದ ಯಶಸ್ಸು ಸಾಧ್ಯ

**ಬಸವಕಲ್ಯಾಣ:** ಜೀವನದಲ್ಲಿ ಸ್ಪಷ್ಟವಾದ ಗುರಿ, ಗುರುವಿನ ಮಾರ್ಗದರ್ಶನದ ಜತೆಗೆ ಕಠಿಣ ಪರಿಶ್ರಮದ ಮೂಲಕ ಯಶಸ್ಸು ಕಾಣಲು ಸಾಧ್ಯ ಎಂದು ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶ್ರೀ ಹೇಳಿದರು.

ನಗರದ ರವೀಂದ್ರನಾಥ ಟ್ಯಾಗೋರ ತರಬೇತಿಯಲ್ಲಿ ನಡೆದ ಬೇಸಿಗೆ ತರಬೇತಿ ಶಿಬಿರದ ಸಮಾರೋಪ ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ತರಬೇತಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ಸಾಧನಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣದ ಜತೆಗೆ ನೈತಿಕ ಮೌಲ್ಯಗಳನ್ನು ಬೆಳೆಸಿಕೊಂಡಾಗ ಮಾತ್ರ ಸಮಾಜದಲ್ಲಿ ಉತ್ತಮ ಸ್ಥಾನ-ಮಾನ ಪಡೆಯಲು ಸಾಧ್ಯ ಎಂದರು.

ರಾಜ್ಯ ವಿಜ್ಞಾನ ಪರಿಷತ್ ಸಂಚಾಲಕ ಪಂಡಿತ ಬಾಳೂರೆ ಮಾತನಾಡಿ, ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ಕಾಳಜಿ ವಹಿಸಬೇಕಾದ ಅವಶ್ಯಕತೆ ಇದೆ. ಅಲ್ಲಮಪ್ರಭು ಪಿಯು ಕಾಲೇಜು ಕಾರ್ಯದರ್ಶಿ ಚಂದ್ರಕಾಂತ ಅಕ್ಕಣ್ಣ ಮಾತನಾಡಿದರು.

ಶಿಕ್ಷಣ ಸಂಯೋಜಕ ರವಿ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಶಾಂತಿನಿಕೇತನ ಶಾಲೆ ಮುಖ್ಯಗುರು ಮಾಣಿಕರಾವ ಗೋರಮಡೆ, ಶಿವರಾಜಯ್ಯಾ ಸ್ವಾಮಿ ಭಾಗವಹಿಸಿದ್ದರು. 2014-15ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಗಣಿತ ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದ 25 ವಿಧ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಶಶಿಕಾಂತ ಮಂಠಾಳೆ ಸ್ವಾಗತಿಸಿದರು. ಮಲ್ಲಿಕಾರ್ಜುನ ವಸೂತಿ ವಂದಿಸಿದರು. ಖೀರಾಲಿಂಗ ಭಾಗೇಳ್ಳಿ ನಿರೂಪಿಸಿದರು. ಮಾಲಾಶ್ರೀ ಪ್ರಾರ್ಥನಾ ಗೀತೆ, ಕುಮಾರಿ ವೈಷ್ಣವಿ ಮತ್ತು ಸಂಗಡಿಗರು ಸ್ವಾಗತ ಗೀತೆ ಹಾಡಿದರು.



ಬಸವಕಲ್ಯಾಣದಲ್ಲಿ ನಡೆದ ಬೇಸಿಗೆ ತರಬೇತಿ ಶಿಬಿರದ ಸಮಾರೋಪ ಹಾಗೂ ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಆಯೋಜಿಸಿದ ಸಾಧನಾ ಪುರಸ್ಕಾರ ಕಾರ್ಯಕ್ರಮವನ್ನು ಅಭಿನವ ಘನಲಿಂಗ ರುದ್ರಮುನಿ ಶ್ರೀ ಉದ್ಘಾಟಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಬುಧವಾರ
27 ಮೇ 2015
27 MAY 2015

# ಗುರುವಿನ ಮಹಿಮೆ ಅಗಾಧ

**ಭಾಲ್ಕಿ:** ಹರ ಮುನಿದರೂ ಗುರು ಕಾಯ್ವನು, ಪ್ರಪಂಚದಲ್ಲಿ ಗುರುವಿನ ಮಹಿಮೆ ಅಗಾಧವಾಗಿದೆ ಎಂದು ಹಲಬರ್ಗಾ ಮಠದ ಹಾವಗಿಲಿಂಗೇಶ್ವರ ಶಿವಾಚಾರ್ಯರು ನುಡಿದರು.

ತಾಲೂಕಿನ ಜ್ಯಾಂತಿ ಗ್ರಾಮದ ಲಕ್ಷ್ಮೀ ದೇವಸ್ಥಾನದಲ್ಲಿ ಗುರು ಪೂರ್ಣಿಮೆ ನಿಮಿತ್ತ ಆಯೋಜಿಸಿದ್ದ ಅಧಿಕ ಮಾಸ ಆಚರಣೆಗೆ ಚಾಲನೆ ನೀಡಿ ಮಾತನಾಡಿದ ಅವರು, ಎಲ್ಲ ಧರ್ಮಿಯರು ತಮ್ಮ ತಮ್ಮ ಗುರುಗಳಿಗೆ ಮೊದಲನೇ ಸ್ಥಾನ ನೀಡಿದ್ದಾರೆ ಎಂದರು.

ಸಾನ್ನಿಧ್ಯ ವಹಿಸಿ ಮಾತನಾಡಿದ ಬವಕಲ್ಯಾಣದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಜ್ಞಾನದ ಬಲದಿಂದ ಅಜ್ಞಾನದ ಕೇಡು, ಜ್ಯೋತಿಯ ಬಲದಿಂದ ತಮಂಧದ ಕೇಡು ಎನ್ನುವಂತೆ ಜಗತ್ತಿನಲ್ಲಿ ಜ್ಞಾನದ ಜ್ಯೋತಿ ಬೆಳಗಲೆಂದು ಗುರುಗಳು ದೀಪೋತ್ಸವ ಸೇರಿದಂತೆ ಹಲವಾರು ಕಾರ್ಯಕ್ರಮ ಹಮ್ಮಿಕೊಂಡು ಜನರಲ್ಲಿನ ಅಜ್ಞಾನದ ಕತ್ತಲೆ ಹೋಗಲಾಡಿಸುತ್ತಾರೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ರವೀಂದ್ರ ಪಾಟೀಲ, ಶಿವರಾಜ್ ಬಿಲಗುಂದೆ, ಗಣೇಶ ಪಾಟೀಲ, ಗಿರೀಶ ಕುಲಕರ್ಣಿ, ರಮೇಶ ಸುತಾರ, ವಿಜಯಕುಮಾರ ಹಣಮಶೆಟ್ಟಿ ಸಂತೋಷ ಪಾಟೀಲ, ವೀರಶೆಟ್ಟಿ ನಿಡೊದೆ, ಸೂರ್ಯಕಾಂತ ಪಾಟೀಲ, ರಾಜಕುಮಾರ ಬಿಲಗುಂದೆ ಇದ್ದರು.

ಅಶೋಕ ಗಂದಗೆ ಸ್ವಾಗತಿಸಿದರು. ಸೋಮನಾಥ ಪಾಟೀಲ ನಿರೂಪಿಸಿದರು. ಶಿವಕುಮಾರ ಕಣಜೆ ವಂದಿಸಿದರು.



ಭಾಲ್ಕಿ: ಜ್ಯಾಂತಿ ಗ್ರಾಮದ ಲಕ್ಷ್ಮೀ ಮಂದಿರದಲ್ಲಿ ಆಯೋಜಿಸಿದ್ದ ಅಧಿಕ ಮಾಸ ಆಚರಣೆಗೆ ಹಾವಗಿಲಿಂಗೇಶ್ವರ ಶಿವಾಚಾರ್ಯರು ಚಾಲನೆ ನೀಡಿದರು.

ಉದಯವಾಣಿ ಕಲಬುರಗಿ
ರವಿವಾರ | ಆಗಸ್ಟ್ | 2 | 2015

# ಶಿಖಾಮಣಿಯಿಂದ ಭಾವಶುದ್ಧಿ



**ಶ್ರಾವಣ ಮಾಸದ ನಿಮಿತ್ತ ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆಯ ಕಾರ್ಯಕ್ರಮದಲ್ಲಿ ರಾಜೇಶ್ವರ ಶಿವಾಚಾರ್ಯರು ಮಾತನಾಡಿದರು.**

**ಬಸವಕಲ್ಯಾಣ:** ಮಾನವನ ಕಲ್ಯಾಣಕ್ಕಾಗಿ ಬೋಧಿಸಿದ ಸಿದ್ಧಾಂತ ಶಿಖಾಮಣಿ ಇತರ ಸಿದ್ಧಾಂತಗಳಲ್ಲಿ ಶ್ರೇಷ್ಠಮಟ್ಟದ್ದಾಗಿದ್ದು, ಅದರಂತೆ ನಡೆದರೆ ತನು, ಮನ, ಭಾವ ಶುದ್ಧಿಯಾಗುತ್ತದೆ ಎಂದು ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಹೇಳಿದರು. ಶ್ರಾವಣ ಮಾಸದ ನಿಮಿತ್ತ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕು ಘಟಕ ಹಾಗೂ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠ ಟ್ರಸ್ಟನಿಂದ ಗವಿಮಠದಲ್ಲಿ ಆಯೋಜಿಸಿರುವ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆಯ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು. ನೇತೃತ್ವ ವಹಿಸಿದ್ದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪ್ರೊ.ದಯಾನಂದ ಶೀಲವಂತ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹುಮನಾಬಾದ್‌ನ ಶಿಕ್ಷಣ ಸಂಯೋಜಕ ರಮೇಶ ರಾಜೋಳೆ ವಿಶೇಷ ಉಪನ್ಯಾಸ ನೀಡಿದರು. ವಿಶ್ವನಾಥಪ್ಪ ಬಿರಾದಾರ್, ಶೀಲವಂತ ಸಮಾಜ ಅಧ್ಯಕ್ಷ ಚೆನ್ನಪ್ಪ ರಾಜಾಪುರೆ. ಟ್ರಸ್ಟ್ ಕಾರ್ಯಧ್ಯಕ್ಷ ಶರಣಪ್ಪ ಬಿರಾದಾರ್, ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ, ಬಸವರಾಜ ಸ್ವಾಮಿ, ಮಲ್ಲಿಕಾರ್ಜುನ ನಂದಿ, ರೇವಣ ಸಿದ್ಧಯ್ಯ ಮಠಪತಿ, ರುದ್ರಮನಿ ಮಠ, ಹಾವಯ್ಯ ಸ್ವಾಮಿ, ಪ್ರೊ.ಸೂರ್ಯಕಾಂತ ಶೀಲವಂತ ಇತರರಿದ್ದರು. ಬಸವಂತಪ್ಪ ಲವಾರೆ ಸ್ವಾಗತಿಸಿದರು. ಸರಸ್ವತಿ ಬೆಂಬಳೆ ನಿರೂಪಿಸಿದರು. ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ಪ್ರಾರ್ಥಿಸಿದರು. ಕಾಶಿನಾಥ ಸ್ವಾಮಿ ವಂದಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಸೋಮವಾರ
14 ಸೆಪ್ಟೆಂಬರ್ 2015
14 SEPTEMBER 2015

Scanned with CamScanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಗುರುವಾರ
10 ಸೆಪ್ಟೆಂಬರ್ 2015
10 SEPTEMBER 2015

■ ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ

# ತಮ್ಮಲ್ಲಿರುವ ಪರಮಾತ್ಮನ ಜ್ಞಾನ ಅರಿಯುವುದು ಅಗತ್ಯ

**ಬಸವಕಲ್ಯಾಣ:** ತನ್ನಲ್ಲಿರುವ ಭಗವಂತನಲ್ಲಿ ತನ್ನಲ್ಲಿರಿಸುವುದನ್ನು ತಿಳಿಸಿಕೊಡುವುದೇ ಸಿದ್ಧಾಂತ ಶಿಖಾಮಣಿಯಾಗಿದೆ ಎಂದು ಸಿಂಡಿಕೇಟ್ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಬಸವರಾಜ ಸ್ವಾಮಿ ಹೇಳಿದರು.

ತ್ರಿಪುರಾಂತದ ಗವಿಮಠದಲ್ಲಿ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಹಾಗೂ ಜಗದ್ಗುರು ಘನಲಿಂಗ ರುದ್ರಮುನಿ ಶಿವಚಾರ್ಯ ಗವಿಮಠ ಟ್ರಸ್ಟ್ ಸಹಯೋಗದಡಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಉಪನ್ಯಾಸ ಮಾಲೆಯ ಸ್ವಯ ಸ್ಥಲ ವಿಷಯ ಕುರಿತು ಅವರು ಉಪನ್ಯಾಸ ನೀಡಿದರು. ಪ್ರತಿಯೊಬ್ಬರಲ್ಲಿ ದೇವರಿದ್ದಾರೆ. ಆತನನ್ನು ಅರಿತು ಜೀವಾತ್ಮ ಭಗವಂತನಲ್ಲೇ ನೆಲೆಸುವುದು ಅಂದರೆ ತನ್ನಲ್ಲೇ ತಾನಿರುವುದೇ ಸ್ವಯಸ್ಥಲ. ಅದು ಸಮಾಧಿ ಸ್ಥಿತಿ. ಅಂತರಾತ್ಮದಲ್ಲಿ ಸದಾ ದೇವರನ್ನು ಧ್ಯಾನಿಸುತ್ತ ದೈವಿಶಕ್ತಿ ಪಡೆದು ದೇವನಾಗುವ ಪಕಿಯೆ ಎಂದು ಹೇಳಿದರು.



ತ್ರಿಪುರಾಂತ ಗವಿ ಮಠದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆಯಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಮಕ್ಕಳ ತಜ್ಞ ಡಾ.ಜಿ.ಎಸ್.ಭುರಾಳೆ ಮಾತನಾಡಿ, ಪ್ರತಿಯೊಬ್ಬರೂ ಅಹಂಕಾರ, ರಾಗ, ದ್ವೇಷ , ದುರಾಸೆ ಮೊದಲಾದವುಗಳಿಂದ ಮುಕ್ತರಾದಾಗ ಮಾತ್ರ ಜೀವಾತ್ಮನು ಪರಮಾತ್ಮನಲ್ಲಿ ಸೇರಲು ಸಾಧ್ಯವಾಗಲಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಲಾನಯನ ಇಲಾಖೆ ನಿವೃತ್ತ ಅಧಿಕಾರಿ ಬಸವಂತಪ್ಪ ಲವಾರೆ ಮಾತನಾಡಿ, ಜೀವಾತ್ಮನು ಪರಮಾತ್ಮನಾಗುವ ಬಗೆಯನ್ನು ಜಗದ್ಗುರು ರೇಣುಕಾಚಾರ್ಯರು ಬೋಧಿಸಿರುವುದು ಅದ್ಭುತವಾಗಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಪ್ರತಿಯೊಬ್ಬರೂ ತಮ್ಮಲ್ಲಿರುವ ಪರಮಾತ್ಮನ ಜ್ಞಾನ ಅರಿಯುವುದು ಅಗತ್ಯ.ಅದು ಸಿದ್ಧಾಂತ ಶಿಖಾಮಣಿಯಿಂದ ಸಾಧ್ಯ ಎಂದರು.

ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಸವಿತಾ ಸ್ವಾಮಿ, ಮಾಣಿಕಪ್ಪ ಬಿರಾದಾರ್, ಸುಭಾಷ ಮಂಠಾಳೆ, ಶರಣಪ್ಪ ಬುಕ್ಕಿಗಾರ, ಪ್ರಕಾಶ ಬಿರಾದಾರ್, ಬಸವತೀರ್ಥ ಪಾಟೀಲ್, ಗಣಪತಿ ಮೇತ್ರೆ, ಮಲ್ಲಿಕಾರ್ಜುನ ನಂದಿ, ಮಹಾದೇವ ಕಾಮಶೆಟ್ಟಿ, ರಾಜಕುಮಾರ ನಾರಾಯಣಪುರ, ರೇವಣಸಿದ್ದಯ್ಯ ಮಠಪತಿ, ರುದ್ರಮಣಿ ಮಠ ಉಪಸ್ಥಿತರಿದ್ದರು.ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ಪ್ರಾರ್ಥಿಸಿದರು. ಪ್ರೊ.ಸೂರ್ಯಕಾಂತ ಶೀಲವಂತ ಸ್ವಾಗತಿಸಿದರು. ಸರಸ್ವತಿ ಬೆಂಬಳೆ ನಿರೂಪಿಸಿದರು. ಹಾವಯ್ಯ ಸ್ವಾಮಿ ವಂದಿಸಿದರು.

ಉದಯವಾಣಿ ಕಲಬುರಗಿ
ಬುಧವಾರ | ಏಪ್ರಿಲ್ | 22 | 2015



ಬಸವಕಲ್ಯಾಣ: ತ್ರಿಪುರಾಂತನ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ಬಸವ ಜಯಂತಿ ಆಚರಿಸಲಾಯಿತು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ ಇದ್ದರು.



ಬಸವಕಲ್ಯಾಣದ ತ್ರಿಪುರಾಂತನ ಗವಿಮಠದಲ್ಲಿ ಜೈ ಕಿಸಾನ್ ಯುಥ ಕ್ಲಬ್‌ನಿಂದ ಗಣರಾಜ್ಯೋತ್ಸವ ನಿಮಿತ್ತ ಆಯೋಜಿಸಿದ ಕಾರ್ಯಕ್ರಮದಲ್ಲಿ ಭಾರತಾಂಬೆ ಭಾವಚಿತ್ರಕ್ಕೆ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪೂಜೆ ಸಲ್ಲಿಸಿದರು. ಶ್ರೀನಿವಾಸ ಬಿರಾದಾರ್, ಕಾಶೀನಾಥ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ
30 ಜನವರಿ 2016
30 JANUARY 2016

Scanned with CamScanner

# ಗವಿಮಠದಲ್ಲಿ ಗುರುವಂದನೆ

ಬಸವಕಲ್ಯಾಣ: ಜೀವನದಲ್ಲಿ ಶಾಂತಿ, ನೆಮ್ಮದಿ ಪಡೆಯಬೇಕಾದರೆ ಗುರುವಿನ ಮಾರ್ಗದರ್ಶನ ಅವಶ್ಯವಾಗಿದೆ ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಗುರು ಪೂರ್ಣಿಮೆ ನಿಮಿತ್ತ ತ್ರಿಪುರಾಂತನ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠದಲ್ಲಿ ನಡೆದ ಗುರುವಂದನೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು, ಧರ್ಮ ಮತ್ತು ಮಾರ್ಗದರ್ಶನ ತೋರುವ ಗುರು ಪ್ರತಿಯೊಬ್ಬರಿಗೂ ಬೇಕಿದೆ ಎಂದರು.

ಬದುಕಿನಲ್ಲಿ ಬರುವ ಕಷ್ಟಗಳನ್ನು ಪರಿಹರಿಸಿ ಬಾಳಿನಲ್ಲಿ ಬೆಳಕು ತೋರುವವರೇ ನಿಜವಾದ ಗುರು. ಗುರುವಿನಬಳಿಪಡೆದಜ್ಞಾನಜೀವನದಲ್ಲಿ ದಾರಿ ದೀಪವಾಗುತ್ತದೆ. ಪಾರಮಾರ್ಥಿಕ ಉನ್ನತಿ ಸಾಧಿಸಲಿ ಎನ್ನುವುದೇ ಗುರುವಿನ ಆಶಯವಾಗಿರುತ್ತದೆ ಎಂದು ಹೇಳಿದರು.

ಮಹಾರಾಷ್ಟ್ರದ ಶಹಾಜನಿ ಔರಾದ ಮಹಿಳಾ ಮಂಡಳ ಭಕ್ತರಿಂದ ಶಿವಾಚಾರ್ಯರ ಪಾದಪೂಜೆ ನೆರವೇರಿತು. ರೇವಣಸಿದ್ದಯ್ಯ ಮಠಪತಿ, ಮಲ್ಲಿಕಾರ್ಜುನ ನಂದಿ, ಬಸವಂತಪ್ಪ ಲವಾರೆ, ಬಾಬುರಾವ್ ಉಳ್ಳೆ, ಚಂದ್ರಕಾಂತ ಸ್ವಾಮಿ, ಷಣ್ಮುಖ, ರುದ್ರೇಶ ಉಡಚಣ, ಶಿವಾನಂದ ಪಾಟೀಲ ಇದ್ದರು.



ಬಸವಕಲ್ಯಾಣ: ತ್ರಿಪುರಾಂತನ ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಗಳಿಗೆ ಗುರುವಂದನೆ ಸಲ್ಲಿಸಲಾಯಿತು.

ಕಲಬುರಗಿ ಉದಯವಾಣಿ
ರವಿವಾರ | ಆಗಸ್ಟ್ | 2 | 2015

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI • KALABURAGI
A ಗುರುವಾರ 19 ಮಾರ್ಚ್ 2015
19 MARCH 2015

■ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ

# ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ

ಬಸವಕಲ್ಯಾಣ: ಮನೆಯಲ್ಲಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ, ಸನ್ಮಾರ್ಗದೆಡೆ ದಾರಿ ತೋರಿಸಬೇಕಾದ ಕರ್ತವ್ಯ ತಾಯಂದಿರದ್ದಾಗಿದೆ ಎಂದು ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ ಮಹಿಳಾ ಘಟಕದಿಂದ ಮಲ್ಲಿಕಾರ್ಜುನ ಕಾಡಾದೆ ನಿವಾಸದ ಆವರಣದಲ್ಲಿ ಆಯೋಜಿಸಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದ ಶ್ರೀಗಳು, ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪಾಲಕರ ಪಾತ್ರ ಮಹತ್ವದ್ದಾಗಿದೆ ಎಂದರು.

ಇಷ್ಟಲಿಂಗ ಪೂಜೆಯಿಂದ ಅನಿಷ್ಟಗಳು ದೂರವಾಗುತ್ತವೆ. ಧರ್ಮಾಚರಣೆ ಕಟ್ಟು ನಿಟ್ಟಾಗಿ ಪಾಲಿಸುವುದರಿಂದ ಮುಕ್ತಿ ಮಾರ್ಗ ಕಂಡುಕೊಳ್ಳಬಹುದಾಗಿದೆ ಎಂದು ಹೇಳಿದರು.

ಪುಣ್ಯಕೋಟಿ ಕಾಲೇಜಿನ ಪ್ರಾಚಾರ್ಯ ಪ್ರೊ.ಸೂರ್ಯಕಾಂತ ಶೀಲವಂತ ಮಾತನಾಡಿ, ಭಾರತ ದೇಶ ಶ್ರೇಷ್ಠ ಸಂಸ್ಕೃತಿಯ ತವರು. ಇಲ್ಲಿಯ ಶ್ರೇಷ್ಠವಾದ ಸಂಸ್ಕೃತಿಯ ಬಗ್ಗೆ ಮಕ್ಕಳಿಗೆ ತಿಳಿಸಿಕೊಡುವ ಕೆಲಸ ನಡೆಯಬೇಕು. ವೀರಶೈವ ಧರ್ಮದ ಪವಿತ್ರ ಗ್ರಂಥ ಸಿದ್ಧಾಂತ ಶಿಖಾಮಣಿಯಲ್ಲಿಯ ಸಂದೇಶಗಳನ್ನು ಮಕ್ಕಳಿಗೆ ತಿಳಿಸಿಕೊಡುವ ಕೆಲಸ ನಡೆಯಬೇಕು ಎಂದರು. ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಮಾತನಾಡಿ, ಪ್ರತಿ ತಿಂಗಳ ಹುಣ್ಣಿಮೆಯಂದು ಸಂಜೆ ವೀರಶೈವ ಜ್ಯೋತಿ ಕಾರ್ಯಕ್ರಮ ತ್ರಿಪುರಾಂತ ಶ್ರೀಗಳ ಸಾನ್ನಿಧ್ಯದಲ್ಲಿ ನಡೆಸಬೇಕು ಎಂದು ಸಲಹೆ ನೀಡಿದರು. ಮಲ್ಲಿಕಾರ್ಜುನ ಕಾಡಾದಿ ಅಧ್ಯಕ್ಷತೆ ವಹಿಸಿದ್ದರು. ಕಲ್ಪನಾ ಶೀಲವಂತ ಪ್ರಸ್ತಾವಿಕ ಮಾತನಾಡಿದರು. ಶ್ರೀದೇವಿ ಚಿರಡೆ ಸ್ವಾಗತಿಸಿದರು. ಸರಸ್ವತಿ ಬೆಂಬಳೆ ನಿರೂಪಿಸಿದರು. ಮಲ್ಲಿಕಾರ್ಜುನ ನಂದಿ, ಮಲ್ಲಯ್ಯಸ್ವಾಮಿ, ಭಾನುದಾಸ ಪಾಟೀಲ್, ಲೀಲಾ ಸಂಕಳ್ಳಿ, ಪ್ರಮುಖರು ಭಾಗವಹಿಸಿದ್ದರು.



ಬಸವಕಲ್ಯಾಣದಲ್ಲಿ ನಡೆದ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗ ಮಾನೋತ್ಸವ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು.

ಸುದ್ದಿ | ಹನಿ

## ಗೌರವ ಸನ್ಮಾನ ಇಂದು

ಬಸವಕಲ್ಯಾಣ: ಶ್ರೀಮದ್ ರಂಭಾಪುರಿ ಗುರುಪೀಠದಿಂದ ವೀರಶೈವ ಸಿರಿ ಪ್ರಶಸ್ತಿ ಪುರಸ್ಕೃತರಾದ ಯುವ ಮುಖಂಡ ಸುನೀಲ ಪಾಟೀಲ್ ಅವರಿಗೆ ನಾಗರಿಕ ಗೌರವ ಸನ್ಮಾನ ಕಾರ್ಯಕ್ರಮ ಶುಕ್ರವಾರ ಸಂಜೆ 6ಕ್ಕೆ ತ್ರಿಪುರಾಂತ ಗವಿಮಠದ ಪರಿಸರದಲ್ಲಿ ಆಯೋಜಿಸಲಾಗಿದೆ. ಹಾರಕೂಡದ ಡಾ.ಚನ್ನವೀರ ಶಿವಾಚಾರ್ಯರು ಸಾನ್ನಿಧ್ಯ, ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಸಮ್ಮುಖ, ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸುವರು. ಬಿಡಿಪಿಸಿ ಅಧ್ಯಕ್ಷ ವೀರಣ್ಣ ಹಲಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ತ್ರಿಪುರಾಂತನ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ್ ಅಧ್ಯಕ್ಷತೆ ವಹಿಸುವರು. ವೀರಶೈವ ಮಹಾಸಭೆ ತಾಲೂಕು ಅಧ್ಯಕ್ಷ ಶಶಿಕಾಂತ ದುರ್ಗೆ, ಬಿಡಿವಿಸಿ ನಿರ್ದೇಶಕ ಮಲ್ಲಯ್ಯ ಸ್ವಾಮಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಲೋಕ ಶಿಕ್ಷಣ ಸಮಿತಿ ತಾಲೂಕು ಕಾರ್ಯದರ್ಶಿ ಚನ್ನವೀರ ಜಮಾದಾರ್ ಉಪನ್ಯಾಸ ನೀಡುವರು ಎಂದು ಸ್ವಾಗತ ಸಮಿತಿ ತಿಳಿಸಿದೆ.



ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI • KALABURAGI
ಶುಕ್ರವಾರ 4 ಡಿಸೆಂಬರ್ 2015
4 DECEMBER 2015

Scanned with CamScanner

■ ಬಸವಕಲ್ಯಾಣದಲ್ಲಿ ರೆಡ್ಡಿ ಸಮಾಜದ ಜನ ಜಾಗೃತಿ ಸಮಾವೇಶ, ಸನ್ಮಾನ

# ಹೇಮರೆಡ್ಡಿ ಮಲ್ಲಮ್ಮ ಮಂದಿರ ನಿರ್ಮಿಸಿ

ಬಸವಕಲ್ಯಾಣ: ಮಹಾಸಾಧ್ವಿ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಮಂದಿರ ನಗರದಲ್ಲಿ ನಿರ್ಮಿಸಲು ಸಮಾಜದ ಜನರು ಮುಂದಾಗಬೇಕು ಎಂದು ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿಯ ಸರ್ಕಾರಿ ಸಮುದಾಯ ಭವನದಲ್ಲಿ ಭಾನುವಾರ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಟ್ರಸ್ಟ್‌ನಿಂದ ಆಯೋಜಿಸಿದ ಸಮಾಜದ ಜಾಗೃತಿ ಸಮಾವೇಶ ಮತ್ತು ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಬರುವ ಮೇ 10ರ ಒಳಗಾಗಿ ಮಂದಿರ ನಿರ್ಮಾಣ ಗುದ್ದಲಿ ಪೂಜೆ ನೆರವೇರಿಸಿ, ಕೆಲಸ ಆರಂಭಿಸಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ತಾಪಂ ಅಧ್ಯಕ್ಷ ಗುಂಡುರೆಡ್ಡಿ ಮಾತನಾಡಿ, ನಗರದಲ್ಲಿ ಹೇಮರೆಡ್ಡಿ ಮಲ್ಲಮ್ಮನವರ ಮಂದಿರ ನಿರ್ಮಾಣಕ್ಕಾಗಿ ಸ್ಥಳ ಖರೀದಿಗೆ 51 ಸಾವಿರ ರೂ ದೇಣಿಗೆ, ಮೂರ್ತಿ ಸ್ಥಾಪನೆಗೆ ತಗುಲುವ ವೆಚ್ಚ ನೀಡುವ ಜತೆಗೆ ಎಲ್ಲ ರೀತಿಯಿಂದಲೂ ಸಹಾಯ ಮತ್ತು ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ವೀರೇಂದ್ರರೆಡ್ಡಿ ಹಾಗೂ ನರಸಿಂಗ ರೆಡ್ಡಿ ಗದಲೇಗಾಂವ್ ಮಾತನಾಡಿ, ಮಂದಿರ ನಿರ್ಮಾಣಕ್ಕಾಗಿ ತಾಲೂಕು ರೆಡ್ಡಿ ಸಮಾಜದ ಸರ್ಕಾರಿ ನೌಕರರಿಂದ ಒಟ್ಟು 5 ಲಕ್ಷ ರೂಪಾಯಿ ದೇಣಿಗೆ ಸಂಗ್ರಹಿಸಿ ನೀಡುವುದಾಗಿ ಭರವಸೆ ನೀಡಿದರು.

ಅಧ್ಯಕ್ಷತೆ ವಹಿಸಿದ ಮಹಾ ಶಿವಶರಣೆ ಹೆಮರೆಡ್ಡಿ ಮಲ್ಲಮ್ಮ ಟ್ರಸ್ಟ್ ಅಧ್ಯಕ್ಷ ಮಲ್ಲರೆಡ್ಡಿ ಪಾಟೀಲ್ ಮಾತನಾಡಿ, ಸಮಾಜದ ಜನರು ಸ್ವಇಚ್ಛೆಯಿಂದ ಮುಂದೆ ಬಂದು ಸಹಕಾರ ನೀಡಿದರೆ 2 ಎಕರೆ ಜಮೀನು ಖರೀದಿಸಿ, ಇಲ್ಲಿ ಮಂದಿರ ಹಾಗೂ ಮಂಗಲ ಕಾರ್ಯಾಲಯ ನಿರ್ಮಿಸಲಾಗುವುದು ಎಂದರು.

ವೀರಾರೆಡ್ಡಿ ಯದಲಾಪುರ, ಮಲ್ಲರೆಡ್ಡಿ ನಿಂಗಾವರೆ, ಕೃಷ್ಣಾ ರೆಡ್ಡಿ, ವಿಜಯ ರೆಡ್ಡಿ, ಶಂಕರ ರೆಡ್ಡಿ, ಸಂಜೀವ ರೆಡ್ಡಿ ಯರಬಾಗ, ಬಾಲಾಜಿ ರೆಡ್ಡಿ, ಗುರುನಾಥ ರೆಡ್ಡಿ, ಬಸವರಾಜ ಸ್ವಾಮಿ, ಕಲಬುರಗಿಯ ಮಲ್ಲಿಕಾರ್ಜುನ ರೆಡ್ಡಿ ಸೇರಿದಂತೆ ಸಮಾಜದ ಗಣ್ಯರು, ಟ್ರಸ್ಟ್ ಸದಸ್ಯರು ಉಪಸ್ಥಿತರಿದ್ದರು.

ವೀರೆಂದ್ರ ರೆಡ್ಡಿ ಸ್ವಾಗತಿಸಿದರು. ಸಂಗಾರೆಡ್ಡಿ ಗದಲೇಗಾಂವ್ ನಿರೂಪಿಸಿದರು. ಬಾಲಾಜಿ ರೆಡ್ಡಿ ವಂದಿಸಿದರು.

ಇದೇ ವೇಳೆ ರೆಡ್ಡಿ ಸಮಾಜದಿಂದ ನೂತನವಾಗಿ ಆಯ್ಕೆಯಾದ ಗ್ರಾ.ಟಪಂ. ಸದಸ್ಯರಿಗೆ ಸನ್ಮಾನಿಸಲಾಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಸೋಮವಾರ
21 ಸೆಪ್ಟೆಂಬರ್ 2015
21 SEPTEMBER 2015

# ಗುಣಮಟ್ಟದ ಶಿಕ್ಷಣ ಅಗತ್ಯ: ರುದ್ರಮುನಿ ಸ್ವಾಮೀಜಿ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣ ತಾಲ್ಲೂಕಿನ ಸಸ್ತಾಪುರದ ನವೋದಯ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಸಂಜೆ ನಡೆದ ವಾರ್ಷಿಕೋತ್ಸವವನ್ನು ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ಸೂರ್ಯಕಾಂತ ಚಿಲ್ಲಾಬಟ್ಟೆ ಉದ್ಘಾಟಿಸಿದರು

ಬಸವಕಲ್ಯಾಣ: ಎಲ್ಲ ಕ್ಷೇತ್ರಗಳಲ್ಲಿ ತೀವ್ರ ಸ್ಪರ್ಧೆ ಇರುವುದರಿಂದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿದರೆ ಮಾತ್ರ ಅವರ ಭವಿಷ್ಯ ಉಜ್ವಲ ಆಗುತ್ತದೆ ಎಂದು ತ್ರಿಪುರಾಂತ ಗವಿಮಠದ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಸಸ್ತಾಪುರದ ನವೋದಯ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಸಂಜೆ ನಡೆದ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಕಲಿಕೆಯಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಅದರಂತೆ ಪಾಲಕರ ಜವಾಬ್ದಾರಿಯೂ ಹೆಚ್ಚಾಗಿದೆ ಎಂದರು.

ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ಸೂರ್ಯಕಾಂತ ಚಿಲ್ಲಾಬಟ್ಟೆ ಮಾತನಾಡಿ, ಮಕ್ಕಳು ಶಿಕ್ಷಕರ ಮಾರ್ಗದರ್ಶನದಂತೆ ನಡೆಯಬೇಕು. ದುಶ್ಚಟಗಳ ದಾಸರಾದರೆ ಬದುಕು ಹಾಳಾಗುತ್ತದೆ ಎಂದರು.

ಸರ್ಕಾರಿ ಪದವಿ ಕಾಲೇಜಿನ ಉಪನ್ಯಾಸಕ ಡಾ.ಚಿತ್ರಶೇಖರ ಚಿರಳ್ಳಿ ಮಾತನಾಡಿ, ಆಟ ಪಾಠದ ಜತೆಗೆ ಮಕ್ಕಳು ಸಾಹಿತ್ಯದಲ್ಲಿಯೂ ಅಭಿರುಚಿ ತೋರಬೇಕು ಎಂದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಶಂಕರ ನಾಗದೆ ಮಾತನಾಡಿ, ಗ್ರಾಮೀಣ ಭಾಗದ ಶಾಲೆಗಳಲ್ಲಿ ಇನ್ನು ಹೆಚ್ಚಿನ ಸೌಲಭ್ಯ ಒದಗಿಸಬೇಕು ಎಂದರು.

ಸಂಸ್ಥೆ ಅಧ್ಯಕ್ಷ ರವೀಂದ್ರ ಟೊಣಪೆ, ತಾಪಂ ಮಾಜಿ ಅಧ್ಯಕ್ಷ ದಿಲೀಪಕುಮಾರ ಗಿರಗಂಟೆ, ಚನ್ನಪ್ಪ ಪಾಟೀಲ, ಬಾಬುರೆಡ್ಡಿ ಚಾಮಾಲೆ, ಶಿವಕುಮಾರ ಬೆಟ್ಟದ್, ವೆಂಕಟರೆಡ್ಡಿ ಇದ್ದರು. ಮುಖ್ಯಶಿಕ್ಷಕಿ ವೈಶಾಲಿ ಪಾಟೀಲ ಸ್ವಾಗತಿಸಿದರು.

ಪ್ರಜಾವಾಣಿ
ಶುಕ್ರವಾರ • ಏಪ್ರಿಲ್ 3, 2015

Scanned with CamScanner



ಬಸವಕಲ್ಯಾಣ: ತಾಲೂಕಿನ ಶಿವಪೂರ ಗ್ರಾಮದ ಬಿರಾದಾರ ನಿವಾಸದ ಆವರಣದಲ್ಲಿ ಹಮ್ಮಿಕೊಂಡ ಬಾಬಾ ಸಾಹೇಬ ವಾರದರ ಸ್ಮರಣೋತ್ಸವ ಹಾಗೂ ಬಸವೇಶ್ವರ ನಂದಿ ಧ್ವಜದ ತರಬೇತಿಯ ಮುಕ್ತಾಯ ಸಮಾರಂಭ ಹಮ್ಮಿಕೊಳ್ಳಲಾಯಿತು.

# ಧರ್ಮ ಸಂಸ್ಕೃತಿ ಅಳವಡಿಸಕೊಳ್ಳಲು ಕರೆ

**ಬಸವಕಲ್ಯಾಣ**

ದಿ. ಬಾಬಾಸಾಹೇಬ ವಾರದವರ ಕಾರ್ಯಕ್ರಮ ಹಮ್ಮಿಕೊಂಡಿದಕ್ಕೆ ಯುವಕರನ್ನು ಅಭಿನಂದಿಸಿ ತಾವು ಸಂಘಟನೆಯಿಂದ ಇದ್ದು, ಧರ್ಮ ಸಂಸ್ಕೃತಿ ಅಳವಡಿಸಿಕೊಳ್ಳಬೇಕು ಎಂದು ತ್ರಿಪುರಾಂತದ ಅಭಿನವ ಘನಲಿಂಗ ರುದ್ರುಮುನಿ ಶಿವಾಚಾರ್ಯರು ತಿಳಿಸಿದರು.

ತಾಲೂಕಿನ ಶಿವಪೂರ ಗ್ರಾಮದ ಬಿರಾದಾರ ನಿವಾಸದ ಆವರಣದಲ್ಲಿ ಹಮ್ಮಿಕೊಂಡ ಬಾಬಾ ಸಾಹೇಬ ವಾರದರ ಸ್ಮರಣೋತ್ಸವ ಹಾಗೂ ಬಸವೇಶ್ವರ ನಂದಿ ಧ್ವಜದ ತರಬೇತಿಯ ಮುಕ್ತಾಯ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದ ಪೂಜ್ಯರು ಬಸವೇಶ್ವರರ ಜಾತ್ರೆಗೆ ಭದ್ರ ಬುನಾದಿ ಹಾಕಿಕೊಟ್ಟವರು ವಾರದರು ಎಂದರು.

ಮುಖ್ಯ ಅತಿಥಿಗಳಾಗಿ ಗುಲ್ಬರ್ಗಾದ ಉಪನ್ಯಾಸಕ ಡಾ: ನೀಲಾಂಬಿಕಾ ಪೊಲೀಸ್ ಪಾಟೀಲ್ ಮಾತನಾಡಿ ಇಲ್ಲಿನ ಜನರು ಒಳ್ಳೇಯ ಕಾರ್ಯಗಳಿಗೆ ಏಕೆ ಬೆಂಬಲಿಸುತ್ತಿಲ್ಲ. ಹೊರಗಿನವರು ಭಾಗವಹಿಸಿ ಅದರ ಲಾಭ ಪಡೆದುಕೊಳ್ಳುತ್ತಿದ್ದಾರೆ ಎಂದು ಎಚ್ಚರಿಸಿ ಬಸವಣ್ಣವರನ್ನು ವ್ಯಾಪಾರಿ ದೃಷ್ಟಿಯಿಂದ ನೋಡದೇ ಭಕ್ತಿಯಿಂದ ಕಾಣಿರಿ ಎಂದರು.

ಇನ್ನೋರ್ವ ಮು.ಅತಿಥಿಗಳಾಗಿ ಬೀದರ ರಜೀಯಾ ಬಳಬಟ್ಟೆ ಮಾತನಾಡಿ ಮಹಿಳೆಯರಿಗೆ ವಿಶಿಷ್ಠ ಸ್ಥಾನಮಾನ ನೀಡಿದವರು ಬಸವಾದಿ ಶಿವಶರಣರು. ನಮ್ಮ ಭವ್ಯ ಸಂಸ್ಕೃತಿಯಿಂದ ವಿಮೂಖರಾಗಬಾರದು ಎಂದರು. ಕು. ಪ್ರಿತಿ ನರೇಂದ್ರ ತಮ್ಮ ತಾತನವರ ಬಗ್ಗೆ ಅಭಿಪ್ರಾಯ ತಿಳಿಸಿದಳು. ವಿಶೇಷ ಸನ್ಮಾನವನ್ನು ಹಿರಿಯ ಜೀವಿ ರೇವಣಪ್ಪ ವಾಂಜರಖೆಡೆ ದಂಪತಿಗಳನ್ನು ಸನ್ಮಾನಿಸಿ ತುಲಾಭಾರ ಮಾಡಲಾಯಿತು.

ಇದೇ ಸಂದರ್ಭದಲ್ಲಿ ವಿಶೇಷ ಸೇವೆ ಸಲ್ಲಿಸಿದ ಗುರುಪಾದಪ್ಪ ಗಡಿಯಾಳ ಸ್ವಾಮಿ, ಬಸಣ್ಣಾ ಧನ್ನೂರೆ, ಜಗನ್ನಾಥ ಕನಶೆಟ್ಟೆ, ವೈಜಪ್ಪ ಬುಡಗೆ, ಬಸ್ಸಮ್ಮ ಧಮಾರೆ, ಶಿವಪ್ಪ ಚಪಾತೆ, ಬಾಬುರಾವ ಧುಮಾಳೆ, ಗುರುಪಾದಪ್ಪ ಖರೂಣೆ, ಬಸ್ಸಣ್ಣ ಭದಾಡೆ, ಮಡಿವಾಳಪ್ಪ ಪಾಟೀಲ್, ದೇವಸ್ಥಾನ ಅಧ್ಯಕ್ಷ ಮಲ್ಲಪ್ಪ ಲಾತೂರೆ, ಕಾರ್ಯದರ್ಶಿ ರೇವಣಪ್ಪ ರಾಯವಾಡೆ, ಸುಶೀಲಾಬಾಯಿ ಧನ್ನೂರೆ ಹಾಗೂ ದಾಸೋಹ ಸೇವೆ ಮಾಡಿದ ಶ್ರೀಮತಿ ಶೀವಲಿಲಾ ಉಮಾಕಾಂತ ಬಿರಾದಾರ, ಪತ್ರಕರ್ತ ನಾಗಪ್ಪ ನಿಣ್ಣೆ ಅಲ್ಲದೆ ವೃತ ಹಿಡಿದ ನಂದಿ ಧ್ವಜ ಯುವಕರಿಗೆ ಸಹ ಸನ್ಮಾನಿಸಲಾಯಿತು.

ನಂದಿ ಧ್ವಜದ ಗೌರವಾಧ್ಯಕ್ಷ ಸುಭಾಷ ಬಾವಗೆ, ಅಧ್ಯಕ್ಷ ಕಲ್ಲಯ್ಯಾ ಮಠಪತಿ, ಕಾರ್ಯದರ್ಶಿ ಸಂಜು ಶಾಶಟ್ಟೆ, ಖಜಾಂಚಿ ಸಾಗರ ಲಾಡಕುಂಬಾರ, ಇನ್ನಿತತರು ಕಾರ್ಯಕ್ರಮಕ್ಕೆ ಸಹಕರಿಸಿದರು.

ಸಂಗೀತ ಸೇವೆ ಶಿಕ್ಷಕ ಮಲ್ಲಪ್ಪ ಕೋಟೆ, ತಬಲಾ ಸಾಥ್ ಗುರುಬಸವ, ಸ್ವಾಗತ ಶ್ರೀಮತಿ ಕವಿತಾ ಮಶೆಟ್ಟೆ, ಸಂಚಾಲನೆ ಹಾಗೂ ವಂದನಾರ್ಪಣೆ ಬಸವರಾಜ ಖಂಡಾಳೆ ಸಲ್ಲಿಸಿದರು. ನಂದಿ ಧ್ವಜದ ಸಮಿತಿಯ ಯುವಕರಾದ ದಿ.ಶ್ರೀಕಾಂತ ಸದಾನಂದ ಮೆಟಗೆ ಅವರ ಅಕಾಲಿಕ ಮರಣಕ್ಕಾಗಿ ಎರಡು ನಿಮಿಷ ಮೌನಾಚಾರಣೆ ಮಾಡಲಾಯಿತು.

ಇದಕ್ಕೂ ಮುಂಚೆ ಅಲ್ಲಮ ಪ್ರಭುದೇವರ ಗದಗ್ಗಿನ ಮಠದಿಂದ ಸಿದ್ದೇಶ್ವರ ಮಂದಿರದ ಮಾರ್ಗವಾಗಿ ಮಹಾದೇವ ಮಂದಿರದವರೆಗೆ ಮೆರವಣಿಗೆ ನಡೆಸಲಾಯಿತು.

ಸಂಯುಕ್ತ ಕರ್ನಾಟಕ

ಮಂಗಳವಾರ, 7, ಏಪ್ರಿಲ್, 2015, ಕಲಬುರಗಿ

Scanned with CamScanner

■ ವೀರಶೈವ ಸಿರಿ ಪ್ರಶಸ್ತಿ ಪುರಸ್ಕೃತ ಸುನೀಲ್ ಎಂ. ಪಾಟೀಲರಿಗೆ ನಾಗರಿಕ ಗೌರವ ಸತ್ಕಾರ

# ಜೀವನ ವಿಕಾಸಕ್ಕೆ ಬೇಕಿದೆ ತ್ಯಾಗ ಎನ್ನುವ ಸಂಸ್ಕಾರ

ಬಸವಕಲ್ಯಾಣ: ಶ್ರೀಮದ್ ರಂಭಾಪುರಿ ಗುರುಪೀಠದಿಂದ ವೀರಶೈವ ಸಿರಿ ಪ್ರಶಸ್ತಿ ಪುರಸ್ಕೃತರಾದ ಇಲ್ಲಿಯ ಯುವ ಮುಖಂಡ ಸುನೀಲ ಪಾಟೀಲ್ ಅವರಿಗೆ ತ್ರಿಪುರಾಂತನ ಗವಿ ಮಠದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ನಾಗರಿಕ ಗೌರವ ಸನ್ಮಾನ ನೀಡಲಾಯಿತು.

ಸಾನ್ನಿಧ್ಯ ವಹಿಸಿದ ಹಾರಕೂಡನ ಡಾ. ಚೆನ್ನವೀರ ಶಿವಾಚಾರ್ಯರು, ಕನ್ಷೇರಿ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮೀಜಿಯವರು ಸುನೀಲ ಪಾಟೀಲ್ ಅವರನ್ನು ಆಶೀರ್ವದಿಸಿದರು.

ನೇತೃತ್ವ ವಹಿಸಿದ ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಮಾತನಾಡಿ, ಮನುಷ್ಯನ ಬದುಕಿನಲ್ಲಿ ಧರ್ಮ ಎನ್ನುವ ಪ್ರಕಾಶದಿಂದ ಇಡಿ ಜೀವನ ಬೆಳಗುತ್ತದೆ. ಈ ಜೀವನ ವಿಕಾಸಕ್ಕೆ ತ್ಯಾಗ ಎನ್ನುವ ಸಂಸ್ಕಾರ ಬೇಕು. ತ್ಯಾಗದಲ್ಲಿ ಆನಂದವಿದೆ. ಭೋಗದಲ್ಲಿ ದುಃಖವಿದೆ. ತನಗಾಗಿ ಮಾಡಿಕೊಳ್ಳುವುದು ಭೋಗ, ಸಮಾಜ, ರಾಷ್ಟ್ರಕ್ಕಾಗಿ ಮಾಡುವುದು ತ್ಯಾಗ ಎಂದರು.

ಜನ್ಮದಿನದ ನಿಮಿತ್ತ ಅನಾಥ ವ್ಯಕ್ತಿಗೆ ಸ್ವಾದಿಷ್ಟ ಭೋಜನ ಮಾಡಿಸಿದರೆ ಒಂದು ನೆನೆಯುತ್ತಾರೆ. ಪರಿವಾರದಲ್ಲಿ ದಿನ ನಿತ್ಯ ಭೋಜನ ಮಾಡಿದರೂ ಆ ಆನಂದ ಅನುಭವಿಸಲಾಗದು. ಉಪಕಾರ ಸ್ಮರಣೆಯಿಂದ ಆನಂದ ವೃದ್ಧಿಯಾಗುತ್ತದೆ ಎಂದ

> ಶ್ರೀಮದ್ ರಂಭಾಪುರಿ ಗುರುಪೀಠದಿಂದ ನೀಡಲಾಗಿರುವ ಪ್ರಶಸ್ತಿ ಜವಾಬ್ದಾರಿಯನ್ನು ಹೆಚ್ಚಿಸಿದೆ. ಹೆಚ್ಚಿನ ಕೆಲಸಕ್ಕೆ ಸ್ಫೂರ್ತಿ ತುಂಬಿದೆ. ಸಮಾಜಪರ ಕಾರ್ಯಗಳಿಗೆ ಸದಾ ಸಹಾಯ ಮತ್ತು ಸಹಕಾರ ನೀಡುತ್ತೇನೆ. ತಮ್ಮೆಲ್ಲರ ವಿಶ್ವಾಸ ಮತ್ತು ಸಹಕಾರದಿಂದ ಸೂಸೂತ್ರವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ. ತಾವು ತೋರಿದ ವಿಶ್ವಾಸ ಮರೆಯಲಾಗದು.
>
> । ಸುನೀಲ ಪಾಟೀಲ್ ಬಸವಕಲ್ಯಾಣ

ಶ್ರೀಗಳು, ಸುನೀಲ ಪಾಟಿಲ್ ಅವರಿಗೆ ಧರ್ಮ-ಅಧ್ಯಾತ್ಮದ ಬಗ್ಗೆ ಅಪಾರ ಗೌರವ, ಸಮಾಜದ ಬಗ್ಗೆ ಕಾಳಜಿ ಇದೆ. ಸಾಮಾಜಿಕ ಕಾರ್ಯಗಳಲ್ಲಿ ಸೇವೆ ಮಾಡುವ ಪದ್ಧತಿ ಅವರು ಬೆಳೆಸಿಕೊಂಡಿರುವುದು ಸ್ತುತ್ಯಾರ್ಹವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಬಸವಕಲ್ಯಾಣದ ಸುನೀಲ ಪಾಟೀಲ್ ದಂಪತಿಗೆ ತ್ರಿಪುರಾಂತನ ಗವಿ ಮಠದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ನಾಗರಿಕ ಗೌರವ ಸನ್ಮಾನ ನೀಡಲಾಯಿತು. ಡಾ. ಚನ್ನವೀರ ಶಿವಾಚಾರ್ಯರು, ತ್ರಿಪುರಾಂತ ಶ್ರೀಗಳು ಇತರರಿದ್ದರು.

ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಧರ್ಮಿಕ ಮತ್ತು ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ಸಂಯೋಜಿಸುವ ಜತೆಗೆ ಧರ್ಮ ಆಧ್ಯಾತ್ಮಿಕ ಕಾರ್ಯಕ್ರಮಗಳಿಗೆ ತಮ್ಮನ್ನು ತೊಡಿಗಿಸಿಕೊಂಡಿರುವ ಪಾಟೀಲ್ ಅವರೂಪದ ವ್ಯಕ್ತಿಯಾಗಿದ್ದಾರೆ ಎಂದು ಬಣ್ಣಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಅಧ್ಯಕ್ಷ ವೀರಣ್ಣ ಹಲಶೆಟ್ಟಿ ಮಾತನಾಡಿ, ಸುನೀಲ ಪಾಟೀಲ್ ಅವರ ಸಮಾಜಪರ ಕಾರ್ಯಕ್ಕೆ ತಾವು ಸದಾ ಬೆಂಬಲಿಸುವುದಾಗಿ ಅಭಯ ನೀಡಿದರು.

ಅರ್ಜುನ ಕನಕ, ಮನೋಹರ ಮೈಸೆ ಮಾತನಾಡಿ, ಧಾರ್ಮಿಕ, ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಜನರ ಧರ್ಮ ಮತ್ತು ಅಧ್ಯಾತ್ಮದ ಬಗ್ಗೆ ಜಾಗೃತಿ ಮೂಡಿಸುವ ಮಹತ್ತರ ಕಾರ್ಯ ಸುನೀಲ ಪಾಟಿಲ್ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ವೀರಸೈವ ಮಹಾಸಭೆ ತಾಲೂಕು ಅಧ್ಯಕ್ಷ ಶಶಿಕಾಂತ ದುರ್ಗೆ, ಉಪನ್ಯಾಸಕ ನರಸಿಂಗರೆಡ್ಡಿ ಗದಲೇಗಾಂವ ಮಾತನಾಡಿದರು. ಕ್ಷೇಮಲಿಂಗ ಬೆಳಮಗಿ ವಿಶೇಷ ಉಪನ್ಯಾಸ ನೀಡಿ, ಸುನೀಲ ಪಾಟೀಲ್ ಅವರ ಕ್ರೀಯಾಶಿಲತೆ, ಕಾರ್ಯಕ್ಷಮತೆ, ಸಮಾಜಪರ ಕಾಳಜಿಯನ್ನು ಶ್ಲಾಘಿಸಿದರು.

ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಟ್ರಸ್ ಅಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಅಧ್ಯಕ್ಷ ದೀಲಿಪ ಸಾಯಗಾಂವೆ, ಕಾರ್ಯದರ್ಶಿ ಚಿದಂಬರಶೇಖರ್, ಶ್ರೀ ಗುರು ಮಹಾಲಿಂಗೇಶ್ವರ ಶಾಲೆ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ, ಬಸವರಾಜ ಪಾಟೀಲ್ ಬೇಲೂರ, ದೇವಿಂದ್ರ ಬಿರಾದಾರ್, ಬಸವರಾಜ ಸ್ವಾಮಿ, ಭರತಸಿಂಗ ಠಾಕೂರ, ರಾಜು ಪಾಟೀಲ್ ಹಳ್ಳಿ, ಚಂದ್ರಕಾಂತ ಶೀಲವಂತ, ವೀರಣ್ಣ ಶೀಲವಂತ, ದಯಾನಂದ ಶೀಲವಂತ, ಚಂದ್ರಶೇಖರ ಪಾಟೀಲ್, ಸೋಮಶೇಖರ ವಸ್ತ್ರದ, ಬಸವರಾಜ ತೊಂಡಾರೆ, ಕಾಶಿನಾಥ ಸ್ವಾಮಿ, ಮಲ್ಲಿಕಾರ್ಜುನ ನಂದಿ, ಕಲ್ಪನಾ ಶೀಲವಂತ, ದಮಯಂತಿ ಮೈಸೆ, ವಿಜಯಲಕ್ಷ್ಮೀ ರಮೇಶ ರಾಜೋಳೆ, ಸರಸ್ವತಿ ಬೆಂಬಳೆ, ಅರುಣಾ ಚಂದ್ರಕಾಂತ ಸ್ವಾಮಿ, ಶ್ರೀದೇವಿ ಚಿರಡೆ ಭಾಗವಹಿಸಿದ್ದರು. ಸ್ವಾಗತ ಸಮಿತಿ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ರಮೇಶ ರಾಜೋಳೆ, ಕಲಾವಿದರಾದ ಗುರುಶಾಂತಯ್ಯ ಸ್ಥಾವರ ಮಠ, ಲೋಕನಾಥ, ಕುಂಬಾರ, ಪ್ರಾರ್ಥನಾ ಗೀತೆ ಹಾಡಿದರು.ಬಸವಂತಪ್ಪ ಲವಾರೆ ವಂದಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಸೋಮವಾರ
7 ಡಿಸೆಂಬರ್ 2015
7 DECEMBER 2015



ಸ್ವಾಗತ ಸಮಿತಿ ಅಧ್ಯಕ್ಷ ಸುನೀಲ ಪಾಟೀಲ್ ಪ್ರಕಟಿಸಿದ ವಚನ ವಿವೇಕ ಪುಸ್ತಕವನ್ನು ಸಮಾವೇಶದಲ್ಲಿ ಲೋಕಾರ್ಪಣೆ ಮಾಡಲಾಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI

## ಯುವಕರೇ ನವ ವಿಶ್ವ ನಿರ್ಮಾಪಕರು

ಭಾನುವಾರ
6 ಡಿಸೆಂಬರ್ 2015
6 DECEMBER 2015

Scanned with CamScanner

# ಪರದೆ ಮೇಲೆ ನಟಿಸುವ ವ್ಯಕ್ತಿಗಳನ್ನು ಹೀರೊ ಎನ್ನದಿರಲು ಸಲಹೆ

**ಬಸವಕಲ್ಯಾಣ:** ವಿದ್ಯಾರ್ಥಿಗಳಲ್ಲಿ ರಾಷ್ಟ್ರ ಭಕ್ತಿ ಬೆಳೆಸುವ ಜತೆಗೆ ಅವರ ಸರ್ವಾಂಗೀಣ ವಿಕಾಸಕ್ಕೆ ಎಬಿವಿಪಿ ಶ್ರಮಿಸುತ್ತಿದೆ ಎಂದು ಎಬಿವಿಪಿ ಜಿಲ್ಲಾ ಸಂಚಾಲಕ ರೇವಣಸಿದ್ಧ ಜಾಡರ್ ಹೇಳಿದರು. .

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನಿಂದ ಇಲ್ಲಿಯ ಪುಣ್ಯಕೋಟಿ ಪಿಯು ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿದರು.

ಪರದೆಯ ಮೇಲೆ ನಟಿಸುವ ವ್ಯಕ್ತಿಗಳನ್ನು ಹಿರೋ ಎನ್ನದೇ, ಸ್ವಾಮಿ ವಿವೇಕಾನಂದರು, ಸುಭಾಷಚಂದ್ರ ಭೋಷ್, ಭಗತ್‌ಸಿಂಗ್ ರಂಥಹ ರಾಷ್ಟ್ರ ಭಕ್ತರ ಜೀವನ ಚರಿತ್ರೆ ಆದರ್ಶವಾಗಿಟ್ಟುಕೊಳ್ಳಬೇಕು. ಉತ್ತಮ ಸಂಸ್ಕಾರ ಮೈಗೂಡಿಸಿಕೊಂಡು, ಗುರು-ಹಿರಿಯರನ್ನು ಗೌರವಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಅನ್ಯಾಯ ಕಂಡಾಗ ಪ್ರತಿಭಟಿಸಲು ಮುಂದಾಗಬೇಕು ಎಂದರು.



ಬಸವಕಲ್ಯಾಣ ಪುಣ್ಯಕೋಟಿ ಪಿಯು ಕಾಲೇಜಿನಲ್ಲಿ ಎಬಿವಿಪಿಯಿಂದ ಆಯೋಜಿಸಿದ ಒಂದು ದಿನದ ಕಾರ್ಯಾಗಾರ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು.

ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ನ್ಯಾಯ ಕಲ್ಪಿಸಿಕೊಡುವಲ್ಲಿ ಹಲವು ಹೋರಾಟಗಳ ಮೂಲಕ ಮಹತ್ತವ ಕಾರ್ಯನಿರ್ವಹಿಸುತ್ತಿರುವ ಎಬಿವಿಪಿ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡು ದೇಶ ಕಟ್ಟುವ ಕಾರ್ಯದಲ್ಲಿ ತೊಡಗಿದೆ ಎಂದು ಶ್ಲಾಘಿಸಿದರು.

ಪ್ರೊ.ಸೂರ್ಯಕಾಂತ ಶೀಲವಂತ ಅಧ್ಯಕ್ಷತೆ ವಹಿಸಿದ್ದರು. ಜ್ಞಾನ ಗಂಗಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ರಾಜಕುಮಾರ ಮಂಠಾಳೆ, ಪತ್ರಕರ್ತ ಉದಯಕುಮಾರ ಮುಳೆ, ಪ್ರಕಾಶ ರಾಠೊಡ , ಆನಂದ ಚಾಕೂರೆ, ಉಪನ್ಯಾಸಕ ಪ್ರಜ್ವಲ ಉಪಸ್ಥಿರಿದ್ದರು.

ಕಲ್ಪನಾ ಚುಡೆ ನಿರೂಪಿಸಿದರು. ಶ್ರುತಿ ಹಾಗೂ ಅಂಬಿಕಾ ಸ್ವಾಗತ ಗೀತೆ ಹಾಡಿದರು. ಅಂಬ್ರೀಶ್ ಸ್ವಾಮಿ ಸ್ವಾಗತಿಸಿದರು. ಲೋಕೇಶ ಮೊಳಕೇರೆ ವಂದಿಸಿದರು.

**ಪದಾಧಿಕಾರಿಗಳು:** ಇದೇ ಸಂದರ್ಭದಲ್ಲಿ ಎಬಿವಿಪಿ ತಾಲೂಕು ಘಟಕದ ನೂತನ ಕಾರ್ಯಕಾರಿಣಿ ರಚಿಸಿ ನೂತನ ಪದಾಧಿಕಾರಿಗಳನ್ನು ನೇಮಿಸಲಾಯಿತು.

ಲೋಕೇಶ ಮೊಳಕೆರೆ( ನಗರ ಕಾರ್ಯದರ್ಶಿ) ನೌನಾಥ ಮೆತ್ರೆ(ಸಹ ಕಾರ್ಯದರ್ಶಿ), ಅಂಬ್ರೀಶ್ ಸ್ವಾಮಿ(ತಾಲೂಕು ಸಂಚಾಲಕ), ಪ್ರದೀಪ ಭೊರಳೆ(ಸಹ ಸಂಚಾಲಕ). ಚೇತನ ಕಾಡೆ (ನಗರ ಹೊರಾಟ ಪ್ರಮುಖ), ಯಶವಂತ ಸಿಂಧೆ(ಸಹ ಪ್ರಮುಖ), ಮಹೇಶ ಮುಚಳಂಬೆ(ಕಾಲೇಜು ಸಂಪರ್ಕ ಪ್ರಮುಖ), ಸತೀಶ ಜಾಧವ(ಸಹ ಪ್ರಮುಖ), ಲೋಕೇಶ ವರವಟ್ಟೆ(ಹಾಸ್ಟೆಲ್ ಪ್ರಮುಖ), ಸಾಗರ ಶೀಲವಂತ(ಸಹ ಪ್ರಮುಖ), ದೀಪರಾಜ ಬೀರದಾರ್(ಗ್ರಥಾಲಯ ಪ್ರಮುಖ), ಗೀತಾ ತಿಪ್ರಾಂತೆ(ನಗರ ವಿದ್ಯಾರ್ಥಿನಿ ಪ್ರಮುಖರು).

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಶುಕ್ರವಾರ
11 ಡಿಸೆಂಬರ್ 2015
11 DECEMBER 2015

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಭಾನುವಾರ
20 ಡಿಸೆಂಬರ್ 2015
20 DECEMBER 201

# ಧರ್ಮ, ಸಂಸ್ಕೃತಿಯಿಂದ ಸಮಾಜ ಸುಂದರ

**ಹುಮನಾಬಾದ್:** ಧರ್ಮ, ಸಂಸ್ಕೃತಿ ಹಾಗೂ ಸದಾಚಾರದಿಂದ ಸುಂದರ ಸಮಾಜ ನಿರ್ಮಾಣವಾಗಲು ಸಾಧ್ಯ ಎಂದು ಹುಡಗಿ ಕರಿಬಸವೇಶ್ವರ ಮಠದ ಶ್ರೀ ವೀರೂಪಾಕ್ಷ ಶಿವಾಚಾರ್ಯರು ಹೇಳಿದರು.

ಪಟ್ಟಣದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಸ್ಥಳೀಯ ಹಿರೇಮಠದ ಶ್ರೀ ರೇಣುಕಾ ಗಂಗಾಧರ ಶಿವಾಚಾರ್ಯರು ಕೈಗೊಂಡ ತಪೋನುಷ್ಠಾನ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಗಂಗಾಧರ ಶ್ರೀಗಳು ಲೋಕ ಕಲ್ಯಾಣಕ್ಕಾಗಿ ಸತತವಾಗಿ 4 ವರ್ಷಗಳಿಂದ ಈ ಅನುಷ್ಠಾನ ಕೈಗೊಳ್ಳುತ್ತಿದ್ದಾರೆ ಹೇಳಿದರು. ಇದೇ ಸಂದರ್ಭದಲ್ಲಿ ಭಕ್ತರು ಹಾಗೂ ಹಲವಾರು ಮಠಗಳ ಶ್ರೀಗಳಿಂದ ಶ್ರೀಗಂಗಾಧರ ಶಿವಾಚಾರ್ಯರರಿಗೆ ಸತ್ಕರಿಸಲಾಯಿತು.

ಶ್ರೀ ರೇಣುಕಾ ಗಂಗಾಧರ ಶಿವಾಚಾರ್ಯರು ಮಾತನಾಡಿ, ಲೋಕದಲ್ಲಿ ಶಾಂತಿ ನೆಲೆಸಿ ಭಕ್ತರಿಗೆ ಸಮೃದ್ಧಿ, ಶಾಂತಿ ಕೋರಿ ಅನುಷ್ಠಾನ ಕೈಗೊಳ್ಳಲಾಗಿದೆ ಎಂದರು. ತಡೋಳ ಗುರುಕುಲ ಆಶ್ರಮದ ರಾಜೇಶ್ವರ ಸ್ವಾಮೀಜಿ, ಹಳ್ಳಿಖೇಡ (ಬಿ) ಶ್ರೀ ಪಂಡಿತಾರಾಧ್ಯ ಸ್ವಾಮಿ, ರಾಜೇಶ್ವರ ಘನಲಿಂಗ ರುದ್ರಮುನಿ ಸ್ವಾಮಿ, ಸದಲಾಪುರದ ಶ್ರೀ ಸಿದ್ಧಲಿಂಗ ಸ್ವಾಮೀಜಿ, ಕಲ್ಲೂರಿನ ಶ್ರೀ ಮೃತುಂಜಯ ಸ್ವಾಮಿ ಮಾತನಾಡಿದರು. ಪ್ರಮುಖರಾದ ಡಾ. ಸಿದ್ದು ಪಾಟೀಲ್, ಸಂತೋಷ ಪಾಟೀಲ್, ದೇವಸ್ಥಾನ ವ್ಯವಸ್ಥಾಪಕ ಮಂಡಳಿ ಪ್ರಮುಖರಾದ ಮಲಿಕಾರ್ಜುನ ಮಾಳಶೆಟ್ಟಿ, ಶರಣಪ್ಪ ರೇಚೆಟ್ಟಿ, ಬಾಬುರಾವ ಪೋಚಂಪಳ್ಳಿ ಇತರರಿದ್ದರು.



ಹುಮನಾಬಾದ್‌ನ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರೀ ರೇಣುಕಾ ಗಂಗಾಧರ ಶಿವಾಚಾರ್ಯರ ತಪೋನುಷ್ಠಾನ ಸಮಾರೋಪದಲ್ಲಿ ಶ್ರೀಗಳಿಗೆ ಭಕ್ತರು ಸತ್ಕರಿಸಿದರು.

Scanned with CamScanner

■ ಬಸವಕಲ್ಯಾಣದಲ್ಲಿ ಇಂಗಳೆ ಮಾರ್ಗ ಚಲನಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಿದ ಶ್ರೀ ಸಿದ್ಧರಾಮ ಬೆಲ್ದಾಳ ಶರಣರು

# ಮಹಾತ್ಮರ ಸಾಧನೆಯಿಂದ ಜೀವನದಲ್ಲಿ ಸ್ಫೂರ್ತಿ ಪಡೆಯಿರಿ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶುಕ್ರವಾರ 11 ಡಿಸೆಂಬರ್ 2015
11 DECEMBER 2015

**ಬಸವಕಲ್ಯಾಣ:** ಸಮಾನತೆ, ಸ್ವಾತಂತ್ರ್ಯ ಶೋಷಣೆ ರಹಿತ ವ್ಯವಸ್ಥೆ ಮತ್ತು ಶಾಂತಿಗಾಗಿ ಮಹಾತ್ಮರು, ಮಹಾಪುರುಷರು, ಸಂತ ಮಹಾಂತರು ದುಡಿದಿದ್ದಾರೆ. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಕಾನೂನಿನ ಚೌಕಟ್ಟಿನಲ್ಲಿ ಸರ್ವರಿಗೂ ಸಮಾನತೆ, ಸಾಮಾಜಿಕ ನ್ಯಾಯ, ಮಾನವ ಹಕ್ಕುಗಳನ್ನು ಕಲ್ಪಿಸಿಕೊಟ್ಟಿದ್ದಾರೆ ಎಂದು ಇಲ್ಲಿಯ ಬಸವ ಮಹಾಮನೆ ಸಂಸ್ಥೆ ಅಧ್ಯಕ್ಷ ಶ್ರೀ ಸಿದ್ಧರಾಮ ಬೆಲ್ದಾಳ ಶರಣರು ನುಡಿದರು.

ನಗರದ ನವರಂಗ ಚಿತ್ರ ಮಂದಿರದಲ್ಲಿ ಗುರುವಾರ ದೇವರಾಯ ಕಾದಂಬರಿ ಆಧಾರಿತ ಇಂಗಳೆ ಮಾರ್ಗ ಕನ್ನಡ ಚಲನ ಚಿತ್ರ ಪ್ರದರ್ಶನ ಉದ್ಘಾಟಿಸಿ, ನಂತರ ನಡೆದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಮಹಾತ್ಮರ, ಮಹಾಪುರುಷರ ಜೀವನ ಚರಿತ್ರೆ ಮತ್ತು ಸಾಧನೆಯನ್ನು ಇಂದಿನ ಯುವ ಸಮೂಹ ಅರಿತು ಜೀವನದಲ್ಲಿ ಸ್ಫೂರ್ತಿ ಪಡೆಯಬೇಕಾದ ಅವಶ್ಯಕತೆ ಇದೆ ಎಂದು ಹೇಳಿದರು.

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ವಿಚಾರಧಾರೆಯಿಂದ ಪ್ರಭಾವಿತರಾದ ಚಿಕ್ಕೋಡಿ ತಾಲೂಕಿನ ಇಂಗಳೆ ಗ್ರಾಮದ ದೇವರಾಯ ಇಂಗಳೆ ಅವರು ತಮ್ಮ ಶಿಕ್ಷಕ ವೃತ್ತಿಯನ್ನು ತ್ಯೇಜಿಸಿ, ಸಮಾಜ ಸುಧಾರಣೆಗೆ ತಮ್ಮನ್ನು ಸಮರ್ಪಿಸಿಕೊಂಡವರು. ಅವರ ಜೀವನ ಆಧಾರಿತ ಚಲನ ಚಿತ್ರವನ್ನು ಪ್ರದರ್ಶಿಸುತ್ತಿರುವುದು ಸ್ತುತ್ಯಾರ್ಹ. ಇದು ಈ ಭಾಗದ ಯುವ ಸಮೂಹ ಹಾಗೂ ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕವಾಗಿದೆ ಎಂದರು.

ಬಡವರಿಗೆ, ಶೋಷಿತರಿಗೆ ಶಿಕ್ಷಣ ಸಿಗಬೇಕು ಜಾತಿ ವ್ಯವಸ್ಥೆ ನಿರ್ಮೂಲನೆಯಾಗಬೇಕು. ದೇವದಾಸಿ ಪದ್ಧತಿ ನಿರ್ಮೂಲನೆಯಾಗಬೇಕು. ಬಡವರು, ಶೋಷಿತರು ಎಲ್ಲರೂ ಮುಖ್ಯವಾಹಿನಿಗೆ ಬರಬೇಕು ಎನ್ನುವ ಆಶಯದೊಂದಿಗೆ ಇಂಗಳೆ ಅವರು ಅನುಸರಿಸಿದ ಕ್ರಾಂತಿಕಾರಿ ಮಾರ್ಗ, ಅವರ ಸಮರ್ಪಣಾ ಮನೋಭಾವ ಇತರರಿಗೆ ಸ್ಫೂರ್ತಿದಾಯಕ ಎಂದರು.

ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಬಸವ ಮಹಾಮನೆಯ ಶ್ರೀ ಬಸವ ಪ್ರಭು ಸ್ವಾಮೀಜಿ, ಬೇಲೂರ ಉರಿಲಿಂಗ ಪೆದ್ದಿ ಮಠದ ಶ್ರೀ ಪಂಚಾಕ್ಷರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಅಧ್ಯಕ್ಷ ವೀರಣ್ಣ ಹಲಶೆಟ್ಟೆ, ನಿರ್ದೇಶಕ ಬಸವರಾಜ ಬಾಲಿಕಿಲೆ, ತಾಪಂ ಮಾಜಿ ಉಪಾಧ್ಯಕ್ಷ ದಿಲೀಪ ಸಿಂಧೆ, ಮುಖಂಡರಾದ ನರಸಿಂಗರಾವ ಕಾಂಬಳೆ, ಶೀತಲ ಸಿಂಧೆ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ಕ್ರೈಮ್ ಚೆಕ್ ಆರ್ಗನೈಜೇಶನ್ ರಾಜ್ಯಾಧ್ಯಕ್ಷ ಸಂಜೀವ ಗಾಯಕವಾಡ ಸ್ವಾಗತಿಸಿ, ವಂದಿಸಿದರು.



ಬಸವಕಲ್ಯಾಣದಲ್ಲಿ ಇಂಗಳೆ ಮಾರ್ಗ ಚಲನಚಿತ್ರ ಪ್ರದರ್ಶನ ಶ್ರೀ ಸಿದ್ಧರಾಮ ಶರಣರು ಬೆಲ್ದಾಳ ಉದ್ಘಾಟಿಸಿದರು. ತ್ರಿಪುರಾಂತ ಶ್ರೀ, ಶ್ರೀ ಪಂಚಾಕ್ಷರಿ ಸ್ವಾಮೀಜಿ, ಶ್ರೀ ಬಸವಪ್ರಭು ಸ್ವಾಮೀಜಿ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 13 ಜನವರಿ 2016
13 JANUARY 2016



ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI

ಮಂಗಳವಾರ
5 ಜನವರಿ 2016
5 JANUARY 2016

ಸೇವಾ ನಿವೃತ್ತ ಈಶಾನ್ಯ ಸಾರಿಗೆ ಚಾಲಕ ಬಾಬು ಸ್ವಾಮಿಗೆ ಹೃದಯಸ್ಪರ್ಶಿ ಸನ್ಮಾನ

# ಅಪಘಾತರಹಿತ ಚಾಲನೆಗೆ ಶ್ಲಾಘನೆ



ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಸವಕಲ್ಯಾಣ ಘಟಕದಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಚಾಲಕ ಬಾಬು ಸ್ವಾಮಿ ದಂಪತಿಗೆ ಹೃದಯಸ್ಪರ್ಶಿ ಸನ್ಮಾನ ನೀಡಲಾಯಿತು. ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಕಲಬುರಗಿ ವಿಭಾಗೀಯ ಸಂಚಾರಾಧಿಕಾರಿ ಬಸವಲಿಂಗಪ್ಪ ಬಿ.ಡಿ. ಇತರರಿದ್ದರು.

**ಬಸವಕಲ್ಯಾಣ:** ಕರ್ತವ್ಯನಿಷ್ಠೆ ಮತ್ತು ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸಿದರೆ ಮಾತ್ರ ಬದುಕಿನಲ್ಲಿ ಸಂತೃಪ್ತಿ ಕಾಣಲು ಸಾಧ್ಯವಾಗುತ್ತದೆ ಎಂದು ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸ್ಥಳೀಯ ಘಟಕದಲ್ಲಿ ಚಾಲಕರಾಗಿ ಸೇವೆ ಸಲ್ಲಿಸಿದ ಬಾಬು ಸ್ವಾಮಿ ಚಂದನಹಳ್ಳಿ. ಅವರ ಸೇವಾ ನಿವೃತ್ತಿ ಹಿನ್ನೆಲೆಯಲ್ಲಿ ಬಿರಾದಾರ್ ಕಾಲನಿಯಲ್ಲಿ ಆಯೋಜಿಸಿದ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಪ್ರಯಾಣಿಕರ ಸುರಕ್ಷತೆ ಗಮನದಲ್ಲಿರಿಸಿ 30 ವರ್ಷ ಅಪಘಾತವಿಲ್ಲದೆ ಸಾರ್ಥಕ ಸೇವೆ ಸಲ್ಲಿಸಿರುವುದು ಮಹತ್ವದ ಸಾಧನೆ ಕೊಂಡಾಡಿದರು.

ಇಲಾಖೆಯ ಕಲಬುರಗಿ ಕೇಂದ್ರ ಕಚೇರಿ ಮುಖ್ಯ ಕಾರ್ಮಿಕ ಕಲ್ಯಾಣಾಧಿಕಾರಿ ಸುನೀಲಕುಮಾರ ಚಂದರಗಿ ಮಾತನಾಡಿ, ಚಾಲಕ ವೃತ್ತಿ ಬಹಳ ಜವಾಬ್ದಾರಿಯಿಂದ ಕೂಡಿದ್ದು. ಸದಾ ಜಾಗೃತರಾಗಿ ವಾಹನ ಚಾಲನೆ ಮಾಡಬೇಕಾಗುತ್ತದೆ. ಒಂದು ಕ್ಷಣ ಕಣ್ಮುಚ್ಚಿದರೂ ಅಪಾಯದ ಸಾಧ್ಯತೆ ಹೆಚ್ಚು. ಹೀಗಾಗಿ ಈ ವೃತ್ತಿಯಲ್ಲಿರುವವರು ಚಾಲನೆ ವೇಳೆ ಸದಾ ಜಾಗೃತರಾಗಿರಬೇಕಾಗುತ್ತದೆ ಎಂದರು.

ಬಾಬು ಸ್ವಾಮಿ ಅವರು ಸುದೀರ್ಘ 30 ವರ್ಷ ಅಪಘಾತಗಳಿಲ್ಲದೆ ಎಚ್ಚರಿಕೆಯಿಂದ ವಾಹನ ಚಲಾಯಿಸಿ ಪ್ರಯಾಣಿಕರನ್ನು ಸುರಕ್ಷಿತವಾಗಿ ತಲುಪಿಸಿದ್ದಾರೆ. ಈ ಸಾಧನೆಗಾಗಿ ಇಲಾಖೆಯಿಂದ ಅಪಘಾತ ರಹಿತ ಚಾಲಕ ಎಂಬ ಬಿರುದಿನೊಂದಿಗೆ ಬೆಳ್ಳಿ ಪದಕ ಪಡೆದು ಸನ್ಮಾನಿತರಾಗಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಲಬುರಗಿ ಕೇಂದ್ರ ಕಚೇರಿಯ ವಿಭಾಗೀಯ ಸಂಚಾರಾಧಿಕಾರಿ ಬಸವಲಿಂಗಪ್ಪ ಬಿ.ಡಿ.ಮಾತನಾಡಿ, ಬಾಬು ಸ್ವಾಮಿ ಅವರ ಸೇವೆಯನ್ನು ಕೊಂಡಾಡಿದರು.

ಸನ್ಮಾನ ಸ್ವೀಕರಿಸಿದ ಬಾಬು ಸ್ವಾಮಿ ಮಾತನಾಡಿ, 30 ವರ್ಷ ಸಲ್ಲಿಸಿದ ಸೇವೆ ತೃಪ್ತಿ ತಂದಿದೆ. ಸೇವಾವಧಿಯಲ್ಲಿ ಸಹಕರಿಸಿದ ಎಲ್ಲ ಅಧಿಕಾರಿಗಳು ಹಾಗೂ ಸಹದ್ಯೋಗಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ಹುಮನಾಬಾದ್ ಟಿಐ ಸೋಮಶೇಖರ ಸ್ವಾಮಿ, ಹುಮನಾಬಾದ್ ಘಟಕ ವ್ಯವಸ್ಥಾಪಕ ಪ್ರಫುಲ್ ಮಠ, ನಿಯಂತ್ರಕರಾದ ಸಂಗಪ್ಪ, ಬಾಬುರಾವ, ಪ್ರಮುಖರಾದ ವಿಜಯಕುಮಾರ ಹೇಮಾ, ಬಸವರಾಜ ಪಾಟೀಲ್, ಜಗದೀಶ ಟಿ.ಸಿ, ಮಾಳಪ್ಪ, ನಾಗಪ್ಪ, ಪಂಚಾಕ್ಷರ ಸ್ವಾಮಿ ಬೋಳೆಗಾಂವ, ಸಿದ್ರಾಮಪ್ಪ ಗುದಗೆ ಹಾರಕೂಡ, ಮಲ್ಲಿಕಾರ್ಜುನ ಸ್ವಾಮಿ, ರಾಚಯ್ಯ ಸ್ವಾಮಿ, ಸುರೇಶ ಚಕುರ್ತೆ ಗೋರ್ಟಾ, ಶಿವರಾಜ ಮಠಪತಿ, ಕಾಶೀನಾಥ ಸ್ವಾಮಿ ಉದಗೀರ, ಶರಣಯ್ಯ ಸ್ವಾಮಿ ಚಂದನಹಳ್ಳಿ, ಕಲ್ಲಯ್ಯ ಸ್ವಾಮಿ ಸೋಲಾಪುರ ಉಪಸ್ಥಿತರಿದ್ದರು.

ಶಿಕ್ಷಣ ಸಂಯೋಜಕ ರಮೇಶ ರಾಜೋಳೆ ನಿರೂಪಿಸಿದರು. ಪ್ರೊ.ರುದ್ರೇಶ್ವರ ಗೋರ್ಟಾ ವಂದಿಸಿದರು. ಕುಮಾರಿ ಭುವನೇಶ್ವರಿ ಬಾಬುಸ್ವಾಮಿ ವಚನ ಗಾಯನ ಮಾಡಿದರು. ಕಾರ್ಯಕ್ರಮದಲ್ಲಿ ಬಾಬು ಸ್ವಾಮಿ ಅವರಿಗೆ ಇಲಾಖೆ ಸಿಬ್ಬಂದಿಯಿಂದ ಸನ್ಮಾನಿಸಲಾಯಿತು. ತ್ರಿಪುರಾಂತ ಗವಿಮಠ ಟ್ರಸ್ಟಿನಿಂದ ಶ್ರೀಗಳು ಬಾಬು ಸ್ವಾಮಿ ಹಾಗೂ ಸತ್ಯವತಿ ದಂಪತಿಗೆ ಸನ್ಮಾನಿಸಿ ಆಶೀರ್ವದಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI

ಶುಕ್ರವಾರ
8 ಜನವರಿ 2016
8 JANUARY 2016

ಬಸವಕಲ್ಯಾಣ ಪುಣ್ಯಕೋಟಿ ಕಾಲೇಜಿನಲ್ಲಿ ರಂಭಾಪುರಿ ಜಗದ್ಗುರುಗಳ 60ನೇ ಜನ್ಮದಿನೋತ್ಸವ ಕಾರ್ಯಕ್ರಮ

# ಶಿಕ್ಷಣದೊಂದಿಗೆ ಮಕ್ಕಳಿಗೆ ಸಿಗಲಿ ಸಂಸ್ಕಾರ

**ಬಸವಕಲ್ಯಾಣ:** ಶಿಕ್ಷಣದೊಂದಿಗೆ ಮಕ್ಕಳಿಗೆ ಧಾರ್ಮಿಕ ಸಂಸ್ಕಾರ ನೀಡಬೇಕಿದೆ ಎಂದು ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಪುಣ್ಯಕೋಟಿ ಕಾಲೇಜಿನಲ್ಲಿ ರಂಭಾಪುರಿ ಜಗದ್ಗುರುಗಳ 60ನೇ ಜನ್ಮದಿನೋತ್ಸವ ನಿಮಿತ್ತ ಆಯೋಜಿಸಿದ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ವೀರಶೈವ ಧರ್ಮ ಪತಾಕೆ ಹಾರಿಸಿ ಆಚಾರ್ಯ ತತ್ವವನ್ನು ಗಟ್ಟಿಗೊಳಿಸಿದ ಬಾಳೆಹೊನ್ನೂರು ಶ್ರೀ ವೀರಸೋಮೇಶ್ವರ ರಂಭಾಪುರಿ ಜಗದ್ಗುರುಗಳು ಶ್ರೀಪೀಠದ ಮಹಾಚೇತನ ಎಂದು ಬಣ್ಣಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರೊ.ಸೂರ್ಯಕಾಂತ ಶೀಲವಂತ ಮಾತನಾಡಿ, ವಿದ್ಯಾರ್ಥಿಗಳಿಗೆ ಸದ್ಗುರುವಿನ ಮಾರ್ಗದರ್ಶನ ಪಡೆಯುವ ಆಸಕ್ತಿ ಇರಬೇಕು. ಗುರುವಿನ ಮಾರ್ಗದರ್ಶನದಲ್ಲಿ ಮುನ್ನಡೆದರೆ ಗುರಿ ಮುಟ್ಟಲು ಸುಲಭ ಸಾಧ್ಯ ಎಂದರು.

ಸಂಸ್ಥೆ ನಿರ್ದೇಶಕ ಚಂದ್ರಕಾಂತ ಶೀಲವಂತ, ಸುರೇಖಾ ಶೀಲವಂತ ಉಪಸ್ಥಿತರಿದ್ದರು. ಸಂಸ್ಥೆ ಕಾರ್ಯದರ್ಶಿ ಉಮಾಕಾಂತ ಶೀಲವಂತ ಸ್ವಾಗತಿಸಿದರು. ಕೋಶಾಧ್ಯಕ್ಷ ಶಶಿಕಾಂತ ಶೀಲವಂತ ಪ್ರಾಸ್ತಾವಿಕ ಮಾತನಾಡಿದರು. ಕಲ್ಪನಾ ಚುಡೆ ನಿರೂಪಿಸಿದರು. ಆನಂದ ಚಾಕುರೆ ವಂದಿಸಿದರು.



ಬಸವಕಲ್ಯಾಣದ ಪುಣ್ಯಕೋಟಿ ಕಾಲೇಜಿನಲ್ಲಿ ಏರ್ಪಡಿಸಿದ ರಂಭಾಪುರಿ ಜಗದ್ಗುರುಗಳ ಜನ್ಮದಿನೋತ್ಸವದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇತರರಿದ್ದರು.

Scanned with CamScanner

## ಶ್ರೀ ಬನಶಂಕರಿ ಜಾತ್ರಾ ಮಹೋತ್ಸವಕ್ಕೆ ಚಾಲನೆ

**ಬಸವಕಲ್ಯಾಣ:** ಶ್ರೀ ಬನಶಂಕರಿ ದೇವಸ್ಥಾನ ಪಂಚ ಕಮಿಟಿಯಿಂದ ಇಲ್ಲಿಯ ಶ್ರೀ ಬನಶಂಕರಿ ಗಲ್ಲಿಯಲ್ಲಿರುವ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಜ.23ರ ವರೆಗೆ ನಡೆಯಲಿರುವ ಶ್ರೀ ಬನಶಂಕರಿ ದೇವಿ 37ನೇ ಜಾತ್ರಾ ಮಹೋತ್ಸವಕ್ಕೆ ಭಾನುವಾರ ಚಾಲನೆ ನೀಡಲಾಯಿತು. ಬೆಳಗ್ಗೆ ದೇವಸ್ಥಾನದಲ್ಲಿ ವಿಶೇಷ ಪೂಜೆ, ಶ್ರೀ ಬನಶಂಕರಿ ದೇವಿ ಅಮೃತ ಶೀಲಾ ಮೂರ್ತಿಗೆ ಅಭಿಷೇಕ ನೆರವೇರಿಸಿಸಲಾಯಿತು. ಬೆಳಗ್ಗೆ ಸಸ್ತಾಪುರದ ಶ್ರೀ ಸದಾನಂದ ಅಪ್ಪಗಳು ಧ್ವಜಾರೋಹಣ ನೆರವೇರಿಸಿದರು. ಸಂಜೆ ಪ್ರವಚನ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ದೇವಸ್ಥಾನದಲ್ಲಿ 21ರ ವರೆಗೆ ಪ್ರತಿ ನಿತ್ಯ ಸಂಜೆ ನಡೆಯಲಿರುವ ಪ್ರವಚನ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಮನಸ್ಸು ಪರಿಶುದ್ಧಗೊಳಿಸಲು ಪುರಾಣ-ಪ್ರವಚನಗಳು ಅವಶ್ಯಕ. ಜಾತ್ರೆ ನಿಮಿತ್ತ ಪ್ರವಚನ ಆಯೋಜಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. 21ರಂದು ಬೆಳಗ್ಗೆ 10ಕ್ಕೆ ಕುಂಕುಮಾರ್ಚನೆ, ರಾತ್ರಿ 7ಕ್ಕೆ ಪ್ರವಚನ ಮಂಗಲ ಕಾರ್ಯಕ್ರಮ, 22ರಂದು ಬೆಳಗ್ಗೆ 7ಕ್ಕೆ ಕುಂಭ ಮೇಳ, ಸಂಜೆ ದೇವಸ್ಥಾನದಲ್ಲಿ ತೊಟ್ಟಿಲ ಕಾರ್ಯಕ್ರಮ, ರಾತ್ರಿ 8ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ. 23ರಂದು ಸಂಜೆ ನಗರದ ಪ್ರಮುಖ ರಸ್ತೆ ಮೂಲಕ ಪಲ್ಲಕ್ಕಿ ಮೆರವಣಿಗೆ ನಡೆದ ನಂತರ ರಾತ್ರಿ 10ಕ್ಕೆ ರಥೋತ್ಸವ ಜರುಗಲಿದೆ.



ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಗುರುವಾರ
21 ಜನವರಿ 2016
21 JANUARY 2016

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಬೀದರ್ ಲೋಕಲ್ ಎಕ್ಸ್‌ಪ್ರೆಸ್
ಶನಿವಾರ
26 ಡಿಸೆಂಬರ್ 2015
26 DECEMBER 2015

### ಬಸವಕಲ್ಯಾಣ ತಾಲೂಕಿನ ಬೆಟಬಾಲಕುಂದಾದಲ್ಲಿ ದತ್ತ ಜಯಂತ್ಯುತ್ಸವ ಸಂಭ್ರಮ

## ಭಕ್ತಿ ಮಾರ್ಗದಲ್ಲಿ ನಡೆದಾಗ ಮಾತ್ರ ಬದುಕಿನಲ್ಲಿ ನೆಮ್ಮದಿ

**ಬಸವಕಲ್ಯಾಣ:** ಭಕ್ತಿ ಮಾರ್ಗದಲ್ಲಿ ನಡೆದಾಗ ಮಾತ್ರ ಬದುಕಿನಲ್ಲಿ ಶಾಂತಿ, ನೆಮ್ಮದಿ, ಸಾರ್ಥಕತೆ ಕಾಣಲು ಸಾಧ್ಯವಾಗುತ್ತದೆ ಎಂದು ಬೆಳಗಾವಿ ಜಿಲ್ಲೆಯ ಹುಣಶ್ಯಾಳದ ಶ್ರೀ ನಿಜಗುಣ ದೇವರು ನುಡಿದರು.

ಬೆಟಬಾಲಕುಂದಾ ಗ್ರಾಮ ಹೊರವಯದ ಶ್ರೀ ದತ್ತಾತ್ರೇಯ ಮಂದಿರದಲ್ಲಿ ಶ್ರೀ ದತ್ತ ಜಯಂತ್ಯುತ್ಸವ ನಿಮಿತ್ತ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪರಮಾತ್ಮನಲ್ಲಿ ಭಕ್ತಿ-ಶ್ರದ್ಧೆ ಅವಶ್ಯಕ. ಎಲ್ಲವೂ ಪರಮಾತ್ಮನಿಂದಲೇ ನಡೆಯುತ್ತದೆ. ಎಲ್ಲಕ್ಕೂ ಪರಮಾತ್ಮನ ಕೃಪೆ ಬೇಕು ಎಂದರು.

ಸಮ್ಮುಖ ವಹಿಸಿದ್ದ ಗಡಿಗೌಡಗಾಂವ್‌ನ ಶ್ರೀ ಶಾಂತವೀರ ಶಿವಾಚಾರ್ಯರು ಮಾತನಾಡಿ, ಜೀವನದಲ್ಲಿ ಮಾರ್ಗ ತೋರುವ ಗುರು ಬೇಕು. ಗುರುವಿಗಿಂತ ದೊಡ್ಡವರು ಯಾರೂ ಇಲ್ಲ. ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ನಿವಾರಿಸಿ ಬದುಕಿಗೆ ಬೆಳಕು ತುಂಬುವ ಶಕ್ತಿ ಗುರುವಿನಲ್ಲಿದೆ. ಗುರು ಸೇವೆಯಿಂದ ನೆಮ್ಮದಿ ಬದುಕು ಕಾಣಲು ಸಾಧ್ಯ ಎಂದರು.

ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ನಂಬಿಕೆಯಿಂದ ಬರುವ ಭಕ್ತರಿಗೆ ಮಾರ್ಗದರ್ಶನ ತೋರುವ ಗುರುಗಳಿಗೆ ಯಾವುದೆ ಆಸ್ತಿ-ಐಶ್ವರ್ಯ ಬೇಕಿಲ್ಲ. ಗುರು ತೋರಿದ ಮಾರ್ಗದರ್ಶನದಲ್ಲಿ ನಡೆಯುವುದು ಎಲ್ಲರ ಧರ್ಮವಾಗಿದೆ ಎಂದರು.



**ಬೆಟಬಾಲಕುಂದಾದಲ್ಲಿ ನಡೆದ ಶ್ರೀ ದತ್ತ ಜಯಂತ್ಯುತ್ಸವದಲ್ಲಿ ಶ್ರೀ ಗಣಪತಿ ಮಹಾರಾಜ ಮಾತನಾಡಿದರು. ಶ್ರೀ ಸದಾನಂದ ಅಪ್ಪಗಳು, ಶ್ರೀ ನಿಜಗುಣ ದೇವರು, ಶ್ರೀ ಶಾಂತವೀರ ಸ್ವಾಮೀಜಿ, ಶ್ರೀ ಅಭಿನವ ಘನಲಿಂಗ ರುದ್ರಮುನಿ, ಶ್ರೀ ಬಸವರಾಜ ಮಹಾರಾಜ ಇತರರಿದ್ದರು.**

ಬೀದರ್‌ನ ಶ್ರೀ ಗಣಪತಿ ಮಹಾರಾಜ ಮಾತನಾಡಿ, ಮನಶಾಂತಿಗಾಗಿ ದೇವ ಸ್ಮರಣೆ ಅಗತ್ಯ. ಪರಮಾತ್ಮನ ಪೂಜೆ, ಧ್ಯಾನ, ಸ್ಮರಣೆಯಿಂದ ಮನಸ್ಸು ಪರಿಶುದ್ಧವಾಗಲಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಸಸ್ತಾಪುರದ ಶ್ರೀ ಸದಾನಂದ ಅಪ್ಪಗಳು ಆಶೀರ್ವಚನ ನೀಡಿ, ಧರ್ಮ-ಅಧ್ಯಾತ್ಮದ ಮಾರ್ಗದಲ್ಲಿ ನಡೆದು ಬದುಕಿನಲ್ಲಿ ಸಾರ್ಥಕತೆ ಕಂಡುಕೊಳ್ಳಲು ಗುರು ಮಾರ್ಗದರ್ಶನ ಅವಶ್ಯಕವಾಗಿದೆ ಎಂದು ನುಡಿದರು.

ಬೆಟಬಾಲಕುಂದಾ ದತ್ತಾತ್ರೆಯ ಮಂದಿರದ ಶ್ರೀ ಬಸವರಾಜ ಮಹಾರಾಜ ನೇತೃತ್ವ ವಹಿಸಿದ್ದರು. ಸುಭಾಷ ಮಂಠಾಳೆ, ಅಂಬಾರಾಯ ಸೈದಾಪುರೆ, ಶಿವಾಜಿ ಪಾಟೀಲ್ ಇತರರಿದ್ದರು.

ಶ್ರೀ ಬಸವರಾಜ ಮಹಾರಾಜ ನೇತೃತ್ವದಲ್ಲಿ ಶ್ರೀ ದತ್ತಾತ್ರೆಯ ಅಮೃತಶಿಲಾ ಮೂರ್ತಿಗೆ ಮಹಾ ರುದ್ರಾಭೀಷೇಕ ಹಾಗೂ ಗಣ್ಯರು, ದಾನಿಗಳಿಗೆ ಸನ್ಮಾನ ಕಾರ್ಯಕ್ರಮ ಜರುಗಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ
11 ಜನವರಿ 2016
11 JANUARY 2016



ಬಾಳೆಹೊನ್ನೂರು ಶ್ರೀ ವೀರಸೋಮೇಶ್ವರ ರಂಭಾಪುರಿ ಜಗದ್ಗುರುಗಳ 60ನೇ ಜನ್ಮ ದಿನ ನಿಮಿತ್ತ ಬಸವಕಲ್ಯಾಣದ ತ್ರಿಪುರಾಂತ ಗವಿ ಮಠದಲ್ಲಿ ನುಡಿನಮನ ಸಲ್ಲಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಸ್ವಾಮೀಜಿ, ಶರಣಪ್ಪ ಬಿರಾದಾರ, ದಯಾನಂದ ಶೀಲವಂತ, ಬಸವಂತಪ್ಪ ಲವಾರೆ, ಎಂ.ಕೆ.ನಂದಿ ಇತರರಿದ್ದರು.

Scanned with CamScanner

# 'ಗುರಿ, ಗುರುವಿದ್ದರೆ ಜೀವನ ಯಶಸ್ಸು'

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣ ತಾಲ್ಲೂಕಿನ ಬೆಟಬಾಲ್ಕುಂದಾ ಗ್ರಾಮದಲ್ಲಿ ಗುರುವಾರ ದತ್ತ ಜಯಂತಿ ಅಂಗವಾಗಿ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಹುಣಸ್ಯಾಳ ನಿಜಗುಣದೇವರು ಮಾತನಾಡಿದರು

ಬಸವಕಲ್ಯಾಣ: ಗುರಿ ಮತ್ತು ಗುರುವಿನ ಮಾರ್ಗದರ್ಶನವಿದ್ದರೆ ಜೀವನದಲ್ಲಿ ಯಶಸ್ಸು ಖಚಿತ ಎಂದು ಬೆಳಗಾವಿ ಜಿಲ್ಲೆ ಹುಣಸ್ಯಾಳದ ನಿಜಗುಣದೇವರು ನುಡಿದರು.

ತಾಲ್ಲೂಕಿನ ಬೆಟಬಾಲ್ಕುಂದಾ ಗ್ರಾಮದ ದತ್ತ ಮಂದಿರದಲ್ಲಿ ಗುರುವಾರ ಜಯಂತಿ ಅಂಗವಾಗಿ ಆಯೋಜಿಸಿದ್ದ ಧರ್ಮಸಭೆ, ಸಾಮೂಹಿಕ ವಿವಾಹ ಮತ್ತು ತುಲಾಭಾರ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಣವಿಲ್ಲದ್ದರೆ ನಡೆಯುತ್ತದೆ. ಆದರೆ ಗುರು ಇಲ್ಲದಿದ್ದರೆ ಬದುಕು ನಿರರ್ಥಕ. ಸಿದ್ದಯ್ಯ ಪುರಾಣಿಕ ಅವರು ಏನೆಲ್ಲವನ್ನು ಬಿಟ್ಟರೂ ಗುರಿ ಮತ್ತು ಗುರುವನ್ನು ಬಿಡಬಾರದು ಎಂದು ಹೇಳಿದ್ದಾರೆ. ಹೀಗಾಗಿ ಗುರುವಿನ ಮಹತ್ವ ಬಹಳಷ್ಟಿದೆ. ಗುರುವಿನ ಕೃಪೆಗೆ ಪಾತ್ರರಾದರೆ ಮಾತ್ರ ಜೀವನದಲ್ಲಿ ಏನೆಲ್ಲವನ್ನು ಸಾಧಿಸ ಬಹುದು. ದತ್ತಾತ್ರೇಯನನ್ನು ಗುರು ಎನ್ನಲಾಗುತ್ತದೆ. ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ರೂಪವೇ ದತ್ತಾತ್ರೇಯ. ಗುರುಗಳಾದ ಸಿದ್ದಲಿಂಗ ಯತಿರಾಜರು ಕೂಡ ದತ್ತಾತ್ರೇಯನ ಭಕ್ತರು ಎಂದರು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಪ್ರವಚನ ಕೇಳುವುದರಿಂದ ಮತ್ತು ಸತ್ಸಂಗದಿಂದ ಗುರುನಿಷ್ಠೆ ಬೆಳೆಯುತ್ತದೆ. ಕಷ್ಟದಲ್ಲಿದ್ದವರಿಗೆ ಸುಖಿ ಜೀವನದ ಮಾರ್ಗ ದೊರಕುತ್ತದೆ ಎಂದು ಹೇಳಿದರು.

ಗಡಿಗೌಡಗಾಂವ ಶಾಂತವೀರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಗುರುವಿನಲ್ಲಿ ಜ್ಞಾನವಿರಬೇಕು. ರೂಪ, ದರ್ಪ, ಧನ, ಮಠದ ಆಸ್ತಿ ನೋಡಿ ಗುರು ಮಾಡಿಕೊಳ್ಳಬಾರದು. ಜ್ಞಾನ ಮತ್ತು ಅರಿವಿನ ಧಾರೆ ಎರೆಯುವವರಿಗೆ ಗುರುವೆಂದು ಪೂಜಿಸಬೇಕು ಎಂದರು.

ಸಸ್ತಾಪುರ ಸದಾನಂದ ಅಪ್ಪಗಳು, ಬೀದರ ಗಣೇಶಾನಂದ ಮಹಾರಾಜ ಮಾತನಾಡಿದರು. ಸಂಸ್ಥಾನದ ಪ್ರಮುಖ ಬಸವರಾಜ ಮಹಾರಾಜ ನೇತೃತ್ವ ವಹಿಸಿದ್ದರು. ಹುಣಸ್ಯಾಳ ನಿಜಗುಣದೇವರನ್ನು ನಾಣ್ಯಗಳಿಂದ ತುಲಾಭಾರ ನಡೆಸಲಾಯಿತು. ಎರಡು ಜೋಡಿ ವಿವಾಹ ನಡೆಸಲಾಯಿತು. ಶರಣೆ ಪ್ರಭಾವತಿತಾಯಿ, ಜಗದೇವಿ ಮಂಠಾಳೆ, ಶಿವಾಜಿರಾವ ಪಾಟೀಲ, ಸುಭಾಷ ಮಂಠಾಳೆ ಇದ್ದರು. ದಿಲೀಪಕುಮಾರ ದೇಸಾಯಿ, ವಿಠಲ್ ಪೂಜಾರಿ ಅವರಿಂದ ಸಂಗೀತ ಪ್ರಸ್ತುತಪಡಿಸಲಾಯಿತು. ಶಿಕ್ಷಕ ಅಂಬಾರಾಯ ಸೈದಾಪುರೆ ನಿರೂಪಿಸಿದರು

ಪ್ರಜಾವಾಣಿ ಶುಕ್ರವಾರ • ಡಿಸೆಂಬರ್ 25, 2015

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಮಂಗಳವಾರ 12 ಜನವರಿ 2016
12 JANUARY 2016



ಬಸವಕಲ್ಯಾಣ ತಾಲೂಕಿನ ತ್ರಿಪುರಾಂತದಲ್ಲಿ ಶ್ರೀ ಮಡಿವಾಳ ಮಾಚಿದೇವ ಜಾತ್ರೆ ನಿಮಿತ್ತ ಆಯೋಜಿಸಿದ ಪ್ರವಚನ ಕಾರ್ಯಕ್ರಮವನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಶ್ರೀ ಶಂಭುಲಿಂಗ ಶಾಸ್ತ್ರಿ, ಬಸಲಿಂಗಪ್ಪ ರಾಜೋಳೆ, ಬಸವರಾಜ ಮಾಳಿ, ಬಕ್ಕಯ್ಯ ಸ್ವಾಮಿ ಉಪಸ್ಥಿತರಿದ್ದರು.



ಬಸವಕಲ್ಯಾಣದ ತ್ರಿಪುರಾಂತನಲ್ಲಿ ಶ್ರೀ ಮಡಿವಾಳ ಮಾಚಿದೇವರ ಜಾತ್ರಾಮಹೋತ್ಸವ ನಿಮಿತ್ತ ನಡೆಯುತ್ತಿರುವ ಕಾರ್ಯಕ್ರಮದಲ್ಲಿ 2016ರ ದಿನದರ್ಶಿಕೆ ಶ್ರೀ ಜಯಶಾಂತಲಿಂಗ ಮಹಾಸ್ವಾಮೀಜಿ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬಿಡುಗಡೆ ಮಾಡಿದರು. ಮುಖಂಡ ಸುನೀಲ ಪಾಟೀಲ್, ಶಂಬುಲಿಂಗ ಶಾಸ್ತ್ರೀ, ಬಸಲಿಂಗಪ್ಪ ರಾಜೋಳೆ, ಬಸವರಾಜ ಮಾಳಿ, ಬಕ್ಕಯ್ಯ ಸ್ವಾಮಿ, ಮಡಿವಾಳಯ್ಯ ಮಠಪತಿ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
ಸೋಮವಾರ 18 ಜನವರಿ 2016
18 JANUARY 2016

Scanned with CamScanner

# ಅಭ್ಯಾಸದ ಜತೆಗೆ ವ್ಯವಹಾರ ಜ್ಞಾನ ಅಗತ್ಯ



ಬಸವಕಲ್ಯಾಣ ನಗರದ ಎಸ್ ಎಸ್‌ಕೆ ಬಸವೇಶ್ವರ ಮಹಾವಿದ್ಯಾಲಯದಲ್ಲಿ ನಡೆದ ರಾಷ್ಟ್ರೀಯ ಯುವ ದಿನ ಹಾಗೂ ಸಪ್ತಾಹದ ನಿಮಿತ್ತ ದೇಹ ದೃಢತೆ ದಿನಾಚರಣೆ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಚಾರ್ಯರು ಮಾತನಾಡಿದರು.

**ವಿಕ ಸುದ್ದಿಲೋಕ** ಬಸವಕಲ್ಯಾಣ

ಇಂದಿನ ಯುವಕರಿಗೆ ಅಭ್ಯಾಸದ ಜತೆಗೆ ವ್ಯವಹಾರದ ಜ್ಞಾನ ಅಗತ್ಯವಿದೆ ಎಂದು ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಎಸ್‌ಎಸ್‌ಕೆ ಬಸವೇಶ್ವರ ಮಹಾ ವಿದ್ಯಾಲಯದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ, ಭಾರತ ಯೂಥ್ ವೆಲ್ಫೇರ್ ಎಜುಕೇಶನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ, ಸ್ವಾಮಿ ವಿವೇಕಾನಂದ ಯುವ ಶಕ್ತಿ ಕೇಂದ್ರ ಕಾಳಸರ ತೂಗಾಂವ್ ಹಾಗೂ ಬುದ್ಧ ಬಸವ ಅಂಬೇಡ್ಕರ್ ಯುವಕ ಸಂಘ ಬೀದರ್ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಸ್ವಾಮಿ ವಿವೇಕಾನಂದರ 153ನೇ ಜಯಂತ್ಯುತ್ಸವ ಅಂಗವಾಗಿ ರಾಷ್ಟ್ರೀಯ ಯುವ ದಿನ ಹಾಗೂ ಸಪ್ತಾಹದ ನಿಮಿತ್ತ ದೇಹ ಧೃಢತೆ ದಿನಾಚರಣೆ ಕಾರ್ಯಕ್ರಮದಲ್ಲಿ ಸಾನ್ನಿಧ್ಯವಹಿಸಿ ಮಾತನಾಡಿದರು.

ಗುರು ಇಲ್ಲದ ಜೀವನ ರೆಕ್ಕೆಯಿಲ್ಲದ ಹಕ್ಕಿಯಂತೆ, ನಾಥ ಇಲ್ಲದ ಪುಷ್ಪದಂತೆ. ಒಳ್ಳೆಯ ವಿಚಾರ ಅರಿತರೆ ಎಲ್ಲವೂ ಗೊತ್ತಾಗುತ್ತದೆ. ಭವ ಸಾಗರ ದಾಟಲು ಹಿಂದೆ ಗುರು,ಮುಂದೆ ಗುರಿ ಇರಬೇಕು. ದೇಶದ ಮಹಾನ್ ದಾರ್ಶನಿಕರ, ಮಹಾತ್ಮರ ಚರಿತ್ರೆಗಳನ್ನು ತಿಳಿದುಕೊಂಡು ಅನುಸರಿಸಿ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಎಸ್. ಆರ್ ಘಟಪ್ಪನದಿಮಾತನಾಡಿ, ವಿವೇಕಾನಂದರು ಮೊದಲು ನಡೆದು ನಂತರ ನುಡಿದವರಾಗಿದ್ದರು. ಆದರೆ, ಇಂದು ನುಡಿದಂತೆ ನಡೆಯದೆ, ಬೇರಾವುದೋ ಮಾರ್ಗದಲ್ಲಿ ಸಂಚರಿಸಿ ಗುರಿಯಿಲ್ಲದ ಜೀವನ ಸಾಗಿಸುತ್ತಿರುವುದು ಖೇದಕರ ಸಂಗತಿ ಎಂದರು.

ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಹಾಗೂ ಬುದ್ಧ ಬಸವ ಅಂಬೇಡ್ಕರ ಯುವಕ ಸಂಘದ ಅಧ್ಯಕ್ಷ ಮಹೇಶ್ ಗೊರನಾಳಕರ್ ಮಾತನಾಡಿ, ಯುವ ಜನರು ಮನಸ್ಸು ಮಾಡಿದ್ರೆ ಏನೆಲ್ಲ ಸಾಧಿಸಬಹುದು. ಆದರೆ, ಅದಕ್ಕಾಗಿ ಪ್ರಯತ್ನ ಅತ್ಯವಶ್ಯಕವಾಗಿದೆ ಎಂದರು.

ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಹಾಗೂ ಸ್ವಾಮಿ ವಿವೇಕಾನಂದ ಯುವಶಕ್ತಿ ಕೇಂದ್ರದ ಅಧ್ಯಕ್ಷ ಶಿವಕುಮಾರ ಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಾಜೇಂದ್ರ ಗೋಖಲೆ, ಪತ್ರಕರ್ತ ಮಲ್ಲಿಕಾರ್ಜುನ್ ಬಂಡೆ, ಪಿಯು ಹಾಗೂ ವೃತ್ತಿ ಶಿಕ್ಷಣ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ್ ಕಾಡಾದಿ ಮಹಾವಿದ್ಯಾಲಯದ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಸ್ಥಳೀಯ ಯುವ ಜನರು ಪಾಲ್ಗೊಂಡಿದ್ದರು.

ಸ್ಥಳಿಯ ಎನ್.ಎಸ್.ಎಸ್ ಅಧಿಕಾರಿ ಬಸವರಾಜ ಬೀಳಗಿ ಸ್ವಾಗತಿಸಿದರು. ಉಪನ್ಯಾಸಕಿ ಲೀಲಾ.ಜಿ. ಸನಕನಳ್ಳಿ ನಿರೂಪಿಸಿದರು. ಕಲ್ಯಾಣಪ್ಪ ನವದಗಿ ವಂದಿಸಿದರು.

ಬುಧವಾರ,20 ಜನವರಿ 2016, ಕಲಬುರಗಿ
ವಿಜಯ ಕರ್ನಾಟಕ VK

## ಯುವ ನಾಯಕತ್ವ ತರಬೇತಿ ಶಿಬಿರದಲ್ಲಿ ಮಠಪತಿ ಸಲಹೆ

# ಯೋಜನೆಗಳ ವೈಫಲ್ಯ ತಡೆಯಲು ಶ್ರಮಿಸಿ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದಲ್ಲಿ ಬುಧವಾರ ನಡೆದ ಯುವ ನಾಯಕತ್ವ ತರಬೇತಿ ಶಿಬಿರದಲ್ಲಿ ಉಪನ್ಯಾಸಕ ಶಾಂತಲಿಂಗ ಮಠಪತಿ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಭಾಗವಹಿಸಿದ್ದರು

**ಮುಖ್ಯಾಂಶಗಳು**

- ಮೂರು ದಿನಗಳ ತರಬೇತಿ ಶಿಬಿರಕ್ಕೆ ಚಾಲನೆ
- 40 ಯುವಕರಿಗೆ ನಾಯಕತ್ವ ತರಬೇತಿ
- ಸಮಾಜ ಕಾರ್ಯ ಕೈಗೊಳ್ಳಲು ಸಲಹೆ

ಬಸವಕಲ್ಯಾಣ: ಯುವ ಜನತೆ ಸರ್ಕಾರಿ ಯೋಜನೆಗಳ ವೈಫಲ್ಯ ತಡೆಗೆ ಪ್ರಯತ್ನಿಸಬೇಕು. ಗ್ರಾಮ ಮತ್ತು ಪರಿಸರದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಉಪನ್ಯಾಸಕ ಶಾಂತಲಿಂಗ ಮಠಪತಿ ಹೇಳಿದರು.

ಇಲ್ಲಿನ ನೆಹರು ಯುವ ಕೇಂದ್ರ ಮತ್ತು ಗುರುಲಿಂಗೇಶ್ವರ ಗ್ರಾಮೀಣಾಭಿವೃದ್ಧಿ ಸಂಘದ ಆಶ್ರಯದಲ್ಲಿ ಬುಧವಾರ ಆಯೋಜಿಸಿದ್ದ ತಾಲ್ಲೂಕು ಮಟ್ಟದ ಯುವ ನಾಯಕತ್ವ ತರಬೇತಿ ಹಾಗೂ ಸಮುದಾಯ ಅಭಿವೃದ್ಧಿ ತರಬೇತಿ ಶಿಬಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಹೆಚ್ಚಿನ ಕೃಷಿಹೊಂಡ, ಚೆಕ್ ಡ್ಯಾಂ ನಿರ್ಮಿಸಲಾಗಿದೆ. ಅವುಗಳನ್ನು ಸರಿಯಾಗಿ ನಿರ್ಮಿಸದ ಕಾರಣ ನೀರು ಜಮೀನಿನಲ್ಲಿ ನಿಲ್ಲದೆ ಅಂತರ್ಜಲ ಮಟ್ಟ ಕುಸಿದಿದೆ. ಕೊಳವೆ ಬಾವಿಯನ್ನು 800 ಅಡಿ ಆಳದವರೆಗೆ ಕೊರೆದರೂ ನೀರು ದೊರೆಯುತ್ತಿಲ್ಲ. ಇದಕ್ಕೆಲ್ಲ ಯೋಜನೆ ವೈಫಲ್ಯವೇ ಕಾರಣ ಎಂದರು.

ಕಳಪೆ ಕಾಮಗಾರಿಯಿಂದ ಯೋಜನೆಗಳು ವಿಫಲವಾಗುತ್ತಿವೆ. ಉತ್ತಮ ಕಾರ್ಯ ಮಾಡಲು ಮುಜುಗರ ಬೇಡ. ಯಾರಿಗೂ ಅನ್ಯಾಯ ಆಗುವುದನ್ನು ಯಾರೂ ಸಹಿಸಬಾರದು ಎಂದರು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಯುವಕರು ಪರೀಕ್ಷೆಯಲ್ಲಿ ನಕಲು ಮಾಡಿ ಉತ್ತೀರ್ಣರಾಗಬಾರದು. ಅನ್ಯರ ಮೇಲೆ ಅವಲಂಬಿತರಾದರೆ ಜೀವನದಲ್ಲಿ ನೆಮ್ಮದಿ ದೊರಕುವುದು ಕಷ್ಟ ಎಂದರು.

ವಿದ್ಯಾರ್ಥಿಗಳಾದವರು ಸತತವಾಗಿ ಅಧ್ಯಯನ ನಡೆಸಿ ಪರೀಕ್ಷೆಯಲ್ಲಿ ಅಧಿಕ ಅಂಕಗಳನ್ನು ಪಡೆದು ಉತ್ತೀರ್ಣರಾಗಬೇಕು. ಮಾತು ಕಡಿಮೆ, ಕೆಲಸ ಜಾಸ್ತಿಯಾದರೆ ಜೀವನದಲ್ಲಿ ಯಶಸ್ಸು ಸಾಧ್ಯವಾಗುತ್ತದೆ ಎಂದು ಹೇಳಿದರು.

ರವಿ ನಾಗೀನಕೆರೆ ಮಾತನಾಡಿ, ಸ್ವಸಾಮರ್ಥ್ಯದ ಮೇಲೆ ಭರವಸೆ ಇರಬೇಕು. ಪ್ರತಿಯೊಬ್ಬರಲ್ಲಿಯೂ ಶಕ್ತಿ ಇದೆ. ಅಪಾರ ಸಾಮರ್ಥ್ಯ ಇದೆ. ಆದರೆ ಸಾಧಿಸುವ ಛಲ ಮತ್ತು ಧೈರ್ಯ ಇರಬೇಕು. ಸಾಧನೆಯ ಹಾದಿಯಲ್ಲಿ ಸಾಕಷ್ಟು ಕಷ್ಟ ಬಂದರೂ ಅದನ್ನು ಎದುರಿಸಿ ಮುನ್ನುಗ್ಗಬೇಕು ಎಂದರು.

ಜಿಲ್ಲಾ ಪಂಚಾಯಿತಿ ಸದಸ್ಯೆ ನಿರ್ಮಲಾ ವೈಜನಾಥ ಮಾನಿಗೋಪಾಳೆ ಉದ್ಘಾಟಿಸಿದರು. ನರಸಿಂಹರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ಡಾ.ಸಂಗಮೇಶ ಚಂದನಕೇರೆ, ಧನರಾಜ ರಾಜೋಳೆ, ಚನ್ನಪ್ಪ ಪಾಟೀಲ ಪಾಲ್ಗೊಂಡಿದ್ದರು. ಅಂಬಿಕಾ ಸ್ವಾಗತಿಸಿದರು. ಬಂಡೆಪ್ಪ ಮಾಳಿ ನಿರೂಪಿಸಿದರು.

ಬುಧವಾರದ ಹವಾಮಾನ : ಗರಿಷ್ಠ 37° ಕನಿಷ್ಠ 22° ಪ್ರಜಾವಾಣಿ

Scanned with CamScanner

## ತಡೋಳಾದಲ್ಲಿ ಸಂಭ್ರಮದ ಸಾಂಸ್ಕೃತಿಕ ಕಾರ್ಯಕ್ರಮ

# ಪರಕೀಯ ಅನುಕರಣೆಯಿಂದ ದೇಶಿಕಲೆಗೆ ಧಕ್ಕೆ



ಬಸವಕಲ್ಯಾಣ ತಾಲೂಕಿನ ತಡೋಳಾ ಶ್ರೀ ಶಿವಯೋಗಿ ಸಿದ್ದವೀರ ಸ್ವಾಮಿ ಗುರುಕುಲ ಶಾಲೆಯಲ್ಲಿ ಆಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮ ಉದ್ಯಮಿ ವೀರಶೆಟ್ಟಿ ಮಣಗೆ ಉದ್ಘಾಟಿಸಿದರು.



ಬೇಬಾವತಿ ಹಾಗೂ ಸಂಗಡಿಗರು ಬೀಸುವ ಹಾಗೂ ಕುಟ್ಟುವ ಪದಗಳನ್ನು ಹಾಡಿದರು.

**ವಿಕ ಸುದ್ದಿಲೋಕ** ಬಸವಕಲ್ಯಾಣ ಗ್ರಾಮೀಣ

ಪರಕೀಯ ರಾಷ್ಟ್ರಗಳ ಅನುಕರಣೆ ಮಾಡುವುದರಿಂದ ದೇಶಿ ಕಲೆ, ಸಂಸ್ಕೃತಿ ನಾಶವಾಗುತ್ತಿದೆ ಎಂದು ಉದ್ಯಮಿ ವೀರಶೆಟ್ಟಿ ಮಣಗೆ ಅಭಿಪ್ರಾಯಪಟ್ಟರು.

ತಾಲೂಕಿನ ತಡೋಳಾ ಗ್ರಾಮದ ಶ್ರೀ ಶಿವಯೋಗಿ ಸಿದ್ದವೀರ ಸ್ವಾಮಿ ಗುರುಕುಲ ಶಾಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ವಿಶ್ವ ಶಾಂತಿ ಟ್ರಸ್ಟ್ ತಡೋಳಾ ಸಹಯೋಗದಲ್ಲಿ ಆಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜನಪದ ಗೀತೆಗಳ ಬಗ್ಗೆ ವಿಸ್ತಾರವಾಗಿ ತಿಳಿಸಿ ಕನ್ನಡ ಕಲೆಯನ್ನು ರಕ್ಷಿಸಲು ಎಲ್ಲರೂ ಪ್ರಯತ್ನಿಸಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತಾನಾಡಿ, ಇಂತಹ ಕಾರ್ಯಕ್ರಮಗಳು ಪದೆಪದೇ ನಡೆಯು ವುದು ಅತಿ ಅವಶ್ಯಕವಿದೆ. ನಮ್ಮ ಹಿರಿಯರ ಜೀವನ ಮಾರ್ಗದಲ್ಲಿ ಎಲ್ಲರೂ ನಡೆಯುವ ಅಗತ್ಯವಿದೆ ಎಂದರು.

ಬಸವತೀರ್ಥ ವಿದ್ಯಾಪೀಠ ಅಧ್ಯಕ್ಷ ಕೇಶವರಾವ ತಳಘಟಕರ ಸಾಂಸ್ಕೃತಿಯ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕು. ಜನಪದದಿಂದ ದೂರವಿದ್ದರೆ ಆರೋಗ್ಯಕ್ಕೂ ಮಾರಕ ಎಂದು ಎಚ್ಚರಿಸಿದರು.

ಅಧ್ಯಕ್ಷರಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಮಾತನಾಡಿ, ಜನಪದ ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಜೀವಂತವಾಗಿದೆ. ಕಲೆ, ಸಂಗೀತ, ಸಂಸ್ಕೃತಿ ಕಾಣ ಸಿಗುತ್ತದೆ. ನಗರ ಪ್ರದೇಶದಲ್ಲಿ ಸಂಸ್ಕೃತಿ ನಶಿಸುತ್ತಿದೆ. ಜನ ಆಧುನಿಕರಣ ಬಲಿ ಪಶುಗಳಾಗಿ ನಮ್ಮ ಸಂಸ್ಕೃತಿಯನ್ನು ಮರೆಯುತ್ತಿದ್ದಾರೆ ಎಂದರು.

ಬಸವರಾಜ ಸ್ವಾಮಿ, ಪುನೀತ ಸಾಳೆ, ಶಿವಾನಂದ ಸ್ವಾಮಿ, ಭಾಗವಹಿಸಿ ಕನ್ನಡ ಮತ್ತು ಸಂಸ್ಕೃತಿ ಕುರಿತು ಮಾತನಾಡಿದರು. ವಿಶ್ವಾರಾಧ್ಯ ಅಗ್ರಹಾರ ಸ್ವಾಗತಿಸಿದರು. ಪ್ರಕಾಶ ಮೆಡೋಳೆ ಪ್ರಾಸ್ತಾವಿಕ ಮಾತನಾಡಿದರು. ಪ್ರಕಾಶ ಕುಮಾರ ಸಂಗೋಳಗಿ ವಂದಿಸಿದರು. ರಾಜಕುಮಾರ ನಿರೂಪಿಸಿದರು.

ಜಿಲ್ಲೆಯ ಕಲಾವಿಧರಾದ ರಘುನಾಥ ಹಡಪದ ಚಿಟ್ಟಾ ಹಾಗೂ ಸಂಗಡಿಗರಿಂದ ತತ್ವಪದ, ಬಾಬುರಾವ ಪಾಟೀಲ ಹಾಗೂ ಸಂಗಡಿಗರು ಭಜನೆ, ಚಂದ್ರಪ್ಪ ಮಲ್ಲಾಕಾಮರ ಹಾಗೂ ಸಂಗಡಿಗರು ಹಂತಿಪದ, ಶೇಶಪ್ಪ ದೊಡ್ಡಿ ಮತ್ತು ದೇವಿದಾಸ ಚಿಮಕೋಡ ರಂಗ ಗೀತೆ, ಬೇಬಾವತಿ ಹಾಗೂ ಸಂಗಡಿಗರು, ಬೀಸುವ ಹಾಗು ಕುಟ್ಟುವ, ಮಲ್ಲಯ್ಯ ಚಿಕ್ಕಮಠ ಹಾಗೂ ಸಂಗಡಿರು ವಚನ ಗಾಯನ, ಬಸವೇಶ್ವರ ಕಲಾತಂಡ ಬೇಲೂರ ಜನಪದ ಗಾಯನ, ಅಶೋಕ ಕುಮಾರ ಸಂಗೊಳಗಿ ಹಾಗೂ ಸಂಗಡಿಗರು ಭಾವಗೀತೆ, ಸುಬದ್ರಮ್ಮಾ ಹಾಗೂ ಸಂಗಡಿಗರು ತಡೋಳಾ ಭಜನೆ, ಭುವನೇಶ್ವರಿ ಗುರುಶಾಂತ ಹಾಗೂ ಸಂಗಡಿಗರು ಜನಪದ ಗಾಯನ ನಡೆಸಿಕೊಟ್ಟರು.

ಗುರುಶಾಂತ ಹಿರೇಮಠ, ಬಾಬುರಾವ ಯರನಳ್ಳಿ, ಶಿವಾಜಿರಾವ ಪಾಟೀಲ, ಮರುಳಾರಾಧ್ಯ ಅಗ್ರಹಾರ, ಲೋಕೇಶ ಮರಕಲ್, ಮಲ್ಲಿಕಾರ್ಜುನ, ರಂಜೀತ, ನಿಂಗರಾಜ, ಸಂಗಮೇಶ ಪಾಟೀಲ, ಓಂಕಾರ ವಿಶ್ವನಾಥಮಠ, ಲೋಹಿತ, ಪ್ರದೀಪ ಶಾಲಾ ಮಕ್ಕಳು ಹಾಗೂ ಸುತ್ತಮುತ್ತಲಿನ ಗ್ರಾಮದ ಜನರು ಉಪಸ್ಥಿತರಿದ್ದರು.

ವಿಜಯ ಕರ್ನಾಟಕ
13 ಮಾರ್ಚ್ 2016, ಕಲಬುರಗಿ

Scanned with CamScanner

### ಬಸವಕಲ್ಯಾಣದ ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆಯಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನ

# ವಿದ್ಯಾರ್ಥಿಗಳಲ್ಲಿರಲಿ ಸಮಯ ಪ್ರಜ್ಞೆ



ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯಲ್ಲಿ ಆಯೋಜಿಸಿದ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿಯರ ಬೀಳ್ಕೊಡುಗೆ ಕಾರ್ಯಕ್ರಮವನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು.

ಬಸವಕಲ್ಯಾಣ: ಸಮಯ ಪ್ರಜ್ಞೆ, ಏಕಾಗ್ರತೆ, ಕಠಿಣ ಪರಿಶ್ರಮದ ಮೂಲಕ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ ಎಂದು ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಇಲ್ಲಿನ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯಲ್ಲಿ ಆಯೋಜಿಸಿದ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿಯರ ಬೀಳ್ಕೊಡುಗೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶ್ರೀಗಳು, ಬಡ-ಹಿಂದುಳಿದ ಮಕ್ಕಳ ಶೈಕ್ಷಣಿಕ ಪ್ರಗತಿಯ ಆಶಯದೊಂದಿದೆ ಆರಂಭವಾಗಿರುವ ಈ ವಸತಿ ಶಾಲೆಗೆ ಕಳೆದ ಎರಡು ವರ್ಷ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಏಕಲೂರ ಸರ್ಕಾರಿ ಪ್ರೌಢ ಶಾಲೆ ಮುಖ್ಯಗುರು ಸೂರ್ಯಕಾಂತ ಪಾಟೀಲ್ ಪರೀಕ್ಷಾ ಸಿದ್ಧತೆ ಕುರಿತು ವಿಶೇಷ ಉಪನ್ಯಾಸ ನೀಡಿ, ಪರೀಕ್ಷೆಯ ಬಗ್ಗೆ ಯಾವುದೇ ರೀತಿಯ ಹೆದರಿಕೆ ಬೇಡ, ಯಾವುದೇ ಸಂಶಯಗಳಿದ್ದರೆ ಶಿಕ್ಷಕರ ಮಾರ್ಗದರ್ಶನ ಪಡೆಯಬೇಕು. ಏಕಾಗ್ರತೆಯಿಂದ ಅಭ್ಯಾಸ ಮಾಡಬೇಕು. ಓದಿರುವುದನ್ನು ಪುನರ್ ಮನನ ಮಾಡಿಕೊಳ್ಳಬೇಕು. ನಿರ್ಭಯವಾಗಿ ಆತ್ಮಸ್ಥೈರ್ಯದಿಂದ ಪರೀಕ್ಷೆ ಬರೆಯಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ ಪ್ರಾಚಾರ್ಯ ಶಾಂತಯ್ಯ ಮಠಪತಿ ಮಾತನಾಡಿ, ಪೋಷಕರು, ಅಧಿಕಾರಿ ವರ್ಗಗಳ, ಶಿಕ್ಷಣ ಚಿಂತಕರ ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ವಸತಿ ಶಾಲೆಯು ಕಾರ್ಯೋನ್ಮುಖವಾಗಿದೆ. ಬಡ ಮತ್ತು ಹಿಂದುಳಿದ ಮಕ್ಕಳ ಶ್ರೇಯಾಭಿವೃದ್ಧಿಗಾಗಿ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ತಮ್ಮ ಸಹಕಾರ ಸದಾ ಇರಲಿ ಎಂದು ಮನವಿ ಮಾಡಿದರು. ತಾಲೂಕು ಸಮನ್ವಯಾಧಿಕಾರಿ ಶರಣಬಸಪ್ಪ ದಂಡೆ, ಪ್ರಮುಖರಾದ, ಅನೀಲ ಕಾಂಬಳೆ, ನಾರಾಯಣ ಹೊನ್ನಾಳಿ, ಸುಭಾಷ ಮಂಠಾಳೆ, ಮುರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾಚಾರ್ಯ ಕಲ್ಲಪ್ಪ ಠಮಕೆ. ಹುಲಸೂರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾಚಾರ್ಯ ಮಹೇಶ ಬೆಲ್ದಾರ, ಪಾಲಕರ ಪ್ರತಿನಿಧಿ ಬಳಿರಾಮ ಜಾಧವ್ ಭಾಗವಹಿಸಿದ್ದರು

ನಿಲಯಪಾಲಕ ಅಶೋಕ ಸಂಗೋಳಗಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ದಿಗಂಬರ ಕಿವಡೆ ವಂದಿಸಿದರು. ರಾಘವೇಂದ್ರ ಹಣಕುಣಿ ವರದಿ ವಾಚನ ಮಾಡಿದರು. ಚಂದ್ರಕಾಂತ ಪಾವಡಶೆಟ್ಟಿ ನಿರೂಪಿಸಿದರು. ಇದೇ ವೇಳೆ 2013-14, 2014-15ನೇ ಸಾಲಿನಲ್ಲಿ ಅತಿ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI

ಶುಕ್ರವಾರ
4 ಮಾರ್ಚ್ 2016
4 MARCH 2016

# ಶಿಕ್ಷಣದಿಂದ ಸಮಾಜದ ಅಭಿವೃದ್ಧಿ ಸಾಧ್ಯ



ಬೇಲೂರ ಗ್ರಾಮದ ಸರ್ವೋದಯ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು.

**ವಿಕ ಸುದ್ದಿಲೋಕ** ಹುಲಸೂರು

ಸಮಾಜದಲ್ಲಿ ಶಿಕ್ಷಣ ಕಲಿತ ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ವಿ ಸಾಧಿಸಲು ಸಾಧ್ಯ. ಯಾರೂ ಶಿಕ್ಷಣದಿಂದ ವಂಚಿತರಾಗಬಾರದು ಎಂದು ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ 'ರುದ್ರಮುನಿ ಶಿವಾಚಾರ್ಯರು ಹೇಳಿದರು.

ಸಮೀಪದ ಬೇಲೂರ ಗ್ರಾಮದ ಸರ್ವೋದಯ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಸಾನ್ನಿಧ್ಯವಹಿಸಿ.

ಶಾಲೆಬಿಟ್ಟ ಮಕ್ಕಳನ್ನು ಗುರುತಿಸಿ ಅವರ ಮನವಲಿಸಿ ಶಾಲೆಗೆ ದಾಖಲಿಸಬೇಕು ಎಂದು ಹೇಳಿದರು.

ಸಿಆರ್‌ಪಿ ಜಾಕಿರ ಹುಸೇನ ಮಾತನಾಡಿ, ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದರು. ಶಿಕ್ಷಣ ಸಂಯೋಜಕ ರವಿ ಬಿರಾದಾರ ಮಾತನಾಡಿದರು. ಮಹಾನಂದಾ ಗುಂಗೆ ಪ್ರಾಸ್ತಾವಿಕ ಮಾತನಾಡಿದರು.

ತಾಪಂ ಸದಸ್ಯ ಸಿದ್ರಾಮ ಕಾಮಣ್ಣ ವಿಜಯಕಯಮಾರ ಬಿರಾದಾರ, ಪ್ರಕಾಶ ಮೆಂಡೊಳೆ, ರವೀಂದ್ರಗುಂಗೆ, ಅಶೋಕವಕಾರೆ, ಕಾಶಪ್ಪಾಸಾಯಗಾಂವೆ, ಓಂಕಾರ ಚಿಲ್ಲಾಬಟ್ಟೆ, ಮಲ್ಲಿಕಾರ್ಜುನ ಕಾಮಣ್ಣ, ರವೀಂದ್ರ ಚಿಲ್ಲಾಬಟ್ಟೆ, ಸಂಜುಕುಮಾರ ಭರಮಣೆ, ವಿಠಲ್ ಪಂಚಾಳ, ಹಣಮಂತ ಮಾಶೆಟ್ಟೆ, ಓಂಕಾರ ಹಳಂಬರೆ, ಸಿದ್ರಾಮ ಹಲಿಂಗೆ, ಶಿವರುದ್ರ ವಾಲೆ, ಹುಲೆಪ್ಪ ರಾಜೋಳೆ ಹಾಜರಿದ್ದರು.

ವಿಜಯ ಕರ್ನಾಟಕ VK
ಗುರುವಾರ, 17 ಮಾರ್ಚ್ 2016

Scanned with CamScanner

## ಶ್ರಾವಣ ಸಂದೇಶ

### ಅಧ್ಯಾತ್ಮದಿಂದ ನೆಮ್ಮದಿ



ಶ್ರಾವಣ ಮಾಸ ಬಂತೆಂದರೆ ಸಾಕು ಎಲ್ಲರಿಗೂ ಆನಂದದ ಹಬ್ಬ, ಶ್ರಾವಣಕ್ಕೆ ಚಾಲನೆ ದೊರೆತಂತೆ ಪ್ರಕೃತಿ ಮಡಿಲಲ್ಲಿ ಬಾಡಿಹೋದ ಗಿಡ ಮರಗಳು ಸೇರಿದಂತೆ ಬತ್ತಿಹೋದ ಹಳ್ಳ, ನದಿ, ತೊರೆಗಳು ಮಳೆಯಿಂದ ತುಂಬಿ ತುಳುಕುತ್ತವೆ. ಮಠ, ಮಂದಿರಗಳಿಗೆ ತೆರಳಿ ಪೂಜ್ಯರ ದರ್ಶನ ಆಶೀರ್ವಾದ ಪಡೆದು ಈ ಶ್ರಾವಣ ಮಾಸದಲ್ಲಿ ಸೃಷ್ಟಿಕರ್ತನ ನೆನೆಯುವುದು, ಪರಮಾತ್ಮನ ಸಾಕ್ಷಾತ್ಕಾರ ಮಾಡುವುದು ಇದೇ ದಿನಗಳಲ್ಲಿ. ಪೂಜೆ, ಜಪ, ತಪ, ಅನುಷ್ಠಾನ, ಪುರಾಣ, ಪ್ರವಚನ ಮಾಡುವುದು ಮತ್ತು ಕೇಳುವುದು ಶ್ರಾವಣ ಮಾಸವಾಗಿದೆ.

ಶ್ರವಣಂ ಕೀರ್ತನಂ ಶಂಭೋ ಸ್ಮರಣಂ ಪಾದ ಸೇವನಂ ಆರ್ಚನಂ ವಂದನಂ ದಾಶ್ಯಂ ಸಖ್ಯಂ ಆತ್ಮನೆ ವೇದನಂ ಎನ್ನುವ ಹಾಗೆ ಭಕ್ತರಿಗೆ ಒಂಭತ್ತು ಭಕ್ತಿಗಳಿವೆ. ಆದುನಿಕ ಕಾಲದಲ್ಲಿ ಮನುಷ್ಯನಿಗೆ ನೆಮ್ಮದಿ, ಶಾಂತಿ, ಸುಖ ಸಿಗಬೇಕಾದರೆ ಧರ್ಮ ಮತ್ತು ಅಧ್ಯಾತ್ಮದಿಂದ ಮಾತ್ರ ಸಾಧ್ಯ.

ಸಿಹಿಕಹಿಗಳ ಸಂಗಮ ಜೀವನದ ಸಂವರ್ಧನೆಗೆ ಕಾರಣ ಕರ್ತವ್ಯದ ಕಾಲು ದಾರಿ ಕೀರ್ತಿಯ ಹೆದ್ದಾರಿಯಾಗಬಲ್ಲದು. ಫಲವಿತ್ತ ಬಾಳೆಯಂತೆ ಬಾಗಿ ನಡೆ, ತೆನೆ ಹೊತ್ತ ದಂಟಿನಂತೆ ವಿದೇಯನಾಗಿರು. ಧರ್ಮ ಮತ್ತು ಗುರು ಸಾನ್ನಿಧ್ಯದಲ್ಲಿ ಮನುಷ್ಯನ ಮನದ ಮಲಿನತೆ ದೂರವಾಗಲಿ. ಬಾಳಿನಲ್ಲಿ ಬೆಳಕು ತುಂಬಿ ಬರಲಿ. ಅದಕ್ಕಾಗಿಯೇ ಎಲ್ಲ ಧರ್ಮಗಳ ಮೂಲ ಗುರಿ ಮಾನವ ಕಲ್ಯಾಣವಾಗಿದೆಯೇ ಹೊರತು ಮತ್ತೊಂದಲ್ಲ.

– ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು
ಗವಿ ಮಠ ತ್ರಿಪುರಾಂತ ಬಸವಕಲ್ಯಾಣ

ವಿಜಯ ಕರ್ನಾಟಕ
ಗುರುವಾರ,3 ಆಗಸ್ಟ್ 2017

# ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ: ಅಭಿನವ ಶ್ರೀ



ಬಸವಕಲ್ಯಾಣ ಗುರು ಮಹಾಲಿಂಗೇಶ್ವರ ಶಾಲೆಯ ವಾರ್ಷಿಕೋತ್ಸವದಲ್ಲಿ ಶಿಕ್ಷಣ ಸಂಯೋಜಕ ರವೀಂದ್ರ ಬಿರಾದಾರ ಉದ್ಘಾಟಿಸಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸುನೀಲ ಪಾಟೀಲ, ಸಂಸ್ಥೆಯ ಅಧ್ಯಕ್ಷ ಸವಿತಾ ಇತರರಿದ್ದರು.

**ವಿಕ ಸುದ್ದಿಲೋಕ** ಬಸವಕಲ್ಯಾಣ

ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ನೀಡುವ ಶಾಲೆಗಳು ನಿಜವಾದ ಜ್ಞಾನ ಮಂದಿರ ಎಂದು ತ್ರೀಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಗುರು ಮಹಾಲಿಂಗೇಶ್ವರ ಶಾಲೆಯ ವಾರ್ಷಿಕೋತ್ಸವದಲ್ಲಿ ಮಾತನಾಡಿ, ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವೂ ಅವಶ್ಯವಿದೆ. ಒಳ್ಳೆಯ ಸಂಸ್ಕಾರ ನೀಡುತ್ತಿರುವ ಆಡಳಿತ ಮಂಡಳಿಯ ಅಧ್ಯಕ್ಷರ ಸೇವೆಯನ್ನು ಕೊಂಡಾಡಿದರು.

ಶಿಕ್ಷಣ ಸಂಯೋಜಕ ರವೀಂದ್ರ ಬಿರಾದಾರ ಕಾರ್ಯಕ್ರಮ ಉದ್ಘಾಟಿಸಿ, ಮಕ್ಕಳ ಹಕ್ಕು ಕಾಯಿದೆ ಮತ್ತು ಜ್ಞಾನದ ಮಹತ್ವ ಕುರಿತು ಪೋಷಕರಿಗೆ ಮನವರಿಕೆ ಮಾಡಿಕೊಟ್ಟರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಉದ್ಯಮಿ ಸುನೀಲ ಎಂ. ಪಾಟೀಲ ಮಾತನಾಡಿ, ಇಂದಿನ ದಿನಗಳಲ್ಲಿ ಮಕ್ಕಳಲ್ಲಿ ದೇಶ ಪ್ರೇಮದ ಜೊತೆಗೆ ಭಕ್ತಿ ಗುಣ ಮೂಡಿಸುವುದು ಅವಶ್ಯವಿದೆ. ಆ ನಿಟ್ಟಿನಲ್ಲಿ ಶಿಕ್ಷಕರು ಕಾರ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಶರಣಪ್ಪ ಮಹಾಜನ ಬೋಬಿನ ಮಾತನಾಡಿದರು. ಗೀತಾ ಶಿವರಾಜ ಪಾಟೀಲ, ಸುಭದ್ರಾಬಾಯಿ ವೀರಯ್ಯಾ ಸ್ವಾಮಿ, ಪಾರ್ವತಮ್ಮ ರೋಜಾ ಹಾಗೂ ಸಂಸ್ಥೆಯ ಅಧ್ಯಕ್ಷರಾದ ಸವಿತಾ ರಮೇಶ ಸ್ವಾಮಿ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಕಲೆ, ಸಾಹಿತ್ಯ ಕುರಿತು ಸಾಂಸ್ಕೃತಿಕ ಕಾರ್ಯಕ್ರಮಗಳು ರಂಜಿಸಿದವು.

ಸಂಸ್ಥೆಗೆ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸಂಗೀತಾ ಸುನೀಲ ಪಾಟೀಲ, ವೀಜಯಲಕ್ಷ್ಮಿ ರಜೋಳೆ, ಡಾ. ಜ್ಯೋತಿ ಖಂಡ್ರೆ, ಕೀರ್ತಿ ಪಾಟೀಲ, ಛತ್ರಪ್ಪಾ ಪಾಟೀಲ, ಶಿವರಾಜ ಪಾಟೀಲ, ಪಾರ್ವತಿ ಪಾಟೀಲ, ಇತರರು ಇದ್ದರು. ಶಿಕ್ಷಕ ರಮೇಶ ರಾಜೋಳೆ ನಿರೂಪಿಸಿ, ವಂದಿಸಿದರು.

ವಿಜಯ ಕರ್ನಾಟಕ ಭಾನುವಾರ,28 ಫೆಬ್ರವರಿ 2016, ಕಲಬುರಗಿ

Scanned with CamScanner

# ಅಭಿನವ ಘನಲಿಂಗಶ್ರೀ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣ ತಾಲ್ಲೂಕಿನ ಜಾಫರವಾಡಿಯಲ್ಲಿ ಅಭಿನವ ಘನಲಿಂಗಶ್ರೀ ಪ್ರಶಸ್ತಿಗೆ ಭಾಜನರಾದ ಮಹಾರಾಜಪ್ಪ ಮುಳೆ ಅವರಿಗೆ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಸನ್ಮಾನಿಸಿ ಆಹ್ವಾನಪತ್ರ ನೀಡಿದರು

**ಬಸವಕಲ್ಯಾಣ:** ತಾಲ್ಲೂಕಿನ ಜಾಫರವಾಡಿಯ ಹಿರಿಯರಾದ ಮಹಾರಾಜಪ್ಪ ಮುಳೆ ಅವರಿಗೆ ಇಲ್ಲಿನ ಘನಲಿಂಗ ರುದ್ರಮುನಿ ಗವಿಮಠದಿಂದ ಕೊಡಮಾಡುವ ಪ್ರಸಕ್ತ ಸಾಲಿನ ಅಭಿನವ ಘನಲಿಂಗಶ್ರೀ ಪ್ರಶಸ್ತಿ ಘೋಷಿಸಲಾಗಿದೆ.

ಇವರು ಸಾಮಾಜಿಕ, ಶೈಕ್ಷಣಿಕ ಕಾರ್ಯ ಕೈಗೊಂಡವರಾಗಿದ್ದಾರೆ. ಆದ್ದರಿಂದ ಪ್ರಶಸ್ತಿ ನೀಡಲಾಗಿದೆ.

ಪ್ರಶಸ್ತಿಯು ₹ 5 ಸಾವಿರ ನಗದು ಮತ್ತು ಫಲಕ ಒಳಗೊಂಡಿರುತ್ತದೆ. ಈ ಹಿಂದೆ ನಾಲ್ವರಿಗೆ ಪ್ರಶಸ್ತಿ ನೀಡಲಾಗಿದೆ.

ಮಾರ್ಚ್ 21 ರಂದು ನಡೆಯುವ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಮಹಾರಾಜಪ್ಪಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಮಾಜಿ ಶಾಸಕ ಎಂ.ಜಿ.ಮುಳೆ ಪ್ರಶಸ್ತಿ ದಾನಿಗಳಾಗಿದ್ದಾರೆ ಎಂದು ಗವಿಮಠದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಶುಕ್ರವಾರ ಮಠಾಧೀಶರಾದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿಯವರು ಮಹಾರಾಜಪ್ಪ ಅವರ ಮನೆಗೆ ಹೋಗಿ ಅವರನ್ನು ಸನ್ಮಾನಿಸಿ ಆಹ್ವಾನಪತ್ರ ಕೊಟ್ಟರು.

ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ, ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ರಮೇಶ ಸ್ವಾಮಿ, ರೇವಣಸಿದ್ದಪ್ಪ ಪಾಟೀಲ, ನಿಜಲಿಂಗ ಮುಳೆ ಇದ್ದರು.

ಶನಿವಾರ • ಮಾರ್ಚ್ 12, 2016 ಪ್ರಜಾವಾಣಿ

# ಸಂಸ್ಕೃತಿ ಉಳಿಸಿ ಬೆಳೆಸಿ



ಬಸವಕಲ್ಯಾಣದ ಕಲಾನಿಕೇತನದಲ್ಲಿ ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ 22ನೇ ಕಲಾ ಮಹೋತ್ಸವವನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ ಚನ್ನಶೆಟ್ಟಿ ಉದ್ಘಾಟಿಸಿದರು.

**» ಶ್ರೀ ಬಸವೇಶ್ವರ ಚಿತ್ರ ಕಲಾ ಮಹಾವಿದ್ಯಾಲಯದ 22ನೇ ಕಲಾ ಮಹೋತ್ಸವ ಉದ್ಘಾಟಿಸಿದ ಕಸಾಪ ಅಧ್ಯಕ್ಷ ಚನ್ನಶೆಟ್ಟಿ**

**ಬಸವಕಲ್ಯಾಣ:** ಕಲೆ ಮತ್ತು ಸಾಹಿತ್ಯ ಸಾಂಸ್ಕೃತಿಕವಾಗಿ ಎರಡು ಕಣ್ಣುಗಳಿದ್ದಂತೆ. ಇವುಗಳನ್ನು ಜೋಪಾನವಾಗಿ ಕಾಪಾಡಿಕೊಂಡು ಉಳಿಸಿ ಬೆಳೆಸುವ ಕಾರ್ಯ ಎಲ್ಲರಿಂದಲೂ ನಡೆಯಬೇಕಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ ಚನ್ನಶೆಟ್ಟಿ ಹೇಳಿದರು.

ನಗರದ ಕಲಾನಿಕೇತನದಲ್ಲಿ ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯದ 22ನೇ ಕಲಾ ಮಹೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಅಕ್ಷರಗಳಿಗಿಂತ ಚಿತ್ರಕಲೆ ಪ್ರಾಚೀನವಾದುದು ಎಂಬುದು ಇತಿಹಾಸದಿಂದ ಕಂಡುಬರುತ್ತದೆ. ದೇಶದ ಸಂಸ್ಕೃತಿ ಮತ್ತು ಇತಿಹಾಸವನ್ನು ಕಲೆ ಬಿಂಬಿಸುತ್ತ ಬಂದಿದೆ. ಮುಂಬರುವ ದಿನಗಳಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಚಿತ್ರಸಂತೆ ಆಯೋಜಿಸುವ ಮೂಲಕ ಕಲಾವಿದರಿಗೆ ವೇದಿಕೆ ಕಲ್ಪಿಸಲಾಗುವುದು ಎಂದರು.

ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯ ಬಿ.ಕೆ. ಬಡಗೇರ ಮಾತನಾಡಿ, ಜಿಲ್ಲೆಯಲ್ಲಿ ಪ್ರತಿಭಾವಂತ ಕಲಾವಿದರಿದ್ದಾರೆ. ಆದರೆ ಅವರ ಕೃತಿಗಳನ್ನು ಪ್ರದರ್ಶಿಸಲು ಗ್ಯಾಲರಿಗಳಿಲ್ಲದೆ ತೊಂದರೆಯಾಗುತ್ತಿದೆ ಎಂದು ಹೇಳಿದರು.

ಹುಮನಾಬಾದ್‌ನ ಕರ್ನಾಟಕ ಫೈನ್ ಆರ್ಟ್ ಪರಿಷತ್ ಕಾರ್ಯದರ್ಶಿ ಗುಂಡಪ್ಪ ಟಿ.ದೊಡ್ಡಮನಿ ಮಾತನಾಡಿ, ಮಕ್ಕಳಲ್ಲಿ ಅಡಗಿರುವ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸುವ ಮೂಲಕ ಸೂಕ್ತ ಮಾರ್ಗದರ್ಶನ ನೀಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ ಮಾತನಾಡಿ, ಎರಡು ದಶಕಗಳಿಂದ ಮಹಾವಿದ್ಯಾಲಯ ಗ್ರಾಮೀಣ ಪ್ರದೇಶದ ಬಡ ಮಕ್ಕಳಿಗಾಗಿ ವಿಶೇಷ ರಿಯಾಯಿತಿ ದರದಲ್ಲಿ ಪ್ರವೇಶ ನೀಡುವ ಮೂಲಕ ಶೈಕ್ಷಣಿಕ ಸೇವೆ ಸಲ್ಲಿಸುತ್ತಿದೆ. ಇಲ್ಲಿ ಕಲಿತ ವಿದ್ಯಾರ್ಥಿಗಳು ದೇಶದ ವಿವಿಧೆಡೆ ಉನ್ನತ ಸ್ಥಾನದಲ್ಲಿ ಕೆಲಸ ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಸಾನ್ನಿಧ್ಯ ವಹಿಸಿದ್ದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಸೂರ್ಯಕಾಂತ ಪಾಟೀಲ್, ಕಸಾಪ ತಾಲೂಕಾಧ್ಯಕ್ಷ ರುದ್ರಮುನಿ ಮಠಪತಿ, ಅಂಬಿಕಾ ನಾಗರಾಳೆ, ಬಸವರಾಜ ಬಿರಾದಾರ್, ಶಿವಕುಮಾರ ತಾಂಡೂರ, ವಿಶ್ವನಾಥ ಬನ್ನಸೂಡೆ ಉಪಸ್ಥಿತರಿದ್ದರು.

ಮಲ್ಲಿಕಾರ್ಜುನ ಹಲ್ಲಿಂಗೆ ಸ್ವಾಗತಿಸಿದರು. ಕುಮಾರಿ ಮಾಯದೇವಿ ಮಮ್ಮಾ ವಂದಿಸಿದರು. ಬಸವಲಿಂಗ ಕೆ.ಸುಬೇದಾರ್ ನಿರುಪಿಸಿದರು. ಚಿತ್ರಕಲಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಿದ್ರಾಮಪ್ಪ ಪಾಟೀಲ್, ಕಿಶನ ಪೇಂಟರ್, ಖುರ್ಷೀದ್‌ಮಿಯಾ, ಸಾಹಿತ್ಯ ಕ್ಷೇತ್ರದ ಹಣಮಂತರಾವ ವಿಸಾಜಿ, ಶೈಕ್ಷಣಿಕ ಕ್ಷೇತ್ರದ ಮುರಾರ್ಜಿ ದೇಸಾಯಿ ವಸತಿ ಶಾಲೆ ಶಿಕ್ಷಕ ಶಶಿಧರ ಪಾಟೀಲರಿಗೆ ಗೌರವಿಸಲಾಯಿತು.

ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಎರಡು ದಿನದ ಚಿತ್ರಕಲಾ ಪ್ರದರ್ಶನ ವೀಕ್ಷಿಸಿದ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು. 2015-16ನೇ ಸಾಲಿನ ಆದರ್ಶ ವಿದ್ಯಾರ್ಥಿಗಳಾಗಿ ಆಯ್ಕೆಯಾದ ಪೂಜಾ ಪಟವಾಡಿ ಹಾಗೂ ಬಿರಾದಾರ್ ಸಂಪದಾ ಅವರನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಗುರುವಾರ
17 ಮಾರ್ಚ್ 2016
17 MARCH 2016

Scanned with CamScanner

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ VIJAYAVANI » KALABURAGI | ಶನಿವಾರ 5 ಮಾರ್ಚ್ 2016 5 MARCH 2016

ಬಸವಕಲ್ಯಾಣದಲ್ಲಿ ಡಾ.ಪಂಡಿತ ಪುಟ್ಟರಾಜ ಗವಾಯಿಗಳ ಜನ್ಮ ದಿನೋತ್ಸವ | ರಂಜಿಸಿದ ಸಂಗೀತ, ನೃತ್ಯೋತ್ಸವ

# ಸಂಗೀತಕ್ಕೆ ಭದ್ರ ನೆಲೆ ಕಲ್ಪಿಸಿದ ನೆಲ ಕಲ್ಯಾಣ

**ಬಸವಕಲ್ಯಾಣ:** ಅಂಧ, ಅನಾಥರ ಬಾಳಿಗೆ ಬೆಳಕು ತೋರಿದ ಮಹಾಚೇತನ ಡಾ.ಪಂಡಿತ ಪುಟ್ಟರಾಜ ಗವಾಯಿಗಳು ಎಂದು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಅಕ್ಕಮಹಾದೇವಿ ಕಾಲೇಜು ಮೈದಾನದಲ್ಲಿ ಗುರುವಾರ ಸಂಜೆ ಗಾನಯೋಗಿ ಡಾ.ಪಂಡಿತ ಪುಟ್ಟರಾಜ ಗವಾಯಿಗಳ 102ನೇ ಜನ್ಮ ದಿನೋತ್ಸವ ನಿಮಿತ್ತ ಶಿಷ್ಯ ಬಳಗ ಆಯೋಜಿಸಿದ ಸಂಗೀತ ಸಮ್ಮೇಳನ ಹಾಗೂ ನೃತ್ಯೋತ್ಸವದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಪೂಜ್ಯ ಗವಾಯಿಗಳಿಗೆ ಕಣ್ಣಿಲ್ಲದಿದ್ದರೂ ಅಂತಃಕರಣದ ಆಂತರಿಕ ದೃಷ್ಟಿ ಅವರಲ್ಲಿತ್ತು ಎಂದು ಸ್ಮರಿಸಿದರು.

ಅಂಧರ, ಅನಾಥರ, ಅಂಗವಿಕಲರ ಬದುಕಿನಲ್ಲಿ ಹೊಸ ವಿಶ್ವಾಸ ಮೂಡಿಸಿ ಬೆಳಕು ತೋರಿದ ಪಂಡಿತ ಪುಟ್ಟರಾಜ ಗವಾಯಿಗಳು, ಸಂಗೀತ ಕ್ಷೇತ್ರಕಷ್ಟೇ ಅಲ್ಲ, ಈ ನಾಡು-ನುಡಿ, ದೇಶಕ್ಕೆ ನೀಡಿದ ಕೊಡುಗೆ ಅವಿಸ್ಮರಣೀಯ ಎಂದರು. ಗವಾಯಿಗಳ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸುತ್ತಿರುವ ಶಿಷ್ಯ ಬಳಗದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಗುರುನಾಥ ಗಡ್ಡೆ ಮಾತನಾಡಿ, 12ನೇ ಶತಮಾನದಲ್ಲಿ ಗುರು ಬಸವಣ್ಣನವರ ಸಮಕಾಲೀನದ ಅನೇಕ ಶರಣರು ಶ್ರೇಷ್ಠ ಸಂಗೀತಗಾರರಾಗಿದ್ದರು. ಸಂಗೀತಕ್ಕೆ ಭದ್ರ ನೆಲೆ ಕಲ್ಪಿಸಿದ ಪುಣ್ಯ ಕ್ಷೇತ್ರ ಬಸವಕಲ್ಯಾಣ. ಈ ಪವಿತ್ರ ನೆಲದಲ್ಲಿ ಪಂಡಿತ ಪುಟ್ಟರಾಜ ಗವಾಯಿಗಳ ಜನ್ಮ ದಿನೋತ್ಸವ ನಿಮಿತ್ತ ಸಂಗೀತ ಕಾರ್ಯಕ್ರಮ ಆಯೋಜಿಸಿರುವುದು ಸ್ವಾಗತಾರ್ಹ ಎಂದು ಶ್ಲಾಘಿಸಿದರು.





1) ಡಾ.ಪಂಡಿತ ಪುಟ್ಟರಾಜ ಗವಾಯಿಗಳ ಜನ್ಮ ದಿನ ನಿಮಿತ್ತ ಬಸವಕಲ್ಯಾಣದಲ್ಲಿ ಆಯೋಜಿಸಿದ ಸಂಗೀತ ಸಮ್ಮೇಳನ ಬಿಡಿಪಿಸಿ ಅಧ್ಯಕ್ಷ ವೀರಣ್ಣ ಹಲಶೆಟ್ಟಿ ಉದ್ಘಾಟಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಶಿವಾನಂದ ದೇವರು ಉಪಸ್ಥಿತರಿದ್ದರು. 2) ಶ್ರೀ ಬಸವೇಶ್ವರ ಕನ್ನಡ ಮಾಧ್ಯಮ ಶಾಲೆ ವಿದ್ಯಾರ್ಥಿನಿಯರ ವಚನ ನೃತ್ಯ ನಡೆಸಿಕೊಟ್ಟರು.

ಮನಸ್ಸಿಗೆ ನೆಮ್ಮದಿ ನೀಡುವ ಶಕ್ತಿ ಸಂಗೀತಕ್ಕಿದೆ. ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಸಂಗೀತಕ್ಕೆ ಮಹತ್ವ ನೀಡಬೇಕು. ವಾರಕ್ಕೊಮ್ಮೆ ಸಂಗೀತ ಕಾರ್ಯಕ್ರಮಗಳು ನಡೆಯುವಂತಾಗಬೇಕು. ಅಲ್ಲದೆ ಮಕ್ಕಳಲ್ಲಿ ಸಂಗೀತಾಸಕ್ತಿ ಬೆಳೆಸಲು ಎಲ್ಲರೂ ಕೈ ಜೋಡಿಸಬೇಕು ಎಂದರು.

ಸರ್ಕಾರಿ ನೀಲಾಂಬಿಕಾ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಅಮೃತರಡ್ಡಿ ಮಾತನಾಡಿ, ಡಾ.ಪಂಡಿತ ಪುಟ್ಟರಾಜ ಗವಾಯಿಗಳ ಜೀವನ, ಗಾಯನ,. ಕಾಯಕ ಪವಿತ್ರವಾಗಿತ್ತು. ಅವರು ಇಡೀ ಜೀವನವನ್ನು ಅಂಧ, ಅಂಗವಿಕಲರ ಜೀವನಕ್ಕೆ ಮುಡಿಪಾಗಿಟ್ಟಿದ್ದರು. ಸಹಸ್ರಾರು ಮಕ್ಕಳಿಗೆ ಸಂಗೀತ ಕಲಿಸಿಕೊಟ್ಟಿದ್ದಲ್ಲದೇ ಅವರ ಬಾಳಿಗೆ ಬೆಳಕು ತೋರಿದರು ಎಂದು ಬಣ್ಣಿಸಿದರು. ಬಿಡಿಪಿಸಿ ಅಧ್ಯಕ್ಷ ವೀರಣ್ಣ ಹಲಶೆಟ್ಟೆ ಉದ್ಘಾಟಿಸಿ ಮಾತನಾಡಿದರು. ಅನುಭವ ಮಂಟಪದ ಶ್ರೀ ಶಿವಾನಂದ ದೇವರು ಸಾನ್ನಿಧ್ಯ ವಹಿಸಿದ್ದರು. ಸ್ವಾಗತ ಸಮಿತಿ ಅಧ್ಯಕ್ಷ ಗಿರೀಶ ತಾಂಬೋಳೆ ಅಧ್ಯಕ್ಷತೆ ವಹಿಸಿದ್ದರು. ಎಪಿಎಂಸಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಸಂತೋಷ ಚಪಾತೆ, ಮಾಣಿಕರಾವ ಘೂರಮುಡೆ, ರಾಚಯ್ಯ ಸ್ವಾಮಿ, ಬೆಂಗಳೂರಿನ ಖ್ಯಾತ ಸಂಗೀತ ಕಲಾವಿದ ಮಹೇಶ ಹೇರೂರ ಉಪಸ್ಥಿತರಿದ್ದರು.

ದೇವಿಂದ್ರ ಕಾದೇಪುರೆ ಸ್ವಾಗತಿಸಿದರು. ರೇವಣಸಿದ್ದ ಸುಗರೆ ನಿರೂಪಿಸಿದರು. ರಾಜಕುಮಾರ ಹೂಗಾರ ವಂದಿಸಿದರು.



ಬಸವಕಲ್ಯಾಣದ ಗವಿಮಠದಲ್ಲಿ ನಡೆದ ಶಿವಾನುಭವ ಚಿಂತನ ಕಾರ್ಯಕ್ರಮವನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಶರಣಪ್ಪ ಬಿರಾದಾರ್, ಪ್ರೊ. ಸೂರ್ಯಕಾಂತ ಶೀಲವಂತ, ಪ್ರೊ.ರುದ್ರೇಶ್ವರ ಗೋರಟಾ, ರುದ್ರಮಣಿ ಮಠ ಇದ್ದರು.

Scanned with CamScanner

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಭಾನುವಾರ 13 ಮಾರ್ಚ್ 2016
13 MARCH 2016
4

ಸುದ್ದಿ ಕಾರ್ನರ್

## ಪ್ರತಿ ಗ್ರಾಮಗಳಲ್ಲಿ ನಡೆಯಲಿ ಸಾಂಸ್ಕೃತಿಕ ಉತ್ಸವ



ಬಸವಕಲ್ಯಾಣ ತಾಲೂಕಿನ ತಡೋಳಾದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಸ್ವರ್ಣ ಕನ್‌ಸ್ಟ್ರಕ್ಷನ್ ಇಂಜಿನಿಯರ್ ವಿಠಲಶೆಟ್ಟಿ ಮುಣಗೆ ಉದ್ಘಾಟಿಸಿದರು.

**ಬಸವಕಲ್ಯಾಣ:** ಗ್ರಾಮೀಣ ಪ್ರದೇಶದಲ್ಲಿ ಕಲೆ, ಸಂಸ್ಕೃತಿ ಹಾಗೂ ಸಂಸ್ಕಾರ ಇನ್ನೂ ಜೀವಂತವಾಗಿದ್ದು, ಅದನ್ನು ಉಳಿಸಿ ಬೆಳೆಸಲು ಗ್ರಾಮೀಣ ಭಾಗಗಳಲ್ಲಿ ಸಾಂಸ್ಕೃತಿಕ ಉತ್ಸವಗಳು ನಡೆಯಬೇಕು ಎಂದು ತಡೋಳಾ ಶ್ರೀ ರಾಜೇಶ್ವರ ಶಿವಾಚಾರ್ಯರು ಆಶಯ ವ್ಯಕ್ತಪಡಿಸಿದರು.

ತಾಲೂಕಿನ ತಡೋಳಾ ಗ್ರಾಮದ ಶ್ರೀ ಶಿವಯೋಗಿ ಸಿದ್ಧವೀರ ಸ್ವಾಮಿ ಗುರುಕುಲ ಶಾಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ತಡೋಳಾದ ವಿಶ್ವ ಶಾಂತಿ ಟ್ರಸ್ಟ್ ಆಶ್ರಯದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀಗಳು, ಗ್ರಾಮೀಣ ಪ್ರದೇಶದಲ್ಲಿನ ಕಲೆ ಹಾಗೂ ಕ್ರೀಡೆಗಳು ಉಳಿಸಿ-ಬೆಳೆಸುವ ನಿಟ್ಟಿನಲ್ಲಿ ಸರ್ಕಾರ ಗಮನ ಹರಿಸಬೇಕು ಎಂದರು. ಬಸವ ಶ್ರೀಕರ್ ವಿದ್ಯಾಪೀಠ ಅಧ್ಯಕ್ಷ ಕೇಶವರಾವ ತಳಘಟಕರ, ಬಸವರಾಜ ಸ್ವಾಮಿ, ಪ್ರವೀಣ ಸಾಳೆ, ಶಿವಾನಂದ ಸ್ವಾಮಿ ಮಾತನಾಡಿದರು.

ಸ್ವರ್ಣ ಕನ್‌ಸ್ಟ್ರಕ್ಷನ್ ಇಂಜಿನಿಯರ್ ವಿಠಲಶೆಟ್ಟಿ ಮುಣಗೆ ಉದ್ಘಾಟನೆ ನೆರವೇರಿಸಿದರು. ತ್ರಿಪುರಾಂತ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಗುರುಶಾಂತ ಹಿರೇಮಠ, ಬಾಬುರಾವ ಯರನಳ್ಳೆ, ಶಿವಾಜಿರಾವ ಪಾಟೀಲ್, ಮರುಳಾರಾಧ್ಯ ಅಗ್ರಹಾರ, ಲೋಕೇಶ ಮಠಪತಿ, ಮಲ್ಲಿಕಾರ್ಜುನ, ರಂಜೀತ, ನಿಂಗರಾಜ, ಸಂಗಮೇಶ ಪಾಟೀಲ್, ಓಂಕಾರ ವಿಶ್ವನಾಥಮಠ, ಲೋಕೇಶ, ಪ್ರದೀಪ ಉಪಸ್ಥಿತರಿದ್ದರು. ವಿಶ್ವಾರಾಧ್ಯ ಅಗ್ರಹಾರ ಸ್ವಾಗತಿಸಿದರು. ಪ್ರಕಾಶ ದೊಡ್ಡೆ ಪ್ರಾಸ್ತಾವಿಕ ಮಾತನಾಡಿದರು. ಪ್ರಕಾಶಕುಮಾರ ಸಂಗೊಳಗಿ ವಂದಿಸಿದರು. ರಾಜಕುಮಾರ ನಿರೂಪಿಸಿದರು. ಕಲಾವಿದರಾದ ರಘುನಾಥ ಹಡಪದ ಚಿಟ್ಟಾ ಹಾಗೂ ಸಂಗಡಿಗರು ತತ್ವಪದ, ಬಾಬುರಾವ ಪಾಟೀಲ್ ಹಾಗೂ ಸಂಗಡಿಗರು ಖತಗಾಂವ ಭಜನೆ, ಚಂದ್ರಪ್ಪ ಮಲ್ಲಾಪ್ಪುರ ಹಾಗೂ ಸಂಗಡಿಗರು ಹಂತಿ ಪದ, ಶೇಕಪ್ಪ ದೊಡ್ಡಿ ಮತ್ತು ದೇವಿದಾಸ ಚಿಮಕೋಡ ರಂಗಗೀತೆ, ಚೇಚಾವತಿ ಹಾಗೂ ಸಂಗಡಿಗರು ಬಿಸುವ ಹಾಗೂ ಕುಟ್ಟುವ, ಮಲ್ಲಯ್ಯ ಚಿಕ್ಕಮಠ ಹಾಗೂ ಸಂಗಡಿಗರು ವಚನ ಗಾಯನ, ಬಸವೇಶ್ವರ ಕಲಾತಂಡ ಬೇಲೂರ ಜನಪದ ಗಾಯನ, ಅಶೋಕ ಕುಮಾರ ಸಂಗೊಳಗಿ ಹಾಗೂ ಸಂಗಡಿಗರು ಭಾವಗೀತೆ, ಸುಭದ್ರಮ್ಮಾ ಹಾಗೂ ಸಂಗಡಿಗರು ತಡೋಳಾ ಭಜನೆ, ಭುವನೇಶ್ವರಿ ಗುರುಶಾಂತ ಹಾಗೂ ಸಂಗಡಿಗರು ಜನಪದ ಗಾಯನ ನಡೆಸಿಕೊಟ್ಟರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಶನಿವಾರ 19 ಮಾರ್ಚ್ 2016
19 MARCH 2016

### ಬಸವಕಲ್ಯಾಣದ ವೆಂಕಟೇಶ ಚಿತ್ರ ಮಂದಿರದಲ್ಲಿ ಮಹಾವೀರ ಮಾಚಿದೇವ ಚಲನ ಚಿತ್ರ ಪ್ರದರ್ಶನಕ್ಕೆ ಚಾಲನೆ

# 12ನೇ ಶತಮಾನದ ಕಲ್ಯಾಣ ಕ್ರಾಂತಿಯಾಧರಿತ ಚಿತ್ರ

**ಬಸವಕಲ್ಯಾಣ:** ನಟ ಸಾಯಿಕುಮಾರ ಅಭಿನಯದ ಮಹಾವೀರ ಮಾಚಿದೇವ ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ಬಸವಕಲ್ಯಾಣದ ಶ್ರೀ ವೆಂಕಟೇಶ ಚಿತ್ರಮಂದಿರದಲ್ಲಿ ಶುಕ್ರವಾರ ಬೆಳಗ್ಗೆ ಚಾಲನೆ ನೀಡಲಾಯಿತು.

ನಂದಿ ಕಾಮೇಶ್ವರರೆಡ್ಡಿ ನಿರ್ದೇಶಿಸಿರುವ ಈ ಚಿತ್ರದ ನಿರ್ಮಾಪಕರು ಸಿದ್ದೇಶ್ವರ. ಸಂಗೀತ ಮತ್ತು ಸಾಹಿತ್ಯ ಹಂಸಲೇಖವರದ್ದಾಗಿದೆ. 12ನೇ ಶತಮಾನದಲ್ಲಿ ಶರಣರ ಬಳಗದಲ್ಲಿ ಮಡಿವಾಳ ಮಾಚಿದೇವರು ಅಗ್ರಗಣ್ಯ ಶರಣರಲ್ಲಿ ಒಬ್ಬರು. ಅಂದು ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ನಡೆದ ಹೋರಾಟ, ಶರಣರನ್ನು ಮತ್ತು ಶರಣರ ವಚನ ಸಾಹಿತ್ಯವನ್ನು ರಕ್ಷಣೆಯ ಜವಾಬ್ದಾರಿ ಮತ್ತು ಇದನ್ನು ಸಮರ್ಥವಾಗಿ ನಿರ್ವಹಿಸಿದ ಬಗೆ, ನಡೆಸಿದ ಹೋರಾಟವನ್ನೊಳಗೊಂಡ ಈ ಚಿತ್ರ ಕಲ್ಯಾಣದಲ್ಲಿ ಅಂದು ನಡೆದ ಕ್ರಾಂತಿಯನ್ನಾದರಿಸಿದೆ.

ರಾಜ್ಯದಲ್ಲಿ ಈ ಚಿತ್ರ ಇಂದೇ ತೆರೆ ಕಾಣುತ್ತಿದ್ದು, ಇಲ್ಲಿಯ ವೆಂಕಟೇಶ ಚಿತ್ರ ಮಂದಿರದಲ್ಲಿ ಮೊದಲ ದಿನದಿಂದಲೇ ಪ್ರದರ್ಶನವಾಗುತ್ತಿದ್ದು, ಚಿತ್ರ ಮಂದಿರದ ಆವರಣದಲ್ಲಿ ತ್ರಿಪುರಾಂತ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪೂಜೆ ನೆರವೇರಿಸುವ ಮೂಲಕ ಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಿದರು.

ಬಿಡಿಪಿಸಿ ಅಧ್ಯಕ್ಷ ವೀರಣ್ಣ ಹಲಶೆಟ್ಟೆ, ಮುಖಂಡ ಸುನೀಲ ಪಾಟೀಲ್, ಬಿಡಿಪಿಸಿ ಉಪಾಧ್ಯಕ್ಷ ರೇವಣಪ್ಪ ರಾಯವಾಡೆ, ನಿರ್ದೇಶಕರಾದ ಮಲ್ಲಿಕಾರ್ಜುನ ವಾಂಜರಖೇಡೆ, ಬಸವರಾಜ ಬಾಲಿಕಿಲೆ, ಕಾಶಪ್ಪ ಸಕ್ಕರಬಾವೆ, ಅನೀಲ ರಗಟೆ, ವಿಶ್ವನಾಥಪ್ಪ ಬೇಲೂರೆ, ಅಶೋಕ ನಾಗರಾಳೆ, ಬಿಡಿವಿಸಿ ಅಧ್ಯಕ್ಷ ಗುರುಪಾದಯ್ಯ ಸ್ವಾಮಿ ಗಡಿಯಾಳ, ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಗುರುನಾಥ ಗಡ್ಡೆ, ಮಡಿವಾಳ ಸಮಾಜದ ಅಧ್ಯಕ್ಷ ಸಂತೋಷ ಮಡಿವಾಳ, ಯುವ ಘಟಕದ ರವೀಂದ್ರ ಮಡಿವಾಳ, ಜಿಲ್ಲಾ ಉಪಾಧ್ಯಕ್ಷ ಗಣಪತಿ ಸಸ್ತಾಪುರೆ, ಪ್ರಮುಖರಾದ ದತ್ತು ಭೆಂಡೆ, ಮರೆಪ್ಪ ಪಾಟೀಲ್, ಜಗನ್ನಾಥ ಮಡಿವಾಳ, ಸೋಮನಾಥ ಮಡಿವಾಳ, ಜಗನ್ನಾಥ ಕನಶೆಟ್ಟೆ ಉಪಸ್ಥಿತರಿದ್ದರು.

ವೆಂಕಟೇಶ ಚಿತ್ರ ಮಂದಿರದ ಮುಖ್ಯಸ್ಥ ಮಲ್ಲಿಕಾರ್ಜುನ ಕುರಕೋಟೆ ಸ್ವಾಗತಿಸಿದರು. ಡಾ.ಬಸವರಾಜ ಸ್ವಾಮಿ ಪ್ರಾಸ್ತಾವಿಕ ಮಾತನಾಡಿದರು. ತ್ರಿಪುರಾಂತ ಶ್ರೀಗಳು ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರು ಚಿತ್ರ ಮುಗಿಯುವ ವರೆಗೆ ವೀಕ್ಷಿಸಿ ಸಂತಸ ಪಟ್ಟರು.




ಸಾಯಿಕುಮಾರ ಅಭಿನಯದ ಮಹಾವೀರ ಮಾಚಿದೇವ ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ಬಸವಕಲ್ಯಾಣ ವೆಂಕಟೇಶ ಚಿತ್ರಮಂದಿರದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು.

Scanned with CamScanner

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಗುರುವಾರ 25 ಫೆಬ್ರುವರಿ 2016
25 FEBRUARY 2016

### ಶ್ರೀ ಗುರು ಮಹಾಲಿಂಗೇಶ್ವರ ಶಾಲಾ ವಾರ್ಷಿಕೋತ್ಸವದಲ್ಲಿ ತ್ರಿಪುರಾಂತ ಶ್ರೀ ಅಭಿಮತ

# ಶಿಕ್ಷಣದಿಂದ ಸಂಸ್ಕಾರ ಬದುಕು ಸುಂದರ



ಬಸವಕಲ್ಯಾಣದ ಶ್ರೀ ಗುರು ಮಹಾಲಿಂಗೇಶ್ವರ ಪ್ರಾಥಮಿಕ ಶಾಲೆ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಮುಖಂಡ ಸುನೀಲ ಪಾಟೀಲ್ ಉದ್ಘಾಟಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಚಾರ್ಯರು, ರವಿ ಬಿರಾದಾರ, ಸವಿತಾ ರಮೇಶ ಸ್ವಾಮಿ ಇದ್ದರು.

ಬಸವಕಲ್ಯಾಣ: ಶಿಕ್ಷಣ ಜ್ಞಾನ ಬೆಳೆಸಿದರೆ, ಸಂಸ್ಕಾರ ಬದುಕು ಸುಂದರಗೊಳಿಸುತ್ತದೆ. ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ನೀಡುವ ಕೆಲಸ ಶಿಕ್ಷಣ ಸಂಸ್ಥೆಗಳಿಂದ ನಡೆಯಬೇಕಿದೆ ಎಂದು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಚಾರ್ಯರು ನುಡಿದರು.

ನಗರದ ಶ್ರೀ ಗುರು ಮಹಾಲಿಂಗೇಶ್ವರ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ ವಾರ್ಷಿಕೋತ್ಸವದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಗುಣಮಟ್ಟದ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ ನೀಡುವಲ್ಲಿ ಈ ಸಂಸ್ಥೆ ಕಾಳಜಿ ವಹಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಯುವ ಮುಖಂಡ ಸುನೀಲ ಪಾಟೀಲ್ ಮಾತನಾಡಿ, ಶಿಕ್ಷಣ ಸಂಸ್ಥೆಗಳು ಜ್ಞಾನ ದೇಗುಲಗಳಿದ್ದಂತೆ. ಗುಣಮಟ್ಟದ ಶಿಕ್ಷಣ, ಉತ್ತಮ ಸಂಸ್ಕಾರ ನೀಡುವ ಜತೆಗೆ ದೇಶಭಕ್ತಿ ಭಾವನೆಯೂ ಬೆಳೆಸುವ ಕೆಲಸ ನಡೆಯಬೇಕು. ಪಠ್ಯದ ಜತೆಗೆ ದೇಶಭಕ್ತರ ಜೀವನ ಚರಿತ್ರೆ ತಿಳಿಸಿಕೊಡುವ ಮೂಲಕ ದೇಶಭಕ್ತಿ ಕಿಚ್ಚು ಮಕ್ಕಳಲ್ಲಿ ಬೆಳೆಸುವ ಕೆಲಸ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ನಡೆಯಲಿ ಎಂದು ಆಶಿಸಿದರು.

ಶಿಕ್ಷಣ ಸಂಯೋಜಕ ರವಿ ಬಿರಾದಾರ ಮಾತನಾಡಿ, ಜೀವನದ ಯಶಸ್ಸಿಗೆ ಶಿಕ್ಷಣ ಅತಿ ಅವಶ್ಯಕ. ಪಠ್ಯದ ಜತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳೂ ಪೂರಕ. ಮಕ್ಕಳಲ್ಲಿನ ಕಲಾ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ ಎಂದರು.

ಸಮುಹ ಸಂಪನ್ಮೂಲ ಅಧಿಕಾರಿ ಖೈರುಲ್ಲಮುಬೀನ್ ಮಾತನಾಡಿದರು. ಸಂಸ್ಥೆ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.ಪ್ರಮುಖರಾದ ಶರಣಪ್ಪ ಮಹಾಜನ, ಗೀತಾ ಶಿವರಾಜ ಪಾಟೀಲ, ಸುಭದ್ರಾಬಾಯಿ ವೀರಯ್ಯ ಸ್ವಾಮಿ, ಪಾರ್ವತಿ ರೋಜೆ, ಸಂಗೀತಾ ಸುನೀಲ ಪಾಟೀಲ, ವಿಜಯಲಕ್ಷ್ಮೀ ರಾಜೋಳೆ, ಡಾ.ಜ್ಯೋತಿ ಖಂಡ್ರೆ, ಕೀರ್ತಿ ಪಾಟೀಲ, ಬದ್ರಿನಾಥ ಪಾಟೀಲ, ಶಿವರಾಜ ಪಾಟೀಲ ಉಪಸ್ಥಿತರಿದ್ದರು. ರಮೇಶ ರಾಜೋಳೆ ನಿರೂಪಿಸಿದರು. ಶಾಲೆಯ ಇಬ್ಬರು ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಕರಣ ನಾಮದೇವ ಹಾಗೂ ಶರಣು ಸಿದ್ರಾಮಗೆ ಬೆಸ್ಟ್ ಸ್ಟೂಡೆಂಟ್ ಆಫ್ ದಿ ಇಯರ್ ಅವಾರ್ಡ್ ನೀಡಿ ಪ್ರೋತ್ಸಾಹಿಸಲಾಯಿತು. ಶಾಲಾ ಮಕ್ಕಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮ ಗಮನ ಸೆಳೆಯಿತು.

ಪ್ರಜಾವಾಣಿ ಮಂಗಳವಾರ • ಮಾರ್ಚ್ 15, 2016

# ಪ್ರದರ್ಶನ ಗ್ಯಾಲರಿ ನಿರ್ಮಾಣ ಅಗತ್ಯ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣ ಬಸವೇಶ್ವರ ಚಿತ್ರಕಲಾ ಕಾಲೇಜಿನಲ್ಲಿ ಭಾನುವಾರ ನಡೆದ ಕಲಾ ಮಹೋತ್ಸವದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು

ಬಸವಕಲ್ಯಾಣ: ಚಿತ್ರಕಲಾಕೃತಿಗಳ ಪ್ರದರ್ಶನಕ್ಕಾಗಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಗ್ಯಾಲರಿ ನಿರ್ಮಾಣವಾಗುವುದು ಅಗತ್ಯ ಎಂದು ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯ ಬಿ.ಕೆ.ಬಡಿಗೇರ್ ಅಭಿಪ್ರಾಯಪಟ್ಟರು.

ಇಲ್ಲಿನ ಬಸವೇಶ್ವರ ಚಿತ್ರಕಲಾ ಕಾಲೇಜಿನಲ್ಲಿ ಭಾನುವಾರ ಆಯೋಜಿಸಿದ್ದ 22ನೇ ಕಲಾ ಮಹೋತ್ಸವ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿ, ಬ್ರಿಟಿಷರು ಭಾರತಕ್ಕೆ ಬಂದ ನಂತರ ಕಲಾವಿದರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ದೊರಕಿತು ಎಂದು ತಿಳಿಸಿದರು.

ಗುಂಡಪ್ಪ ದೊಡ್ಮನಿ ಮಾತನಾಡಿ, ಮಕ್ಕಳಲ್ಲಿ ಅಡಗಿರುವ ಸೂಪ್ತ ಪ್ರತಿಭೆಗೆ ಪ್ರೋತ್ಸಾಹಿಸಿದರೆ ಮುಂದೆ ಉತ್ತಮ ಕಲಾವಿದರಾಗಿ ಕೀರ್ತಿ ತರಬಲ್ಲರು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಪ್ರಭುಲಿಂಗಯ್ಯ ಟಂಕಸಾಲಿಮಠ, ಸಾನಿಧ್ಯ ವಹಿಸಿದ್ದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಸುರೇಶ ಚೆನ್ನಶೆಟ್ಟಿ ಮಾತನಾಡಿದರು.

ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಶಶಿಧರ ಪಾಟೀಲ, ಹಣಮಂತರಾವ ವಿಸಾಜಿ, ಸಿದ್ರಾಮಪ್ಪ ಪಾಟೀಲ, ಕಿಶನ ಪೆಂಟರ್, ಕುರ್ಷೀದಮಿಯ್ಯಾ ಅವರನ್ನು ಸನ್ಮಾನಿಸಲಾಯಿತು. ಪ್ರಸಕ್ತ ಸಾಲಿನ ಆದರ್ಶ ವಿದ್ಯಾರ್ಥಿಗಳೆಂದು ಪೂಜಾ ಪಟವಾಡಿ ಮತ್ತು ಸಂಪದಾ ಬಿರಾದಾರ ಅವರನ್ನು ಸನ್ಮಾನಿಸಲಾಯಿತು.

ಸೂರ್ಯಕಾಂತ ಪಾಟೀಲ, ರುದ್ರಮಣಿ ಮಠಪತಿ, ಅಂಬಿಕಾ ನಾಗರಾಳೆ, ಶಿವಕುಮಾರ ತಾಂಡೂರ, ವಿಶ್ವನಾಥ ಬನಸೂಡೆ ಇದ್ದರು. ಮಲ್ಲಿಕಾರ್ಜುನ ಹಲಿಂಗೆ ಸ್ವಾಗತಿಸಿದರು. ಬಸವಲಿಂಗ ಸುಬೇದಾರ ಸ್ವಾಗತಿಸಿದರು. ಮಾಯಾದೇವಿ ವಂದಿಸಿದರು.

Scanned with CamScanner

# ಬೇಲೂರನಲ್ಲಿ ಶಾಲಾ ವಾರ್ಷಿಕೋತ್ಸವ



ಬಸವಕಲ್ಯಾಣ ಬೇಲೂರನ ಸರ್ವೋದಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಶಿಕ್ಷಣ ಸಂಯೋಜಕ ರವಿ ಬಿರಾದಾರ ಉದ್ಘಾಟಿಸಿದರು. ಅಭಿನವ ಘನಲಿಂಗ ರುದ್ರಮುನಿ ಶ್ರೀ ಇದ್ದರು.

ಬಸವಕಲ್ಯಾಣ: ಶೈಕ್ಷಣಿಕ ಪ್ರಗತಿಯಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ ಹಿರಿದಾಗಿದೆ ಎಂದು ಶಿಕ್ಷಣ ಸಂಯೋಜಕ ರವಿ ಬಿರಾದಾರ ಹೇಳಿದರು.

ತಾಲೂಕಿನ ಬೇಲೂರ ಗ್ರಾಮದಲ್ಲಿ ಸಾಯಿ ಎಜ್ಯೂಕೇಶನಲ್ ಮತ್ತು ಚಾರಿಟೆಬಲ್ ಟ್ರಸ್ಟ್‌ನ ಸರ್ವೋದಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಸಂಸ್ಥೆ ಕಾಳಜಿ ವಹಿಸುತ್ತಿವೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶ್ರೀ ಆಶೀರ್ವಚನ ನೀಡಿದರು. ಸಿಆರ್‌ಪಿ ಜಾಕೀರ ಸಿಆರ್‌ಪಿ ಮಾತನಾಡಿದರು. ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ ಕಾಮಣ್ಣ ಅಧ್ಯಕ್ಷತೆ ವಹಿಸಿದ್ದರು. ತಾಪಂ ಸದಸ್ಯ ಸಿದ್ರಾಮ ಕಾಮಣ್ಣ, ಪ್ರಕಾಶ ಮೆಂಡೊಳೆ, ರವೀಂದ್ರ ಗುಂಗೆ, ಅಶೋಕ ವಕಾರೆ, ಕಾಶಪ್ಪಾ ಸಾಯಗಾಂವೆ, ಪಿಡಿಒ ಬಸವರಾಜ ರೋಗಿ, ವಿಜಯಕಯಮಾರ ಬಿರಾದಾರ, ರವೀಂದ್ರ ಚಿಲ್ಲಾಬಟ್ಟೆ, ಸಂಜುಕುಮಾರ ಭರಮಣೆ, ವಿಠಲ್ ಪಂಚಾಳ, ಹಣಮಂತ ಮಾಶೆಟ್ಟೆ, ಓಂಕಾರ ಹಳಂಬರೆ, ಸಿದ್ರಾಮ ಹಲಿಂಗೆ, ಶಿವರುದ್ರ ವಾಲೆ, ಹುಲೆಪ್ಪ ರಾಜೋಳೆ, ನಾಗನಾಥ ಬಾಗ್, ಜಗದೇವಿ ಮೆಂಡೋಳೆ, ಜಗದೇವಿ ಬಾಗ, ಸಾರಿಕಾ, ಸವಿತಾ ಮೆಂಡೋಳೆ, ಸಿದ್ದಮ್ಮ ವಕಾರೆ, ಅಶೋಕ ಬಿರಾದಾರ. ಭಾಗವಹಿಸಿದ್ದರು.

ಮುಖ್ಯಗುರು ವರ್ಷಾರಾಣಿ ಪಾಟೀಲ ಸ್ವಾಗತಿಸಿದರು. ಮಹಾನಂದಾ ಗುಂಗೆ ಪ್ರಾಸ್ತಾವಿಕ ಮಾತನಾಡಿದರು. ಸಿದ್ರಾಮ ಬಿರಾದಾರ ವಂದಿಸಿದರು. ಸುಜಾತಾ ಅಂತಪ್ಪ ಹಾಗೂ ರೇಣುಕಾ ನಿರೂಪಿಸಿದರು.

ಶುಕ್ರವಾರ
18 ಮಾರ್ಚ್ 2016
18 MARCH 2016
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI» KALABURAGI

# ನೆಮ್ಮದಿ ಜೀವನಕ್ಕೆ ಅಧ್ಯಾತ್ಮಿಕ ಚಿಂತನೆ ಅಗತ್ಯ




ಬಸವಕಲ್ಯಾಣ ತ್ರಿಪುರಾಂತನ ಮರಿದೇವರ ಗುಡ್ಡದಲ್ಲಿ ಹಮ್ಮಿಕೊಂಡ ಶ್ರೀ ಜಗದ್ಗುರು ರೇಣುಕಾ ಚಾರ್ಯ ಜಯಂತಿ ಯುಗ ಮಾನೋತ್ಸವ ಹಾಗೂ ಧರ್ಮ ಸಮಾರಂಭದಲ್ಲಿ ಹಿರೇನಾಗಾಂವದ ಶ್ರೀ ಜಯಶಾಂತಲಿಂಗ ಮಹಾಸ್ವಾಮಿಗಳು ಮಾತನಾಡಿದರು.

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ನೆಮ್ಮದಿಯ ಜೀವನಕ್ಕೆ ಅಧ್ಯಾತ್ಮಿಕ ಚಿಂತನೆ ಮಾಡುವುದು ಬಹಳ ಅವಶ್ಯಕವಾಗಿದೆ ಎಂದು ಹಿರೇನಾಗಾಂವದ ಶ್ರೀ ಜಯಶಾಂತಲಿಂಗ ಮಹಾಸ್ವಾಮಿಗಳು ಹೇಳಿದರು.

ಇಲ್ಲಿಯ ತ್ರಿಪುರಾಂತನ ಮರಿದೇವರ ಗುಡ್ಡದಲ್ಲಿ ಹಮ್ಮಿಕೊಂಡ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿ, ಮಠಗಳಲ್ಲಿ ನಡೆಯುವ ಧರ್ಮ ಚಿಂತನಾ ಸಭೆಯಲ್ಲಿ ಪ್ರತಿಯೊಬ್ಬರು ಭಾಗವಹಿಸಬೇಕು ಎಂದರು. ಜಿಲ್ಲಾ ಪಂಚಾಯಿತಿ ಸದಸ್ಯ ಗುಂಡುರೆಡ್ಡಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಗುರುಗಳ ಮಾರ್ಗದರ್ಶನದಿಂದ ಮಾತ್ರ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎಂದರು.

ಮಾಜಿ ಶಾಸಕ ಎಂ.ಈ.ಮುಳೆ ಮಾತನಾಡಿ, ಇಂತಹ ಸುಂದರ ಪರಿಸರದಲ್ಲಿ ಈ ಮಠವು ಅಭಿವೃದ್ಧಿಯಾಗಬೇಕು. ಅದಕ್ಕಾಗಿ ಎಲ್ಲರು ಶ್ರಮಿಸುವುದು ಬಹಳ ಅಗತ್ಯವಿದೆ ಎಂದರು.

ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿ ನೇತೃತ್ವ ವಹಿಸಿ, ಕಾರ್ಯಕ್ರಮ ಯಶಸ್ವಿಗೆ ಸಹಕರಿಸಿ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.

ಹುಮನಾಬಾದನ ರೇಣುಕಾ ಗಂಗಾಧರ ಶಿವಾಚಾರ್ಯ ಸ್ವಾಮಿ, ಸಸ್ತಾಪುರ ಸ್ವಾಮಿ, ಹುಲಸೂರ ಜಿಪಂ ಸದಸ್ಯ ಸುಧೀರ ಕಾಡಾದಿ ಮಾತನಾಡಿದರು. ವೇದಿಕೆಯಲ್ಲಿ ಮಂಠಾಳ ಜಿಪಂ ಸದಸ್ಯೆ ನಿರ್ಮಲಾ ಮಾನೆಗೋಪಾಳೆ, ಕಸಾಪ ಅಧ್ಯಕ್ಷ ರುದ್ರಮುಣಿ ಮಠಪತಿ, ಬಸವರಾಜ ಸ್ವಾಮಿ ಉಪಸ್ಥಿತರಿದ್ದರು.

ಜಾಫರವಾಡಿಯ ಮಹಾರಾಜಪ್ಪ ಮೂಳೆ ಇವರಿಗೆ ಅಭಿನವ ಘನಲಿಂಗ ಶ್ರೀ ಪಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ರಮೇಶ ರಾಜೋಳೆ ನಿರೂಪಿಸಿದರು. ಇದಕ್ಕೂ ಮುನ್ನ ನಗರದ ಬಸವೇಶ್ವರ ದೇವಸ್ಥಾನದಿಂದ ಶ್ರೀ ಜಗದ್ಗುರು ರೇಣುಕಾ ಚಾರ್ಯ ಭಾವಚಿತ್ರ ಭವ್ಯ ಮೆರವಣಿಗೆ ನಡೆಸಿದರು. ಹಾರಕೂಡದ ಶ್ರೀ ಚೆನ್ನವೀರ ಶಿವಾಚಾ ರ್ಯ ಸ್ವಾಮಿ ಚಾಲನೆ ನೀಡಿದರು. ಪ್ರೋ. ಸೂರ್ಯ ಕಾಂತ ಶೀಲವಂತ, ಪ್ರಭುಲಿಂಗಯ್ಯ ಟಂಕಸಾಲಿಮಠ ಮುಂತಾದವರು ಮೆರವಣಿಗೆಯುಲ್ಲಿ ಪಾಲ್ಗೊಂಡಿದ್ದರು.

ವಿಜಯ ಕರ್ನಾಟಕ VK
ಬುಧವಾರ,23 ಮಾರ್ಚ್ 2016, ಕಲಬುರಗಿ

Scanned with CamScanner

# ಮಹಾವೀರ ಮಾಚಿದೇವ ಚಲನ ಚಿತ್ರ ಪ್ರದರ್ಶನ

**ವಿಕ ಸುದ್ದಿಲೋಕ** ಬಸವಕಲ್ಯಾಣ

ನಟ ಸಾಯಿಕುಮಾರ ಅಭಿನಯದ ಮಹಾವೀರ ಮಾಚಿದೇವ ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ಬಸವಕಲ್ಯಾಣದ ವೆಂಕಟೇಶ ಚಿತ್ರಮಂದಿರದಲ್ಲಿ ಇತ್ತೀಚೆಗೆ ಚಾಲನೆ ನೀಡಲಾಯಿತು.

ನಂದಿ ಕಾಮೇಶ್ವರ ರೆಡ್ಡಿ ನಿರ್ದೇಶಿಸಿರುವ ಈ ಚಿತ್ರ ಸಿದ್ದೇಶ್ವರ ನಿರ್ಮಾಪಕರು. 12ನೇ ಶತಮಾನದಲ್ಲಿ ಶರಣರ ಬಳಗದಲ್ಲಿ ಮಡಿವಾಳ ಮಾಚಿದೇವರು ಅಗ್ರಗಣ್ಯ ಶರಣರಲ್ಲಿ ಒಬ್ಬರು. ಅಂದು ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ನಡೆದ ಹೋರಾಟ, ಶರಣರನ್ನು ಮತ್ತು ಶರಣರ ವಚನ ಸಾಹಿತ್ಯವನ್ನು ರಕ್ಷಣೆಯ ಜವಾಬ್ದಾರಿ ಮತ್ತು ಇದನ್ನು ಸಮರ್ಥವಾಗಿ ನಿರ್ವಹಿಸಿದ ಬಗೆ, ನಡೆಸಿದ ಹೋರಾಟವನ್ನೊಳಗೊಂಡ ಈ ಚಿತ್ರ ಕಲ್ಯಾಣದಲ್ಲಿ ಅಂದು ನಡೆದ ಕ್ರಾಂತಿಯನ್ನಾದರಿಸಿದೆ.

ಚಿತ್ರ ಮಂದಿರದ ಆವರಣದಲ್ಲಿ ತ್ರಿಪುರಾಂತ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪೂಜೆ ನೆರವೇರಿಸುವ ಮೂಲಕ ಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಿದರು.



ಬಸವಕಲ್ಯಾಣ ಸಾಯಿಕುಮಾರ ಅಭಿನಯದ ಮಹಾವೀರ ಮಾಚಿದೇವ ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ವೆಂಕಟೇಶ ಚಿತ್ರಮಂದಿರದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು. ಸುನೀಲ ಪಾಟೀಲ್, ವೀರಣ್ಣ ಹಲಶೆಟ್ಟಿ, ಗುರುಪಾದಯ್ಯ ಸ್ವಾಮಿ, ಮಲ್ಲಿಕಾರ್ಜುನ, ಮಲ್ಲಿಕಾರ್ಜುನ, ದತ್ತು ಭೆಂಡೆ, ಸಂತೋಷ ಮಡಿವಾಳ, ಡಾ.ಬಸವರಾಜ ಸ್ವಾಮಿ ಇದ್ದರು.

ಬಿಡಿಪಿಸಿ ಅಧ್ಯಕ್ಷ ವೀರಣ್ಣ ಹಲಶೆಟ್ಟಿ, ಬಿಡಿಪಿಸಿ ಉಪಾಧ್ಯಕ್ಷ ರೇವಣಪ್ಪ ರಾಯವಾಡೆ, ನಿರ್ದೇಶಕರಾದ ಮಲ್ಲಿಕಾರ್ಜುನ ವಾಂಜರಖೇಡೆ, ಬಸವರಾಜ ಬಾಲಿಕಿಲೆ, ಕಾಶಪ್ಪ ಸಕ್ಕರಬಾವೆ, ಅನೀಲ ರಗಟೆ, ವಿಶ್ವನಾಥಪ್ಪ ಬೇಲೂರೆ, ಅಶೋಕ ನಾಗರಾಳೆ, ಬಿಡಿವಿಸಿ ಅಧ್ಯಕ್ಷ ಗುರುಪಾದಯ್ಯ ಸ್ವಾಮಿ ಗಡಿಯಾಳ, ಮಡಿವಾಳ ಸಮಾಜದ ಅಧ್ಯಕ್ಷ ಸಂತೋಷ ಮಡಿವಾಳ, ಯುವ ಘಟಕದ ರವೀಂದ್ರ ಮಡಿವಾಳ, ಜಿಲ್ಲಾ ಉಪಾಧ್ಯಕ್ಷ ಗಣಪತಿ ಸಸ್ತಾಪೂರೆ, ಪ್ರಮುಖರಾದ ಸುನೀಲ ಪಾಟೀಲ್, ದತ್ತು ಭೆಂಡೆ, ಮರೆಪ್ಪ ಪಾಟೀಲ್, ಜಗನ್ನಾಥ ಮಡಿವಾಳ, ಸೋಮನಾಥ ಮಡಿವಾಳ, ಜಗನ್ನಾಥ ಕನಶೆಟ್ಟೆ ಉಪಸ್ಥಿತರಿದ್ದರು.

ಡಾ.ಬಸವರಾಜ ಸ್ವಾಮಿ ಪ್ರಾಸ್ತಾವಿಕ ಮಾತನಾಡಿದರು. ವೆಂಕಟೇಶ ಚಿತ್ರ ಮಂದಿರದ ಮುಖ್ಯಸ್ಥ ಮಲ್ಲಿಕಾರ್ಜುನ ಕುರಕೋಟೆ ಸ್ವಾಗತಿಸಿದರು.

ವಿಜಯ ಕರ್ನಾಟಕ ಬುಧವಾರ,23 ಮಾರ್ಚ್ 2016,ಕಲಬುರಗಿ

# 'ಪಂಚಾಚಾರ್ಯರ ಮಠಗಳು ಸಮಾನತೆ ಕೇಂದ್ರ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಪಂಚಾಚಾರ್ಯ ಪರಂಪರೆಯ ಮಠಗಳು ಸಮಾನತೆಯ ಕೇಂದ್ರಗಳಾಗಿವೆ. ಇಲ್ಲಿ ಮಾನವ ಧರ್ಮವನ್ನು ಬೋಧಿಸಲಾಗುತ್ತದೆ ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿನ ತ್ರಿಪುರಾಂತ ಗವಿಮಠದಲ್ಲಿ ಸೋಮವಾರ ಆಯೋಜಿಸಿದ್ದ ಜಗದ್ಗುರು ರೇಣುಕಾಚಾರ್ಯರ ಜಯಂತಿ ಹಾಗೂ ಧರ್ಮಸಭೆಯ ನೇತೃತ್ವ ವಹಿಸಿ ಅವರು ಮಾತನಾಡಿದರು.

ರೇಣುಕಾಚಾರ್ಯರ ಮೂಲಸ್ಥಾನವಾದ ಆಂಧ್ರಪ್ರದೇಶದ ಕೊಲ್ಲಿಪಾಕಿಯಲ್ಲಿ 12 ಜಾತಿಗೆ ಸೇರಿದ ಮಠಗಳು ಒಂದರಪಕ್ಕದಲ್ಲಿ ಒಂದಿವೆ. ಎಲ್ಲ ಜಾತಿಯವರೂ ಅಲ್ಲಿನ ಮಠಕ್ಕೆ ನಡೆದುಕೊಳ್ಳುತ್ತಾರೆ. ಆದರೆ, ಕೆಲವರು ಪಂಚಾಚಾರ್ಯರ ಮತ್ತು ವಿರಕ್ತರ ಪರಂಪರೆ ಬೇರೆಯಾಗಿದೆ ಎಂದು ವಿನಾಕಾರಣ ವಾದ ಸೃಷ್ಟಿಸುತ್ತಿದ್ದಾರೆ ಎಂದರು.

ಹಿರೇನಾಗಾಂವ ಜಯಶಾಂತಲಿಂಗ ಸ್ವಾಮೀಜಿ ಮಾತನಾಡಿ, ನೈತಿಕ ಮಾರ್ಗದಲ್ಲಿ ನಡೆದರೆ ಜೀವನದಲ್ಲಿ ನೆಮ್ಮದಿ ದೊರಕುತ್ತದೆ ಎಂದರು.

ಸಸ್ತಾಪುರ ಸದಾನಂದ ಅಪ್ಪ ಮಾತನಾಡಿ, ತಾವು ದಾನ ಮಾಡಿರುವುದು ಹಾಗೂ ಏನಾದರೂ ಉಪಕಾರ ಮಾಡಿದರೆ ಪರರಿಗೆ ಹೇಳಬಾರದು. ಸದ್ಗುಣ ಸಂಪನ್ನರಾದರೆ ಜನಮನ್ನಣೆ ದೊರಕುತ್ತದೆ ಎಂದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಸೋಮವಾರ ನಡೆದ ರೇಣುಕಾಚಾರ್ಯರ ಜಯಂತಿಯಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು

ಮಾಜಿ ಶಾಸಕ ಎಂ.ಜಿ.ಮುಳೆ, ಜಿಲ್ಲಾ ಪಂಚಾಯಿತಿ ಸದಸ್ಯ ಗುಂಡುರೆಡ್ಡಿ, ಮಹಾಗಾಂವ ಗುರುಲಿಂಗ ಶಿವಾಚಾರ್ಯರು, ಹುಮನಾಬಾದ್ ರೇಣುಕ ಗಂಗಾಧರ ಶಿವಾಚಾರ್ಯರು ಮಾತನಾಡಿದರು.

ಜಿಲ್ಲಾ ಪಂಚಾಯಿತಿ ಸದಸ್ಯೆ ನಿರ್ಮಲಾ ವೈಜನಾಥ ಮಾನಿಗೋಪಾಳೆ, ಸುಧೀರ ಕಾಡಾದಿ, ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ರುದ್ರಮಣಿ ಮಠಪತಿ, ಸದ್ಬೋಧನಾ ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ, ಶರಣಪ್ಪ ಬಿರಾದಾರ ಇದ್ದರು.

ಮಹಾರಾಜಪ್ಪ ಮುಳೆ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ರಮೇಶ ರಾಜೋಳೆ ನಿರೂಪಿಸಿದರು. ಕಾರ್ಯಕ್ರಮಕ್ಕೂ ಮುನ್ನ ಬಸವೇಶ್ವರ ದೇವಸ್ಥಾನದಿಂದ ಭಾವಚಿತ್ರದ ಮೆರವಣಿಗೆ ನಡೆಯಿತು. ಹಾರಕೂಡ ಚನ್ನವೀರ ಶಿವಾಚಾರ್ಯರು ಮೆರವಣಿಗೆಗೆ ಚಾಲನೆ ನೀಡಿದರು.

ಪ್ರಜಾವಾಣಿ ಮಂಗಳವಾರ • ಮಾರ್ಚ್ 22, 2016

Scanned with CamScanner

ಬಸವಕಲ್ಯಾಣದಲ್ಲಿ ರೇಣುಕಾಚಾರ್ಯ ಜಯಂತಿ ಮೆರವಣಿಗೆಗೆ ಹಾರಕೂಡ ಶ್ರೀ ಚಾಲನೆ | ಅಭಿನವ ಶ್ರೀ ಪ್ರಶಸ್ತಿ ಪ್ರದಾನ

# ಮಠ ಬೆಳೆಸುವಲ್ಲಿ ಭಕ್ತರ ಪಾತ್ರ ಹಿರಿದು

**ಬಸವಕಲ್ಯಾಣ:** ಜನಕಲ್ಯಾಣವೇ ಮಠಗಳ ಮುಖ್ಯಗುರಿಯಾಗಿದ್ದು, ಮಠಗಳನ್ನು ಬೆಳೆಸುವಲ್ಲಿ ಭಕ್ತರ ಪಾತ್ರ ಹಿರಿದಾಗಿದೆ ಎಂದು ಹಿರನಾಗಾಂವನ ಜಯಶಾಂತಲಿಂಗ ಶ್ರೀಗಳು ನುಡಿದರು.

ತ್ರಿಪುರಾಂತ ಗವಿಮಠದಲ್ಲಿ ಆಯೋಜಿಸಿದ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಸಭೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಸತ್ಕಾರ್ಯಗಳಿಗೆ ಉದಾರ ಮನಸ್ಸಿನಿಂದ ದಾನ ಮಾಡುವುದು ಪುಣ್ಯದ ಕಾರ್ಯವಾಗಿದೆ ಎಂದರು.

ಇಲ್ಲಿಯ ಗವಿ ಅತ್ಯಂತ ಪರಿತ್ರವಾದ ತಾಪಾಗಿದ್ದು, ಶ್ರೀಗಳು ಮಠದ ಪರಂಪರೆ ಮುಂದುವರಿಸಿಕೊಂಡು ಹೋಗುವ ಜತೆಗೆ ಉತ್ತಮ ಕಾರ್ಯಗಳನ್ನು ಮಾಡುತ್ತಿದ್ದಾರೆ. ಈ ಮಠಕ್ಕೆ ಇಲ್ಲಿ ಸೇರಿರುವ ಭಕ್ತ ಸಮೂಹವೇ ದೊಡ್ಡ ಆಸ್ತಿಯಾಗಿದೆ. ನಿಮ್ಮೆಲ್ಲರ ಸಹಕಾರದಿಂದ ಮಠದ ಪ್ರಗತಿಯಾಗಲಿ ಶುಭ ಕೋರಿದರು.

ಅಫಜಲಪುರ ವಿಶ್ವಾರಾಧ್ಯ ಮಳೇಂದ್ರ ಶ್ರೀ ಆಶೀರ್ವಚನ ನೀಡಿ, ಜಾತಿಗಿಂತ ನೀತಿ ಮುಖ್ಯ. ತತ್ವಕ್ಕಿಂದ ಆಚರಣೆ ಮುಖ್ಯ. ಅರ್ಚನೆಗಿಂತ ಅರ್ಪಣೆ ಮುಖ್ಯವಾಗಿದೆ ಎಂದು ಉದಾತ್ತವಾದ ಸಂದೇಶ ಪಂಚ ಪೀಠಗಳು ಸಾರಿವೆ. ಗುರು ಮಾರ್ಗದರ್ಶನದಲ್ಲಿ ಧರ್ಮದ ಮಾರ್ಗದಲ್ಲಿ ಎಲ್ಲರೂ ನಡೆಯಲು ಪ್ರಯತ್ನಿಸಿದಾಗ ಮಾತ್ರ ಬದುಕಿನಲ್ಲಿ ಶಾಂತಿ ಮತ್ತು ನೆಮ್ಮದಿ ಪಡೆಯಲು ಸಾಧ್ಯ ಎಂದರು.

ಜಿಪಂ ಸದಸ್ಯ ಗುಂಡುರೆಡ್ಡಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶ್ರೀ ಮಠದ ಅಭಿವೃದ್ಧಿಗಾಗಿ ವಯಕ್ತಿಕವಾಗಿ 51 ಸಾವಿರ ರೂ. ದೇಣಿಗೆ ನೀಡುವುದಾಗಿ ಭರವಸೆ ನೀಡಿದರು. ಮಾಜಿ ಶಾಸಕ ಎಂ.ಜಿ.ಮುಳೆ ಮಾತನಾಡಿದರು. ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶ್ರೀ ನೇತೃತ್ವ ವಹಿಸಿದ್ದರು. ಸಸ್ತಾಪುರನ ಶ್ರೀ ಸದಾನಂದ ಅಪ್ಪಗಳು ಸಮ್ಮುಖ ವಹಿಸಿದ್ದರು. ಮಹಾಗಾಂವನ ಗುರುಲಿಂಗ ಶ್ರೀ ಆಶೀರ್ವಚನ ನೀಡಿದರು.

ಜಿಪಂ ಸದಸ್ಯ ಸುಧೀರ ಕಾಡಾದಿ, ಕಸಾಪ ತಾಲೂಕಾಧ್ಯಕ್ಷರುದ್ರಮಣಿ ಮಠಪತಿ ಮಾತನಾಡಿದರು. ಜಿಪಂ ಸದಸ್ಯೆ ನಿರ್ಮಲಾ ಮಾನೆ ಗೋಪಾಳೆ, ಶರಣಪ್ಪ ಬಿರಾದಾರ, ಬಸವರಾಜ ಸ್ವಾಮಿ ಇದ್ದರು. ಪ್ರೊ. ಸೂರ್ಯಕಾಂತ ಶೀಲವಂತ ಸ್ವಾಗತಿಸಿ ಪ್ರಸ್ತಾವಿಕ ಮಾತನಾಡಿದರು. ರಮೇಶ ರಾಜೋಳೆ ನಿರೂಪಿಸಿದರು. ಪಂಡಿತ ಪುಟ್ಟರಾಜ ಕಲಾ ಬಳಗದಿಂದ ಸಂಗೀತ ಕಾರ್ಯಕ್ರಮ ನಡೆಯಿತು.

ಭವ್ಯ ಮೆರವಣಿಗೆ

ಕಾರ್ಯಕ್ರಮಕ್ಕೂ ಮುನ್ನ ನಗರದ ಬಸವೇಶ್ವರ ದೇವಸ್ಥಾನದಿಂದ ಮುಖ್ಯ ರಸ್ತೆ ಮಾರ್ಗವಾಗಿ ಗವಿಮಠದ ವರೆಗೆ ಸಾಂಸ್ಕೃತಿಕ ವೈಭವದೊಂದಿಗೆ ಅಲಂಕೃತ ವಾಹನದಲ್ಲಿ ಜಗದ್ಗುರು ರೇಣುಕಾಚಾರ್ಯ ಭಾವಚಿತ್ರದ ಭವ್ಯ ಮೆರವಣಿಗೆ ಜರುಗಿತು. ಹಾರಕೂಡನ ಡಾ. ಚನ್ನವೀರ ಶ್ರೀಗಳು ಮೆರವಣಿಗೆಗೆ ಚಾಲನೆ ನೀಡಿದರು. ಸಸ್ತಾಪೂರನ ಸದಾನಂದ ಅಪ್ಪಗಳು, ತ್ರಿಪುರಾಂತ ಶ್ರೀಗಳು, ವೀರಣ್ಣ ಶೀಲವಂತ, ಬಸವಣಪ್ಪ ಲವಾರೆ, ರುದ್ರೇಶ್ವರ ಗೋರ್ಟಾ, ಡಾ.ಬಸವರಾಜ ಸ್ವಾಮಿ, ರುದ್ರಮಣಿ ಮಠಪತಿ, ಪ್ರಭುಲಿಂಗಯ್ಯ ಟಂಕಸಾಲಿಮಠ ಭಾಗವಹಿಸಿದ್ದರು.

## ಪ್ರಶಸ್ತಿ ಪ್ರದಾನ

ತ್ರಿಪುರಾಂತ ಗವಿ ಮಠದಿಂದ ಪ್ರತಿವರ್ಷ ನೀಡುವ ಅಭಿನವ ಘನಲಿಂಗ ಶ್ರೀ ಪ್ರಶಸ್ತಿಯನ್ನು ತಾಲೂಕಿನ ಜಾಫರವಾಡಿಯ ಮಹಾರಾಜಪ್ಪ ಮುಲೆ ಅವರಿಗೆ ಪ್ರದಾನ ಮಾಡಿ ಗೌರವಿಸಲಾಯಿತು. ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ. 5 ಸಾವಿರ ರೂ. ನಗದು ಮತ್ತು ಪ್ರಶಸ್ತಿ ಪತ್ರವನ್ನೊಳಗೊಂಡಿದೆ. ಈ ಪ್ರಶಸ್ತಿಯ 5 ಸಾವಿರ ರೂ. ಮಾಜಿ ಶಾಸಕ ಮುಳೆ ಪ್ರತಿ ವರ್ಷ ಕಾಣಿಕೆ ರೂಪದಲ್ಲಿ ನೀಡುತ್ತಿದ್ದಾರೆ.




ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಆಯೋಜಿಸಿದ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ನಿಮಿತ್ತ ಜಗದ್ಗುರು ರೇಣುಕಾಚಾರ್ಯ ಭಾವಚಿತ್ರದ ಮೆರವಣಿಗೆಗೆ ಹಾರಕೂಡ-ಚಿಂಚೋಳಿ ಮಠದ ಡಾ.ಚನ್ನವೀರ ಶಿವಾಚಾರ್ಯರು ಚಾಲನೆ ನೀಡಿದರು. ಅಭಿನವ ಘನಲಿಂಗ ರುದ್ರಮುನಿ ಶ್ರೀ, ಸದಾನಂದ ಅಪ್ಪಗಳು ಇತರರಿದ್ದರು.



ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ನಿಮಿತ್ತ ನಡೆದ ಧರ್ಮ ಸಭೆಯಲ್ಲಿ ಅಭಿನವ ಘನಲಿಂಗ ಶ್ರೀ ಪ್ರಶಸ್ತಿಯನ್ನು ಜಾಫರವಾಡಿಯ ಮಹಾರಾಜಪ್ಪ ಮುಳೆ ಅವರಿಗೆ ನೀಡಿ ಗೌರವಿಸಲಾಯಿತು.



ರೇಣುಕಾಚಾರ್ಯ ಜಯಂತಿ ನಿಮಿತ್ತ ಧರ್ಮ ಸಭೆಯನ್ನು ಜಿಪಂ ಸದಸ್ಯ ಗುಂಡುರೆಡ್ಡಿ ಉದ್ಘಾಟಿಸಿದರು. ಜಯ ಶಾಂತಲಿಂಗ ಶ್ರೀ, ಅಭಿನವ ಘನಲಿಂಗ ರುದ್ರಮುನಿ ಶ್ರೀ, ಎಂ.ಜಿ.ಮುಳೆ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ
22 ಮಾರ್ಚ್ 2016
22 MARCH 2016

Scanned with CamScanner

# 'ನಿಸ್ವಾರ್ಥ ಭಾವನೆಯಿಂದ ಕೆಲಸ ಮಾಡುವುದು ಪ್ರತಿಯೊಬ್ಬರ ಅದ್ಯ ಕರ್ತವ್ಯ'

ಬಸವಕಲ್ಯಾಣ

ನಿಸ್ವಾರ್ಥ ಭಾವನೆಯಿಂದ ಕೆಲಸ ಮಾಡುವುದು ಪ್ರತಿಯೊಬ್ಬರ ಅದ್ಯ ಕರ್ತವ್ಯವಾಗಿದೆ ಎಂದು ರಾಜೇಶ್ವರ ಜಿ.ಪಂ ಸದಸ್ಯ ಗುಂಡುರೆಡ್ಡಿ ಹೇಳಿದರು.

ಇಲ್ಲಿಯ ತ್ರಿಪುರಾಂತನ ಮರಿದೇವರ ಗುಡ್ಡದಲ್ಲಿ ಹಮ್ಮಿಕೊಂಡ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ ಗುರುಗಳ ಮಾರ್ಗದರ್ಶನದಿಂದ ಮಾತ್ರ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯವಿದೆ ಎಂದು ತಿಳಿಸಿ ಈ ಮಠಕ್ಕೆ 51 ಸಾವಿರ ರೂ. ಸಹಾಯ ನೀಡುವದಾಗಿ ಹೇಳಿದರು.

ಹಿರನಾಗಾಂವ ಮಠದ ಶ್ರೀ ಜಯಶಾಂತಲಿಂಗ ಮಹಾಸ್ವಾಮಿ ದಿವ್ಯ ಸಾನಿಧ್ಯವಹಿಸಿ ಮಾತನಾಡಿ ಸಮಾಜದಲ್ಲಿ ಶಾಂತಿ ನೆಮ್ಮದಿ ಜೀವನ ಕಳೆಯಬೇಕಾದರೆ ಅಧ್ಯಾತ್ಮಿಕ ಚಿಂತನೆ ಹಾಗೂ ಇಂತಹ ಮಠಗಳಲ್ಲಿ ನಡೆಯುವಂತಹ ಧರ್ಮ ಚಿಂತನ ಸಭೆ ಸಮಾರಂಭಗಳಲ್ಲಿ ಭಾಗವಹಿಸಬೇಕು ಎಂದರು.

ಮಾಜಿ ಶಾಸಕ ಎಂ. ಈ. ಮೂಳೆ ಮಾತನಾಡಿ ಮನುಷ್ಯನಿಗೆ ಜೀವನದಲ್ಲಿ ಸು:ಖ ಸಾಂತಿ ನೆಮ್ಮದಿ ಸಿಗಬೇಕಾದರೆ ಅದು ಮಠ ಮಾನ್ಯಗಳಿಂದ ಮಾತ್ರ ಸಾಧ್ಯ. ಇಂತಹ ಸುಂದರ ಪರಿಸರದಲ್ಲಿ ಈ ಮಠವು ಅಭಿವೃದ್ಧಿಯಾಗಬೇಕು. ಅದಕ್ಕಾಗಿ ಎಲ್ಲರು ಶ್ರಮಿಸುವುದು ಬಹಳ ಅಗತ್ಯವಿದೆ ಎಂದರು.



ಬಸವಕಲ್ಯಾಣ : ತ್ರಿಪುರಾಂತನ ಮರಿದೇವರ ಗುಡ್ಡದಲ್ಲಿ ಹಮ್ಮಿಕೊಂಡ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಸಮಾರಂಭವನ್ನು ಜಿ.ಪಂ ಸದಸ್ಯ ಗುಂಡುರಡ್ಡಿ ಉದ್ಘಾಟಿಸಿದರು.

ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿ ನೇತ್ರತ್ವ ವಹಿಸಿ ಮಾತನಾಡಿ ಕಾರ್ಯಕ್ರಮ ಯಶಸ್ವಿಗೆ ಸಹಕರಿಸಿ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.

ಹುಮನಾಬಾದನ ರೇಣುಕಾ ಗಂಗಾಧರ ಶಿವಾಚಾರ್ಯ ಸ್ವಾಮಿ, ಸಸ್ತಾಪೂರ ಸ್ವಾಮಿ, ಹುಲಸೂರ ಜಿಲ್ಲಾ ಪಂಚಾಯತ ಸದಸ್ಯ ಸುಧೀರ ಕಾಡಾದಿ ಸಹ ಮಾತನಾಡಿದರು. ವೇದಿಕೆಯಲ್ಲಿ ಮಂಠಾಳ ಜಿಲ್ಲಾ ಪಂಚಾಯತ ಸದಸ್ಯೆ ನಿರ್ಮಲಾ ವೈಜಿನಾಥ ಮಾನೆಗೋಪಾಳೆ, ಕಸಾಪ ಅಧ್ಯಕ್ಷ ರುದ್ರಮುಣಿ ಮಠಪತಿ, ಬಸವರಾಜ ಸ್ವಾಮಿ, ಮುಂತಾದವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಜಾಫರವಾಡಿಯ ಮಹಾರಾಜಪ್ಪ ಮೂಳೆ ಇವರಿಗೆ ಅಭಿನವ ಘನಲಿಂಗ ಶ್ರೀ ಪಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ರಮೇಶ ರಾಜೋಳೆ ನಿರೂಪಿಸಿದರು.

ಇದಕ್ಕು ಮುನ್ನ ನಗರದ ಬಸವೇಶ್ವರ ದೇವಸ್ಥಾನದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯ ಭಾವಚಿತ್ರ ಭವ್ಯ ಮೆರವಣಗೆ ನಡೆಸಿದರು. ಹಾರಕೂಡದ ಶ್ರೀ ಚೆನ್ನವೀರ ಶಿವಾಚಾರ್ಯ ಸ್ವಾಮಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಪ್ರೊ, ಸೂರ್ಯಕಾಂತ ಶೀಲವಂತ,ಪ್ರಭುಲಿಂಗಯ್ಯಟಂಕಸಾಲಿಮಠ ಮುಂತಾದವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

# ರೇಣುಕಾಚಾರ್ಯರ ಜಯಂತಿ ನಾಳೆ

ಬಸವಕಲ್ಯಾಣ



ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಸಮಾರಂಭವನ್ನು ಇದೇ ದಿನಾಂಕ 21 ರಂದು ಹೊರವಲಯದ ಶ್ರೀ ಜಗದ್ಗುರು ಘನಲಿಂಗ ರುದ್ರುಮುನಿ ಶಿವಾಚಾರ್ಯ ಗವಿ ಮಠದಲ್ಲಿ ಆಯೋಜಿಸಲಾಗಿದೆ.

ಬೆಳಗ್ಗೆ 7 ಗಂಟೆಗೆ ಕತೃಗದ್ದುಗೆಗೆ ಮಹಾರುದ್ರಾಭಿಷೇಕ ಹಾಗೂ ಮಹಾ ಮಂಗಳಾರುತಿ ಕಾರ್ಯಕ್ರಮ ನಡೆಯಲಿದೆ. ಪಂಚಾಚಾರ್ಯರ ಧ್ವಜಾರೋಹಣವನ್ನು ಮಠದ ಪೂಜ್ಯ ಶ್ರೀಗಳು ನಡೆಸಿಕೊಡುವರು. ಬೆಳಗ್ಗೆ 8 ಗಂಟೆಗೆ ಮೆರವಣಿಗೆ ಕಾರ್ಯಕ್ರಮ ಹಮ್ಮಿಕೊಂಡಿದ್ದು ಬಸವೇಶ್ವರ ದೇವಸ್ಥಾನದಿಂದ ಪ್ರಮುಖ ವೃತ್ತಗಳ ಮುಖಾಂತರ ಗವಿಮಠದವರೆಗೆ ಅಲಂಕೃತ ಸಾರೋಟಿನಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರದೊಂದಿಗೆಭವ್ಯಮೆರವಣಿಗೆ ನಡೆಸಲಾಗುತ್ತದೆ. ಪೂಜ್ಯ ಶ್ರೀ ಡಾ. ಚೆನ್ನವೀರ ಶಿವಾಚಾರ್ಯರು, ಪೂಜ್ಯ ಸದಾನಂದ ಅಪ್ಪಗಳು ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ.

ಸಂಯುಕ್ತ ಕರ್ನಾಟಕ, ಕಲಬುರಗಿ

ಮಂಗಳವಾರ, 22, ಮಾರ್ಚ್, 2016

Scanned with CamScanner

# ಸಮೃದ್ಧ ಸಮಾಜಕ್ಕೆ ಸಂಸ್ಕೃತಿ ಅಗತ್ಯ



ತೆಲಂಗಾಣದ ಜಹಿರಾಬಾದ ತಾಲೂಕಿನ ಮಲಗಿ ಗ್ರಾಮದಲ್ಲಿ ಆಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಗ್ರಾಪಂ ಅಧ್ಯಕ್ಷ ಭೂಮರಡ್ಡಿ ಪಾಟೀಲ ರಾಯಕೋಡ ಉದ್ಘಾಟಿಸಿದರು. ಅಭಿನವ ಘನಲಿಂಗ ರುದ್ರಮುನಿ ಶ್ರೀ ಇತರರಿದ್ದರು.

**ಬಸವಕಲ್ಯಾಣ:** ಶಾಂತಿ, ನೆಮ್ಮದಿಯಿಂದ ಕೂಡಿದ ಸಮೃದ್ಧ ಸಮಾಜಕ್ಕೆ ಕಲೆ, ಸಾಹಿತ್ಯ ಸಂಸ್ಕೃತಿಯ ಅಗತ್ಯತೆ ಇದೆ ಎಂದು ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶ್ರೀಗಳು ನುಡಿದರು.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಹಾಗೂ ವಿಶ್ವ ಶಾಂತಿ ಟ್ರಸ್ಟ್. ತಡೋಳಾ ಆಶ್ರಯದಲ್ಲಿ ನೆರೆಯ ತೆಲಂಗಾಣದ ಜಹಿರಾಬಾದ್ ತಾಲೂಕಿನ ಮಲಗಿ ಗ್ರಾಮದಲ್ಲಿಯ ಮಾಹತ್ಮ ಬೊಮ್ಮಗೊಂಡೇಶ್ವರ ದೇವಸ್ಥಾದ ಪರಿಸರದಲ್ಲಿ ಆಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಆಧುನಿಕತೆಯ ಹೆಸರಿನಲ್ಲಿ ನಶಿಸಿ ಹೋಗುತ್ತಿರುವ ನಮ್ಮ ದೇಶಿ ಕಲೆ, ಸಂಸ್ಕೃತಿಯನ್ನು ಉಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಈ ಭಾಗದ ಸಂಸ್ಕೃತಿ ಹಾಗೂ ಜಾನಪದ ಕಲೆಗಳಾದ ಹಂತಿಪದ, ಗೀಗಿಪದ, ಕೋಲಾಟ, . ಬಯಲಾಟ, ತತ್ವಪದ, ಗರತಿಯಹಾಡು, ಜೋಗುಳಪದ, ಇತರ ಕಲೆಗಳೂ ಇಂದು ನಶಿಸಿ ಹೋಗಿತ್ತಿವೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಗ್ರಾಪಂ ಅಧ್ಯಕ್ಷ ಭೂಮರಡ್ಡಿ ಪಾಟೀಲ್ ರಾಯಕೊಡ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ನಾಗಶೆಟ್ಟಿ ಧರಮಪ್ಪೂರ್, ನಿರಹಂಕಾರ ಬಂಡಿ, ಪ್ರಭುಸ್ವಾಮಿ ಮಠ. ದಶರಥ ವಡ್ಡಿ, ಸಿದ್ದಾರಡ್ಡಿ ಪಾಟೀಲ ಮಾತನಾಡಿದರು. ಬಸವರಾಜ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಶಿವಾನಂದ ಸ್ವಾಮಿ ಖತಗಾಂವ, ಪುನೀತ ಸಾಳೆ, ಮರುಳಾರಾಧ್ಯ ಅಗ್ರಹಾರ, ಲೋಕೇಶ ಮಂಗಲಗಿ, ಮಹೇಶ ಮಠಪತಿ, ಶ್ರೀನಿವಾಸ ಮಠಪತಿ ಇದ್ದರು. ಪ್ರಕಾಶಕುಮಾರ ಸಂಗೂಳಗಿ ಸ್ವಾಗತಿಸಿದರು. ಪ್ರಕಾಶ ಡೊಳೆ ಪ್ರಾಸ್ತಾವಿಕ ಮಾತನಾಡಿದರು. ವಿಶ್ವರಾಧ್ಯ ಅಗ್ರಹಾರ ನಿರೂಪಿಸಿದರು. ಬಾಬುರಾವ ಯರನಳ್ಳಿ ವಂದಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮ: ಜಿಲ್ಲೆಯ ಜನಪ್ರೀಯ ಕಲಾವಿದರಾದ ರಘುನಾಥ ಹಡಪದ ಚಿಟ್ಟಾ ಹಾಗೂ ಸಂಗಡಿಗರು ತತ್ವಪದ, ಬಸವೇಶ್ವರ ಕಲಾ ತಂಡ ಬೇಲೂರು ವಚನ ಗಾಯನ, ಬಾಬುರಾವ ಪಾಟೀಲ ಹಾಗೂ ಸಂಗಡಿಗರು ಖತಗಾಂವ ಭಜನೆ, ಅಂಬೇಡ್ಕರ್ ಸ್ವಸಹಾಯ ಸಂಘ ಮರಖಲ್ ಶೋಭಾನ ಪದ, ಮನ್ಮಥ ಸ್ವಾಮಿ ಕೋಲಾಟ ಸಂಘ ಖತಗಾಂವ ಕೋಲಾಟ, ರವಿಕುಮಾರ ವಡ್ಡಿ ಹಾಗೂ ಸಂಗಡಿಗರು ಮಲಗಿ ಕೋಲಾಟ, ಸುಭದ್ರಬಾಯಿ ಹಾಗೂ ಸಂಗಡಿಗರಿಂದ ಬಿಸುವ, ಕುಟ್ಟುವ ಹಾಡು, ಬೊಮ್ಮಗೊಂಡೇಶ್ವರ ಭಜನೆ ಸಂಘ ಮಲಗಿಯವರಿಂದ ಜಾನಪ್ದದ ಗಾಯನ, ಗೋದಾವರಿ ಅಗ್ರಹಾರ ಹಾಗೂ ಸಂಗಡಿಗರಿಂದ ಜೋಗುಳ ಪದ, ರಾಜಕುಮಾರ ಹಾಗೂ ಸಂಗಡಿಗರು ಭಾವಗೀತೆ ಹಾಡಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ
21 ಮಾರ್ಚ್ 2016
21 MARCH 2016

# ಜಗದ್ಗುರು ರೇಣುಕಾಚಾರ್ಯ ಜಯಂತಿ

**ವಿಶ್ವವಾಣಿ ಸುದ್ದಿಮನೆ** ಬಸವಕಲ್ಯಾಣ

ಸಮಾಜಕ್ಕೆ ಮಠಾಧೀಶರ, ಪೂಜ್ಯರ ಮಾರ್ಗ ದರ್ಶನದ ಅಗತ್ಯವಿದೆ ಎಂದು ಜಿಪಂ ಸದಸ್ಯ ಗುಂಡುರೆಡ್ಡಿ ಹೇಳಿದರು.

ತ್ರಿಪುರಾಂತದ ಮರಿದೇವರ ಗುಡ್ಡದಲ್ಲಿ ನಡೆದ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗ ಮಾನೋತ್ಸವ ಹಾಗೂ ಧರ್ಮ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ನಿಸ್ವಾರ್ಥ ಭಾವದಿಂದ ಸೇವೆ ಸಲ್ಲಿಸಬೇಕು. ಮಠಕ್ಕೆ ವೈಯುಕ್ತಿಕವಾಗಿ 51 ಸಾವಿರ ರು. ದೇಣಿಗೆ ನೀಡು ವುದಾಗಿ ಭರವಸೆ ನೀಡಿದರು.

ಹಿರನಾಗಾಂವ ಮಠದ ಶ್ರೀ ಜಯಶಾಂತಲಿಂಗ ಮಹಾಸ್ವಾಮಿ ಸಾನಿಧ್ಯವಹಿಸಿ ಮಾತನಾಡಿ, ಸಮಾಜಕ್ಕಾಗಿ ಶ್ರಮಿಸಬೇಕು. ಶಾಂತಿ, ನೆಮ್ಮದಿಯ ಜೀವನಕ್ಕೆ ಅಧ್ಯಾತ್ಮ ನೆರವಾಗುತ್ತದೆ ಎಂದರು.

ಮಾಜಿ ಶಾಸಕ ಎಂ.ಜಿ ಮುಳೆ ಮಾತನಾಡಿ, ಮಠ ಮಾನ್ಯಗಳಿಂದ ಜೀವನದಲ್ಲಿ ಸುಖ, ಶಾಂತಿ, ನೆಮ್ಮದಿ ಸಿಗಬಲ್ಲದು ಎಂದರು. ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿ ನೇತ್ರತ್ವ ವಹಿಸಿ ಮಾತನಾಡಿದರು. ಹುಮನಾಬಾದ್ ರೇಣುಕಾ ಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಸಸ್ತಾಪೂರ ಸ್ವಾಮೀಜಿ, ಹುಲಸೂರ ಜಿಲ್ಲಾ ಪಂಚಾಯಿತಿ ಸದಸ್ಯ ಸುಧೀರ ಕಾಡಾದಿ ಮಾತನಾಡಿದರು. ಇದಕ್ಕೂ ಮುನ್ನ ನಗರದ ಬಸವೇಶ್ವರ ದೇವಸ್ಥಾನದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯ ಭಾವಚಿತ್ರ ಭವ್ಯ ಮೆರವಣಿಗೆ ನಡೆಯಿತು. ಚೆನ್ನವೀರ ಶಿವಾ ಚಾರ್ಯರು ಚಾಲನೆ ನೀಡಿದರು. ಪ್ರೊ. ಸೂರ್ಯ ಕಾಂತ ಶೀಲವಂತ, ಪ್ರಭುಲಿಂಗಯ್ಯ ಪಾಲ್ಗೊಂಡಿದ್ದರು.



ಬಸವಕಲ್ಯಾಣದ ತ್ರಿಪುರಾಂತದ ಮರಿದೇವರ ಗುಡ್ಡದಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿ ನಡೆಯಿತು. ಮಠಾಧೀಶರು, ಗಣ್ಯರು ಇದ್ದರು.

ವಿಶ್ವವಾಣಿ 22.03.2016 | ಮಂಗಳವಾರ

Scanned with CamScanner

# ಕಲೆ ಸಂಸ್ಕೃತಿಗೆ ಜನರ ಪ್ರೋತ್ಸಾಹ ಅಗತ್ಯ: ಘನಲಿಂಗ ರುದ್ರಮುನಿ ಶಿವಾಚಾರ್ಯ

ಬಸವಕಲ್ಯಾಣ

ಈಗಿನ ಕಾಲದಲ್ಲಿ ಸಂಸ್ಕೃತಿ ಛಿದ್ರವಾಗುತ್ತಿದೆ. ಹೀಗಾಗಿ ಸಂಸ್ಕೃತಿ ಅಭಿವೃದ್ಧಿಯಾಗಬೇಕು. ಜತೆಗೆ ಕಲೆ ಸಂಸ್ಕೃತಿಗೆ ಜನರ ಪ್ರೋತ್ಸಾಹ ಅವಶ್ಯಕವಿದೆ ಎಂದು ಬಸವಕಲ್ಯಾಣ ಗವಿ ಮಠದ ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಜಹಿರಾಬಾದಿನ ಮಲಗಿ ಗ್ರಾಮದ ಶ್ರೀ ಮಹಾತ್ಮ ಗೊಂಡೇಶ್ವರ ದೇವಸ್ಥಾನದಲ್ಲಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಹಾಗೂ ವಿಶ್ವ ಶಾಂತಿ ಟ್ರಸ್ಟ್. ತಡೋಳಾ ಇವರುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ ಹಿಂದಿನ ಕಾಲದಲ್ಲಿ ನಮ್ಮ ಜನರು ಪ್ರತಿಯೊಂದು ಕೆಲಸಕ್ಕೂ ಕಾರ್ಯಕ್ಕೂ ಒಂದು ರೀತಿಯ ಕಲೆಯಿಂದ ಕೂಡಿರುತ್ತಿತ್ತು ಎಂದು ಹೇಳಿ ನಶಿಸಿ ಹೋಗುತ್ತಿರುವ ಕಲೆಯನ್ನು ಉಳಿಸಬೇಕಾಗಿದೆ.



ಜಹಿರಾಬಾದಿನ ಮಲಗಿ ಗ್ರಾಮದ ಮಹಾತ್ಮಗೊಂಡೇಶ್ವರ ದೇವಸ್ಥಾನದಲ್ಲಿ ಆಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬಸವಕಲ್ಯಾಣ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಈ ದೀಶೆಯಲ್ಲಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ವಿಶ್ವ ಶಾಂತಿ ಟ್ರಸ್ಟ. ಅಡಿಯಲ್ಲಿ ನಡೆಯುತ್ತಿರುವ ಈ ಸಾಂಸ್ಕೃತಿಕ ಕಾರ್ಯಕಮವು ಈ ಭಾಗದಲ್ಲಿ ಹೆಚ್ಚು ಹೆಚ್ಚು ನಡೆಸಲು ಪ್ರಾಧಿಕಾರವು ಸಹಕಾರ ನೀಡಲೆಂದು ಆಶಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಗ್ರಾಮದ ಸರ್ಪಂಚ ಭೂಮರಡ್ಡಿ ಪಾಟಿಲ ರಾಯಕೋಡ ನಮ್ಮ ವ್ಯವಹಾರಿಕ ಭಾಷೆಯು ಸಹ ಕನ್ನಡದಾಗಿದೆ. ಇಂತಹ ಸಂಸ್ಕೃತಿಕ ಕಾರ್ಯಕ್ರಗಳು ಇನ್ನಷ್ಟು ಗಡಿ ಭಾಗದಲ್ಲಿ ಆಗುವುದು ಅತಿ ಅವಶ್ಯಕವಾಗಿದೆ. ನಮ್ಮ ಜನಪರರ ಸಂಸ್ಕೃತಿಯು ಮರೆಮಾಚುವ ಕಾಲದಲ್ಲಿ ಇಂತಹ ಕಾರ್ಯಕ್ರಮಗಳು ನಡೆದರೆ ಅವುಗಳನ್ನು ಬೆಳೆಸಲು ಸಹಾಯಕಾರಿಯಾಗುತ್ತದೆ. ಎಂದು ಹೇಳಿದ್ದರು.

ಮುಖ್ಯ ಅತಿಥಿಗಳಾದ ನಾಗಶೆಟ್ಟಿ ಧರಮಪೂರ್ ಗ್ರಾಮೀಣ ಹಾಡೀನ ಸೊಗಡನ್ನು ಹಾಡಿ ಜನರಿಗೆ ಹಳೆಕಾಲಕ್ಕೆ ಕರೆದುಕೊಂಡು ಹೋಗಿ ನಮ್ಮ ಭಾಷೆಯ ಬೇರುಗಳನ್ನು ಉಳಿಸುವದಕ್ಕಾಗಿ ಕರ್ನಾಟಕ ಸರ್ಕಾರ ಇಂತಹ ಬಹಳಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡು ಭಾಷೆಯ ಬೆಳವಣಿಗೆಗೆ ಕಡೆಗೆ ಹಚ್ಚಿನ ಗಮನವನ್ನು ಹರಿಸಬೇಕೆಂದು ಆಗ್ರಹಿಸಿದರು. ನಿರಹಂಕಾರ ಬಂಡಿ, ಅಧ್ಯಕ್ಷತೆ ವಹಿಸಿದ ಬಸವರಾಜ ಸ್ವಾಮಿ ಸಹ ಮಾತನಾಡಿದರು. ವೇದಿಕೆಯಲ್ಲಿ ಪ್ರಭುಸ್ವಾಮಿ ಎಮ್ ಮಠ. ದಶರಥ ವಡ್ಡಿ, ಸಿದ್ಧಾರಡ್ಡಿ ಪಾಟಿಲ ಉಪಸ್ಥಿತರಿದ್ದರು.

ಸ್ವಾಗತ ಪ್ರಕಾಶಕುಮಾರ ಸಂಗೂಳಗಿ, ಪ್ರಾಸ್ಥವಿಕ ನುಡಿ ಪ್ರಕಾಶ ಢೋಳೆ, ವಂದನಾರ್ಪಣೆ ಬಾಬುರಾವ ಯರನಳ್ಳಿ, ನಿರೂಪಣೆ ವಿಶ್ವರಾಧ್ಯ ಅಗ್ರಹಾರ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಶಿವಾನಂದ ಸ್ವಾಮಿ ಖತಗಾಂವ, ಪುನೀತ ಸಾಳೆ, ಮರುಳಾರಾಧ್ಯ ಅಗ್ರಹಾರ,ಲೋಕೆಶ ಮಂಗಲಗಿ, ಮಹೇಶ ಮಠಪತಿ, ಶ್ರೀನಿವಾಸ ಮಠಪತಿ, ಸೇರಿದಂತೆ ಇತರರು ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿತ್ತು.

Scanned with CamScanner

# ಜನರ ಕಲ್ಯಾಣವೇ ಮಠಗಳ ಆಶಯ: ಸ್ವಾಮೀಜಿ

ಬಸವಕಲ್ಯಾಣ: ದಾರಿ ತಪ್ಪುತ್ತಿರುವ ಸಮಾಜವನ್ನು ಜಾಗೃತಗೊಳಿಸುವ ಮೂಲಕ ಜನರ ಕಲ್ಯಾಣ ಮಾಡುವುದೆ ಮಠಗಳ ಆಶಯವಾಗಿದೆ ಎಂದು ಹಿರನಾಗಾಂವನ ಜಯಶಾಂತಲಿಂಗ ಸ್ವಾಮೀಜಿ ನುಡಿದರು.

ತ್ರಿಪುರಾಂತ ಗವಿಮಠದಲ್ಲಿ ಆಯೋಜಿಸಿದ್ದ ಜಗದ್ಗುರು .ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮಸಭೆ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಮಠಗಳನ್ನು ಬೆಳೆಸುವಲ್ಲಿ ಭಕ್ತರ ಪಾತ್ರ ಅತ್ಯಂತ ಮಹತ್ವದ್ದು ಸತ್ಕಾರ್ಯಗಳಿಗೆ ಉದಾರ ಮನಸ್ಸಿನಿಂದ ದಾನ ಮಾಡುವುದು ಪುಣ್ಯದ ಕಾರ್ಯ ಎಂದರು.

ಇಲ್ಲಿಯ ಗವಿ ಅತ್ಯಂತ ಪವಿತ್ರವಾದ ತಾಣ. ಶ್ರೀಗಳು ಮಠದ ಪರಂಪೆ ಮುಂದುವರಿಸಿಕೊಂಡು ಹೋಗುವ ಜತೆಗೆ ಧರ್ಮ, ಸಂಸ್ಕೃತಿ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಉತ್ತಮ ಕಾರ್ಯ ಮಾಡುತ್ತಿದ್ದಾರೆ. ಈ ಮಠಕ್ಕೆ ಇಲ್ಲಿ ಸೇರಿರುವ ಭಕ್ತ ಸಮೂಹವೇ ದೊಡ್ಡ ಆಸ್ತಿಯಾಗಿದೆ. ನಿಮ್ಮೆಲ್ಲರ ಸಹಕಾರದಿಂದ ಮಠದ ಪ್ರಗತಿಯಾಗಲಿ ಎಂದರು.

ಅಫ್ಜಲ್‌ಪುರನ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು ಆಶೀರ್ವಚನ ನೀಡಿ, ಗುರು ಮಾರ್ಗದರ್ಶನದಲ್ಲಿ ಧರ್ಮದ ಮಾರ್ಗದಲ್ಲಿ ನಡೆಯಬೇಕು. ಅಂದಾಗ ಬದುಕಿನಲ್ಲಿ ಶಾಂತಿ-ನೆಮ್ಮದಿ ಪಡೆಯಲು ಸಾಧ್ಯವಾಗುತ್ತದೆ ಎಂದರು. ಜಿಪಂ ಸದಸ್ಯ ಗುಂಡುರೆಡ್ಡಿ ಉದ್ಘಾಟಿಸಿದರು. ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ, ಸಸ್ತಾಪುರನ ಸದಾನಂದ ಅಪ್ಪಗಳು, ಮಹಾಗಾಂವನ ಗುರುಲಿಂಗ ಶಿವಾಚಾರ್ಯರು ಸಮ್ಮುಖ ವಹಿಸಿದ್ದರು. ಮಾಜಿ ಶಾಸಕ ಎಂ.ಜಿ. ಮುಳೆ, ಜಿಪಂ ಸದಸ್ಯ ಸುಧೀರ ಕಾಡಾದಿ, ಕಸಾಪ ತಾಲೂಕಾಧ್ಯಕ್ಷ .ರುದ್ರಮಣಿ . ಮಠಪತಿ ಮಾತನಾಡಿದರು. ಜಿಪಂ ಸದಸ್ಯೆ ನಿರ್ಮಲಾ ಮಾನೆಗೋಪಾಳೆ, ಶರಣಪ್ಪ ಬಿರಾದಾರ, ಬಸವರಾಜ ಸ್ವಾಮಿ ಇದ್ದರು. ಸೂರ್ಯಕಾಂತ ಶಿಲವಂತ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ಪಂಡಿತ ಪುಟ್ಟರಾಜ ಕವಿ ಕಲಾ ಬಳಗದಿಂದ ಸಂಗೀತ ಕಾರ್ಯಕ್ರಮ ಜರುಗಿತು.

**ಮೆರವಣಿಗೆ:** ಕಾರ್ಯಕ್ರಮಕ್ಕೂ ಮುನ್ನ ಬಸವೇಶ್ವರ ದೇವಸ್ಥಾನದಿಂದ ಮುಖ್ಯ ರಸ್ತೆ ಮಾರ್ಗವಾಗಿ ಗವಿಮಠದವರೆಗೆ ಸಾಂಸ್ಕೃತಿಕ ವೈಭವದೊಂದಿಗೆ ಅಲಂಕೃತ ವಾಹನದಲ್ಲಿ ಜಗದ್ಗುರು ರೇಣುಕಾಚಾರ್ಯ ಭಾವಚಿತ್ರದ ಭವ್ಯ ಮೆರವಣಿಗೆ ಜರುಗಿತು.

**ಪ್ರಶಸ್ತಿ:** ತ್ರಿಪುರಾಂತ ಗವಿ ಮಠದಿಂದ ಪ್ರತಿವರ್ಷ ನೀಡಲಾಗುವ ಅಭಿನವ ಘನಲಿಂಗಶ್ರೀ ಪ್ರಶಸ್ತಿಯನ್ನು ಜಾಫರವಾಡಿ ಮಹಾರಾಜಪ್ಪ ಮುಳೆ ಅವರಿಗೆ ಪ್ರದಾನ ಮಾಡಿ ಗೌರವಿಸಲಾಯಿತು.



ಬಸವಕಲ್ಯಾಣ: ತ್ರಿಪುರಾಂತ ಗವಿಮಠದಲ್ಲಿ ನಡೆದ ಧರ್ಮಸಭೆಯಲ್ಲಿ ಮಹಾರಾಜಪ್ಪ ಮುಳೆ ಅವರಿಗೆ ಅಭಿನವ ಘನಲಿಂಗಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಉದಯವಾಣಿ ಕಲಬುರಗಿ
ಮಂಗಳವಾರ | ಮಾರ್ಚ್ | 22 | 2016

# ಧರ್ಮದ ಮಾರ್ಗದಲ್ಲಿ ನಡೆಯಿರಿ : ಕಾಡಾಧಿ

ಬಸವಕಲ್ಯಾಣ

ಎಲ್ಲರೂ ಧರ್ಮದ ಮಾರ್ಗದಲ್ಲಿ ಸಾಗಿದರೆ ಸು:ಖ, ಶಾಂತಿ, ನೆಮ್ಮದಿ ಸಿಗುತ್ತದೆ ಎಂದು ಹುಲಸೂರ ಜಿ.ಪಂ ಸದಸ್ಯ ಸುಧೀರ(ಪಪ್ಪು) ಕಾಡಾಧಿ ಹೇಳಿದರು.

ನಗರದ ಶ್ರೀ ಸದ್ಗುರು ಮೌನೇಶ್ವರರ 6 ನೇ ಜಾತ್ರಾ ಮಹೋತ್ಸವದ ನಿಮಿತ್ಯವಾಗಿ ಆಯೋಜಿಸಿದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿ ದೇವಸ್ಥಾನದ ಯಾವುದಾದರೂ ಕೆಲಸಕ್ಕೆ ಸಹಾಯ ಮಾಡುವ ಭರವಸೆ ನೀಡಿದರು.

ದಿವ್ಯ ಸಾನಿಧ್ಯ ವಹಿಸಿದ ಹಿರೇನಾಗಾಂವದ ಪೂಜ್ಯ ಶ್ರೀ ಜಯಶಾಂತಲಿಂಗ ಮಹಾಸ್ವಾಮಿ ಮಾತನಾಡಿ ಸದ್ಗುರು ಮೌನೇಶ್ವರರು ಭಕ್ತರನ್ನು ಉದ್ಧಾರ ಮಾಡಲು ಬಂದರು. ಎಲ್ಲರನ್ನು ಅಪ್ಪಿಕೊಳ್ಳುವ ಭಾವೈಕ್ಯತೆಯ ಹರಿಕಾರರಾಗಿದ್ದರು ಎಂದರು.

ನೇತ್ರತ್ವ ವಹಿಸಿದ ತ್ರಿಪುರಾಂತ ಗವಿಮಠದ ಪೂಜ್ಯ ಶ್ರೀ ಅಭಿನವ ಘನಲಿಂಗರುದ್ರಮುನಿಶಿವಾಚಾರ್ಯರು ಮಾತನಾಡಿ ಹಿಂದು,ಮುಸ್ಲಿಂ ಎಂಬ ಭೇದವನ್ನು ಮೌನೇಶ್ವರರು ತೊಡೆದು ಹಾಕಿ ನಾವೆಲ್ಲರೂ ಒಂದೇ ಎನ್ನುವ ಭಾವನೆ ಮೂಡಿಸಿದರು. ನಾವು ಸಹ ಅವರಿವರೆನ್ನದೆ ಒಳಿತು ಮಾಡುವ ಭಾವನೆ ಬೆಳೆಸಿಕೊಳ್ಳಬೇಕು. ಶರಣ ಸತ್ಸಂಗ ಮಾಡಿ ಎಂದರು.

ಸಸ್ತಾಪೂರದ ಪೂಜ್ಯ ಸದಾನಂದ ಅಪ್ಪಗಳು ಕೆಲವೇ ವರ್ಷಗಳಲ್ಲಿ ಪಂಚಾಳ ಸಮಾಜದವರು ಇಂತಹ ಅದ್ಭುತ ಕಾರ್ಯ ಮಾಡುತ್ತಿರುವುದಕ್ಕೆ ಶ್ಲಾಘಿಸಿದರು.

ಇನ್ನೋರ್ವರಾದ ಶೇಖರ ಶೀಲವಂತ ಅಕ್ಕಸಾಲಿಗ ಸಮಸ್ಯೆಗಳ ಬಗ್ಗೆ ಸರಕಾರ ಮುತುವರ್ಜಿ ವಹಿಸಬೇಕು. ಇದಕ್ಕೆ ಎಲ್ಲರು ಬೆಂಬಲಿಸಿ ಎಂದರು. ವೇದಿಕೆಯಲ್ಲಿ ವಿಶ್ವಕರ್ಮ ಸಮಾಜದ ಅಧ್ಯಕ್ಷ ತಿಪ್ಪಣ್ಣ ಪಂಚಾಳ, ಉಪಾಧ್ಯಕ್ಷ ಹರಿಶ್ಚಂದ್ರ ಪಾಟೀಲ್, ಖಜಾಂಚಿ ಮೋಹನ ಪೊದ್ದಾರ ಅಲ್ಲದೆ ಕಾಶಿನಾಥ ಪಂಚಾಳ, ಬಸವಣಪ್ಪ ಪಂಚಾಳ, ಮಹಾದೇವಪ್ಪ ಪಂಚಾಳ, ವಿದ್ಯಾಧರ ಪಂಚಾಳ ಸೇರಿದಂತೆ ಇನ್ನಿತರರು ಇದ್ದರು.



ಬಸವಕಲ್ಯಾಣ : ನಗರದ ಶ್ರೀ ಸದ್ಗುರು ಮೌನೇಶ್ವರರ 6 ನೇ ಜಾತ್ರಾ ಮಹೋತ್ಸವದ ನಿಮಿತ್ಯವಾಗಿ ಆಯೋಜಿಸಿದ ಧಾರ್ಮಿಕ ಸಭೆಯನ್ನು ಜಿ.ಪಂ ಸದಸ್ಯ ಸುಧೀರ ಕಾಡಾಧಿ ಉದ್ಘಾಟಿಸಿದರು.

ಮಂಗಳವಾರ, 29, ಮಾರ್ಚ್, 2016, ಕಲಬುರಗಿ

Scanned with CamScanner

### ಸದ್ಗುರು ಮೌನೇಶ್ವರರ ಆರನೇ ಜಾತ್ರಾ ಮಹೋತ್ಸವದ ನಿಮಿತ್ತ ಧರ್ಮಸಭೆ

# ಭಾವೈಕ್ಯತೆಯ ಹರಿಕಾರ

ಬಸವಕಲ್ಯಾಣ: ಸದ್ಗುರು ಮೌನೇಶ್ವರರು ಸಮಾನತೆ ಮತ್ತು ಭಾವೈಕ್ಯತೆಯ ಹರಿಕಾರರು ಎಂದು ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶ್ರೀಗಳು ನುಡಿದರು.

ನಗರದ ಸದ್ಗುರು ಮೌನೇಶ್ವರರ 6ನೇ ವರ್ಷದ ಜಾತ್ರಾ ಮಹೋತ್ಸವ ನಿಮಿತ್ತ ಮೌನೇಶ್ವರ ದೇವಸ್ಥಾನದ ಆವರಣದಲ್ಲಿ ಆಯೋಜಿಸಿದ ಧರ್ಮಸಭೆಯ ನೇತೃತ್ವ ವಹಿಸಿ ಮಾತನಾಡಿದ ಶ್ರೀಗಳು, ಮನಸ್ಸುಗಳನ್ನು ಪರಿಶುದ್ಧಗೊಳಿಸುವ ಜತೆಗೆ ಸಮಾಜದಲ್ಲಿ ಎಲ್ಲರು ಒಂದೇ ಎನ್ನುವ ಭಾವ ಬೆಳೆಸುವಲ್ಲಿ ಇಂಥ ಸಮಾರಂಭಗಳು ಪೂರಕವಾಗಿವೆ ಎಂದರು.

ವಚನಗಳು ಸಾರ್ಥಕ ಬದುಕಿಗೆ ಮಾರ್ಗದರ್ಶಿಯಾಗಿವೆ. ಶರಣರು ಕಾಯಕದಲ್ಲಿ ಸಂತೃಪ್ತಿ ಕಂಡು ಕಾಯಕಕ್ಕೆ ದೈವಿ ಸ್ವರೂಪ ನೀಡುವ ಮೂಲಕ ಕಾಯದಲ್ಲಿಯೇ ಭಗವಂತನನ್ನು ಕಂಡಿದ್ದಾರೆ. ಆದ್ದರಿಂದ ಅವರ ವಚನಗಳನ್ನು ಅರಿತುಕೊಂಡು ಬದುಕಿನಲ್ಲಿ ಅಳವಡಿಸಿಕೊಳ್ಳಲು ಪ್ರತಿಯೊಬ್ಬರು ಪ್ರಯತ್ನಿಸಬೇಕಾದ ಅಗತ್ಯವಿದೆ ಎಂದರು.

ಹಿರನಾಗಾಂವನ ಜಯಶಾಂತಲಿಂಗ ಶ್ರೀ ನೇತೃತ್ವ ವಹಿಸಿ, ಆಶೀರ್ವಚನ ನೀಡಿದ ಅವರು, ಸಮಾನತೆಯ ಹರಿಕಾರರಾದ ಮೌನೇಶ್ವರರ ಜಾತ್ರಾ ಮಹೋತ್ಸವದ ಪ್ರತಿವರ್ಷ ಅರ್ಥಪೂರ್ಣವಾಗಿ ಆಚರಿಸಿಕೊಂಡು ಬರುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ಶ್ರೀಗಳು, ಧರ್ಮದ ದಾರಿಯಲ್ಲಿ ನಡೆದಾದ ಜೀವನದಲ್ಲಿ ಶಾಂತಿ, ನೆಮ್ಮದಿ ಕಾಣಲು ಸಾಧ್ಯ ಎಂದರು.

ಜಿಪಂ ಸದಸ್ಯ ಸುಧೀರ ಕಾಡಾದಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮೌನೇಶ್ವರ ದೇವಸ್ಥಾನದ ಅಭಿವೃದ್ಧಿ ಕಾರ್ಯಗಳಿಗೆ ತಾವು ಕೂಡ ಸಹಾಯಕ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಸಸ್ತಾಪೂರನ ಸದಾನಂದ ಅಪ್ಪಗಳು ಆಶೀರ್ವಚನ ನೀಡಿದರು. ರಾಜಾಬಾಗ ಸವಾರ ದರ್ಗಾದ ಮುಖ್ಯಸ್ಥ ಪೂಜ್ಯ ಖಾಜಾ ಜಿಯಾಉಲ್ ಹಸನ ಜಾಗಿರದಾರ ಸಮ್ಮುಖ ವಹಿಸಿದ್ದರು. ಸಮಾಜದ ಅಧ್ಯಕ್ಷ ತಿಪ್ಪಣ್ಣ




ಬಸವಕಲ್ಯಾಣದ ಮೌನೇಶ್ವರರ 6ನೇ ವರ್ಷದ ಜಾತ್ರಾ ಮಹೋತ್ಸವದ ನಿಮಿತ್ತ ದೇವಸ್ಥಾನ ಆವರಣದಲ್ಲಿ ನಡೆದ ಧರ್ಮ ಸಭೆಯನ್ನು ಜಿಪಂ ಸದಸ್ಯ ಸುಧೀರ ಕಾಡಾದಿ ಉದ್ಘಾಟಿಸಿದರು. ಅಭಿನವ ಘನಲಿಂಗ ರುದ್ರಮುನಿ ಶ್ರೀ, ಜಯಶಾಂತಲಿಂಗ ಶ್ರೀ, ಸದಾನಂದ ಅಪ್ಪಗಳು ಇದ್ದರು.


ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI « KALABURAGI
ಮಂಗಳವಾರ
29 ಮಾರ್ಚ್ 2016
29 MARCH 2016





ಬಸವಕಲ್ಯಾಣದ ಬಸವೇಶ್ವರ ಚಿತ್ರ ಕಲಾ ಕಾಲೇಜಿನಲ್ಲಿ ನಡೆದ ಕಲಾ ಮಹೋತ್ಸವದಲ್ಲಿ ಸಿದ್ರಾಮಪ್ಪ ಪಾಟೀಲ್, ಕಿಶನ ಪೆಂಟರ್, ಖುರ್ಷಿದಮಿಯ್ಯ, ಶಶಿಧರ ಪಾಟೀಲ್ ಅವರನ್ನು ಸನ್ಮಾನಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪ್ರಭುಲಿಂಗಯ್ಯ ಟಂಕಸಾಲಿಮಠ ಉಪಸ್ಥಿತರಿದ್ದರು.


ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಭಾನುವಾರ
20 ಮಾರ್ಚ್ 2016
20 MARCH 2016



Scanned with CamScanner

# ಕುಡಿವ ನೀರಿಗೆ ಚಾಲನೆ



ಬಸವಕಲ್ಯಾಣ ನೇಸರ ಟ್ರಸ್ಟ್ ಮತ್ತು ಜೈಕಿಸಾನ್ ಯುಥ್ ಕ್ಲಬ್‌ನ ಆಶ್ರಯದಲ್ಲಿ ನಗರದ ಹಳೆ ತಹಸಿಲ್ ಕಚೇರಿ ಎದುರು ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗೆ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು.

ಬಸವಕಲ್ಯಾಣ: ಇಲ್ಲಿಯ ನೇಸರ ಟ್ರಸ್ಟ್ ಮತ್ತು ಜೈಕಿಸಾನ್ ಯುಥ್ ಕ್ಲಬ್‌ನ ಆಶ್ರಯದಲ್ಲಿ ನಗರದ ಹಳೆ ತಹಸಿಲ್ ಕಚೇರಿ ಎದುರು ಹಾಗೂ ಟೂರಿಸ್ಟ್ ಲಾಡ್ಜ್ ಮುಂಭಾಗದಲ್ಲಿ ಸಾರ್ವಜನಿಕರಿಗಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗೆ ಚಾಲನೆ ನೀಡಲಾಯಿತು.

ಮಡಿಕೆಗಳಿಗೆ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದ ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಬರದ ಹಿನ್ನೆಲೆಯಲ್ಲಿ ಎಲ್ಲೆಡೆ ಕುಡಿಯುವ ನೀರಿನ ಅಭಾವ ಎದುರಾಗಿದ್ದು, ಬೇಸಿಗೆಯಲ್ಲಿ ಬಾಯಾರಿದ ಜನರಿಗೆ ಕುಡಿಯಲು ಶುದ್ಧ ನೀರಿನ ವ್ಯವಸ್ಥೆ ಮಾಡಿರುವ ಟ್ರಸ್ಟ್‌ನ ಕಾರ್ಯ ಶ್ಲಾಘನೀಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಪಂ ಸದಸ್ಯ ಆನಂದ ಪಾಟೀಲ್ ಮಾತನಾಡಿ, ನೀರಿನ ಸಮಸ್ಯೆಯಿಂದ ಬಳಲುತ್ತಿರುವ ನಾಡಿನಲ್ಲಿ ಜನರಿಗೆ ಅಗತ್ಯವಿರುವ ವ್ಯವಸ್ಥೆ ಮಾಡುವಲ್ಲಿ ಆಡಳಿತ ವಿಫಲವಾಗಿದೆ. ಸರ್ಕಾರ ಮಾಡದಿರುವ ಕೆಲಸ ಇಂದು ಸಂಘಟನೆಗಳಿಂದ ಮಾಡುತ್ತಿರುವುದು ಮಾದರಿಯಾಗಿದೆ ಎಂದರು.

ಭೋಸ್ಗಾ ಗ್ರಾಪಂ ಅಧ್ಯಕ್ಷ ಬಸವರಾಜ ಖೂಬಾ, ಪ್ರಮುಖರಾದ ಶಿವರಾಜ ಪಾಟೀಲ್, ಸೋಮನಾಥ ಇಂಡೆ, ವೀರಣ್ಣ ಮೂಲಗೆ, ಅಂಬಾರಾಯ ಉಗಾಜಿ, ನಾರಾಯಣ ರೆಡ್ಡಿ, ನೇಸರ ಟ್ರಸ್ಟ್‌ನ ಜಿಲ್ಲಾ ಸಂಯೋಜಕ ವಿರಭದ್ರಪ್ಪ ಕೌತಾ, ಜೈಕಿಸಾನ್ ಯುಥ್ ಕ್ಲಬ್‌ನ ತಾಲೂಕು ಅಧ್ಯಕ್ಷ ಶ್ರೀನಿವಾಸ ಬಿರಾದಾರ್, ಬಸವರಾಜ ಶೀಲವಂತ, ಆಕಾಶ ಲಾಡೆ, ಶರಣು ಖಸ್ಗೆ ಇತರರಿದ್ದರು.

ನೇಸರ ಟ್ರಸ್ಟ್‌ನ ತಾಲೂಕು ಸಂಯೋಜಕ ಪರಮೇಶ್ವರ ಗಿಲ್ಕೆ ಸ್ವಾಗತಿಸಿ, ನಿರೂಪಿಸಿದರು.


ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಭಾನುವಾರ 4 ಏಪ್ರಿಲ್ 2016
4 APRIL 2016


ಜಾಫರವಾಡಿಯಲ್ಲಿ ಕಾರ್ತಿಕೇಶ್ವರ ಸ್ಮರಣೋತ್ಸವದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶ್ರೀ ಆಶೀರ್ವಚನ

# ಧರ್ಮ ಮಾರ್ಗದಲ್ಲಿದೆ ಶಾಂತಿ

ಬಸವಕಲ್ಯಾಣ: ದೇವರ ಮೇಲೆ ಭಕ್ತಿ, ಗುರುವಿನ ಮೇಲೆ ನಂಬಿಕೆ ಇಟ್ಟು ಧರ್ಮದ ಮಾರ್ಗದಲ್ಲಿ ನಡೆದರೆ ಜೀವನದಲ್ಲಿ ಶಾಂತಿ, ನೆಮ್ಮದಿ ಕಾಣಲು ಸಾಧ್ಯ ಎಂದು ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಸ್ವಾಮೀಜಿ ನುಡಿದರು.

ಜಾಫರವಾಡಿ ಗ್ರಾಮದಲ್ಲಿ ಮಹಾರಾಜಪ್ಪ ಮುಳೆ ಪರಿವಾರ ಆಯೋಜಿಸಿದ ಮಳಖೇಡದ ಸದ್ಗುರು ಕಾರ್ತಿಕೇಶ್ವರ ಶಿವಯೋಗಿಗಳ 14ನೇ ಸ್ಮರಣೋತ್ಸವದ ಪ್ರವಚನದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ಶಾಂತಿ-ನೆಮ್ಮದಿ ಜೀವನಕ್ಕೆ ಉತ್ತಮ ಸಂಸ್ಕಾರ ಅಗತ್ಯವಾಗಿದೆ ಎಂದರು.

ಪುರಾಣ, ಪ್ರವಚನಗಳಂಥ ಧಾರ್ಮಿಕ ಕಾರ್ಯಕ್ರಮಗಳು ಮನಸ್ಸು ಶುದ್ಧಗೊಳಿಸಿ ಮಾನಸಿಕ ನೆಮ್ಮದಿಗೆ ಪೂರಕವಾಗಿವೆ. ಜಾಫರವಾಡಿಯಲ್ಲಿ ಕಾರ್ತಿಕೇಶ್ವರ ಶಿವಯೋಗಿಗಳ ಸ್ಮರಣೋತ್ಸವ ಮುಳೆ ಪರಿವಾರ ಉತ್ತಮ ಪರಂಪರೆ ಮುಂದುವರಿಸಿಕೊಂಡು ಬಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪುಣ್ಯಕೋಟಿ ಪಿಯು ಕಾಲೇಜಿನ ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಮಾತನಾಡಿದರು. ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕಾಧ್ಯಕ್ಷ ವೀರಣ್ಣ ಶೀಲವಂತ, ಗ್ರಾಪಂ ಸದಸ್ಯ ಚಂದ್ರಕಾಂತ ಮುಳೆ, ಶಾಂತವಿಜಯ ಪಾಟೀಲ, ವೀರಣ್ಣ ಮುಳೆ, ಶಾಸ್ತ್ರಿ ಬಿರಾದಾರ, ಚಿತ್ರಶೇಖರ ಮುಳೆ, ಶರಣಪ್ಪ ಕಮಲನಗರ, ಚೆನ್ನಪ್ಪ ಪೊಲೀಸ್ ಪಾಟೀಲ್, ಅರ್ಜುನ ದಾಸುರೆ, ರಮೇಶ ದೇವಿದಾಸ, ಧನರಾಜ ಮುಳೆ, ಬಸವರಾಜ ಮುಳೆ, ಗ್ರಾಪಂ ಸದಸ್ಯರಾದ ರಾಜಕುಮಾರ ಧಂಗಾಪುರ, ಗುಂಡುರಾಯ ಮಾಲಿಪಾಟೀಲ್, ಮಹಾದೇವಪ್ಪ ಯಲಾಜಿ, ಬಾಬುರಾವ ಪೊಲೀಸ್ ಬಿರಾದಾರ, ಶಾಂತಪ್ಪ ಮುಡಬೆ, ಶಿವಾನಂದ ಮಾಸ್ತರ್, ಕಲ್ಯಾಣಿ ವಾಡೆ, ದೇವಿಂದ್ರ ಹಾರಕೂಡೆ, ಸೂರ್ಯಕಾಂತ ಹುಗ್ಗೆ, ಚನ್ನಪ್ಪ ಅಂಬಾಡೆ, ಶರಣಪ್ಪ ಬಿರಾದಾರ, ನಿರಂಜಪ್ಪ ಬಿರಾದಾರ ಉಪಸ್ಥಿತರಿದ್ದರು.

ನಿಜಲಿಂಗಪ್ಪ ಮುಳೆ ಸ್ವಾಗತಿಸಿದರು. ಶಿವಾರಾಜ ಪಾಟೀಲ್ ಬೆಳಕೋಟಾ ನಿರೂಪಿಸಿದರು. ಗುಂಡೂರ ಗ್ರಾಮದ ಬೀರಲಿಂಗೇಶ್ವರ ಭಜನಾ ಮಂಡಳಿ ಹಾಗೂ ಘಾಟಹಿಪ್ಪರಗಿಯ ರಾಮಲಿಂಗೇಶ್ವರ ಭಜನಾ ತಂಡದ ಕಲಾವಿದರಿಂದ ತಡರಾತ್ರಿವರೆಗೆ ಭಜನೆ ನಡೆಯಿತು. ಕಾರ್ಯಕ್ರಮಕ್ಕೂ ಮುನ್ನ ಕಾರ್ತಿಕೇಶ್ವರ ಗದ್ದುಗೆಗೆ ಡಾ.ಚನ್ನವೀರ ಶಿವಾಚಾರ್ಯರು ಪೂಜೆ ನೆರವೇರಿಸಿದರು.



ಬಸವಕಲ್ಯಾಣ ತಾಲೂಕಿನ ಜಾಫರವಾಡಿಯಲ್ಲಿ ಮಹಾರಾಜಪ್ಪ ಮುಳೆ ಪರಿವಾರ ಆಯೋಜಿಸಿದ ಮಳಖೇಡದ ಸದ್ಗುರು ಕಾರ್ತಿಕೇಶ್ವರ ಶಿವಯೋಗಿಗಳ ಸ್ಮರಣೋತ್ಸವದಲ್ಲಿ ತ್ರಿಪುರಾಂತದ ಅಭಿನವ ಘನಲಿಂಗ ರುದ್ರಮುನಿ ಶ್ರೀ ಆಶೀರ್ವಚನ ನೀಡಿದರು.

> ಬರದ ಹಿನ್ನೆಲೆಯಲ್ಲಿ ಎಲ್ಲೆಡೆ ಕುಡಿವ ನೀರಿನ ಅಭಾವವಿದೆ. ಲಭ್ಯ ನೀರು ಮಿತವಾಗಿ ಬಳಸುವ ಜತೆಗೆ ಪೋಲಾಗದಂತೆ ಎಚ್ಚರ ವಹಿಸಬೇಕು. ಪರಿಸರ ಅಸಮತೋಲನೆಯೇ ಇಂದಿನ ಬರಗಾಲಕ್ಕೆ ಪ್ರಮುಖ ಕಾರಣ. ಸಸಿಗಳನ್ನು ನೆಟ್ಟು ಪೋಷಿಸುವ ಮೂಲಕ ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ಮುಂದಾಗಬೇಕು.
>
> । ಶ್ರೀ ರುದ್ರಮುನಿ ಶಿವಾಚಾರ್ಯರು ತ್ರಿಪುರಾಂತ


ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಗುರುವಾರ 7 ಏಪ್ರಿಲ್ 2016
7 APRIL 2016


Scanned with CamScanner

# ಜಾತೀಕರಣ, ಕುಟುಂಬೀಕರಣ ಅಳಿಸುವುದು ಅಗತ್ಯ

ಪ್ರಜಾವಾಣಿ ವಾರ್ತೆ

ಭಾಲ್ಕಿ: ಜಾತೀಕರಣ ಮತ್ತು ಕುಟುಂಬೀಕರಣ ಸಮಾಜವನ್ನು ಕಾಡುತ್ತಿರುವ ಎರಡು ಪ್ರಮುಖ ಸಮಸ್ಯೆಗಳು ಎಂದು ಚಿತ್ರದುರ್ಗ ಮುರುಘಾ ಮಠದ ಜಗದ್ಗುರು ಶಿವಮೂರ್ತಿ ಮುರುಘಾ ಶರಣರು ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ಚನ್ನಬಸವಾಶ್ರಮದಲ್ಲಿ ಗುರುವಾರ ಚನ್ನಬಸವ ಪಟ್ಟದ್ದೇವರ 17ನೇ ಸ್ಮರಣೋತ್ಸವ ಹಾಗೂ ಗುರುಬಸವ ದೇವರ ಪಟ್ಟಾಧಿಕಾರ ಮಹೋತ್ಸವ ನಿಮಿತ್ತ ಆಯೋಜಿಸಿದ್ದ ಬಸವತತ್ವ-ಸಮಾಜ ಚಿಂತನ ಗೋಷ್ಠಿಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ರಾಜಕೀಯದಲ್ಲಿ ಕುಟುಂಬ ರಾಜಕಾರಣ ಬೆಳೆದಂತೆ, ಮಠಗಳಲ್ಲಿಯೂ ಅಂತಹ ಸನ್ನಿವೇಶ ಕಂಡು ಬರುತ್ತಿದೆ. ರಕ್ತ ಸಂಬಂಧವುಳ್ಳ ವ್ಯಕ್ತಿಗಳನ್ನು ಪೀಠಾಧಿಪತಿಗಳನ್ನಾಗಿ ಮಾಡುತ್ತಿರುವುದರಿಂದ ಅನೇಕ ಮಠಗಳು ಹಾಳಾಗಿ, ಖಾಸಗಿ ಆಸ್ತಿಗಳಾಗುತ್ತಿರುವುದು ನೋವಿನ ಸಂಗತಿ. ಇಂತಹ ವ್ಯವಸ್ಥೆ ಬದಲಾಗಬೇಕು ಎಂದರು.

ಆಧುನಿಕ ಯುಗದಲ್ಲಿಯೂ ಮಹಿಳೆಯರು ದೇಗುಲ ಪ್ರವೇಶಕ್ಕೆ ಸಂಘರ್ಷ ಮಾಡುವಂತಾಗಿದೆ. ಅದಕ್ಕೆ ತಾಜಾ ಉದಾಹರಣೆ ಮಹಾರಾಷ್ಟ್ರದ ಶನಿ ದೇವೇಶ್ವರ ದೇಗುಲ ಪ್ರವೇಶ. 12ನೇ ಶತಮಾನದಲ್ಲಿ ಬಸವಣ್ಣನವರು ಅನುಭವ ಮಂಟಪಕ್ಕೆ ಎಲ್ಲರಿಗೂ ಮುಕ್ತ ಅವಕಾಶ ನೀಡಿದ್ದರು ಎಂದು ತಿಳಿಸಿದರು.

ಇಂದಿನ ವ್ಯವಸ್ಥೆಯಲ್ಲಿ ಜಾತಿ ಬಲವಾಗಿ ಬೇರೂರುತ್ತಿದೆ. ಇಲ್ಲಿನ ಹಿರೇಮಠ ಸಂಸ್ಥಾನ ಜಾತಿಗೆ ಮನ್ನಣೆ ನೀಡಿಲ್ಲ. ಚನ್ನಬಸವ ಪಟ್ಟದ್ದೇವರು ಜಾತಿ ಜಂಗಮ ಆಗಿರಲಿಲ್ಲ ಜಾಗೃತಿ ಜಂಗಮರಾಗಿದ್ದರು. ಅವರ ಸಾಲಿನಲ್ಲಿ ಬಸವಲಿಂಗ ಪಟ್ಟದ್ದೇವರು, ಗುರುಬಸವ ದೇವರು ನಿಲ್ಲುತ್ತಾರೆ ಎಂದು ತಿಳಿಸಿದರು.

ಅಹಮದಪೂರ್ ವೀರಮಠ ರಾಷ್ಟ್ರ ಸಂತ ಶಿವಲಿಂಗ ಶಿವಾಚಾರ್ಯ ಸ್ವಾಮಿಜಿ ಮಾತನಾಡಿ, ಬಸವಣ್ಣನವರ ತತ್ವ-ಚಿಂತನೆಗಳು ಎಲ್ಲ ಕಾಲಕ್ಕೂ ಶ್ರೇಷ್ಠವಾಗಿವೆ ಎಂದು ತಿಳಿಸಿದರು.

ಬಸವಲಿಂಗ ಪಟ್ಟದ್ದೇವರು ನೇತೃತ್ವ ವಹಿಸಿದ್ದರು. ಬಿಚಕುಂದಾ ಸಂಸ್ಥಾನ ಮಠದ ಸೋಮಲಿಂಗ ಶಿವಾಚಾರ್ಯರು, ವೀರೂಪಾಕ್ಷ ಶಿವಾಚಾರ್ಯ ಸ್ವಾಮಿ, ಶಾಂತವೀರ ಶಿವಾಚಾರ್ಯರು, ರುದ್ರಮುನಿ ಶಿವಾಚಾರ್ಯರು, ಹಾವಗಿ ಲಿಂಗೇಶ್ವರ ಶಿವಾಚಾರ್ಯರು, ರಾಜಶೇಖರ ಸ್ವಾಮೀಜಿ, ನಾಗಭೂಷಣ ಶಿವಾಚಾರ್ಯರು, ಬಿ.ಜಿ.ಶೆಟಕಾರ್, ವಿಜಯಕುಮಾರ ಗಾದಗಿ, ಜಗದೀಶ ಖೂಬಾ, ಜಯರಾಜ ಖಂಡ್ರೆ ಇದ್ದರು.

ಸಂಜೀವಕುಮಾರ ಜುಮ್ಮಾ ನಿರೂಪಿಸಿದರು. ಕಿರಣ ಖಂಡ್ರೆ ವಂದಿಸಿದರು.



ಭಾಲ್ಕಿಯ ಚನ್ನಬಸವಾಶ್ರಮದಲ್ಲಿ ಗುರುವಾರ ನಡೆದ ಲಿಂ.ಚನ್ನಬಸವ ಪಟ್ಟದ್ದೇವರ 17ನೇ ಸ್ಮರಣೋತ್ಸವ ಮತ್ತು ಗುರುಬಸವ ದೇವರ ಪಟ್ಟಾಧಿಕಾರ ಮಹೋತ್ಸವ ಸಮಾರಂಭದಲ್ಲಿ ಚಿತ್ರದುರ್ಗ ಮುರುಘಾ ಮಠದ ಜಗದ್ಗುರು ಶಿವಮೂರ್ತಿ ಮುರುಘಾ ಶರಣರು ಮಾತನಾಡಿದರು. ಬಸವಲಿಂಗ ಪಟ್ಟದ್ದೇವರು ಇದ್ದರು

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಜಾತಿ ವ್ಯವಸ್ಥೆ ತೊಡೆದು ಹಾಕಿದ್ದರು. 21ನೇ ಶತಮಾನದಲ್ಲಿ ಅದನ್ನು ಅಳಿಸಲು ಸಾಧ್ಯವಾಗದಿರುವುದು ದುರ್ದೈವದ ಸಂಗತಿ.
**ಶಿವಮೂರ್ತಿ ಮುರುಘಾ ಶರಣರು,**
ಚಿತ್ರದುರ್ಗ

ಪ್ರಜಾವಾಣಿ ಶುಕ್ರವಾರ • ಏಪ್ರಿಲ್ 22, 2016



ಬಸವಕಲ್ಯಾಣ ನಗರದ ತ್ರಿಪುರಾಂತದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠಕ್ಕೆ ಶ್ರೀಮದ್ ರಂಭಾಪುರೀ ಜಗದ್ಗುರುಗಳು ಭೇಟಿ ನೀಡಿ ಶ್ರೀಮಠದ ಜೀರ್ಣೋದ್ಧಾರ ಕಟ್ಟಡ ಕಾಮಗಾರಿಯನ್ನು ವಿಕ್ಷಿಸಿದರು.

# ರಂಭಾಪುರಿ ಜಗದ್ಗುರುಗಳಿಂದ ಕಟ್ಟಡ ಕಾಮಗಾರಿ ವೀಕ್ಷಣೆ

ಬಸವಕಲ್ಯಾಣ

ನಗರದ ತ್ರಿಪುರಾಂತ ಮರಿದೇವರ ಗುಡ್ಡದಲ್ಲಿರುವ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠಕ್ಕೆ ಶ್ರೀಮದ್ ರಂಭಾಪುರೀ ಜಗದ್ಗುರುಗಳು ಆಕಸ್ಮಿಕ ಬೇಟಿ ನೀಡಿ ಶ್ರೀಮಠದ ಜೀರ್ಣೋದ್ಧಾರ ಕಟ್ಟಡ ಕಾಮಗಾರಿಯನ್ನು ವಿಕ್ಷಿಸಿದರು.

ಶಿವಶರಣ ದಿಕ್ಷಾಸ್ಥಳವಾದ ಶ್ರೀ ಜಗದ್ಗುರು ಘನಲಿಂಗರುದ್ರಮುನಿ ಶಿವಾಚಾರ್ಯ ಗವಿಮಠದ ಜೀರ್ಣೋದ್ಧಾರ ಕಟ್ಟಡ ಕಾಮಗಾರಿಗೆ ಈ ಭಾಗದ ಎಲ್ಲಾ ಸಮುದಾಯದ ಭಕ್ತರು ಭಕ್ತಿಯ ತನು ಮನ ಧನ ಸೇವೆ ಸಲ್ಲಿಸಿ ಜಗದ್ಗುರು ರೇಣುಕಾಚಾರ್ಯರ ಮತ್ತು ಘನಲಿಂಗ ರುದ್ರಮುನಿ ಶಿವಾಚಾರ್ಯರು ಕೃಪಾ ಆಶಿರ್ವಾದ ಪಡೆಯಬೇಕೆಂದರು.

ಶ್ರೀಮಠದ ಪೂಜ್ಯ ಶ್ರೀ ಅಭೀನವ ಘನಲಿಂಗ ರುದ್ರಮುನಿ ಶಿವಾಚಾರ್ಯರು. ಶ್ರೀಮಠದ ಜೀರ್ಣೋದ್ಧಾರಕ್ಕೆ ದಿಟ್ಟ ಹೆಜ್ಜೆಯನ್ನಿಟ್ಟದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಶ್ರೀಮಠದಿಂದ ಆಶಿರ್ವಾದ ನೀಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ವೀರಣ್ಣ ಶೀಲವಂತ, ಶರಣಪ್ಪ ಬಿರಾದಾರ, ಯುವ ನಾಯಕರು ಸುನೀಲ ಎಮ ಪಾಟೀಲ, ಬಸವಂತಪ್ಪ ಲಾವಾರೆ, ಮಲಯ್ಯ ಸ್ವಾಮಿ ಹಿರೇಮಠ, ಚಂದ್ರಕಾಂತ ಸ್ವಾಮಿ, ಅರುಣಾ ಸ್ವಾಮಿ, ವಿಜಯ ಲಕ್ಷ್ಮಿ ರಾಜೋಳೆ, ಸೋಮಶೇಖರ ವಸ್ತದ, ಬಸವರಾಜ ಸ್ವಾಮಿ ಹಿರೇಮಠ, ಶಶಿಕಾಂತ ದುರ್ಗೆ, ಠುದ್ರಮನಿ ಮಠಪತಿ, ಪ್ರಭುಲಿಂಗಯ್ಯ ಟಂಕಸಾಲಿಮಠ ಇತರರಿದ್ದರು.

ಶುಕ್ರವಾರ, 22, ಏಪ್ರಿಲ್, 2016, ಕಲಬುರಗಿ ಸಂಯುಕ್ತ ಕರ್ನಾಟಕ

# ತ್ರಿಪುರಾಂತ ಗವಿ ಮಠಕ್ಕೆ ರಂಭಾಪುರಿ ಶ್ರೀ ಭೇಟಿ



ಬಸವಕಲ್ಯಾಣ: ಸಮೀಪದ ತ್ರಿಪುರಾಂತನಲ್ಲಿನ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿ ಮಠಕ್ಕೆ ಬಾಳೆ ಹೊನ್ನೂರಿನ ಶ್ರೀಮದ್ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಭೇಟಿ ನೀಡಿ, ಶ್ರೀ ಮಠದ ಜೀರ್ಣೋದ್ಧಾರ ಕಟ್ಟಡ ಕಾಮಗಾರಿ ವೀಕ್ಷಿಸಿದರು.

ತ್ರಿಪುರಾಂತನ ಶ್ರೀಗಳು ಶ್ರೀಮಠದ ಜೀರ್ಣೋದ್ಧಾರಕ್ಕೆ ದಿಟ್ಟ ಹೆಜ್ಜೆಯನ್ನಿಟ್ಟಿರುವುದನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿ, ಶ್ರೀ ಮಠದಿಂದ ಆಶೀರ್ವಾದ ನೀಡುವುದಾಗಿ ತಿಳಿಸಿದರು. ಗವಿ ಮಠದ ಅಭಿನವ ಘನಲಿಂಗ ರುದ್ರಮುನಿ ಶ್ರೀ, ತಡೋಳಾದ ರಾಜೇಶ್ವರ ಶ್ರೀ ಇದ್ದರು. ಸುನೀಲ ಪಾಟೀಲ್, ವೀರಣ್ಣ ಶೀಲವಂತ, ಶರಣಪ್ಪ ಬಿರಾದಾರ, ಬಸವಂತಪ್ಪ ಲಾವಾರೆ, ಮಲ್ಲಯ್ಯ ಸ್ವಾಮಿ ಹಿರೇಮಠ, ಚಂದ್ರಕಾಂತ ಸ್ವಾಮಿ, ಸೋಮಶೇಖರ ವಸ್ತ್ರದ, ಬಸವರಾಜ ಸ್ವಾಮಿ, ಶಶಿಕಾಂತ ದುರ್ಗೆ, ರುದ್ರಮನಿ ಮಠಪತಿ, ಪ್ರಭುಲಿಂಗಯ್ಯ ಟಂಕಸಾಲಿಮಠ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAG
ಶುಕ್ರವಾರ 22 ಏಪ್ರಿಲ್ 2016 22 APRIL 2016 | 3

Scanned with CamScanner

## ಪುಣ್ಯಕೋಟಿ ಸ್ವತಂತ್ರ ಪಿಯು ಕಾಲೇಜಿನ ಹೊಸ ಕಟ್ಟಡ ಉದ್ಘಾಟಿಸಿದ ರಂಭಾಪುರಿ ಶ್ರೀ ಸಲಹೆ

# ಶಿಕ್ಷಣ ಸಂಸ್ಥೆಗಳು ನೀತಿಯುತ ಬದುಕು ರೂಪಿಸಲಿ



ಬಸವಕಲ್ಯಾಣದ ಪುಣ್ಯಕೋಟಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ನೂತನ ಕಟ್ಟಡವನ್ನು ಶ್ರೀಮದ್ ರಂಭಾಪುರಿ ಜಗದ್ಗುರುಗಳು ಉದ್ಘಾಟಿಸಿದರು. ರಾಜೇಶ್ವರ ಶ್ರೀ, ಅಭಿನವ ಘನಲಿಂಗ ರುದ್ರಮುನಿ ಶ್ರೀ, ಸುನೀಲ ಪಾಟೀಲ್, ಸೂರ್ಯಕಾಂತ ಶೀಲವಂತ ಇತರರಿದ್ದರು.

ಬಸವಕಲ್ಯಾಣ: ಶಿಕ್ಷಣದ ಜತೆಗೆ ತ್ಯಾಗ ಔದಾರ್ಯಗಳಂತಹ ಮೌಲ್ಯಗಳು ಮಕ್ಕಳಿಗೆ ಕಲಿಸಿ ಕೊಡಬೇಕಿದ್ದು, ಅವರನ್ನು ಸಮಾಜೋಪಯೋಗಿ ಜೀವಿಯನ್ನಾಗಿಸುವ ಮೂಲಕ ನೀತಿಯುತ ಬದುಕನ್ನು ರೂಪಿಸುವುದು ಶಿಕ್ಷಣ ಸಂಸ್ಥೆಗಳ ಮೂಲ ಉದ್ದೇಶವಾಗಬೇಕು ಎಂದು ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ನುಡಿದರು.

ಇಲ್ಲಿನ ಪುಣ್ಯಕೋಟಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ನೂತನ ಕಟ್ಟಡ ಹಾಗೂ ಜೆಎಸ್‌ಎಸ್ ಜಗದ್ಗುರು ಸೋಮೇಶ್ವರ ಶಿವಾಚಾರ್ಯರ ಎಲ್‌ಕೆಜಿ ಮತ್ತು ಯುಕೆಜಿ ಇಂಗ್ಲಿಷ್ ಮಾಧ್ಯಮ ಶಾಲೆ ಉದ್ಘಾಟಿಸಿದ ನಂತರ ನಡೆದ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು, ಶಿಕಣದಿಂದ ಜ್ಞಾನ ಲಭಿಸಿದರೆ ಧರ್ಮದಿಂದ ಉತ್ತಮ ಭಾವನೆಗಳು ಅರಳುತ್ತವೆ ಎಂದರು.

ಮನುಷ್ಯನಿಗೆ ಅಧಿಕಾರ, ಸಂಪತ್ತಿನ ಮತ್ತು ಕೀರ್ತಿ ವಾರ್ತೆಗಳ ಹುಚ್ಚು ಹತ್ತಿದೆ. ಸಣ್ಣ ಸಣ್ಣ ಪ್ರಶಸ್ತಿ ಬಂದರು ದೇವರು ಧರ್ಮ ಮತ್ತು ಸಂಸ್ಕೃತಿ ಎನೇಲ್ಲವನ್ನು ಮರೆಯುವಂತೆ ಮಾಡುತ್ತವೆ. ಅಂತರಂಗದ ಬೆಳಕಿಗಿಂತ ಬಹಿರಂಗದ ಬೆಳಕೆ ಹೆಚ್ಚೆಂದು ಮನುಷ್ಯ ತಿಳಿಯುತಿದ್ದಾನೆ. ಇದರಿಂದ ರಾಷ್ಟ್ರ ಪ್ರೇಮ ಬೆಳಯಲಾರದು ಎಂದು ಹೇಳಿ ಮಕ್ಕಳಲ್ಲಿ ರಾಷ್ಟ್ರ ಪ್ರೇಮ ಬೆಳೆಸುವುದು ಶಾಲಾ-ಕಾಲೇಜುಗಳ ಮುಖ್ಯ ಕರ್ತವ್ಯವಾಗಬೇಕು ಎಂದು ಹೇಳಿದರು. ಶಿಕ್ಷಣ ಕ್ಷೇತ್ರದಲ್ಲಿನ ಗಣನೀಯ ಸೇವೆಯನ್ನು ಪರಿಗಣಿಸಿ ಪ್ರೊ. ಸೂರ್ಯಕಾಂತ ಶೀಲವಂತ ಅವರಿಗೆ ರಂಭಾಪುರಿ ಪೀಠದಿಂದ ಬರುವ ದಸರಾ ದರ್ಬಾರ ಅಥವಾ ರೇಣುಕಾಚಾರ್ಯ ಜಯಂತಿ ಸಂದರ್ಭದಲ್ಲಿ ಪ್ರಶಸ್ತಿ ನೀಡಿ ಗುರುರಕ್ಷೆ ನೀಡಲಾಗುವುದೆಂದು ಘೋಷಿಸಿದರು. ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶ್ರೀ, ತಡೋಳಾದ ರಾಜೇಶ್ವರ ಶ್ರೀ, ಶ್ರೀನಿವಾಸ ಸರಡಗಿಯ ರೇವಣಸಿದ್ದ ಶ್ರೀ ಮಾತನಾಡಿದರು.

ಪ್ರಾಚಾರ್ಯ ಪ್ರೊ. ಸೂರ್ಯಕಾಂತ ಶೀಲವಂತ ಅಧ್ಯಕ್ಷತೆ ವಹಿಸಿದ್ದರು. ಸಿಪಿಐ ಶಿವನಗೌಡ ಪಾಟೀಲ, ಶಿವಶರಣಪ್ಪ ಸಿರಿ, ಬಿಇಒ ಗಂಗಣ್ಣ ಸ್ವಾಮಿ, ಮುಖಂಡ ಸುನೀಲ ಪಾಟೀಲ, ರವಿಂದ್ರ ಬಿರಾದಾರ, ಶರಣು ಬಿರಾದಾರ, ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಸುಭಾಷಚಂದ್ರ ಪಾಟೀಲ, ಚಂದ್ರಕಾಂತ ಶೀಲವಂತ, ಸುರೇಖಾ ಶೀಲವಂತ, ಕಾವೇರಿ ಶೀಲವಂತ ಇದ್ದರು. ಶಶಿಕಾಂತ ಶೀಲವಂತ ಪ್ರಾಸ್ತಾವಿಕ'ಮಾತನಾಡಿದರು. ಉಮಾ ಕಾಂತ ಶೀಲವಂತ ನೀರೂಪಿಸಿದರು. ಶಾಂತಯ್ಯ ಹಾಗೂ ಸಂಗಡಿಗರಿಂದ ವಚನ ಗಾಯನ ನಡೆಯಿತು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
3 ಶುಕ್ರವಾರ 15 ಏಪ್ರಿಲ್ 2016
15 APRIL 2016

# ಗವಿಮಠಕ್ಕೆ ರಂಭಾಪುರಿ ಶ್ರೀ ಭೇಟಿ



ಬಸವಕಲ್ಯಾಣ: ತ್ರಿಪುರಾಂತನಲ್ಲಿಯ ಗವಿ ಮಠಕ್ಕೆ ಶ್ರೀಮದ್ ರಂಭಾಪುರಿ ಜಗದ್ಗುರುಗಳು ಭೇಟಿ ನೀಡಿ ಕಾಮಗಾರಿ ವೀಕ್ಷಿಸಿದರು.

ಬಸವಕಲ್ಯಾಣ: ಇಲ್ಲಿಯ ತ್ರಿಪುರಾಂತನಲ್ಲಿಯ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿ ಮಠಕ್ಕೆ ಬಾಳೆಹೊನ್ನೂರು ಶ್ರೀ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಭೇಟಿ ನೀಡಿ ಶ್ರೀಮಠದ ಜೀರ್ಣೋದ್ಧಾರ ಕಾಮಗಾರಿ ವೀಕ್ಷಿಸಿದರು.

ತ್ರಿಪುರಾಂತನ ಶ್ರೀಗಳು ಶ್ರೀಮಠದ್ ಜೀರ್ಣೋದ್ಧಾರಕ್ಕೆ ದಿಟ್ಟ ಹೆಜ್ಜೆಯನ್ನಿಟ್ಟದ್ದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಶ್ರೀಮಠದಿಂದ ಆಶೀರ್ವಾದ ನೀಡುವುದಾಗಿ ತಿಳಿಸಿದರು. ಗವಿಮಠದ ಜೀರ್ಣೋದ್ಧಾರ ಕಟ್ಟಡ ಕಾಮಗಾರಿಗೆ ಈ ಭಾಗದ ಎಲ್ಲ ಸಮುದಾಯದ ಭಕ್ತರು ಭಕ್ತಿಯ ತನು ಮನ ಧನ ಸೇವೆ ಸಲ್ಲಿಸಿ ಜಗದ್ಗುರು ರೇಣುಕಾಚಾರ್ಯರ ಮತ್ತು ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರು ಕೃಪಾ ಆಶೀರ್ವಾದ ಪಡೆಯಬೇಕು ಎಂದರು. ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಪ್ರಮುಖರಾದ ಸುನೀಲ ಪಾಟೀಲ, ವೀರಣ್ಣ ಶೀಲವಂತ, ಶರಣಪ್ಪ ಬಿರಾದಾರ, ಬಸವಂತಪ್ಪ ಲಾವಾರೆ, ಮಲಯ್ಯ ಸ್ವಾಮಿ ಹಿರೇಮಠ, ಚಂದ್ರಕಾಂತ ಸ್ವಾಮಿ, ಬಸವರಾಜ ಸ್ವಾಮಿ ಇತರರಿದ್ದರು.

ಉದಯವಾಣಿ ಕಲಬುರಗಿ
ಶುಕ್ರವಾರ | ಏಪ್ರಿಲ್ | 22 | 2016

ಮಾರೋಪ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
4 ಮಂಗಳವಾರ 21 ಜೂನ್ 2016
21 JUNE 2016

ಟಾಪ್ ನ್ಯೂಸ್

ಮಾತ
ಸ
ವಿವಿ

# ಶಿಕ್ಷಣದ ಜತೆ ಸಂವೇದನಾಶೀಲತೆ ಅಗತ್ಯ

ಬಸವಕಲ್ಯಾಣ: ವಿದ್ಯಾರ್ಥಿಗಳು ಸತತ ಅಧ್ಯಯನದ ಜತೆಗೆ ಸಂವೇದನಾಶೀಲತೆ ಬೆಳೆಸಿಕೊಳ್ಳಬೇಕು ಎಂದು ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಲಹೆ ನೀಡಿದರು. ಇಲ್ಲಿನ ಪುಣ್ಯಕೋಟಿ ಪದವಿಪೂರ್ವ ಕಾಲೇಜಿನಲ್ಲಿ ಪಿಯುಸಿ ವಾಣಿಜ್ಯ ತರಗತಿ ಆರಂಭೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ತರಗತಿಯಲ್ಲಿ ಉಪನ್ಯಾಸಕರು ಹೇಳಿಕೊಡುವ ಪಾಠವನ್ನು ಸರಿಯಾಗಿ ಕೇಳಿ ಮನನ ಮಾಡಿಕೊಳ್ಳಬೇಕು. ವಿನಾಃ ಕಾರಣ ಸಮಯವನ್ನು ವ್ಯರ್ಥ ಮಾಡಬಾರದು ಎಂದು ಕಿವಿ ಮಾತು ಹೇಳಿದರು.

ಸಂಸ್ಥೆ ಉಪಾಧ್ಯಕ್ಷ ಸುಭಾಷಚಂದ್ರ ಪಾಟೀಲ್ ಮಾತನಾಡಿ, ಸಮಯವನ್ನು ವ್ಯರ್ಥ ಮಾಡದೆ ಅಭ್ಯಾಸ ಮಾಡಿದಾಗ ಮಾತ್ರ ವಿದ್ಯಾರ್ಥಿಗಳು ಯಶಸ್ಸು ಕಾಣಲು ಸಾಧ್ಯ ಎಂದರು. ಕೋಶಾಧ್ಯಕ್ಷ ಶಶಿಕಾಂತ ಶೀಲವಂತ, ಕಾರ್ಯದರ್ಶಿ ಉಮಾಕಾಂತ ಶೀಲವಂತ, ಪಾಲಕ ಪ್ರತಿನಿಧಿ ರಾಕೇಶ ಪುರವಂತ ಮಾತನಾಡಿದರು. ಪ್ರಾಚಾರ್ಯ ಪ್ರೊ. ಸೂರ್ಯಕಾಂತ ಶೀಲವಂತ ಅಧ್ಯಕತೆ ವಹಿಸಿದ್ದರು. ಸಂಸ್ಥೆ ಪದಾಧಿಕಾರಿಗಳಾದ ಚಂದ್ರಕಾಂತ, ಕಾವೇರಿ ಶೀಲವಂತ, ಉಪನ್ಯಾಸಕಿ ಕಲ್ಪನಾ ಚುಡೆ ಇದ್ದರು. ಶೃತಿ ಸ್ವಾಗತಿಸಿದರು. ಪ್ರೊ. ಸುರೇಖಾ ಶೀಲವಂತ ವಂದಿಸಿದರು. ರೋಹಿಣಿ ನಿರೂಪಿಸಿದರು. ಅಶ್ವಿನಿ ಪ್ರಾರ್ಥನಾ ಗೀತೆ ಹಾಡಿದರು.

Scanned with CamScanner

## ಮುಚಳಂಬ ಗ್ರಾಮದ ಶಿವಯೋಗಿ ಸಂಸ್ಥಾನ ಮಠದಲ್ಲಿ ಜಿಲ್ಲಾ ಮಠಾಧಿಪತಿಗಳ ಸಮಾವೇಶ

# ಒಗ್ಗಟ್ಟಿನ ಸಂದೇಶ ಸಾರಿದ ಮಠಾಧೀಶರು



ಬಸವಕಲ್ಯಾಣ ತಾಲೂಕಿನ ಮುಚಳಂಬನಲ್ಲಿ ಆಯೋಜಿಸಿದ ಬೀದರ್ ಜಿಲ್ಲೆಯ ಮಠಾಧಿಪತಿಗಳ ಒಕ್ಕೂಟದ ತೃತೀಯ ಸಮಾವೇಶವನ್ನು ಜಗದ್ಗುರು ಶಿವಯೋಗೇಶ್ವರ ಮಹಾಸ್ವಾಮೀಜಿ ಉದ್ಘಾಟಿಸಿದರು. ಶಿವಾನಂದ ಶ್ರೀ, ಪ್ರಣವಾನಂದ ಶ್ರೀ ಇತರರಿದ್ದರು.

**ಬಸವಕಲ್ಯಾಣ:** ಜಗತ್ತಿನಲ್ಲಿ ಪ್ರೀತಿ ಎನ್ನುವುದು ಬೆಲೆ ಕಟ್ಟಲಾಗದ ಬಹು ದೊಡ್ಡ ಸಂಪತ್ತು. ಇದು ಹಂಚಿದಷ್ಟು ಬೆಳೆಯುತ್ತಾ ಹೋಗುತ್ತದೆ ಎಂದು ಭಾತಂಬ್ರಾದ ಜಗದ್ಗುರು ಶಿವಯೋಗೇಶ್ವರ ಶ್ರೀಗಳು ನುಡಿದರು.

ತಾಲೂಕಿನ ಮುಚಳಂಬ ಗ್ರಾಮದ ನಾಗಭೂಷಣ ಶಿವಯೋಗಿ ಸಂಸ್ಥಾನ ಮಠದಲ್ಲಿ ಶುಕ್ರವಾರ ಸಂಜೆ ಆಯೋಜಿಸಿದ ಬೀದರ್ ಜಿಲ್ಲೆಯ ಮಠಾಧಿಪತಿಗಳ ಒಕ್ಕೂಟದ ತೃತೀಯ ಸಮಾವೇಶದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಜಗದ್ಗುರುಗಳು, ನಾವೆಲ್ಲರು ಒಂದಾಗಿ ಪ್ರೀತಿ ಹಂಚೋಣ, ಸಮಾಜವನ್ನು ಒಂದುಗೂಡಿಸಲು ಪ್ರಯತ್ನಿಸೋಣ ಎಂದರು.

ಸಮಾಜದ ಪ್ರಗತಿಗೆ ಸಂಘಟನೆ ಅತ್ಯಾವಶ್ಯಕ. ಸಂಘಟನೆ ಇಲ್ಲದೇ ಸಮಾಜ ಸಶಕ್ತವಾಗಿ ಬೆಳೆಸುವುದು-ಉಳಿಸುವುದು ಕಷ್ಟಸಾಧ್ಯ. ನಮ್ಮಲ್ಲಿನ ಸಣ್ಣ-ಪುಟ್ಟ ವಿಷಯಗಳನ್ನು ದೊಡ್ಡದು ಮಾಡದೇ ಹೃದಯ ವೈಶಾಲ್ಯತೆ ಬೆಳೆಸಿಕೊಳ್ಳಬೇಕಿದೆ. ಸಮಾಜದಲ್ಲಿ ನಾವೆಲ್ಲರು ಒಂದು ಎನ್ನುವ ಸಂದೇಶ ಸಾರುವ ಜತೆಗೆ ಒಗ್ಗಟ್ಟಿನಿಂದ ಕೂಡಿದ ಪರಿಶುದ್ಧ ಸಮಾಜ ನಿರ್ಮಾಣಕ್ಕೆ ಕೈಜೋಡಿಸೋಣ ಎಂದರು.

ತಿಂಗಳ ಮೊದಲ ವಾರದಲ್ಲಿ ಒಂದು ದಿನ ಜಿಲ್ಲೆಯ ಒಂದು ಗ್ರಾಮದಲ್ಲಿ ಮಠಾಧೀಪತಿಗಳ ಸಮಾವೇಶ ನಡೆಸಿ, ಜಿಲ್ಲೆಯ ಎಲ್ಲ ಮಠಾಧೀಪತಿಗಳು ಒಂದು ಕಡೆ ಸಮಾವೇಶಗೊಳ್ಳೋಣ. ಸಮಾವೇಶದ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡೋಣ ಎಂದು ಹೇಳಿದರು.

ಶ್ರೀ ಪ್ರಣವಾನಂದ ಮಹಾಸ್ವಾಮೀಜಿ ಅಧ್ಯಕ್ಷತೆ ವಹಿಸಿ ಆಶೀರ್ವಚನ ನೀಡಿದ ಅವರು, ಧಾರ್ಮಿಕ ಮುಖಂಡರೆಲ್ಲ, ಒಂದಾದರೆ ಸಮಾಜ ಒಂದಾಗುತ್ತದೆ. ನಾವು ಧರ್ಮ, ಜಾತಿ, ಪಂಥದ ಹೆಸರಿನಲ್ಲಿ ಗೊಂದಲ ಸೃಷ್ಟಿಸುವುದು ಬೇಡ. ಒಗ್ಗಟ್ಟಾದರೆ ಗೊಂದಲಗಳು ತಾನಾಗಿಯೇ ಮರೆ ಮಾಚುತ್ತವೆ. ಭಾರತೀಯ ಸಂಸ್ಕೃತಿ ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣುವದಾಗಿದೆ. ನಾವು ನಮ್ಮ ನಾಡಿಗಾಗಿ ಏಕತೇಯ ಸಂದೇಶವನ್ನು ಈ ಸಮಾವೇಶದ ಮೂಲಕ ಸಾರೋಣ ಎಂದರು.

ನೇತೃತ್ವ ವಹಿಸಿದ ಹುಲಸೂರನ ಶಿವಾನಂದ ಶ್ರೀ ಆಶೀರ್ವಚನ ನೀಡಿ, ಎಲ್ಲ ಮಠಾಧೀಶರು ತತ್ವ ಬದ್ಧತೆಯಿಂದ ನಡೆದುಕೊಳ್ಳಬೇಕು. ಸಮಾಜದಲ್ಲಿ ಮೂಢ ನಂಬಿಕೆ, ಅಂಧಾಚರಣೆಗಳ ವಿರುದ್ಧ ಜಾಗೃತಿ ಮೂಡಿಸಲು ಶ್ರಮಿಸಬೇಕು. ಎಲ್ಲರು ಒಂದಾಗಿ ಸಮಾಜ ಸೇವೆಗೆ ಕಂಕಣಬದ್ಧರಾಗಿ ನಡೆದರೆ ಸಮಾಜದಲ್ಲಿ ಸೌಹಾರ್ದತೆ ಸೃಷ್ಟಿಸಲು ಸಾಧ್ಯ ಎಂದರು.

ಹಿರನಾಗಾಂವನ ಜೈಶಾಂತಲಿಂಗ ಶ್ರೀ, ಗಡಿಗೌಡಗಾಂವನ ಶಾಂತವೀರ ಶ್ರೀ, ತ್ರಿಪುರಾಂತನ ಅಭಿನ ಘನಲಿಂಗ ರುದ್ರಮುನಿ ಶ್ರೀ, ಶಿವಣಿ ಹಾವಗಿಲಿಂಗ ಶ್ರೀ, ಹಾಲಂಬರ ಡಾ. ನಾಗಭೂಷನ ಶ್ರೀ ಆಶೀರ್ವಚನ ನೀಡಿದರು. ಠಾಣಾ ಕುಸನೂರನ ಸಿದ್ಧಲಿಂಗ ಶ್ರೀ, ಬೇಮಳಖೇಡ ಚಂದ್ರಶೇಖರ ಶ್ರೀ ಭಾಗವಹಿಸಿದ್ದರು. ಕಾಶೀನಾಥ ಹೊಳಕಡೆ ಪ್ರಸ್ತಾವನೆ ಸಲ್ಲಿಸಿದರು. ಕೆ. ಕಾಶೀನಾಥ ನಿರೂಪಿಸಿದರು. ಮುಚಳಂಬ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ ಭಕ್ತರು ಸಮಾವೇಶದಲ್ಲಿ ಭಾಗವಹಿಸಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
4 | ಭಾನುವಾರ 8 ಮೇ 2016
8 MAY 2016



ಬಸವಕಲ್ಯಾಣ ತಾಲೂಕಿನ ಗಡಿಗೌಡಗಾಂವ್ ಗ್ರಾಮದಲ್ಲಿ ಶ್ರೀ ಹಾವಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ಶ್ರೀ ಶಾಂತವೀರ ಶಿವಾಚಾರ್ಯರ 20ನೇ ಪಟ್ಟಾಧಿಕಾರ ವಾರ್ಷಿಕೋತ್ಸವ ನಿಮಿತ್ತ ನಡೆದ ಧರ್ಮ ಸಭೆ ಮುಚಳಂಬದ ಶ್ರೀ ಪ್ರಣವಾನಂದ ಮಹಾಸ್ವಾಮೀಜಿ ಉದ್ಘಾಟಿಸಿದರು. ಶ್ರೀ ಶಾಂತವೀರ ಶಿವಾಚಾರ್ಯರು, ತ್ರಿಪುರಾಂತ ಶ್ರೀಗಳು, ಆನಂದ ದೇವಪ್ಪ, ಶರಣು ಬಿರಾದಾರ್, ದತ್ತಾತ್ರಿ ರಾಘೋಜಿ, ಲೋಕೇಶ ದರಮಣೆ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
4 | ಭಾನುವಾರ 10 ಏಪ್ರಿಲ್ 2016
10 APRIL 2016



ಬಸವಕಲ್ಯಾಣ ನಗರದ ಬಿರಾದಾರ ಬಡಾವಣೆಯಲ್ಲಿ ಹನುಮಾನ ಜಯಂತಿ ನಿಮಿತ್ತ ಜೈ ಭಜರಂಗ ಬಲಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶ್ರೀ, ಕಾಶಪ್ಪ ಬಾಲಿಕಿಲೆ, ಎಂ.ಜಿ.ಮಹಾಜನ್, ಜಿ.ಎಸ್.ಕಲ್ಯಾಣಿ ಇತರರಿದ್ದರು.

5 | ಶನಿವಾರ 23 ಏಪ್ರಿಲ್ 2016
23 APRIL 2016

Scanned with CamScanner

# ನಂದಿ ಧ್ವಜ ತರಬೇತಿ ಸಮಾರೋಪ



ಬಸವಕಲ್ಯಾಣ ತಾಲೂಕಿನ ಶಿವಪೂರದಲ್ಲಿ ನವತರುಣ ನಂದಿ ಧ್ವಜ ಸಮಿತಿ ಹಾಗೂ 11ನೇ ವರ್ಷದ ನಂದಿ ಧ್ವಜ ತರಬೇತಿ ಸಮಾರೋಪ ಸಮಾರಂಭದಲ್ಲಿ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಡಾ. ಜಿ.ಎಸ್.ಭುರಳೆ, ಸುನೀಲ್ ಪಾಟೀಲ್, ದೇವಿಂದ್ರ ಬರಗಾಲೆ, ರುದ್ರಮಣಿ ಮಠಪತಿ ಇತರರಿದ್ದರು.

**ವಿಕ ಸುದ್ದಿಲೋಕ** ಬಸವಕಲ್ಯಾಣ ಗ್ರಾಮೀಣ

ಶರಣರ ನಾಡು ಬಸವಕಲ್ಯಾಣಕ್ಕೆ ವಾರದ ಅವರ ಕೊಡುಗೆ ಅಪಾರ. ಆದ್ದರಿಂದ ಸಭಾಭವನಕ್ಕೆ ಅಥವಾ ಯಾವುದೆ ಪ್ರಮುಖ ಸ್ಥಳಗಳಿಗೆ ವಾರದ ಅವರ ಹೆಸರಿಡಬೇಕು ಎಂದು ತ್ರಿಪು ರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾ ರ್ಯರು ಹೇಳಿದರು.

ತಾಲೂಕಿನ ಶಿವಪೂರ ಗ್ರಾಮದ ನವತರುಣ ನಂದಿ ಧ್ವಜ ಸಮಿತಿ ಹಾಗೂ 11ನೇ ವರ್ಷದ ನಂದಿ ಧ್ವಜ ತರಬೇತಿ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ, ಧರ್ಮದ ಸಂಕೇತ ನಂದಿ ಧ್ವಜವಾಗಿದೆ. ಆದ್ದರಿಂದ ನಂದಿಕೋಲು ಹಿಡಿಯುವವರು ಉತ್ತಮ ಆಚಾರ ವಿಚಾರ ಧರ್ಮದ ಮಾರ್ಗದಲ್ಲಿ ಸಾಗಬೇಕು ಎಂದರು.ವಿಶೇಷ ಉಪನ್ಯಾಸ ನೀಡಿದ ಸಾಹಿತಿ ದೇವಿಂದ್ರ ಬರಗಾಲೆ, ಬಾಬಾ ಸಾಹೇಬ (ಮಲ್ಲಪ್ಪ) ವಾರದರ .ಹೆಸರು ಪ್ರಮುಖ ಸ್ಥಳಕ್ಕೆ ಇಡಬೇಕೆಂದು ಒತ್ತಾಯಿಸಿದರು.

ಕಸಾಪ ತಾಲೂಕು ಅಧ್ಯಕ್ಷ ರುದ್ರಮಣಿ ಮಠಪತಿ, ಯುವಕರಿಗೆ ಉತ್ತಮ ಮಾರ್ಗದರ್ಶನ ನೀಡಿದರೆ ಉತ್ತಮ ಸಮಾಜ ನಿರ್ಮಿಸಬಲ್ಲರು ಎಂದರು.

ಸಾಹಿತಿ ಭೀಮಾಶಂಕರ ಬಿರಾದಾರ, ಸನ್ಮಾನಿತ ಡಾ. ಜಿ.ಎಸ್.ಭೂರಾಳೆ ಮಾತನಾಡಿದರು. ಯುವ ನಾಯಕ ಸುನೀಲ್ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷ ಸಂಜೀವಕುಮಾರ ಶಾಶೆಟ್ಟೆ, ಸುಭಾಷ ಆರ್.ಬಾವಗೆ, ಉಪಾಧ್ಯಕ್ಷ ಗುರುಪಾದಪ್ಪ ಖಿರೋಣೆ, ನಾಗಪ್ಪ ನಿಣ್ಣೆ ಇತರರಿದ್ದರು. ಶರಣಪ್ಪ ತಾಂಬೋಳೆ, ಉಮಾಕಾಂತ ಬಿರಾದಾರ, ಸಂಜು ಧನ್ನೂರೆ, ಗುರು ಬಸಪ್ಪ ಮಲಶೆಟ್ಟೆ, ಕಸಾಪ ಗೌರವ ಕಾರ್ಯದರ್ಶಿ ಕೆ.ಜಿ. ಶರಣಪ್ಪ ಅವರನ್ನು ಸನ್ಮಾನಿಸಲಾಯಿತು. ನವತರುಣ ನಂದಿ ಧ್ವಜ ಸಮಿತಿಯ ಕಾರ್ಯದರ್ಶಿ ಸಾಗರ ಶೀಲವಂತ, ಇತರರಿದ್ದರು. ರೇವಣಪ್ಪ ವಾಂಜರಖೇಡೆ ಪ್ರಾಸ್ತಾವಿಕ, ಉಪನ್ಯಾಸಕಿ ಕನ್ಯಾಕುಮಾರಿ ಯಾನಾಗುಂದೆ ನಿರೂಪಣೆ, ಸಂಗನಬಸಯ್ಯ ಎಸ್.ಸ್ವಾಮಿ ವಂದಿಸಿದರು.

ವಿಜಯ ಕರ್ನಾಟಕ VK
ಮಂಗಳವಾರ,26 ಏಪ್ರಿಲ್ 2016, ಕಲಬುರಗಿ



ಬಸವಕಲ್ಯಾಣ ನಗರದ ಹೊರವಲಯದ ಕ್ರೀಡಾಂಗಣದ ಪಕ್ಕದಲ್ಲಿ ಶುಕ್ರವಾರ ಜೈ ಶ್ರೀ ರಾಮ ಮಂಡಳಿಯ ವತಿಯಿಂದ ಹಮ್ಮಿಕೊಂಡ ಶ್ರೀ ರಾಮ ಮಂದಿರ ಕಟ್ಟಡದ ಶಂಕು ಸ್ಥಾಪನೆ, ಭೂಮಿ ಪೂಜೆಯ ಕಾರ್ಯಕ್ರಮದ ಸಾನಿಧ್ಯ ವಹಿಸಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ವಿನೋದ ಪಾಟೀಲ ಉಪಸ್ಥಿತರಿದ್ದರು.

## ರಾಮ ಮಂದಿರ ಕಟ್ಟಡದ ಭೂಮಿ ಪೂಜೆ

# ರಾಮ ಮಂದಿರ ನಿರ್ಮಾಣ ಕಾರ್ಯ ನಿಜಕ್ಕೂ ಶ್ಲಾಘನಿಯ : ತ್ರಿಪೂರಾಂತ ಶ್ರೀ

ಬಸವಕಲ್ಯಾಣ

12 ನೇ ಶತಮಾನದ ಬಸವಾದಿ ಶಿವರಶಣರ ನಾಡಿನಲ್ಲಿ ರಾಮ ಮಂದಿರ ನಿರ್ಮಾಣ ಮಾಡುತ್ತಿರುವುದು ನಿಜಕ್ಕೂ ಶ್ಲಾಘನಿಯ ವಿಷಯವಾಗಿದೆ ಎಂದು ಪೂಜ್ಯ ಅಭಿನವ ಘನಲಿಂಗ ರುದ್ರುಮುನಿ ಶಿವಾಚಾರ್ಯರು ಹೇಳಿದರು.

ನಗರದ ಹೊರವಲಯದ ಕ್ರೀಡಾಂಗಣದ ಪಕ್ಕದಲ್ಲಿ ಶುಕ್ರವಾರ ಜೈ ಶ್ರೀ ರಾಮ ಮಂಡಳಿಯ ವತಿಯಿಂದ ಹಮ್ಮಿಕೊಂಡ ಶ್ರೀ ರಾಮ ಮಂದಿರ ಕಟ್ಟಡದ ಶಂಕು ಸ್ಥಾಪನೆ, ಭೂಮಿ ಪೂಜೆಯ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿ, ಇಂದು ಜಗತ್ತಿನಾದ್ಯಂತ ಶ್ರೀ ರಾಮನ ಭಕ್ತರು ರಾಮನವಮಿ ಆಚರಿಸುತ್ತಿದ್ದಾರೆ ಎಂದರು.

ಯುವಕರು ಸಂಘಟನೆ ಮಾಡಿಕೊಂಡು ಮುಂದಿನ ವರ್ಷದ ವರೆಗೆ ದೇವಸ್ಥಾನ ನಿರ್ಮಿಸಿ ಅದ್ದೂರಿ ರಾಮ ನವಮಿ ಆಚರಿಸಬೇಕು ಮತ್ತು ಯುವಕರು ಜಾಗ್ರತರಾದರೆ ದೇಶವೇ ಜಾಗ್ರತವಾಗಲು ಸಾಧ್ಯ ಎಂದರು.

ಮುಖಂಡ ಸಂಜಯಸಿಂಗ ಹಜಾರಿ ಮಾತನಾಡಿ, ಸಮಾಜದಲ್ಲಿ ಒಗ್ಗಟ್ಟಿನಿಂದ ಕೆಲಸ ನಿರ್ವಹಿಸಿದರೆ ಸಮಾಜ ಅಭಿವೃದ್ಧಿಯಾಗಲು ಸಾಧ್ಯ ಇದಕ್ಕೆ ಯುವಕರು ಜಾಗ್ರತರಾಗಬೇಕು ಎಂದರು.

ಮಂಡಳಿಯ ಉಪಾಧ್ಯಕ್ಷ ಸಾಯಿಪ್ರಕಾಶ ಬಿರಾದಾರ ಮಾತನಾಡಿ, ಈಗಾಗಲೇ ದೇವಸ್ಥಾನ ಕಟ್ಟಡದ ಶಂಕು ಸ್ಥಾಪನೆ ನೆರವೇರಿಸಲಾಗಿದ್ದು, ಬರುವ ಮುಂದಿನ ವರ್ಷದವರೆಗೆ ಕಟ್ಟಡ ನಿರ್ಮಾಣದ ಗುರಿ ಹೊಂದಲಾಗಿದೆ. ಇದಕ್ಕೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದರು. ಆನಂದ ಮಂಗಳೂರೆ ಹಾಗೂ ನಿಖಿಲೇಶ ಯವತೆ ಮಾತನಾಡಿದರು. ವೇದಿಕೆ ಮೇಲೆ ಮುಖಂಡ ಸುನೀಲ ಎಂ.ಪಾಟೀಲ, ವಿನೋದ ಪಾಟೀಲ ಉಪಸ್ಥಿತರಿದ್ದರು.

ಪ್ರಮುಖರಾದ ಬಸವರಾಜ ಮೂಳೆ, ಚನ್ನವೀರ ಸ್ವಾಮಿ, ಚನ್ನವೀರ ಕಣಜೆ, ಚನ್ನವೀರ ಹಂಚಗೆ, ಮಡಿವಾಳಯ್ಯ ಹಂಜಗೆ, ಲಕ್ಷ್ಮೀಕಾಂತ ಜಾಂತೆ, ರಾಜು ಸ್ವಾಮಿ, ಅಜಯ ಕಾಮಶೆಟ್ಟೆ, ನಾಗರಾಜ ಪಾಟೀಲ, ರೋಹಿತ ರಾಸೂರೆ, ಕರಬಸಪ್ಪ ಕುಂಬಾರ, ಸಾಗರ ನಿಂಬಾಣೆ ಸೇರಿದಂತೆ ಅನೇಕರು ಭಾಗವಹಿಸಿದರು.

ಸಂಯುಕ್ತ ಕರ್ನಾಟಕ
ಶನಿವಾರ, 16, ಏಪ್ರಿಲ್, 2016, ಕಲಬುರಗಿ

Scanned with CamScanner

ಸಂಯುಕ್ತ ಕರ್ನಾಟಕ | ಗುರುವಾರ, 12, ಮೇ, 2016, ಕಲಬುರಗಿ

# ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ

**ಬಸವಕಲ್ಯಾಣ**

ರಡ್ಡಿ ಸಮಾಜದ ಜನರು ನಗರದಲ್ಲಿ ಹೇಮರಡ್ಡಿ ಮಲ್ಲಮ್ಮ ದೇವಿಯ ದೇವಸ್ಥಾನ ಕಟ್ಟಲು ನಿರ್ಧರಿಸಿದ್ದಾರೆ. ಇದಕ್ಕೆ ಸಮಾಜದ ಜನರು ದೇವಸ್ಥಾನ ನಿರ್ಮಿಸಲು ತನು, ಮನ, ಧನದಿಂದ ಶ್ರಮಿಸಿದಾಗ ಮಾತ್ರ ಇಂತಹ ಯಶಸ್ಸು ಆಗಲು ಸಾಧ್ಯ ಎಂದು ಮುಚಳಂಬದ ಶ್ರೀ ಪ್ರಣಾವನಂದ ಸ್ವಾಮಿ ತಿಳಿಸಿದರು.

ತಾಲೂಕು ರಡ್ಡಿ ಸಮಾಜದ ವತಿಯಿಂದ ನಗರದ ಬಿಕೆಡಿಬಿ ಸಮುದಾಯ ಭವನದಲ್ಲಿ ಹಮ್ಮಿಕೊಂಡ ಮಹಾ ಶಿವಶರಣೆ ಹೇಮರಡ್ಡಿ ಮಲ್ಲಮ್ಮದೇವಿಯ 594ನೇ ಜಯಂತಿ ಉತ್ಸವದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಸಮಾಜದಲ್ಲಿ ಜನರು ಸಂಘಟನೆಯಿಂದ ಕೂಡಿದರೆ ಇಂತಹ ಯಾವುದೇ ಕಾರ್ಯಗಳು ಮಾಡಲು ಅಡಚಣೆಗಳು ಎದುರಾಗುವುದಿಲ್ಲ, ಸಮಾಜದಲ್ಲಿ ಜಾಗೃತಿ ಅತಿ ಅವಶ್ಯಕವಾಗಿದೆ. ಅಲ್ಲದೆ ಕೆಟ್ಟ ಚಟಗಳನ್ನು ಬಿಟ್ಟು ಒಳ್ಳೆಯ ಕಾರ್ಯದಲ್ಲಿ ತೊಡಗಲು ಸಲಹೆ ನೀಡಿದರು.

ಗೋರ್ಟಾದ ರಾಜಶೇಖರ ಸ್ವಾಮಿ ಮಾತನಾಡಿ, ಮಹಾತ್ಮರನ್ನು ಒಂದ–



ಬಸವಕಲ್ಯಾಣ ನಗರದ ಬಿಕೆಡಿಬಿ ಸಭಾಂಗಣದಲ್ಲಿ ಆಯೋಜಿಸಿದ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ದೇವಿಯ 594ನೇ ಜಯಂತಿ ಉತ್ಸವವನ್ನು ಮುಚಳಂಬದ ಪ್ರಣಾವನಂದ ಸ್ವಾಮಿ ಉದ್ಘಾಟಿಸಿದರು.

ೀ ಸಮುದಾಯಕ್ಕೆ ಸೀಮಿತಗೊಳಿಸದೇ ಎಲ್ಲಾ ಸಮುದಾಯದವರು ಸೇರಿ ಮಹಾತ್ಮರ, ಸಂತರ ಜಯಂತಿ ಆಚರಿಸಿದರೆ ಅದಕ್ಕೆ ಒಂದು ಮಹತ್ವ ಬರುತ್ತದೆ ಎಂದು ತಿಳಿಸಿ ಹೇಮರಡ್ಡಿ ಮಲ್ಲಮ್ಮ ಅವರ ಜಯಂತಿಯನ್ನು ಸರಕಾರದಿಂದ ಆಚರಿಸುವಂತಾಗಬೇಕು. ಇದಕ್ಕೆ ಸಮಾಜದ ಜನರು ಸರಕಾರಕ್ಕೆ ಒತ್ತಾಯಿಸಬೇಕು ಎಂದರು.

ತ್ರೀಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ನಗರದಲ್ಲಿ ಭವ್ಯವಾದ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನ ನಿರ್ಮಾಣವಾಗಬೇಕು ಇದಕ್ಕೆ ಸಮಾಜದ ಜನರ ಸಹಕಾರ ಅತ್ಯಾವಶ್ಯಕವಾಗಿದೆ ಅಲ್ಲದೆ ದಾನ, ಧರ್ಮ ಮಾಡಿದರೆ ಶಾಶ್ವತವಾಗಿ ಹೆಸರು ಉಳಿಯಲು ಸಾಧ್ಯ ಎಂದರು.

ರಾಜೇಶ್ವರನ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಇಂದು ಜನರು ಹೆಚ್ಚಾಗಿ ವಿಮುಖ ಸಂಸ್ಕೃತಿಗೆ ಮಾರು ಹೋಗುತ್ತಿದ್ದಾರೆ. ಇದನ್ನು ಬಿಟ್ಟು ಆದರ್ಶವುಳ್ಳ ಸಂಸ್ಕೃತಿ ಜೀವನದಲ್ಲಿ ಅಳವಡಿಸಿಕೊಂಡು ಸಾಗಬೇಕಿದೆ ಎಂದ ಅವರು ರಡ್ಡಿ ಸಮಾಜ ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ತಿಳಿಸಿದರು. ಹೇಮರಡ್ಡಿ ಮಲ್ಲಮ್ಮ ಟ್ರಸ್ಟ್‌ನ ತಾಲೂಕು ಅಧ್ಯಕ್ಷ ಮಲ್ಲರಡ್ಡಿ ಬಿ. ಪಾಟೀಲ ಸ್ವಾಗತಿಸಿ, ಪ್ರಸ್ತಾವಿಕವಾಗಿ ಮಾತನಾಡಿದರು.

ವೇದಿಕೆ ಮೇಲೆ ಜಿಪಂ ಸದಸ್ಯ ಗುಂಡುರಡ್ಡಿ, ತಾಪಂ ಸದಸ್ಯ ನರಸಾರಡ್ಡಿ, ಹೇಮರಡ್ಡಿ ಮಲ್ಲಮ್ಮ ಟ್ರಸ್ಟ್‌ನ ಬೀದರ ಜಿಲ್ಲಾ ಸಂಚಾಲಕ ಮಲ್ಲಿಕಾರ್ಜುನ ರಡ್ಡಿ, ಶಹಾಪೂರನ ಸೋಮಶೇಖರಯ್ಯ ಹಿರೇಮಠ, ಜೆಡಿಎಸ್ ತಾಲೂಕು ಅಧ್ಯಕ್ಷ ಶಬ್ಬೀರ ಪಾಶಾ ಮುಜಾವರ, ಕೇಶಪ್ಪಾ ಬಿರಾದಾರ, ಅಶೋಕ ಸ್ವಾಮಿ ಉಪಸ್ಥಿತರಿದ್ದರು.

ಪ್ರಮುಖರಾದ ದಿಲೀಪರಡ್ಡಿ ಇಲ್ಲಾಳ, ಮಹಾದೇವ ರಡ್ಡಿ, ಶಿವಾರಡ್ಡಿ ಸಸ್ತಾಪೂರ, ಬಾಲಾಜಿರಡ್ಡಿ ಯಾಚೆ ಸೇರಿದಂತೆ, ಟ್ರಸ್ಟ್‌ನ ಸದಸ್ಯರು, ಸಮಾಜದ ಜನರು ಭಾಗವಹಿಸಿದರು. ಅಶೋಕ ರಡ್ಡಿ ನಿರೂಪಿಸಿ, ವಂದಿಸಿದರು.

ಇದಕ್ಕೂ ಮುನ್ನ ನಗರದ ತ್ರೀಪುರಾಂತನಿಂದ ಮುಖ್ಯ ರಸ್ತೆಯ ಮಾರ್ಗವಾಗಿ ಬಿಕೆಡಿಬಿ ಸಮುದಾಯ ಭವನದವರೆಗೂ ಹೆಮ್ಮರಡ್ಡಿ ಮಲ್ಲಮ್ಮ ಅವರ ತೆರೆದ ವಾಹನದಲ್ಲಿ ಭವ್ಯವಾಗಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಡೊಳ್ಳು, ಭಾಜಾ ಭಜಂತ್ರಿಯೊಂದಿಗೆ ಅದ್ದೂರಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಸಮಾಜದ ಜನರು ಭಾಗವಹಿಸಿ ಮೆರವಣಿಗೆಗೆ ಶೋಭೆ ತಂದು ಕೊಟ್ಟರು. ಸಮಾಜದ ಜನರು ಭಾಗವಹಿಸಿದರು.

---

**ಸುದ್ದಿ ಕಾರ್ನರ್**

## ಗವಿಮಠದಲ್ಲಿ ಬಸವ ಜಯಂತಿ

**ಬಸವಕಲ್ಯಾಣ:** ಇಲ್ಲಿಯ ತ್ರಿಪುರಾಂತ ಗವಿಮಠದಲ್ಲಿ ಜಗದ್ಗುರು ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಆಶ್ರಯದಲ್ಲಿ ಬಸವ ಜಯಂತಿ ಆಚರಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ್, ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ, ಚಂದ್ರಕಾಂತ ಸ್ವಾಮಿ, ಬಸವಂತಪ್ಪ ಲವಾರೆ, ರುದ್ರಮಣಿ ಮಠ, ರೇವಣಸಿದ್ದಯ್ಯ ಮಠಪತಿ, ಗೀರಿಮಲ್ಲಯ್ಯ ಪೂಜಾರಿ, ಪ್ರೊ.ವಿ.ಎಸ್. ರಾಜೋಳೆ, ಪ್ರೊ.ರುದ್ರೇಶ್ವರ ಸ್ವಾಮಿ ಗೋರಟಾ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಗುರುವಾರ 12 ಮೇ 2016
12 MAY 2016



ಬಸವಕಲ್ಯಾಣ ಅಪ್ಪ ದೊಡ್ಡಪ್ಪ ಮಹಾವಿದ್ಯಾಲಯ ಕಾಲೇಜ್‌ನಲ್ಲಿ ಪತ್ರಿಕಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಸಮಾರಂಭದಲ್ಲಿ ಕಾರ್ಯನಿರತ ಎಲ್ಲಾ ಪರ್ತಕರ್ತರನ್ನು ಸತ್ಕರಿಸಿದರು. ಪುಜ್ಯಶ್ರೀ ರುದ್ರಮುನಿ ಶಿವಾಚಾರ್ಯರು, ಗುರುನಾಥ ಗಡ್ಡೆ, ಡಿಇಡಿ ಪ್ರಾಚಾರ್ಯ ರಾಚಯ್ಯಾ ಸ್ವಾಮಿ ಪ್ರಮುಖರು ಇದ್ದರು.

Scanned with CamScanner

# ತರಬೇತಿಯಿಂದ ಪರಿಪೂರ್ಣತೆ ಸಾಧಿಸಲು ಸಾಧ್ಯ: ಸ್ವಾಮೀಜಿ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದಲ್ಲಿ ಈಚೆಗೆ ನಂದಿಧ್ವಜ ತರಬೇತಿ ಶಿಬಿರದ ಸಮಾರೋಪದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿಯವರು ನಂದಿಧ್ವಜ ಹಿಡಿಯುವವರನ್ನು ಸನ್ಮಾನಿಸಿದರು

ಬಸವಕಲ್ಯಾಣ: ಯಾವುದೇ ಕಾರ್ಯದ ಕುರಿತು ತರಬೇತಿ ಪಡೆದರೆ ಪರಿಪೂರ್ಣತೆ ಸಾಧಿಸಲು ಸಾಧ್ಯ ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ಶಿವಪುರದ ಬಿರಾದಾರ ನಿವಾಸದ ಆವರಣದಲ್ಲಿ ಈಚೆಗೆ ಬಸವೇಶ್ವರ ಜಾತ್ರೆಯ ನಂದಿಧ್ವಜ ನವತರುಣ ಸಂಘದಿಂದ ಹಮ್ಮಿಕೊಂಡಿದ್ದ ನಂದಿಧ್ವಜ ಹಿಡಿಯುವ ತರಬೇತಿ ಶಿಬಿರದ ಸಮಾರೋಪದಲ್ಲಿ ಅವರು ಮಾತನಾಡಿದರು.

ನಂದಿಕೋಲು ಧರ್ಮದ ಸಂಕೇತ. ಆದ್ದರಿಂದ ಜಾತ್ರೆಯಲ್ಲಿ ನಂದಿಕೋಲು ಹಿಡಿಯುವುದು ಉತ್ತಮ ಆಚಾರ. ಧರ್ಮಮಾರ್ಗದಲ್ಲಿ ನಡೆದರೆ ಜೀವನದಲ್ಲಿ ನೆಮ್ಮದಿ ದೊರಕುತ್ತದೆ ಎಂದು ಹೇಳಿದರು

ದೇವೇಂದ್ರ ಬರಗಾಲೆ ಮಾತನಾಡಿ, ಬಾಬಾಸಾಹೇಬ್ ಮಲ್ಲಪ್ಪ ವಾರದ ಅವರು ಇಲ್ಲಿನ ಬಸವೇಶ್ವರ ದೇವಸ್ಥಾನದ ಜಾತ್ರೆಯಲ್ಲಿ ನಂದಿಧ್ವಜ ಹಿಡಿಯುವ ಸಂಪ್ರದಾಯ ಆರಂಭಿಸಿದರು. ಕಲ್ಯಾಣಕ್ಕೆ ಬಸವಕಲ್ಯಾಣ ಎಂದು ಹೆಸರು ಬರಲು ಕೂಡ ಅವರ ಶ್ರಮವೇ ಕಾರಣವಾಗಿದೆ. ಆದ್ದರಿಂದ ಪಟ್ಟಣದಲ್ಲಿನ ಯಾವುದಾದರೂ ವೃತ್ತಕ್ಕೆ ಅವರ ಹೆಸರು ಇಡುವುದು ಸೂಕ್ತ ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ರುದ್ರಮಣಿ ಮಠಪತಿ, ಭೀಮಾಶಂಕರ ಬಿರಾದಾರ, ಡಾ.ಜಿ.ಎಸ್.ಭುರಳೆ, ರೇವಣಪ್ಪ ವಾಂಜರಖೇಡೆ ಮಾತನಾಡಿದರು. ಮುಖಂಡ ಸುನಿಲ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ನಂದಿಧ್ವಜ ಸಮಿತಿ ಪ್ರಮುಖ ಸಂಜೀವ್‌ಕುಮಾರ ಶಾಶೆಟ್ಟೆ, ಸುಭಾಷ ಬಾವುಗೆ, ಗುರುಪಾದಪ್ಪ ಖರೋಣೆ, ಶರಣಪ್ಪ ತಾಂಬೋಳೆ, ಉಮಾಕಾಂತ ಬಿರಾದಾರ, ಸಂಜೀವ ಧನ್ನೂರೆ, ಗುರುಬಸಪ್ಪ ಮಲಶೆಟ್ಟೆ, ಸಾಗರ ಶೀಲವಂತ, ಸಚಿನ ಪಾಟೀಲ, ಶಿವಶಕ್ತಿ ಫಾಳೆ, ಅನಂದ ಖಂಡಾಳೆ, ಸಾಗರ ಲಾಡ, ಗುರುಬಸಪ್ಪ, ಸಚಿನ ಕುಂಟೆಗಾಂವೆ, ನಾಗನಾಥ ಬಿರಾದಾರ ಇದ್ದರು. ಸಂಗನಬಸಯ್ಯ ಸ್ವಾಗತಿಸಿದರು. ಕನ್ಯಾಕುಮಾರಿ ಯಾನಾಗುಂದೆ ನಿರೂಪಿಸಿದರು.

ಶುಕ್ರವಾರ • ಮೇ 6, 2016 ಪ್ರಜಾವಾಣಿ




ಬಸವಕಲ್ಯಾಣ ತಾಲೂಕಿನ ಶಿವಪೂರ ಗ್ರಾಮದಲ್ಲಿ ನವತರುಣ ನಂದಿ ಧ್ವಜ ಸಮಿತಿ ಹಾಗೂ 11ನೇ ವರ್ಷದ ನಂದಿ ಧ್ವಜ ತರಬೇತಿ ಸಮಾರೂಪ ಸಮಾರಂಭದಲ್ಲಿ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿ ಮಾತನಾಡಿದರು.

# ಧರ್ಮದ ಮಾರ್ಗದಲ್ಲಿ ಸಾಗಬೇಕು : ಘನಲಿಂಗ ಶ್ರೀ

ಬಸವಕಲ್ಯಾಣ

ಧರ್ಮದ ಸಂಕೇತ ನಂದಿ ಧ್ವಜವಾಗಿದೆ. ಆದ್ದರಿಂದ ನಂದಿಕೋಲು ಹಿಡಿಯುವವರು ಉತ್ತಮ ಆಚಾರ ವಿಚಾರ ಧರ್ಮದ ಮಾರ್ಗದಲ್ಲಿ ಸಾಗಬೇಕು ಎಂದು ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರುಮುನಿ ಶಿವಾಚಾರ್ಯರು ಹೇಳಿದರು. ತಾಲೂಕಿನ ಶಿವಪೂರ ಗ್ರಾಮದ ಉಮಾಕಾಂತ ಬಿರಾದಾರ ನಿವಾಸದ ಸಮೀಪ ನವತರುಣ ನಂದಿ ಧ್ವಜ ಸಮಿತಿ ಹಾಗೂ 11ನೇ ವರ್ಷದ ನಂದಿ ಧ್ವಜ ತರಬೇತಿ ಸಮಾರೂಪ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿ ಸಭಾ ಭವನಕ್ಕೆ ಅಥವಾ ಯಾವುದಾದರೊಂದು ಪ್ರಮುಖ ಸ್ಥಳಗಳಿಗೆ ವಾರದರ ಹೆಸರಿಡಬೇಕು ಎಂದರು.

ವಿಶೇಷ ಉಪನ್ಯಾಸ ನೀಡಿದ ಸಾಹಿತಿ ದೇವಿಂದ್ರ ಬರಗಾಲೆ ಬಾಬಾ ಸಾಹೇಬ (ಮಲ್ಲಪ್ಪ) ವಾರದರ ಜೀವನ ಚರಿತ್ರೆ ಕುರಿತು ಮಾರ್ಮಿಕವಾಗಿ ತಿಳಿಸಿ ಕಲ್ಯಾಣ ಎಂಬುದು ಬಸವಕಲ್ಯಾಣ ಎಂಬ ಹೆಸರಿಡಲು ಅವರೇ ಕಾರಣರು. ಆದ್ದರಿಂದ ಅಂತಹವರ ಹೆಸರು ಪ್ರಮುಖ ಸ್ಥಳಕ್ಕೆ ಇಡಬೇಕೆಂದು ತಿಳಿಸಿ ಸಂಬಂದ್ಧ ಪಟ್ಟವರು ಪ್ರಯತ್ನಿಸಬೇಕೆಂದರು. ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರುದ್ರಮಣಿ ಮಠಪತಿ ಸಹ ಮಾತನಾಡಿದರು. ಸಾಹಿತಿ ಭೀಮಾಶಂಕರ ಬಿರಾದಾರಲ್ಲದೇ ಸನ್ಮಾನಿತರಾಗಿ ಡಾ. ಜಿ.ಎಸ್.ಭೂರಾಳೆ ಸಹ ಮಾತನಾಡಿದರು. ಅಧ್ಯಕ್ಷತೆ ಯುವ ನಾಯಕ ಸುನೀಲ್ ಪಾಟೀಲ್ ವಹಿಸಿದರು.

ಅಧ್ಯಕ್ಷ ಸಂಜೀವಕುಮಾರ ಶಾಶಟ್ಟೆ, ಗೌರವಾಧ್ಯಕ್ಷ ಸುಭಾಷ ಆರ್.ಬಾವಗೆ, ಉಪಾಧ್ಯಕ್ಷ ಗುರುಪಾದಪ್ಪ ಖರೋಣೆ, ಪತ್ರಕರ್ತ ನಾಗಪ್ಪ ನಿಣ್ಣೆ ಇತರರಿದ್ದರು.

ವಿಶೇಷ ಉಪನ್ಯಾಸವನ್ನು ಶರಣಪ್ಪ ತಾಂಬೋಳೆ, ಉಮಾಕಾಂತ ಬಿರಾದಾರ, ಸಂಜು ಧನ್ನೂರೆ, ಗುರುಬಸಪ್ಪ ಮಲಶೆಟ್ಟೆ, ಕಸಾಪ ಗೌರವ ಕಾರ್ಯದರ್ಶಿ ಕೆ.ಜಿ ಶರಣಪ್ಪ ಅವರನ್ನು ಸನ್ಮಾನಿಸಲಾಯಿತು. ನವತರುಣ ನಂದಿ ಧ್ವಜ ಸಮಿತಿಯ ಕಾರ್ಯದರ್ಶಿ ಸಾಗರ ಶೀಲವಂತ, ಸಚಿನ ಪಾಟೀಲ್, ಶಿವಶಕ್ತಿ ಫಾಳೆ, ಆನಂದ ಖಂಡಾಳೆ, ಸಾಗರ ಲಾಡ, ಗುರುಬಸಪ್ಪ, ಸಚಿನ ಕುಂಟೆಗಾಂವೆ, ನಾಗನಾಥ ಬಿರಾದಾರ ಇನ್ನಿತರರು ಸಹಕರಿಸಿದರು.

ಪ್ರಾರ್ಥನೆ ನಂದಿತಾ ಮಾಶಟ್ಟೆ, ಪ್ರಾಸ್ತಾವಿಕ ಮಾತು ರೇವಣಪ್ಪ ವಾಂಜರಖೇಡೆ, ಸಂಚಾಲನೆ ಉಪನ್ಯಾಸಕಿ ಕನ್ಯಾಕುಮಾರಿ ಯಾನಾಗುಂದೆ, ಸ್ವಾಗತ ಹಾಗೂ ವಂದನಾರ್ಪಣೆ ಸಂಗನ ಬಸಯ್ಯ ಎಸ್.ಸ್ವಾಮಿ ಸಲ್ಲಿಸಿದರು.

ಸಂಯುಕ್ತ ಕರ್ನಾಟಕ
ಮಂಗಳವಾರ, 26, ಏಪ್ರಿಲ್, 2016, ಕಲಬುರಗಿ

Scanned with CamScanner

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
12 | ಬುಧವಾರ 11 ಮೇ 2016
11 MAY 2016

## ಬಿಕೆಡಿಬಿ ಸಭಾಂಗಣದಲ್ಲಿ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವ

# ಸಮಾಜಕ್ಕೆ ಬೆಳಕು ತೋರಿದ ಶರಣೆ

**ಬಸವಕಲ್ಯಾಣ:** ವೈರಾಗ್ಯದ ಪ್ರತಿರೂಪ ಶಿವಶರಣೆ ಅಕ್ಕಮಹಾದೇವಿಯಾದರೆ, ಭಕ್ತಿಯ ಪ್ರತಿರೂಪ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ತಾಯಿ ಎಂದು ಮುಚಳಂಬದ ಶ್ರೀ ಪ್ರಣವಾನಂದ ಮಹಾಸ್ವಾಮೀಜಿ ನುಡಿದರು.

ರೆಡ್ಡಿ ಸಮಾಜ ಇಲ್ಲಿಯ ಬಿಕೆಡಿಬಿ ಸಭಾಂಗಣದಲ್ಲಿ ಆಯೋಜಿಸಿದ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ದೇವಿಯ 594ನೇ ಜಯಂತ್ಯುತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಕೂಲ ಪರಿಸ್ಥಿತಿಯಲ್ಲೂ ಭಕ್ತಿ ಮಾರ್ಗದಲ್ಲಿ ಶ್ರೇಷ್ಠ ಸಾಧನೆ ಮಾಡಿದ ಆದರ್ಶ ಗೃಹಿಣಿ ಮಲ್ಲಮ್ಮ. ಸಮಾಜಕ್ಕೆ ಬೆಳಕು ತೋರಿದ ಮಹಾ ಶಿವಶರಣೆಯೂ ಹೌದು ಎಂದು ಸ್ಮರಿಸಿದರು.

ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಸಮಾಜ ಸಂಘಟಿತವಾಗಬೇಕು. ಇದಕ್ಕೆ ಸಮಾಜದ ಹಿರಿಯ ಜೀವಿಗಳು ಸಹಕರಿಸಬೇಕು. ನಗರದಲ್ಲಿ ಭವ್ಯವಾದ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನ ನಿರ್ಮಾಣವಾಗಬೇಕು ಎಂಬ ಸಮಾಜದ ಸಂಕಲ್ಪಕ್ಕೆ ಸಮಾಜದ ಎಲ್ಲರ ಸಹಕಾರ ಅತ್ಯವಶ್ಯಕವಾಗಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಗೋರ್ಟಾದ ಡಾ.ರಾಜಶೇಖರ ಸ್ವಾಮೀಜಿ ಮಾತನಾಡಿ, ಶಿವರಣೆ ಹೇಮರೆಡ್ಡಿ ಮಲ್ಲಮ್ಮ ದೇವಿ ಮಂದಿರ ನಿರ್ಮಿಸಲು ಸಮಾಜ ಸಂಕಲ್ಪ ತೊಟ್ಟಿರುವುದು ಸ್ವಾಗತಾರ್ಹ. ಆದರೆ ಗುಡಿಯನ್ನು ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ದೇಶದಲ್ಲಿಯೇ ಮಾದರಿಯಾಗಿ ನಿರ್ಮಿಸಬೇಕು. ಇದಕ್ಕೆ ಸಮಾಜ ಉದಾರ ಮನಸ್ಸಿನಿಂದ ಸಹಾಯ-ಸಹಕಾರ ನೀಡಬೇಕು ಎಂದು ಕೋರಿದರು.

ರಾಜೇಶ್ವರದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.



ಬಸವಕಲ್ಯಾಣ ಬಿಕೆಡಿಬಿ ಸಭಾಂಗಣದಲ್ಲಿ ಆಯೋಜಿಸಿದ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ದೇವಿಯ 594ನೇ ಜಯಂತ್ಯುತ್ಸವವನ್ನು ಶ್ರೀ ಪ್ರಣವಾನಂದ ಮಹಾಸ್ವಾಮೀಜಿ ಉದ್ಘಾಟಿಸಿದರು.

ಜಿಪಂ ಸದಸ್ಯ ಗುಂಡುರಡ್ಡಿ, ತಾಪಂ ಸದಸ್ಯ ನರಸಾರಡ್ಡಿ, ಹೇಮರೆಡ್ಡಿ ಮಲ್ಲಮ್ಮ ಟ್ರಸ್ಟ್ ಜಿಲ್ಲಾ ಸಂಚಾಲಕ ಮಲ್ಲಿಕಾರ್ಜುನ ರಡ್ಡಿ, ಶಹಾಪುರದ ಸೋಮಶೇಖರಯ್ಯ ಹಿರೇಮಠ, ಜೆಡಿಎಸ್ ತಾಲೂಕು ಅಧ್ಯಕ್ಷ ಶಬ್ಬೀರ್ ಪಾಶಾ ಮುಜಾವರ್, ಕೇಶಪ್ಪ ಬಿರಾದಾರ್, ಅಶೋಕ ಸ್ವಾಮಿ, ಕೃಷ್ಣಾರೆಡ್ಡಿ, ವಿಜಯಕುಮಾರರೆಡ್ಡಿ, ವಿಜಯಕುಮಾರ ರೆಡ್ಡಿ ಖೇರ್ಡಾ, ಸಂಗಾರೆಡ್ಡಿ, ವಿಷ್ಣುರೆಡ್ಡಿ, ಪ್ರಕಾಶರೆಡ್ಡಿ, ಮಲ್ಲರೆಡ್ಡಿ ಭೊಗಲೆ, ಮಹಾದೇವರೆಡ್ಡಿ ಮರೆ, ಬಾಲಾಜಿರೆಡ್ಡಿ ಯಾಚೆ, ದಿಲೀಪರೆಡ್ಡಿ ಇಲ್ಲಾಳ, ಶಿವಾರಡ್ಡಿ ಸಸ್ತಾಪುರ ಉಪಸ್ಥಿತರಿದ್ದರು.

ಹೇಮರೆಡ್ಡಿ ಮಲ್ಲಮ್ಮ ಟ್ರಸ್ಟ್ ತಾಲೂಕಾಧ್ಯಕ್ಷ ಮಲ್ಲರೆಡ್ಡಿ ಪಾಟೀಲ್ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಅಶೋಕರೆಡ್ಡಿ ನಿರೂಪಿಸಿ, ವಂದಿಸಿದರು.

ಇದಕ್ಕೂ ಮುನ್ನ ತ್ರಿಪುರಾಂತ ಪ್ರವಾಸಿ ಮಂದಿರದಿಂದ ಮುಖ್ಯ ರಸ್ತೆ ಮಾರ್ಗವಾಗಿ ಬಿಕೆಡಿಬಿ ಸಭಾಂಗಣವರೆಗೆ ಹೇಮರೆಡ್ಡಿ ಮಲ್ಲಮ್ಮ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು. ಡೊಳ್ಳು ಸೇರಿದಂತೆ ಕಲಾ ತಂಡಗಳ ಪ್ರದರ್ಶನ ಗಮನ ಸೆಳೆಯಿತು.

> ಗುಡಿ ಕಟ್ಟುವುದು ದೊಡ್ಡ ಮಾತಲ್ಲ. ಕಟ್ಟಲು ಮನಸ್ಸು ಮಾಡುವುದು ದೊಡ್ಡ ಮಾತು. ಸಮಾಜ ಮನಸ್ಸು ಮಾಡಿದರೆ ಭವ್ಯವಾದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಮಂದಿರ ನಿರ್ಮಾಣವಾಗುತ್ತದೆ. ಜೀವನದಲ್ಲಿ ಆಸ್ತಿ-ಐಶ್ವರ್ಯ, ಅಧಿಕಾರ ಶಾಶ್ವತವಾಗಿ ಉಳಿಯುವುದಿಲ್ಲ. ಶಾಶ್ವತ ಉಳಿಯುವುದು ಸತ್ಕಾರ್ಯ ಮಾತ್ರ. ಸತ್ಕಾರ್ಯಕ್ಕೆ ಎಲ್ಲರೂ ಕೈಜೋಡಿಸಬೇಕು.
>
> । ಶ್ರೀ ಪ್ರಣವಾನಂದ ಮಹಾಸ್ವಾಮೀಜಿ ಮುಚಳಂಬ

> ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ದೇವಿ ಜಯಂತಿಯನ್ನು ಪ್ರತಿವರ್ಷ ಸರ್ಕಾರದಿಂದಲೇ ಆಚರಿಸಬೇಕು. ಸಮಾಜ ಆಚರಿಸುವ ಪ್ರತಿ ಜಯಂತ್ಯುತ್ಸವದಲ್ಲಿ ವಿವಿಧ ಕ್ಷೇತ್ರದ ಸಾಧಕ ಮಹಿಳೆಯರನ್ನು ಗುರುತಿಸಿ ರಾಜ್ಯ ಮಟ್ಟದ ಪ್ರಶಸ್ತಿ ನೀಡುವ ಕೆಲಸ ನಡೆಯಲಿ.
>
> । ಡಾ.ರಾಜಶೇಖರ ಸ್ವಾಮೀಜಿ ಗೋರ್ಟಾ

## ರೆಡ್ಡಿ ಜನಾಂಗದ ಕುಲದೇವರು

**ಹುಮನಾಬಾದ್:** ಮಹಾತಪಸ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ರೆಡ್ಡಿ ಜನಾಂಗದ ಕುಲದೇವರು ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಾನಂದ ಮಂಠಾಳಕರ್ ಹೇಳಿದರು. ಪಟ್ಟಣದ ಶಿವಪುರ ಬಡಾವಣೆಯಲ್ಲಿರುವ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತ್ಯುತ್ಸವ ನಿಮಿತ್ತ ಅವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಶಿವನನ್ನು ಒಲಿದು ತನಗಾಗಿ ಏನನ್ನು ಬೇಡದೆ ರೆಡ್ಡಿ ಜನಾಂಗದವರನ್ನು ಬಂಗಾರದ ಕಡ್ಡಿಯಂತೆ ಬೆಳೆಸಬೇಕೆಂದು ಶಿವನನ್ನು ಕೇಳಿದ ಮಹಾ ತಪಸ್ವಿ , ತ್ಯಾಗಿ ಹೇಮರಡ್ಡಿ ಮಲ್ಲಮ್ಮ ತಾಯಿ. ಹಾಗಾಗಿ ಮಹಾ ತಾಯಿಯ ಜೀವನ ಚರಿತ್ರೆಯನ್ನು ಪ್ರತಿಯೊಬ್ಬರೂ ಓದಬೇಕು ಎಂದು ರೆಡ್ಡಿ ಜನಾಂಗದವರಿಗೆ ಮನವಿ ಮಾಡಿದ್ದಾರೆ. ಪುರಸಭೆ ಸದಸ್ಯ ತಿರಮಲರಡ್ಡಿ ಮಂಡಾ, ಪ್ರಮುಖರಾದ ಶ್ರೀಧರರಡ್ಡಿ, ವೀರಾರಡ್ಡಿ, ಖೇಮರಡ್ಡಿ, ಮಂಜುನಾಥರಡ್ಡಿ, ಆಕಾಶರಡ್ಡಿ, ಶ್ರೀನಿವಾಸ ರಡ್ಡಿ, ಚಂದ್ರಕಾಂತ ಮೇತ್ರೆ, ಜಗನ್ನಾಥರಡ್ಡಿ, ಪುನಿತ ಪೂಜಾರಿ, ಜಗನ್ನಾಥರಾವ ಧುಮಾಳೆ, ರಮೇಶ ಜಾಧವ, ರಮೇಶರಡ್ಡಿ, ಸೇರಿದಂತೆ ಇತರರಿದ್ದರು.

Scanned with CamScanner

# ಧರ್ಮದ ಮಾರ್ಗದಲ್ಲಿ ಸಾಗಬೇಕು: ಘನಲಿಂಗ ಶ್ರೀ




ಬಸವಕಲ್ಯಾಣ : ತಾಲೂಕಿನ ಶಿವಪೂರ ಗ್ರಾಮದಲ್ಲಿ ನವತರುಣ ನಂದಿ ಧ್ವಜ ಸಮಿತಿ ಹಾಗೂ 11ನೇ ವರ್ಷದ ನಂದಿ ಧ್ವಜ ತರಬೇತಿ ಸಮಾರೂಪ ಸಮಾರಂಭದಲ್ಲಿ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿ ಮಾತನಾಡಿದರು.

ಬಸವಕಲ್ಯಾಣ : ಧರ್ಮದ ಸಂಕೇತ ನಂದಿ ಧ್ವಜವಾಗಿದೆ. ಆದ್ದರಿಂದ ನಂದಿಕೋಲು ಹಿಡಿಯುವವರು ಉತ್ತಮ ಆಚಾರ ವಿಚಾರ ಧರ್ಮದ ಮಾರ್ಗದಲ್ಲಿ ಸಾಗಬೇಕು ಎಂದು ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನ ಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತಾಲೂಕಿನ ಶಿವಪೂರ ಗ್ರಾಮದ ಉಮಾಕಾಂತ ಬಿರಾದಾರ ನಿವಾಸದ ಸಮೀಪ ನವತರುಣ ನಂದಿ ಧ್ವಜ ಸಮಿತಿ ಹಾಗೂ 11ನೇ ವರ್ಷದ ನಂದಿ ಧ್ವಜ ತರಬೇತಿ ಸಮಾರೂಪ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿ ಸಭಾ ಭವನಕ್ಕೆ ಅಥವಾ ಯಾವುದಾದರೊಂದು ಪ್ರಮುಖ ಸ್ಥಳಗಳಿಗೆ ವಾರದರ ಹೆಸರಿಡಬೇಕು ಎಂದರು.

ವಿಶೇಷ ಉಪನ್ಯಾಸ ನೀಡಿದ ಸಾಹಿತಿ ದೇವಿಂದ್ರ ಬರಗಾಲೆ ಬಾಬಾ ಸಾಹೇಬ (ಮಲ್ಲಪ್ಪ) ವಾರದರ ಜೀವನ ಚರಿತ್ರೆ ಕುರಿತು ಮಾರ್ಮಿಕವಾಗಿ ತಿಳಿಸಿ ಕಲ್ಯಾಣ ಎಂಬುದು ಬಸವಕಲ್ಯಾಣ ಎಂಬ ಹೆಸರಿಡಲು ಅವರೇ ಕಾರಣರು. ಆದ್ದರಿಂದ ಅಂತಹವರ ಹೆಸರು ಪ್ರಮುಖ ಸ್ಥಳಕ್ಕೆ ಇಡಬೇಕೆಂದು ತಿಳಿಸಿ ಸಂಬಂಧ್ಧ ಪಟ್ಟವರು ಪ್ರಯತ್ನಿಸಬೇಕೆಂದರು.

ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರುದ್ರಮಣಿ ಮಠಪತಿ ಸಹ ಮಾತನಾಡಿದರು. ಸಾಹಿತಿ ಭೀಮಾಶಂಕರ ಬಿರಾದಾರಲ್ಲದೇ ಸನ್ಮಾನಿತರಾಗಿ ಡಾ. ಜಿ.ಎಸ್.ಭೂರಾಳೆ ಸಹ ಮಾತನಾಡಿದರು. ಅಧ್ಯಕ್ಷತೆ ಯುವ ನಾಯಕ ಸುನೀಲ್ ಪಾಟೀಲ್ ವಹಿಸಿದರು.

ಅಧ್ಯಕ್ಷ ಸಂಜೀವಕುಮಾರ ಶಾಶಟ್ಟೆ, ಗೌರವಾಧ್ಯಕ್ಷ ಸುಭಾಷ ಆರ್.ಬಾವಗೆ, ಉಪಾಧ್ಯಕ್ಷ ಗುರು ಪಾದಪ್ಪ ಖರೋಣೆ, ಪತ್ರಕರ್ತ ನಾಗಪ್ಪ ನಿಣ್ಣೆ ಇತರರಿದ್ದರು.

ವಿಶೇಷ ಉಪನ್ಯಾಸವನ್ನು ಶರಣಪ್ಪ ತಾಂಬೋಳೆ, ಉಮಾಕಾಂತ ಬಿರಾದಾರ, ಸಂಜು ಧನ್ನೂರೆ, ಗುರುಬಸಪ್ಪ ಮಲಶೆಟ್ಟೆ, ಕಸಾಪ ಗೌರವ ಕಾರ್ಯದರ್ಶಿ ಕೆ.ಜಿ ಶರಣಪ್ಪ ಅವರನ್ನು ಸನ್ಮಾನಿಸಲಾಯಿತು. ನವತರುಣ ನಂದಿ ಧ್ವಜ ಸಮಿತಿಯ ಕಾರ್ಯದರ್ಶಿ ಸಾಗರ ಶೀಲವಂತ, ಸಚಿನ ಪಾಟೀಲ್, ಶಿವಶಕ್ತಿ ಘಾಳೆ, ಆನಂದ ಖಂಡಾಳೆ, ಸಾಗರ ಲಾಡ, ಗುರುಬಸಪ್ಪ, ಸಚಿನ ಕುಂಟೆಗಾಂವೆ, ನಾಗನಾಥ ಬಿರಾದಾರ ಇನ್ನಿತರರು ಸಹಕರಿಸಿದರು.

ಪ್ರಾರ್ಥನೆ ನಂದಿತಾ ಮಾಶಟ್ಟೆ ಪ್ರಾಸ್ತಾವಿಕ ಮಾತು ರೇವಣಪ್ಪ ವಾಂಜರಖೇಡೆ, ಸಂಚಾಲನೆ ಉಪನ್ಯಾಸಕಿ ಕನ್ಯಾಕುಮಾರಿ ಯಾನಾಗುಂದೆ, ಸ್ವಾಗತ ಹಾಗೂ ವಂದನಾರ್ಪಣೆ ಸಂಗನ ಬಸಯ್ಯ ಎಸ್.ಸ್ವಾಮಿ ಸಲ್ಲಿಸಿದರು.

ಎಪ್ರಿಲ್ 27-2016

## ಪ್ರತಿಭಾವಂತರಿಗೆ ಪುರಸ್ಕಾರ ಕಾರ್ಯಕ್ರಮದಲ್ಲಿ ತ್ರಿಪುರಾಂತ ಶ್ರೀ ಅಭಿಮತ

# ವಿದ್ಯೆ ಕಸಿದುಕೊಳ್ಳಲಾಗದ ಸಂಪತ್ತು

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಶುಕ್ರವಾರ 27 ಮೇ 2016
27 MAY 2016



ಬಸವಕಲ್ಯಾಣ ನಗರದ ಶಾಂತಿನಿಕೇತನ ಶಾಲಾ ಆವರಣದಲ್ಲಿ ಆಯೋಜಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಾಧನಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶ್ರೀ, ರುದ್ರಮಣಿ ಮಠಪತಿ, ಭೀಮಾಶಂಕರ ಬಿರಾದಾರ, ಶಶಿಕಾಂತ ಎಚ್. ಮಂಠಾಳೆ ಇದ್ದರು.

ಬಸವಕಲ್ಯಾಣ: ಆಸ್ತಿ, ಐಶ್ವರ್ಯ, ಸಂಪತ್ತು ಯಾರಾದರೂ ಕಸಿದುಕೊಳ್ಳಬಹುದು. ಆದರೆ ಕಲಿತ ವಿದ್ಯೆಯನ್ನು ಯಾರಿಂದಲೂ ಕಸಿದುಕೊಳ್ಳಲು ಸಾಧ್ಯವಿಲ್ಲ. ವಿದ್ಯಾರ್ಥಿಗಳು ಶಿಕ್ಷಣಕ್ಕೆ ಮಹತ್ವ ನೀಡಿ ಉನ್ನತ ಗುರಿ ಹೊಂದುವ ಕನಸು ಕಾಣಬೇಕು ಎಂದು ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಸ್ವಾಮೀಜಿ ಕರೆ ನೀಡಿದರು.

ಇಲ್ಲಿಯ ರವೀಂದ್ರನಾಥ ಟ್ಯಾಗೊರ್ ತರಬೇತಿ ಕೇಂದ್ರದಿಂದ ನಗರದ ಶಾಂತಿನಿಕೇತನ ಶಾಲೆಯ ಆವರಣದಲ್ಲಿ ಆಯೋಜಿಸದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಾಧನಾ ಪುರಸ್ಕಾರ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ಶಿಕ್ಷಕರು ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಸಂಸ್ಕಾರ ಕೂಡಾ ನೀಡಬೇಕು ಎಂದು ಸಲಹೆ ನೀಡಿದರು. ಕಸಾಪ ತಾಲೂಕು ಅಧ್ಯಕ್ಷ ರುದ್ರಮಣಿ ಮಠಪತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಅನಾವಶ್ಯಕ ಮೋಬೈಲ್ ಬಳಕೆ ವಿದ್ಯಾರ್ಥಿಗಳ ಶಿಕ್ಷಣದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಜತೆಗೆ ಜೀವನದ ಮೌಲ್ಯಕ್ಕೆ ಧಕ್ಕೆ ತರುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ವಿದ್ಯಾರ್ಥಿ ಜೀವನದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಎರಡು ಪ್ರಮುಖ ಘಟ್ಟಗಳು. ಶ್ರಮ ಪಟ್ಟು ಉತ್ತಮ ಅಭ್ಯಾಸ ಮಾಡಿದಾಗ ಜೀವನದಲ್ಲಿ ಯಶಸ್ವಿಯಾಗಲು ಸಾಧ್ಯವಾಗುತ್ತದೆ ಎಂದರು.

ಉಪನ್ಯಾಸಕ ಭೀಮಾಶಂಕರ ಬಿರಾದಾರ ಮಾತನಾಡಿ, ಗುರು - ಶಿಷ್ಯರ ಸಂಬಂಧ ಅನನ್ಯವಾಗಿರುವಂತದ್ದು, ಕಷ್ಟಪಟ್ಟು ಓದಿ ಕಲಿಸಿದ ಗುರುವಿಗೆ ಹೆಸರು ತರುವಂತಹ ಕೆಲಸ ವಿದ್ಯಾರ್ಥಿಗಳು ಮಾಡಬೇಕು. ಸಮಾಜದಲ್ಲಿನ ಗುರು ಹಿರಿಯರನ್ನು ಗೌರವದಿಂದ ಕಾಣುವ ಪ್ರವೃತ್ತಿ ವಿದ್ಯಾರ್ಥಿ ಜೀವನದಿಂದಲೇ ಮುಂದುವರೆಸಿಕೊಂಡು ಹೋಗಬೇಕು ಎಂದು ಸಲಹೆ ನೀಡಿದರು.

ನಿವೃತ್ತ ಶಿಕ್ಷಕ ಮಾಣಿಕರಾವ ಗೋರಮುಡೆ, ಶಾಂತಿನಿಕೇತನ ಶಾಲೆ ಮುಖ್ಯಗುರು ಶಿವರಾಜಯ್ಯ ಮಾತನಾಡಿದರು. ಶಿಕ್ಷಕ ಶಶಿಕಾಂತ ಎಚ್ ಮಂಠಾಳೆ ಸ್ವಾಗತಿಸಿದರು. ಚನ್ನಬಸಪ್ಪ ಬಿರಾದಾರ ವಂದಿಸಿದರು.ಜಗದೇವಿ ಡಿ. ಜವಳಗೀಕರ ನಿರೂಪಿಸಿದರು.

Scanned with CamScanner

ಸಂಯುಕ್ತ ಕರ್ನಾಟಕ | ರವಿವಾರ | 3 | ಜುಲೈ | 2016 | ಕಲಬುರಗಿ | ಬೀದರ

# 'ಪತ್ರಕರ್ತರು ಸತ್ಯದ ಪ್ರತಿಪಾದಕರಾಗಿ ಮುನ್ನುಗ್ಗಬೇಕು'



ಬಸವಕಲ್ಯಾಣ ನಗರದ ದೊಡ್ಡಪ್ಪ ಅಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪತ್ರಕರ್ತರಿಗೆ ಸನ್ಮಾನ ಸಮಾರಂಭವನ್ನು ಹಿರಿಯ ನಿವೃತ್ತ ಉಪನ್ಯಾಸಕ ಸಿ.ಬಿ ಪ್ರತಾಪೂರೆ ಉದ್ಘಾಟಿಸಿದರು.

ಬಸವಕಲ್ಯಾಣ : ಪತ್ರಕರ್ತರು ಪಕ್ಷಪಾತ ಮಾಡದೇ ತಮ್ಮ ತಮ್ಮ ಬರವಣಿಗೆಯ ಮೂಲಕ ಸುದ್ದಿ ಮನೆ ಮನಗಳಲ್ಲಿ ಮುಟ್ಟಿಸುತ್ತ ಸತ್ಯದ ಪ್ರತಿಪಾದಕರಾಗಿ ಮುನ್ನುಗ್ಗಿ ಎಂದು ಹಿರಿಯ ನಿವೃತ್ತ ಉಪನ್ಯಾಸಕ ಪ್ರೋ.ಸಿ.ಬಿ ಪ್ರತಾಪುರೆ ನುಡಿದರು.

ನಗರದ ದೊಡ್ಡಪ್ಪ ಅಪ್ಪ ಶಿಕ್ಷಣ ಮಹಾವಿದ್ಯಾಲಯದ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ಪತ್ರಿಕಾ ದಿನಾಚಾರಣೆ, . ಮಾಧ್ಯಮ ಮತ್ತು ಸಮಾಜ ಕುರಿತು ಉಪನ್ಯಾಸ ಹಾಗೂ ಪತ್ರಕರ್ತರಿಗೆ ಆಯೋಜಿಸಿದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಪ್ರಜಾ ರಾಜ್ಯದಲ್ಲಿ ಪತ್ರಿಕೆಗಳ ಪಾತ್ರ ಅಗಾಧವಾಗಿದೆ. ಪತ್ರಿಕೆ ಸಮಾಜದ ಕನ್ನಡಿಯಾಗಿದೆ. ಖಡ್ಗಕ್ಕಿಂತ ಹರಿತವಾದದ್ದು ಪತ್ರಿಕೆಯಾಗಿದೆ ಎಂದು ತಿಳಿಸಿದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರತಿನಿಧಿ ಗುರುನಾಥ ಗಡ್ಡೆ ಸುದ್ದಿಗಾಗಿ ಹರಸಾಹಸ ಪಡುವ ಪತ್ರಕರ್ತರಿಗೆ ಅನೇಕ ಸಮಸ್ಯೆಗಳಿವೆ.

ಅಂತಹ ಸ್ಥಿತಿಯಲ್ಲಿಯೂ ಸತ್ಯಾ ಸತ್ಯತೆ ಅರಿತು ಮಾನ, ಅಪಮಾನ ಸಾವಿಗೂ ಸಹ ಹೆದರದೆ ಸಮಸ್ಯೆ ಎದುರು ಮೆಟ್ಟಿ ನಿಲ್ಲಬೇಕು ಎಂಬುದನ್ನು ತಮ್ಮ ಜೀವನದಲ್ಲಿ ತರಾತುರಿಯಲ್ಲಿ ನಡೆದ ಘಟನೆಗಳ ಬಗ್ಗೆ ವಿವರಿಸಿದರು.

ಮಾಧ್ಯಮ ಮತ್ತು ಸಮಾಜ ಕುರಿತು ಸಾಹಿತಿ ಭೀಮಾಶಂಕರ ಬಿರಾದಾರ ಮಾತನಾಡುತ್ತ ಅವರು ಪತ್ರಕರ್ತರು ಸಮಾಜಕ್ಕೆ ಅಪಾಯ ವಾಗದಂತೆ ಎಚ್ಚರದಿಂದ ಕಾ ಂ ು್ ರ್ ನಿ ವ್ ರ್ ಹಿ ಸಿ ರಿ. ಬರೆಯುವಾಗ ಅವರ ಬೌದ್ಧಿಕ ಜವಬ್ದಾರಿಯುಅತಿಮುಖ್ಯವಾಗಿದೆ ಎಂದರು.

ಡಾ. ಬಸವರಾಜ ಬಾಗಾ ಅಧ್ಯಕ್ಷೀಯ ಭಾಷಣದಲ್ಲಿ ದೀಪ ತನ್ನನ್ನು ತಾನು ಸುಟ್ಟಿಕೊಂಡು ಇತರರಿಗೆ ಹೇಗೆ ಬೆಳಕು ನೀಡುತ್ತದೆಯೋ, ಅದೇ ಪರಿಸ್ಥಿತಿ ಸ್ಥಿತಿ ಪತ್ರಕರ್ತನದ್ದಾಗಿದೆ ಬೇಸರ ವ್ಯಕ್ತಪಡಿಸಿದರು. ಪತ್ರಿಕೆ ನಮ್ಮಲ್ಲೆರ ಒಂದು ಅವಿಭಾಜ್ಯ ಅಂಗವಾಗಬೇಕು ಎಂದರು.

ಉಪನ್ಯಾಸಕಿ ಸಂಗೀತ ಆರ್. ಕುಳ್ಳದಮಠ. ಕು. ಮಾಲಿನಿ ಡಿಗೋಲ್, ಪೂಜ್ಯ ಅಭಿನವ ಘನಲಿಂಗ ರುದ್ರುಮುನಿ ಶಿವಾಚಾರ್ಯರು ಮಾತನಾಡಿ ಪತ್ರಿಕೆಗಳಲ್ಲಿ ಮಹಾನುಭಾವರು ಪರಿಶ್ರಮಿಸಿ ಸ್ವಾತಂತ್ರ ಸಿಗುವಲ್ಲಿಯೂ ಅವರ ಪಾತ್ರ ಅಮೋಘವಾಗಿದೆ ಎಂದರು.

ಮಾಧ್ಯಮ ಪ್ರತಿನಿಧಿಗಳಾದ ಪ್ರಶಾಂತ ಹೊಸಮನಿ, ಶಿವಪುತ್ರ ಪಾಟೀಲ್, ನಾಗಪ್ಪ ನಿಣ್ಣೆ, ಡಿ.ಕೆ ಪ್ರಲ್ಹಾದ, ಪ್ರಭುಲಿಂಗಯ್ಯ ಟಂಕಸಾಲಿಮಠ, ಮಲ್ಲಿಕಾರ್ಜುನ ಬಂಡೆ, ಪ್ರದೀಪ ವಿಸಾಜಿ, ಕಾರ್ತಿಕ ಸ್ವಾಮಿ, ಸಂಘದ ಅಧ್ಯಕ್ಷ ರಾಜೇಂದ್ರ ಗೋಖಲೆ, ಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ ಮತ್ತಿತರರನ್ನು ಸನ್ಮಾನಿಸಿದರು.

ಉಪನ್ಯಾಸಕ ನಿಲೇಶ ಟೋಣಪೆ, ಗುಂಡಪ್ಪ ಕಚೇರಿ, ಸಂಜುಕುಮಾರ ಪಂಗರಗೆ, ಮಲ್ಲಮ್ಮಾ ಕುಂಬಾರ, ಬಸವರಾಜ ಗೋನಕೆ ಇದ್ದರು. ಪ್ರಾರ್ಥನೆಗೀತೆ ಕು.ಪ್ರಭಾವತಿ ಪೊದ್ದಾರ ಸುಮಧುರ ಕಂಠದಿಂದ ಹಾಡಿದರು. ಡಿಇಡಿ ಪ್ರಾಚಾರ್ಯ ರಾಚಯ್ಯ ಸ್ವಾಮಿ ಸ್ವಾಗತಿಸಿದರು. ಉಪನ್ಯಾಸಕ ಬಸವರಾಜ ಶೇರಿ ನಿರೂಪಿಸಿದರು. ಕು. ಅರುಣಾ ಕಾಡಾಧಿ ವಂದಿಸಿದರು.

Scanned with CamScanner

## ಬಸವಕಲ್ಯಾಣದ ದೊಡ್ಡಪ್ಪ ಅಪ್ಪ ಡಿಇಡಿ ಮಹಾವಿದ್ಯಾಲಯದಲ್ಲಿ ಪತ್ರಿಕಾ ದಿನಾಚರಣೆ

# ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಪಾತ್ರ ಬಹುಮುಖ್ಯ

ವಿಜಯವಾಣಿ ಚಿತ್ರ



ಬಸವಕಲ್ಯಾಣದಲ್ಲಿ ಶುಕ್ರವಾರ ಆಯೋಜಿಸಿದ ಪತ್ರಿಕಾ ದಿನಾಚರಣೆಯಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಭೀಮಾಶಂಕರ ಬಿರಾದಾರ್, ಪ್ರೊ.ಪರ್ತಾಪುರೆ, ಗುರುನಾಥ ಗಡ್ಡೆ, ಬಸವರಾಜ ಬಾಗಾ, ರಾಜೇಂದ್ರ ಗೋಖಲೆ, ಶಿವಕುಮಾರ ಮಠಪತಿ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI « KALABURAGI
4 ಭಾನುವಾರ
3 ಜುಲೈ 2016
3 JULY 2016

■ **ವಿಜಯವಾಣಿ ಸುದ್ದಿಜಾಲ** ಬಸವಕಲ್ಯಾಣ

ಪತ್ರಿಕಾ ಮಾಧ್ಯಮವು ಸಾಮಾಜಿಕ ಮತ್ತು ರಾಜಕೀಯ ನೆಲೆಯಲ್ಲಿ ಪ್ರಜ್ಞೆಯ ಸ್ವರೂಪ ಪಡೆದು ಕರ್ತವ್ಯ ನಿರ್ವಹಿಸುವ ಜತೆಗೆ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಉಪನ್ಯಾಸಕ ಭೀಮಾಶಂಕರ ಬಿರಾದಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ದೊಡ್ಡಪ್ಪ ಅಪ್ಪ ಡಿಇಡಿ ಮಹಾವಿದ್ಯಾಲಯ ಹಾಗೂ ಕರ್ನಾಟಕ ಕಾರ್ಯನಿರತ ಪರ್ತಕರ್ತರ ಸಂಘದ ತಾಲೂಕು ಘಟಕದ ಸಹಯೋಗದಡಿ ಶುಕ್ರವಾರ ಕಾಲೇಜಿನಲ್ಲಿ ಆಯೋಜಿಸಿದ ಪತ್ರಿಕಾ ದಿನಾಚರಣೆ ನಿಮಿತ್ತ ಮಾಧ್ಯಮ ಮತ್ತು ಸಮಾಜ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸುದ್ದಿ ಮಾಧ್ಯಮದಿಂದ ಚಾರಿತ್ರಿಕ ದಾಖಲೆ, ಪ್ರಭುತ್ವದ ಬದಲಾವಣೆ ಹಾಗೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಪಲ್ಲಟಗಳು ನಿರಂತರ ಪಡೆಯುತ್ತ ಬಂದಿವೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ಬಿ.ಪರ್ತಾಪುರೆ ಮಾತನಾಡಿ, ಸುದ್ದಿ ಮಾಧ್ಯಮ ಕ್ಷೇತ್ರ ಪವಿತ್ರವಾದದ್ದು.ಪತ್ರಕರ್ತರ ಮೇಲೆ ಸಾಮಾಜಿಕ ಜವಾಬ್ದಾರಿಗಳಿದ್ದು, ಪತ್ರಕರ್ತರು ಯಾವಾಗಲೂ ನಿಷ್ಪಕ್ಷವಾಗಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಸಾನ್ನಿಧ್ಯ ವಹಿಸಿದ್ದ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಪತ್ರಿಕೆಗಳು ಪ್ರಜಾಪ್ರಭುತ್ವ ಮೌಲ್ಯಗಳನ್ನು ಸಾರುವ ಜತೆಗೆ ದಿನನಿತ್ಯ ಹೊಸ ವಿಷಯಗಳನ್ನು ತಿಳಿಸುವ ಮೂಲಕ ಜ್ಞಾನ ವೃದ್ಧಿಗೆ ಸಹಕಾರಿಯಾಗಿ ಕಾರ್ಯ ನಿರ್ವಹಿಸುತ್ತಿವೆ. ಪತ್ರಿಕೆಗಳನ್ನು ಓದುವ ಹವ್ಯಾಸ ಎಲ್ಲರೂ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

> **ಪತ್ರಿಕೆಗಳು ಸಾಮಾಜಿಕ ಜವಾಬ್ದಾರಿ ನಿರ್ವಹಿಸುತ್ತಲೇ ಓದುಗರಲ್ಲಿ ಬೌದ್ಧಿಕ ಮತ್ತು ವೈಚಾರಿಕ ಜವಾಬ್ದಾರಿ ಬೆಳೆಸುತ್ತಿವೆ. ಸಮಾಜದ ಎಲ್ಲ ವರ್ಗಗಳ ಆಶೋತ್ತರಗಳನ್ನು ಸಾಂಸ್ಕೃತಿಕ ಚಿಂತನೆ ರೂಪವಾಗಿ ಪತ್ರಿಕೆಗಳು ಓದುಗರಿಗೆ ತಲುಪಿಸುತ್ತಿವೆ. ಸಾಮಾಜಿಕ ಸಮಸ್ಯೆಗಳು, ಪರಿಸರದ ಮೇಲೆ ನಡೆಯುವ ಹಿಂಸೆ, ರೈತರ ಯಾತನೆ, ದುಡಿಯುವವರ ನೋವುಗಳನ್ನು ಪ್ರಜ್ಞಾಪೂರ್ವಕವಾಗಿ ಅಭಿವ್ಯಕ್ತಿಸುವ ಪರಿಣಾಮಕಾರಿ ಮಾಧ್ಯಮವಾಗಿದೆ.**
>
> । ಭೀಮಾಶಂಕರ ಬಿರಾದಾರ್

ಪತ್ರಕರ್ತ ಗುರುನಾಥ ಗಡ್ಡೆ ಮಾತನಾಡಿ, ಸಮಾಜದಲ್ಲಿ ತಪ್ಪುಗಳನ್ನು ಎತ್ತಿ ಹಿಡಿದು ಸಮಾಜ ಸುಧಾರಿಸುವಲ್ಲಿ ಪತ್ರಿಕೆಗಳ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಪ್ರಾಚಾರ್ಯ ಬಸವರಾಜ ಬಾಗಾ ಅಧ್ಯಕ್ಷತೆ ವಹಿಸಿದ್ದರು. ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಾಜೇಂದ್ರ ಗೋಖಲೆ, ಪ್ರಧಾನ ಕಾರ್ಯದರ್ಶಿ ಶಿವಕುಮಾರ ಮಠಪತಿ, ಖಜಾಂಚಿ ಪ್ರಶಾಂತ ಹೊಸಮನಿ, ಪತ್ರಕರ್ತರಾದ ಡಿ.ಕೆ.ಪ್ರಲ್ಹಾದ, ನಾಗಪ್ಪ ನಿಣ್ಣೆ, ಪ್ರಭುಲಿಂಗಯ್ಯ ಟಂಕಸಾಲಿಮಠ, ಮಲ್ಲಿಕಾರ್ಜುನ ಬಂಡೆ, ಕಾರ್ತಿಕ ಸ್ವಾಮಿ ಹಾಗೂ ಬಿಇಡಿ ಕಾಲೇಜಿನ ವಿದ್ಯಾರ್ಥಿಗಳು, ಉಪನ್ಯಾಸಕರು ಭಾಗವಹಿಸಿದ್ದರು.

ಪಲ್ಲವಿ ಪೋದ್ದಾರ್ ಪ್ರಾರ್ಥನೆಗೀತೆ ಹಾಡಿದರು. ರಾಚಯ್ಯ ಮಠಪತಿ ಸ್ವಾಗತಿಸಿದರು. ಬಸವರಾಜ ಶೇರಿ ನಿರೂಪಿಸಿದರು. ಅರುಣಾ ಕಾಡಾದಿ ವಂದಿಸಿದರು.

**ಭಾಲ್ಕಿ ವರದಿ:** ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮ ಮತ್ತು ಪತ್ರಿಕೆಗಳ ಪಾತ್ರ ಬಹುಮುಖ್ಯವಾಗಿದೆ ಎಂದು ವಿಶ್ವಕ್ರಾಂತಿ ದಿವ್ಯಪೀಠದ ಅಧ್ಯಕ್ಷ ಓಂಪ್ರಕಾಶ

Scanned with CamScanner

# "ವಿದ್ಯಾ ಚೇತನ ಕನ್ನಡ ಪ್ರಾಥಮಿಕ ಶಾಲೆ ಸ್ನೇಹ ಸಮ್ಮೇಳನ"

## "ಮಕ್ಕಳೆ ದೇಶದ ಆಸ್ತಿ" ಅಭೀನವ ಶ್ರೀ"

ಬೀದರ ಪ್ರಾಂತ ಪ್ರಜಾ ದಿನ ಪತ್ರಿಕೆ
ದಿನಾಂಕ : 04-01-2015



ಬಸವಕಲ್ಯಾಣ ಮಾ 3 : ಮಕ್ಕಳೆ ದೇಶ ಆಸ್ತಿಯಾಗಿದ್ದು ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಮಕ್ಕಳಲ್ಲಿ ದೇಶಾಭಿಮಾನ, ಒಳ್ಳೆ ಸಂಸ್ಕಾರ ತುಂಬಬೇಕೆಂದು ತ್ರಿಪೂರಾಂತದ ಪೂಜಶ್ರೀ ಅಭಿನವ ಘನಲಿಂಗ ರುದ್ರಮನಿ ಶಿವಚಾರ್ಯರು ನುಡಿದರು. ಅವರು ನಗರದ ಬುಧುವಾರ ಪೇಟನ ಶ್ರೀ ಕರಿಬಸವೇಶ್ವರ ಗುಂಪಾದಲ್ಲಿರುವ ವಿದ್ಯಾಚೇತನ ಕನ್ನಡ ಪ್ರಾಥಮೀಕ ಶಾಲೆಯ 4ನೇ ವಾರ್ಷಿಕೋತ್ಸವದ ದಿವ್ಯ ಸಾನಿಧ್ಯವಹಿಸಿ ಮಾತನಾಡಿ ವಿದೇಶಿ ಸಂಸ್ಕೃತಿಯಿಂದ ಮಕ್ಕಳು ಹಾಳಾಗುತ್ತಿದ್ದಾರೆ, ದೇಶಿ ಸಂಸ್ಕೃತಿಗೆ ಒತ್ತು ಕೊಟ್ಟು ಪಾಲಕರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕಾಗಿದೆ ಎಂದರು. ಮುಖ್ಯ ಅತಿಥಿಗಳಾಗಿ ಮಾತನಾಡಿದ ನಗರ ಸಭೆಯ ಪೌರಾಯುಕ್ತ ಸುರೇಶ ಬಬಲಾದ ಶಾಲೆಯಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣದೊಂದಿಗೆ ಪರಿಸರದ ಜಾಗೃತಿ ಮೂಡಿಸಬೇಕು ಗುರು ಹಿರಿಯರಿಗೆ ಗೌರವಿಸುವ ಮನೋಭಾವ ಬೆಳಸ ಬೇಕಾಗಿದೆ ಎಂದು ಹೇಳಿದರು. ತಾಲೂಕಾ ಪಂಚಾಯತ ಅಧ್ಯಕ್ಷ ಗುಂಡರೆಡ್ಡಿ ವಾರ್ಷಿಕೋತ್ಸವ ಉದ್ಘಾಟಿಸಿದರು. ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷೆ ಸುಲೋಚನಾ ಮಾಮಾ ಮಾತನಾಡಿ ಶಿಕ್ಷಣದಲ್ಲಿ ಕನ್ನಡ ಬುನಾದಿಯಾಗಿದ್ದು ಇಂಗ್ಲಿಷ ಮೇಲ್ಛಾವಣಿ ಆಗಿದೆ. ಬುನಾದಿ ಗಟ್ಟಿಯಾಗಿದ್ದರೆ ಛಾವಣಿ ನಿಲ್ಲುತ್ತದೆ. ಯಾವುದೇ ಭಾಷೆ ಕಲಿತರು ಕನ್ನಡ ಭಾಷೆಗೆ ಪ್ರಥಮ ಆಧ್ಯತೆ ನೀಡಬೇಕೆಂದರು.ಕಲ್ಯಾಣ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪ್ರಭುಲಿಂಗಯ್ಯಾ ಬಿ ಟಂಕಸಾಲಿಮಠ ಕಾರ್ಯಕ್ರಮದ ಅಧ್ಯಕ್ಷೆ ವಹಿಸಿ ಮಾತನಾಡಿ ಮಕ್ಕಳಿಗಾಗಿ ಹಣ ಕೂಡಿಡದೆ, ಕಟ್ಟಡ ಕಟ್ಟದೆ ಉತ್ತಮ ಶಿಕ್ಷಣ ನೀಡಿ ಯಾರು ಕಸಿದು ಕೊಳ್ಳದಂತಹ ಆಸ್ತಿಯನ್ನಾಗಿ ಮಾಡಿ ಎಂದು ಪಾಲಕರಲ್ಲಿ ಕರೆ ನೀಡಿದರು. ವೇದಿಕೆಯಲ್ಲಿ ಎಸ್.ಡಿ.ಎಂ.ಸಿ ಉಪಾಧ್ಯಕ್ಷೆ ಗೌರಮ್ಮಾ ನಾಸೆ, ನಗರ ಸಭೆ ಸದಸ್ಯ ಮೂಸಾಮೀಯಾ ನಗರ ಸಭೆ ಯೋಜನಾಧಿಕಾರಿ ಅಶೋಕ ಚೆನ್ನಕೋಟೆ, ಹಾರಕೂಡ ಗ್ರಾ.ಪಂ ಅಧ್ಯಕ್ಷ ಶರಣಬು ಗುದಗೆ ಉಪಸ್ಥಿತರಿದ್ದರು. ಶರಣ ಬಸವಲಿಂಗ ಸುಬೇದಾರ ಸ್ವಾಗತಿಸಿದರು. ಶರಣ ದತ್ತಾತ್ರಿ ಮೂಲಗೆ ನಿರೂಪಿಸಿದರು.'ಕೀಲರಾದ ಸಂಜೀವರೆಡ್ಡಿ ಯರಬಾಗ ವಂದಿಸಿದರು. ಕಾರ್ಯಕ್ರಮದಲ್ಲಿ ಪಾರ್ವತಿ ಆರ್ ಬಿರಾದಾರ, ಸುಲೋಚನಾ ಗುದಗೆ, ರವೀಂದ್ರ ಭುರಳೆ , ಮಲ್ಲಿಕಾರ್ಜುನ ಹಲಿಂಗೆ, ಮೀನಾಕ್ಷಿ ಚೆನ್ನಕೋಟೆ, ಪಾಂಡುಂಗ ಕುಸುಮಕರ, ರಾಜೇಶ್ರಿ ಖೂಬಾ, ಸರಸ್ವತಿ ಗೌರ, ಸಂಗೀತಾ ಚಿರಡೆ, ಸಿದ್ರಾಮಪ್ಪ ಪಾಟೀಲ ಪೇಂಟರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಶಾಲೆಯ ಮಕ್ಕಳಿಂದ ವಚನ ನೃತ್ಯ, ಜಾನಪದ ಗೀತೆ, ದೇಶಭಕ್ತಿ ಗೀತೆಗಳು ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳುಜ ನೇರದ ಪಾಲಕ ವೃಂದದವರಿಗೆ ರಂಜಿಸಿದವು.

ಸಂಯುಕ್ತ ಕರ್ನಾಟಕ
ಗುರುವಾರ, 21, ಜುಲೈ, 2016.



ಬಸವಕಲ್ಯಾಣದಲ್ಲಿ ಗುರು ಪೂರ್ಣಿಮೆ ನಿಮಿತ್ಯ ತ್ರಿಪುರಾಂತದ ಗವಿಮಠದಲ್ಲಿ ಬಸವವಣ್ಣನವರ ಅರಿವಿನ ಮನೆಯ ಅಕ್ಕನ ಬಳಗದವರು ಪೂಜ್ಯ ಅಭಿನವ ಘನಲಿಂಗ ರುದ್ರಮುನಿ ಶಿವಚಾರ್ಯರ ಪಾದ ಪೂಜೆ ಭಕ್ತಿ ಭಾವದಿಂದ ಸಮರ್ಪಿಸುವ ಮೂಲಕ ಗುರು ಪೂರ್ಣಿಮೆ ಅರ್ಥಪೂರ್ಣವಾಗಿ ಆಚರಿಸಿದರು. ಅಕ್ಕಣ ಬಳಗ ಸದಸ್ಯ ಪ್ರಮುಖರು ಉಪಸ್ಥಿತರಿದ್ದರು. ಬಳಿಕ ಗುರುಗಳಿಂದ ಶ್ರೀರಕ್ಷೆ ಪಡೆದರು.

Scanned with CamScanner

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
4 | ಭಾನುವಾರ 19 ಜೂನ್ 2016
19 JUNE 2016

ವಿಜಯವಾಣಿ ಪುಣ್ಯಕೋಟಿ ಕಾಲೇಜು ಸಹಯೋಗದಲ್ಲಿ ಯೋಗ ದಿನ ನಿಮಿತ್ತ ಉಪನ್ಯಾಸ

# ವ್ಯಕ್ತಿತ್ವ ವಿಕಸನಕ್ಕೆ ಯೋಗ ಪೂರಕ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ ಶಾರೀರಿಕ ಜತೆಗೆ ಮಾನಸಿಕ ವಿಕಾಸ ಯೋಗದಿಂದ ಮಾತ್ರ ಸಾಧ್ಯವಾಗಿದ್ದು, ನಿತ್ಯ ಜೀವನದಲ್ಲಿ ಯೋಗಕ್ಕೆ ಸಮಯ ನೀಡಿ ಆರೋಗ್ಯವಂತರಾಗಿ ಬಾಳುವ ಮೂಲಕ ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ವಿದ್ಯಾರ್ಥಿ ಸಮುದಾಯಕ್ಕೆ ಸಲಹೆ ನೀಡಿದರು.

ನಾಡಿನ ನಂ.1 ದಿನಪತ್ರಿಕೆ ವಿಜಯವಾಣಿ ಹಾಗೂ ನಗರದ ಪುಣ್ಯಕೋಟಿ ಪಿಯು ಕಾಲೇಜು ಸಹಯೋಗದೊಂದಿಗೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ನಿಮಿತ್ತ ಶನಿವಾರ ಆಯೋಜಿಸಿದ ವಿಶೇಷ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶ್ರೀಗಳು, ಆರೋಗ್ಯ ಮತ್ತು ಮನೋವಿಕಾಸಕ್ಕೆ ಯೋಗ ಅತಿ ಅವಶ್ಯಕವಾಗಿದೆ. ಪ್ರತಿದಿನ ಯೋಗ ಮಾಡುವುದಾಗಿ ನೀವೆಲ್ಲರೂ ಸಂಕಲ್ಪ ಮಾಡಬೇಕು ಎಂದರು.

ಯೋಗದಿಂದ ಬಾಹ್ಯ ಮತ್ತು ಆಂತರಿಕ ಶುದ್ಧಿ ಸಾಧ್ಯವಿದೆ. ಮನಸ್ಸು ಶುದ್ಧಗೊಳಿಸುವ ಆತ್ಮ ಚೈತನ್ಯ ಜಾಗೃತಗೊಳಿಸಿ ಆತ್ಮ ಸಾಕ್ಷಾತ್ಕಾರದ ಸಾಧನವೇ ಯೋಗ ಎಂದ ಸ್ವಾಮೀಜಿ, ಯೋಗ ದಿನ ನಿಮಿತ್ತ ವಿಜಯವಾಣಿ ನಾಡಿನಾದ್ಯಂತ ವಿವಿಧ ಕಾರ್ಯಕ್ರಮ ಆಯೋಜಿಸುವ ಮೂಲಕ ಯೋಗದ ಬಗ್ಗೆ ಜಾಗೃತಿ ಮೂಡಿಸುವ ಮಹತ್ವದ ಕಾರ್ಯ ನಡೆಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪತಂಜಲಿ ಯೋಗ ಸಮಿತಿ, ಭಾರತ ಸ್ವಾಭಿಮಾನ ಟ್ರಸ್ಟ್ ತಾಲೂಕಾಧ್ಯಕ್ಷ ಡಾ.ಬಸವರಾಜ ಸ್ವಾಮಿ ವಿಶೇಷ ಉಪನ್ಯಾಸ ನೀಡಿ, ಆಧುನಿಕ ಜೀವನ ಶೈಲಿಯಿಂದಾಗಿ ಬದಲಾಗುತ್ತಿರುವ ಮನೋಸ್ಥಿತಿ ಮನುಷ್ಯನ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಮನುಷ್ಯನ ಶಾರೀರಿಕ ಸಹಜ ಕ್ರಿಯೆಗಳಿಗೂ ಅಲೋಪಥಿಕ್ ಔಷಧಿಗಳ ಅನಿವಾರ್ಯತೆ ಸೃಷ್ಟಿಯಾಗಿರುವುದು ದುರಂತ. ಇದರಿಂದ ಹೊರಬಂದು ಆರೋಗ್ಯ ಸದೃಢತೆ, ಮಾನಸಿಕ ವಿಕಾಸದಿಂದ ಕೂಡಿದ ಜೀವನಕ್ಕಾಗಿ ಯೋಗದತ್ತ ಚಿತ್ತ ಹರಿಸುವುದು ಇಂದಿನ ಜರೂರಿಯಾಗಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲೂಕಾಧ್ಯಕ್ಷ ರುದ್ರಮಣಿ ಮಠಪತಿ ಮಾತನಾಡಿ, ಜೀವನದಲ್ಲಿ ಶ್ರಮವಹಿಸಿ ಗಳಿಸಿದ ಆಸ್ತಿ, ಐಶ್ವರ್ಯ ಉಪಯೋಗಕ್ಕೆ ಬರುವುದು ಉತ್ತಮ ಆರೋಗ್ಯವಿದ್ದಾಗ ಮಾತ್ರ. ಶ್ರೇಷ್ಠ ಸ್ವಾಸ್ಥ್ಯ ಸಂಪಾದಿಸಲು ಯೋಗವೇ ಮಾಹಾ ಮಾರ್ಗವಾಗಿದೆ ಎಂದು ಪ್ರತಿಪಾದಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಅಧ್ಯಕ್ಷ, ಕಾಲೇಜಿನ ಪ್ರಾಚಾರ್ಯ ಪ್ರೊ.ಸೂರ್ಯಕಾಂತ ಶೀಲವಂತ ಮಾತನಾಡಿ, ರೋಗಮುಕ್ತ ಸಮಾಜ ನಿರ್ಮಾಣಕ್ಕೆ ಯೋಗ ಅವಶ್ಯಕವಾಗಿದೆ. ಯೋಗ ಬದುಕಿನ ಅವಿಭಾಜ್ಯ ಅಂಗವಾದಾಗ ರೋಗಮುಕ್ತ ಸಮಾಜ, ಸದೃಢ ರಾಷ್ಟ್ರ ನಿರ್ಮಾಣ ಸಾಧ್ಯವಾಗಲಿದೆ ಎಂದರು.

ಉಪನ್ಯಾಸಕ ಭೀಮಾಶಂಕರ ಬಿರಾದಾರ ಮಾತನಾಡಿ, ಮೂರ್ತರೂಪದ ಶರೀರ ಹಾಗೂ ಅಮೂರ್ತ ರೂಪದ ಸೂಕ್ಷ್ಮ ಶರೀರವಾದ ಮನಸ್ಸುಗಳನ್ನು ಹದಗೊಳಿಸುವ ಶಾಸ್ತ್ರ ಯೋಗವಾಗಿದೆ. ಆರೋಗ್ಯಪೂರ್ಣ ಜೀವನಕ್ಕೆ ಯೋಗ ಅತ್ಯವಶ್ಯಕವಾಗಿದ್ದು, ಯೋಗದ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ವಿಜಯವಾಣಿ ಸಮಾಜಮುಖಿ ಕಾರ್ಯ ಮಾಡುತ್ತ ಸಾಂಸ್ಕೃತಿಕ ಚಿಂತನೆಗೆ ದಾರಿ ಮಾಡಿಕೊಟ್ಟಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಂಸ್ಥೆ ಉಪಾಧ್ಯಕ್ಷ ಸುಭಾಷಚಂದ್ರ ಪಾಟೀಲ್, ಕೋಶಾಧ್ಯಕ್ಷ ಶಶಿಕಾಂತ ಶೀಲವಂತ, ಕಾರ್ಯದರ್ಶಿ ಉಮಾಕಾಂತ ಶೀಲವಂತ, ನಿರ್ದೇಶಕರಾದ ಚಂದ್ರಕಾಂತ ಶೀಲವಂತ, ಸುರೇಖಾ ಶೀಲವಂತ, ಕಾವೇರಿ ಶೀಲವಂತ, ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿಜಯವಾಣಿ ವರದಿಗಾರ ಮಾರ್ಥಂಡ ಜೋಶಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಉಪನ್ಯಾಸಕಿ ಕಲ್ಪನಾ ಚುಡೆ ನಿರೂಪಿಸಿದರು. ರುಕ್ಸಾನಾ ಮತ್ತು ಸಂಗಡಿಗರು ಪ್ರಾರ್ಥನಾಗೀತೆ ಹಾಡಿದರು.

ವಿಜಯವಾಣಿ ಚಿತ್ರ



ವಿಜಯವಾಣಿ ಹಾಗೂ ಪುಣ್ಯಕೋಟಿ ಪಿಯು ಕಾಲೇಜು ಸಹಯೋಗದೊಂದಿಗೆ ಬಸವಕಲ್ಯಾಣದಲ್ಲಿ ಶನಿವಾರ ಆಯೋಜಿಸಿದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಡಾ.ಬಸವರಾಜ ಸ್ವಾಮಿ, ಪ್ರೊ. ಶೀಲವಂತ, ರುದ್ರಮಣಿ , ಭೀಮಾಶಂಕರ, ಸುಭಾಷಚಂದ್ರ ಉಪಸ್ಥಿತರಿದ್ದರು.

## ಆಹಾರ, ಆರೋಗ್ಯ ಯೋಗ ಸಂವಾದ

ಅಂತಾರಾಷ್ಟ್ರೀಯ ಯೋಗ ದಿನ ನಿಮಿತ್ತ ಆಯೋಜಿಸಿದ ಕಾರ್ಯಕ್ರಮ ಆಹಾರ, ಆರೋಗ್ಯ ಮತ್ತು ಯೋಗ ಕುರಿತ ಚಿಂತನೆಗೆ ವೇದಿಕೆ ಕಲ್ಪಿಸಿತು. ವಿಶೇಷ ಉಪನ್ಯಾಸ ನೀಡಿದ ಡಾ.ಬಸವರಾಜ ಸ್ವಾಮಿ ಅವರು, ಸಂವಾದದಲ್ಲಿ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸುತ್ತ ಆರೋಗ್ಯಕ್ಕೆ ಯೋಗದ ಮಹತ್ವವನ್ನು ಪರಿಣಾಮಕಾರಿಯಾಗಿ ಮನನ ಮಾಡಿಕೊಟ್ಟರು. ಪ್ರಾತ್ಯಕ್ಷಿಕೆ ಮೂಲಕ ಯೋಗಾಸನಗಳನ್ನು ಮಾಡಿ ತೋರಿಸುವ ಜತೆಗೆ ಅವುಗಳಿಂದ ಆಗುವ ಪ್ರಯೋಜನಗಳ ಮಾಹಿತಿಯೂ ನೀಡಿದರು. ಒಂದು ಗಂಟೆಯ ಶಿಬಿರದಲ್ಲಿ ವಿದ್ಯಾರ್ಥಿಗಳೆಲ್ಲರೂ ಯೋಗಾಸನ ಮಾಡಿದ್ದು ಗಮನಾರ್ಹ.

ವಿಜಯವಾಣಿ ಚಿತ್ರ



ಬಸವಕಲ್ಯಾಣದಲ್ಲಿ ಆಯೋಜಿಸಿದ ಯೋಗ ಮಾಡುತ್ತಿರುವ ವಿದ್ಯಾರ್ಥಿನಿಯರು.

Scanned with CamScanner

# ಮಠಗಳು ಭಕ್ತರ ಸೊತ್ತು ಹೊರತು ಸರಕಾರದ ಸೊತ್ತಲ್ಲ ತ್ರಿಪೂರಾಂತ ಶ್ರೀ

ಬಸವಕಲ್ಯಾಣ: ತಾಲೂಕಿನ ಬೇಲೂರ ಗ್ರಾಮದ ಕಲ್ಯಾಣ ಕಟ್ಟಿಮನಿ ಹಿರೇತನ ಮಠದಲ್ಲಿ ನಡೆದ ಲಿಂಗೈಕ್ಯ ಶ್ರೀ ಷ.ಬ್ರ.ಸಿದ್ದಲಿಂಗ ಶಿವಚಾರ್ಯರು ಹಾಗೂ ಲಿಂಗೈಕ್ಯ ಶ್ರೀ ಷ.ಬ್ರ ಗುರುಲಿಂಗ ಶಿವಚಾರ್ಯರು ಪುಣ್ಯಸ್ಮರಣೋಂತ್ಸವ ಕಾರ್ಯ ಕ್ರಮದಲ್ಲಿ ಆರ್ಶಿವಚನ ನೀಡಿ ಮಾತನಾಡುತ್ತ "ಭಾರತೀಯ ಸನಾತನ ಹಿಂದೂ ಸಂಸ್ಕೃತಿಯು ಜಗತ್ತಿನಲ್ಲಿಯೆ ಶ್ರೇಷ್ಟ ಸಂಸ್ಕೃತಿಯಾಗಿದ್ದು, ಬಸವಣ್ಣನವರ ಕಾಯಕ ದಾಸೋಹ ತತ್ವದಂತೆ ತಮ್ಮ ಕಾಯಕದಿಂದ ಸಂಪಾದಿಸಿದ ಸಂಪತ್ತನಲ್ಲಿ ಒಂದಷ್ಟು ಪಾಲನ್ನು ಧಾರ್ಮಿಕ ಕಾರ್ಯಕ್ಕೆ ದಾನದ ರೂಪದಲ್ಲಿ ಕೊಡುವುದು ಕಾಣುತ್ತೆವೆ. ಇಂತಹ ದಾನದಿಂದ ಮಠ ಮಂದಿರಗಳು ಬೆಳೆದಿವೆ ಅಂತಹ ಮಠಗಳು ಸಮಾಜದಲ್ಲಿ ಶಿಕ್ಷಣ ಪ್ರಸಾರ ಧರ್ಮಪ್ರಚಾರ ಮಾಡುವುದರೊಂದಿಗೆ ಜನರಿಗೆ ನೈತಿಕ ಶಿಕ್ಷಣ ನೀಡುವ ಶಿಕ್ಷಣ ಕೇಂದ್ರಗಳಾಗಿವೆ. ಇಂದು ನೈತಿಕ ಶಿಕ್ಷಣ ಕೊರತೆಯಿಂದಾಗಿ ಸಮಾಜದಲ್ಲಿ ಅತ್ಯಾಚಾರ, ಹಿಂಸೆ, ಗಳಂತಹ ಸಮಸ್ಯೆಗಳು ತಲೆದೂರುತ್ತಿವೆ ಮಠಗಳು ಜನರಿಗೆ ಧರ್ಮ ಮಾರ್ಗತೆ ತೋರುವ ಧಾರ್ಮಿಕ ಕೇಂದ್ರಗಳಾಗಿವೆ. ಮಠಗಳು ಕೇವಲ ಧರ್ಮ ಭೋದನೆಯನ್ನು ಮಾಡದೆ ಸಾಮಾಜಿಕ ಸಾಮರಸ್ಯ ಸಾಧಿಸುವ ಕೆಲಸವನ್ನು ಮಾಡುತ್ತಿವೆ. ಸರಕಾರ ಮಾಡದ ಕೆಲಸವನ್ನು ಇಂದು ಕರ್ನಾಟಕದ ಅನೇಕ ಲಿಂಗಾಯತ ಮಠಗಳು ಮಾಡುತ್ತಿದೆ ಆದರೂ ಕೂಡಾ ಇಂದಿನ ಸರಕಾರ "ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯಿ ದತ್ತಿಗಳ ತಿದ್ದುಪಡಿ ಮಸೂದೆ"ಯನ್ನು ಅಂಗಿಕರಿಸುವ ಮೂಲಕ ಧಾ ರ್ಮಿಕ ಕೇಂದ್ರಗಳಆ ಡಳಿತದಲ್ಲಿ ನೇರವಾಗಿ ಕೈಹಾಕುವ ದುಸ್ಸಾಹಸ ಮಾಡುತ್ತಿದೆ ಮಠ ಮಂದಿರಗಳು ಭಕ್ತರು ಕಟ್ಟಿ ಬೆಳಸಿದ ಆಸ್ತಿಗಳಾಗಿದ್ದು ಇವು ಭಕ್ತರ ಸೊತ್ತುಗಳೆ ಹೊರತು ಸರಕಾರದ ಸೊತ್ತಲ ಸರಕಾರ ಮಾಡಬೇಕಾದ ಕೆಲಸ ಸಾಕಷ್ಟಿದ್ದು ಅದನ್ನು ಬಿಟ್ಟು ಧಾರ್ಮಿಕ ಕೇಂದ್ರಗಳ ಮೇಲೆ ತನ್ನ ಕೆಟ್ಟ ದೃಷ್ಟಿ ಬೀರುತ್ತಿದೆ" ಎಂದು ಕೀಡಿಕಾರಿದರು. ಶರಣಯ್ಯಾ ಸ್ವಾಮೀ ರಾಜಪ್ಪ ಹಲಿಂಗೆ, ಗುರುಪ್ಪ ಬಡೂರೆ, ಗುಂಡಪ್ಪ ಅಂತಪ್ಪಾ, ಈಶ್ವರ ಜಮದಾರ, ಶರಣಪ್ಪ ವೀರಣ್ಣೊರ, ಶಾಂತಮ್ಮಾ ಹಳದೊಡ್ಡೆ ಚಂದ್ರಮ್ಮಾ ಶೇಟಗಾರ ಕಮಲಾಬಯಿ ಚೆನ್ನಕೋಟೆ, ಚಂದ್ರಯ್ಯಾ ಸ್ವಾಮೀ ಮುಂತಾದ ಗ್ರಾಮದ ಭಕ್ತರು ಕಾರ್ಯ ಕ್ರಮದಲ್ಲಿ ಭಾಗವಹಿಸಿದರು. ದೇವಿಂದ್ರ ಬರಗಾಲೆ ಕಾರ್ಯಕ್ರಮ ನಿರೂಪಿಸಿದರು ರೇವಣಸಿದ್ದ ಪಾಟೀಲ ಸ್ವಾಗತಿಸಿ ವಂದಿಸಿದರು.

**ದಿನಾಂಕ : 13-03-2015 ಶುಕ್ರವಾರ**

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI « KALABURAGI

ಶನಿವಾರ
23 ಜುಲೈ 2016
23 JULY 2016



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಗುರು ಮಹಾಲಿಂಗೇಶ್ವರ ಶಾಲೆಯಲ್ಲಿ ಆಯೋಜಿಸಿದ ಗುರು ವಂದನಾ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶ್ರೀಗಳನ್ನು ಸತ್ಕರಿಸಲಾಯಿತು. ರಮೇಶ ಸ್ವಾಮಿ, ಬಸವಂತಪ್ಪ ಲವಾರೆ ಇದ್ದರು.

Scanned with CamScanner

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI « KALABURAGI
ಶನಿವಾರ 16 ಜುಲೈ 2016
16 JULY 2016

## ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನಿಂದ ರಾಷ್ಟ್ರೀಯ ವಿದ್ಯಾರ್ಥಿ ದಿನಾಚರಣೆ

# ಸಮೃದ್ಧ ಭಾರತಕ್ಕೆ ಸಂಕಲ್ಪ ತೊಡಿ




ಎಬಿವಿಪಿಯಿಂದ ಬಸವಕಲ್ಯಾಣದ ಅಲ್ಲಂಪ್ರಭು ವಿಜ್ಞಾನ ಪಿಯು ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ವಿದ್ಯಾರ್ಥಿ ದಿನಾಚರಣೆಯನ್ನು ಅಭಿನವ ಘನಲಿಂಗ ರುದ್ರಮುನಿ ಶ್ರೀ ಉದ್ಘಾಟಿಸಿದರು. ರೇವಣಸಿದ್ದ ಜಾಡರ, ಪ್ರೊ. ವಿ.ಎಚ್.ಅಯ್ಯಣ್ಣ, ಪ್ರೊ. ಚಂದ್ರಕಾಂತ ಅಕ್ಕಣ್ಣ, ಎಸ್.ಜಿ.ಹುಡೇದ, ಲೋಕೆಶ ಇದ್ದರು.

**ಬಸವಕಲ್ಯಾಣ:** ಸದೃಢ ಮತ್ತು ಸಮೃದ್ಧ ಭಾರತ ಕಟ್ಟಲು ಯುವ ಶಕ್ತಿ ಸಂಕಲ್ಪ ಮಾಡಬೇಕಿದೆ ಎಂದು ಎಬಿವಿಪಿ ಕಲಬುರಗಿ ವಿಭಾಗ ಸಂಚಾಲಕ ರೇವಣಸಿದ್ದ ಜಾಡರ ಹೇಳಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನಿಂದ ಇಲ್ಲಿನ ಅಲ್ಲಂಪ್ರಭು ವಿಜ್ಞಾನ ಪಿಯು ಕಾಲೇಜಿನಲ್ಲಿ ಆಯೋಜಿಸಿದ ರಾಷ್ಟ್ರೀಯ ವಿದ್ಯಾರ್ಥಿ ದಿನಾಚರಣೆಯಲ್ಲಿ ಮಾತನಾಡಿದ ಅವರು, ಎಬಿವಿಪಿ 1949ರಿಂದ ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ಪುನರ್ ನಿರ್ಮಾಣ ಸೈದ್ಧಾಂತಿಕ ತಳಹದಿ ಮೇಲೆ ಈ ಸಂಘಟನೆ ಕೆಲಸ ಮಾಡುತ್ತಿದೆ ಎಂದರು.

ಯುವ ಶಕ್ತಿ ನಮ್ಮ ದೇಶದ ದೊಡ್ಡ ಸಂಪತ್ತಾಗಿದ್ದು, ಇದನ್ನು ದಾರಿ ತಪ್ಪಿಸುವ ನಿಟ್ಟಿನಲ್ಲಿ ಕೆಲ ಸ್ವಾರ್ಥ ಶಕ್ತಿಗಳಿಂದ ಷಡ್ಯಂತ್ರ ನಡೆಸಲಾಗುತ್ತಿದೆ. ಹೀಗಾಗಿ ಇಂಥಹ ಚಟುವಟಿಕೆಗಳಿಗೆ ಯುವ ಶಕ್ತಿ ಕಿವಿಗೊಡಬಾರದು ಎಂದು ಕಿವಿ ಮಾತು ಹೇಳಿದರು.

ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶ್ರೀ ಸಾನ್ನಿಧ್ಯ ವಹಿಸಿ, ಯುವಕರು ಶಿಕ್ಷಣದ ಜತೆಗೆ ಆದರ್ಶ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಪ್ರಾಚಾರ್ಯ ಪ್ರೊ. ವಿ.ಎಚ್.ಅಯ್ಯಣ್ಣ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ಚಂದ್ರಕಾಂತ ಅಕ್ಕಣ್ಣ, ನಿವೃತ್ತ ಶಿಕ್ಷಕ ಎಸ್.ಜಿ.ಹುಡೇದ, ಎಬಿವಿಪಿ ಜಿಲ್ಲಾ ಸಹ ಸಂಚಾಲಕ ಲೋಕೇಶ ಮೋಳಕೆರೆ ಮಾತನಾಡಿದರು. ಪ್ರದೀಪ ಭುರಳೆ ಸ್ವಾಗತಿಸಿದರು. ಶಿವಾನಂದ ಮೂಲಗೆ ನಿರೂಪಿಸಿದರು. ಶಾಲಿನಿ ಭಕ್ತಿಗೀತೆ ಹಾಡಿದರು. ನವನಾಥ ಮೇತ್ರೆ, ಸಾಗರ ಕಾಮಣ್ಣ ಭಾಗವಹಿಸಿದ್ದರು.

Scanned with CamScanner

**ಎಬಿವಿಪಿ ಮುಖಂಡ ಜಾಡರ್ ಆರೋಪ**

# ಯುವಕರನ್ನು ದಾರಿ ತಪ್ಪಿಸುವ ಹುನ್ನಾರ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದ ಅಲ್ಲಮಪ್ರಭು ಕಾಲೇಜಿನಲ್ಲಿ ಶುಕ್ರವಾರ ಎಬಿವಿಪಿಯಿಂದ ಆಯೋಜಿಸಿದ್ದ ವಿದ್ಯಾರ್ಥಿ ದಿನಾಚರಣೆಯಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು

ಬಸವಕಲ್ಯಾಣ: 'ಕಾಲೇಜು ಕ್ಯಾಂಪಸ್‌ಗಳಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ವಿವಿಧ ಆಸೆ-ಆಮಿಷ ತೋರಿಸಿ ಯುವ ಜನರ ದಾರಿ ತಪ್ಪಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ' ಎಂದು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಕಲಬುರ್ಗಿ ವಿಭಾಗೀಯ ಸಂಚಾಲಕ ರೇವಣಸಿದ್ದಪ್ಪ ಜಾಡರ್ ಹೇಳಿದರು.

ಅಲ್ಲಮಪ್ರಭು ಪದವಿಪೂರ್ವ ಕಾಲೇಜಿನಲ್ಲಿ ಶುಕ್ರವಾರ ಆಯೋಜಿಸಿದ್ದ ರಾಷ್ಟ್ರೀಯ ವಿದ್ಯಾರ್ಥಿ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೆಲವು ರಾಜಕೀಯ ಮುಖಂಡರು, ಜಾತಿ, ಧರ್ಮದ ವಿಷಬೀಜ ಬಿತ್ತಿ ಸಮಾಜದ ಒಗ್ಗಟ್ಟು ಹಾಳು ಮಾಡುತ್ತಿದ್ದಾರೆ. ಇಂಥದಕ್ಕೆಲ್ಲ ಯುವ ಜನತೆ ತಲೆ ಕೆಡಿಸಿಕೊಳ್ಳದೆ ವಿದ್ಯಾಭ್ಯಾಸದಲ್ಲಿ ತಲ್ಲೀನರಾಗಬೇಕು. ಸಮಾಜಸೇವೆಗೆ ಸದಾ ಸಿದ್ಧರಾಗಿರಬೇಕು. ದೇಶಭಕ್ತಿ ಬೆಳೆಸಿಕೊಳ್ಳಬೇಕು. ಬಡತನ, ಭ್ರಷ್ಟಾಚಾರದ ವಿರುದ್ಧ ಹೋರಾಡಬೇಕು' ಎಂದರು.

'ವಿದ್ಯಾರ್ಥಿ ಪರಿಷತ್ ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣ ಮಾಡುವ ಕನಸಿನೊಂದಿಗೆ ರಚನಾತ್ಮಕ ಕಾರ್ಯಗಳನ್ನು ಹಮ್ಮಿಕೊಳ್ಳುತ್ತಿದೆ. ದಶಕಗಳಿಂದ ಪರಿಷತ್ ದೇಶದ ವಿಕಾಸಕ್ಕಾಗಿ ದುಡಿಯುತ್ತಿದ್ದು ವಿದ್ಯಾರ್ಥಿಗಳ ಇದರ ಜತೆಯಲ್ಲಿ ಕೈಜೋಡಿಸಬೇಕು' ಎಂದು ಮನವಿ ಮಾಡಿದರು.

**ಮುಖ್ಯಾಂಶಗಳು**

- ಕಾಲೇಜು ಕ್ಯಾಂಪಸ್‌ನಲ್ಲಿ ಮಾದಕ ವಸ್ತುಗಳ ಮಾರಾಟ: ಆರೋಪ
- ರಾಜಕಾರಣಿಕಗಳಿಂದ ಒಗ್ಗಟ್ಟು ಹಾಳು
- ಭ್ರಷ್ಟಾಚಾರದ ವಿರುದ್ಧ ಹೋರಾಡಲು ಸಲಹೆ

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, 'ಯುವಕರು ಸಜ್ಜನರ ಸಂಗ ಮಾಡಿ ಉತ್ತಮ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು. ದುಶ್ಚಟ ಮಾಡಬಾರದು. ಸಂಸ್ಕಾರ ರೂಢಿಸಿಕೊಳ್ಳಬೇಕು' ಎಂದರು.

ಪ್ರಾಚಾರ್ಯ ವಿ.ಎಚ್.ಅಯ್ಯಣ್ಣ ಮಾತನಾಡಿ, 'ವಿದ್ಯಾರ್ಥಿಗಳು ಪುಸ್ತಕದ ಹುಳುಗಳಾಗದೆ ಸಮಾಜದ ಬಗ್ಗೆ ಕಳಕಳಿ ಹೊಂದಿರಬೇಕು. ದುರ್ಬಲರು, ದುಃಖಿತರಿಗೆ ಸಹಾಯ ಮಾಡಬೇಕು' ಎಂದರು.

ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಹ ಸಂಚಾಲಕ ಲೋಕೇಶ ಮೋಳಕೇರೆ ಮಾತನಾಡಿ, ದೇಶದ ಪ್ರಗತಿಯಲ್ಲಿ ಯುವ ಜನತೆಯ ಪಾತ್ರ ಹಿರಿದು ಎಂದು ಹೇಳಿದರು.

ಉಪನ್ಯಾಸಕ ಚಂದ್ರಕಾಂತ ಅಕ್ಕಣ್ಣ, ಎಸ್.ಜಿ.ಹುಡೇದ್ ಮಾತನಾಡಿದರು.

ನವನಾಥ ಮೇತ್ರೆ, ಸಾಗರ ಕಾಮಣ್ಣ, ಶಿವಾನಂದ ಮೂಲಗೆ ಉಪಸ್ಥಿತರಿದ್ದರು. ಪ್ರದೀಪ ಬೋರೋಳೆ ಸ್ವಾಗತಿಸಿದರು. ಶಾಲಿನಿ ನಿರೂಪಿಸಿದರು.

ಶನಿವಾರ • ಜುಲೈ 16, 2016 ಪ್ರಜಾವಾಣಿ

# ಸಿದ್ಧಾಂತ ಶಿಖಾಮಣಿ ನಿತ್ಯಪಠಣ ಕಾರ್ಯಕ್ರಮಕ್ಕೆ ಚಾಲನೆ

**ವಿಕ ಸುದ್ದಿಲೋಕ** ಬಸವಕಲ್ಯಾಣ


ಬಸವಕಲ್ಯಾಣ ತ್ರಿಪುರಾಂತದ ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ ನಿತ್ಯ ಪಠಣ ಕಾರ್ಯಕ್ರಮವನ್ನು ತಾಪಂ ಅಧ್ಯಕ್ಷೆ ಯಶೋದಾ ರಾಠೋಡ ಉದ್ಘಾಟಿಸಿದರು. ಅಭಿನವ ಘನಲಿಂಗ ರುದ್ರಮುನಿ ಸ್ವಾಮಿ, ನೀಲಕಂಠ ರಾಠೋಡ ಇತರರಿದ್ದರು.

ತ್ರಿಪುರಾಂತದ ಗವಿ ಮಠದಲ್ಲಿ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಹಾಗೂ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ಸಹಯೋಗದಲ್ಲಿ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ನಿತ್ಯ ಪಠಣ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು. ತಾಪಂ ಅಧ್ಯಕ್ಷೆ ಯಶೋದಾ ನೀಲಕಂಠ ರಾಠೋಡ ಉದ್ಘಾಟಿಸಿ, ಗವಿಮಠವು ಒಂದು ಐತಿಹಾಸಿಕ ಮಠವಾಗಿದ್ದು ತಾಪಂ ನಿಂದ ವತಿಯಿಂದ ಅಭಿವೃದ್ಧಿ ಕಾಮಗಾರಿಗಳನ್ನುಕೈಗೊಳ್ಳಲಾಗುವುದು ಎಂದರು.ಅಧ್ಯಕ್ಷತೆ ವಹಿಸಿದ್ದ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಮಾತನಾಡಿ ಜಗದ್ಗುರು ರೇಣುಕಾಚಾರ್ಯರಿಂದ ಸ್ಥಾಪಿತವಾದ ವಿರಶೈವ ಧರ್ಮ ಅತ್ಯಂತ ಪ್ರಾಚೀನವಾಗಿದೆ. ಶಿವಾಗಮಗಳಲ್ಲಿ ಇದರ ತತ್ವಗಳು ಹುಟ್ಟಿಕೊಂಡಿರುವುದನ್ನು ಕಾಣಬಹುದಾಗಿದೆ ಎಂದರು.

ತಾಂಡಾ ಅಭಿವೃದ್ಧಿ ನಿಗಮದ ನಿರ್ದೇಶಕ ನೀಲಕಂಠ ರಾಠೋಡ ಮಾತನಾಡಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ, ಜಗದ್ಗುರು ರೇಣುಕಾಚಾರ್ಯರು 12ನೇ ಶತಮಾನಕ್ಕೂ ಮುಂಚೆಯೇ ಸಾಮಾಜಿಕ ಸಮಾನತೆ ಸಾರಿದ ಮೊದಲ ಸಮಾಜ ಸುಧಾರಕರಾಗಿದ್ದಾರೆ ಎಂದರು.

ನಗರ ಸಭೆ ಸದಸ್ಯರಾದ ನಾಗಣ್ಣ ಚಾಮಲ್ಲೆ, ಬಸವರಾಜ ಸ್ವಾಮಿ, ವೀರಣ್ಣ ಶೀಲವಂತ, ರುದ್ರಮಣಿ ಮಠ, ಪ್ರೊ. ಸೂರ್ಯಕಾಂತ ಶೀಲವಂತ, ಕಾಶಿನಾಥ ಸ್ವಾಮಿ, ದಿಲೀಪ ಪಾಟೀಲ ಬೇಲೂರ, ಶಾಂತವೀರ ಸ್ವಾಮಿ ಪೂಜಾರಿ, ಮಲ್ಲಿಕಾರ್ಜುನ ಶೀಲವಂತ, ಮಲ್ಲರೆಡ್ಡಿ ಪಾಟೀಲ ಕಿಟ್ಟಾ, ತುಳಸಿರಾಮ ಪವಾರ, ವಸಂತ ರಾಠೋಡ, ಸಂತೋಷ ಪಾಟೀಲ, ವಿಮಲಾಬಾಯಿ ಮಾಣಿಕಪ್ಪಾ ಬಿರಾದಾರ, ಭಾಗಿರತಿ ಮಠಪತಿ, ವಿಲಾಸವತಿ, ವೈಜಿನಾಥಯ್ಯ ಸ್ವಾಮಿ ಇತರರಿದ್ದರು. ಪ್ರೊ.ರುದ್ರೇಶ್ವರ ಸ್ವಾಮಿ ಗೋರಟಾ ಸ್ವಾಗತಿಸಿದರು. ಕಾಶಿನಾಥ ಸ್ವಾಮಿ ವಂದಿಸಿದರು.

ಭಾನುವಾರ,7 ಆಗಸ್ಟ್ 2016, ಕಲಬುರಗಿ ವಿಜಯ ಕರ್ನಾಟಕ VK

Scanned with CamScanner

ಮಠಾಧೀಶರ 6ನೇ ಸಮಾವೇಶದಲ್ಲಿ ಶಿವಯೋಗೇಶ್ವರ ಶ್ರೀ ಕಳವಳ

# ವ್ಯಸನದಿಂದ ಸಮಾಜ ನಾಶ, ಅನಾಥರು ಅಧಿಕ

■ **ವಿಕ ಸುದ್ದಿಲೋಕ** ಬಸವಕಲ್ಯಾಣ ಗ್ರಾಮೀಣ

ವ್ಯಸನದಿಂದ ಸಮಾಜ ನಿರ್ನಾಮವಾಗುವುದರೊಂದಿಗೆ ವಿಧವೆಯರ ಹಾಗೂ ಅನಾಥ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಭಾತಂಬ್ರಾ ಹಾಗೂ ಕೋಡಂಗಲ್‌ನ ಜಗದ್ಗುರು ಶ್ರೀ ಶಿವಯೋಗೇಶ್ವರ ಸ್ವಾಮೀಜಿ ಕಳವಳ ವ್ಯಕ್ತಪಡಿಸಿದರು.

ತಾಲೂಕಿನ ಸುಕ್ಷೇತ್ರ ಹಿರೇನಾಗಾಂವನಲ್ಲಿ ಶ್ರೀ ಹಾನಗಲ್ಲ ಗುರುಕುಮಾರ ಶಿವಯೋಗಿಗಳ ಸಮಾಜ ಚಿಂತನಾ ಮತ್ತು ಜಿಲ್ಲೆಯ ಮಠಾಧೀಶರ 6ನೇ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ದುಶ್ಚಟಗಳಿಗೆ ಬಲಿಯಾಗಿ ಆರೋಗ್ಯ ಹಾಳು ಮಾಡಿಕೊಳ್ಳಬೇಡಿ ಎಂದರು.

ಹುಲಸೂರು ಗುರುಬಸವೇಶ್ವರ ಸಂಸ್ಥಾನ ಮಠದ ಶ್ರೀ ಶಿವಾನಂದ ಸ್ವಾಮಿ ಮಾತನಾಡಿ, ಜೀವನದಲ್ಲಿ ಲಿಂಗಪೂಜೆ ಮತ್ತು ಗುರುವಿನ ಸ್ಮರಣೆ ಹಾಗೂ ಉತ್ತಮ ಸಂಸ್ಕಾರ ಬೆಳೆಸಿಕೊಳ್ಳುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ ಎಂದರು.

ಸಂಸ್ಥಾನ ಮಠದ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಮಾತನಾಡಿ, ಎಲ್ಲರೂ ಒಂದೇ ಎನ್ನುವ ಭಾವನೆ ಎಲ್ಲರಲ್ಲಿಯೂ ಬರಬೇಕಿದೆ ಎಂದರು.

ಶ್ರೀ ರೇವಣಸಿದ್ಧ ಶಿವಾಚಾರ್ಯರು ಮಾತನಾಡಿ, ಯಾರಿಗೂ ಕೈ ಚಾಚದೆ ಸ್ವಾಭಿಮಾನದ ಜೀವನ ಸಾಗಿಸಲು, ಕಾಯಕ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು. ಗಡಿಗೌಂಡಗಾಂವದ ಶ್ರೀ ಶಾಂತವೀರ ಶಿವಾಚಾರ್ಯರು ಮಾತನಾಡಿದರು. ಶ್ರೀ ರಾಜೇಶ್ವರದ ಘನಲಿಂಗ ರುದ್ರಮುನಿ ಶಿವಾಚಾರ್ಯರು, ತ್ರಿಪುರಾಂತದ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಬೆಮಳಖೇಡದ ಶ್ರೀ ಚಂದ್ರಶೇಖರ ಶಿವಾಚಾರ್ಯರು, ಡೋಣಗಾಂವ ಶ್ರೀ, ಕಿಟ್ಟಾ ಶ್ರೀ, ಶಿವಣ ಹಾವಗಿಲಿಂಗ ಶಿವಾಚಾರ್ಯರು, ಹಲಬರ್ಗಾ, ಮದಕಟ್ಟಿ, ಸಾಯಗಾಂವದ ಶ್ರೀ ಶಿವಾನಂದ ದೇವರು, ಹುಡಗಿ ಶ್ರೀ, ನರ್ನಾಳ ಶ್ರೀ ಇತರರು ಭಾಗವಹಿಸಿದ್ದರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಅಲಂಕೃತ ಬೆಳ್ಳಿ ರಥದಲ್ಲಿ ಗುರು ಕುಮಾರೇಶ್ವರರ ಭಾವಚಿತ್ರದ ಭವ್ಯ ಮೆರವಣಿಗೆ ಜರುಗಿತು. ತಾಪಂ ಅಧ್ಯಕ್ಷೆ ಯಶೋಧಾ ನೀಲಕಂಠ ರಾಠೋಡ, ಜಿಪಂ ಸದಸ್ಯ ರಾಜಶೇಖರ ಮೇತ್ರೆ, ಗ್ರಾಪಂ ಸದಸ್ಯ ಲಲಿತಾ ಕಿಶೋರ ಇತರರಿದ್ದರು.



ಬಸವಕಲ್ಯಾಣ ತಾಲೂಕಿನ ಹಿರೇನಾಗಾಂವನಲ್ಲಿ ಆಯೋಜಿಸಿದ್ದ ಶ್ರೀ ಹಾನಗಲ್ಲ ಗುರುಕುಮಾರ ಶಿವಯೋಗಿಗಳ ಸಮಾಜ ಚಿಂತನಾ ಮತ್ತು ಜಿಲ್ಲೆಯ ಮಠಾಧೀಶರು 6ನೇ ಸಮಾವೇಶವನ್ನು ಭಾತಂಬ್ರಾ ಹಾಗೂ ಕೋಡಂಗಲ್‌ನ ಜಗದ್ಗುರು ಶ್ರೀ ಶಿವಯೋಗೇಶ್ವರ ಸ್ವಾಮೀಜಿ ಉದ್ಘಾಟಿಸಿದರು.

ವಿಜಯ ಕರ್ನಾಟಕ VK
ಬುಧವಾರ,3 ಆಗಸ್ಟ್ 2016, ಕಲಬುರಗಿ

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಅಭಿಮತ

# ರೇಣುಕಚಾರ್ಯರಿಂದ ಸಾಮಾಜಿಕ ಸಮಾನತೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ವೀರಶೈವ ಸಮಾಜದ ಜಗದ್ಗುರು ರೇಣುಕಚಾರ್ಯರು 12ನೇ ಶತಮಾನಕ್ಕೂ ಮುಂಚೆಯೇ ಸಾಮಾಜಿಕ ಸಮಾನತೆ ಸಾರಿದ ಸಮಾಜ ಸುಧಾರಕರು ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ತ್ರಿಪುರಾಂತ ಗವಿಮಠದಲ್ಲಿ ಗುರುವಾರ ಶ್ರಾವಣ ಮಾಸದ ಅಂಗವಾಗಿ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆಯಿಂದ ಹಮ್ಮಿಕೊಂಡಿದ್ದ ಸಿದ್ಧಾಂತ ಶಿಖಾಮಣಿ ಪ್ರವಚನದ ಉದ್ಘಾಟನಾ ಕಾರ್ಯಕ್ರಮದ ನೇತೃತ್ವ ವಹಿಸಿಕೊಂಡು ಅವರು ಮಾತನಾಡಿದರು.

ರೇಣುಕಚಾರ್ಯರು ಕೆಳ ವರ್ಗದವರಾದ ಅಗಸ್ತ್ಯ ಮಹರ್ಷಿಗೆ ಪ್ರಥಮವಾಗಿ ಸಿದ್ಧಾಂತ ಶಿಖಾಮಣಿಯನ್ನು ಬೋಧಿಸಿದರು. ಸಮಾಜದ ಒಗ್ಗಟ್ಟಿಗಾಗಿ ಶ್ರಮಿಸಿದರು. ಧರ್ಮಬೋಧನೆಗೈದು ಲೋಕಕಲ್ಯಾಣ ಮಾಡಿದರು. ಆದ್ದರಿಂದ ಶ್ರಾವಣ ಮಾಸದಲ್ಲಿ ಎಲ್ಲೆಡೆ ಸಿದ್ಧಾಂತ ಶಿಖಾಮಣಿಯ ಪಠಣ ನಡೆಯುವುದು ಅತ್ಯಂತ ಅವಶ್ಯಕವಾಗಿದೆ ಎಂದರು.

ಶ್ರಾವಣ ಮಾಸವು ಸುವಿಚಾರ ಕೇಳುವ, ಸತ್ಯ, ಶುದ್ಧ ಕಾಯಕ ಕೈಗೊಳ್ಳುವ ಮಾಸವಾಗಿದೆ. ನಿತ್ಯ ಧ್ಯಾನ, ಪೂಜೆ ಕೈಗೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಹಿರಿಯರಾದ ಶರಣಪ್ಪ ಬಿರಾದಾರ ಮಾತನಾಡಿ, ವೀರಶೈವ ಧರ್ಮ ರೇಣುಕಾಚಾರ್ಯರಿಂದ ಸ್ಥಾಪಿತವಾಗಿದೆ. ಅತ್ಯಂತ ಪ್ರಾಚೀನವಾದ ಧರ್ಮವಾಗಿದೆ. ಶಿವಾಗಮಗಳು ಇದರ ಮೂಲವಾಗಿವೆ ಎಂದರು.

ತಾಂಡಾ ಅಭಿವೃದ್ಧಿ ನಿಗಮದ ನಿರ್ದೇಶಕ ನೀಲಕಂಠ ರಾಠೋಡ ಮಾತನಾಡಿ, ಸತ್ಸಂಗದಿಂದ ಮನಸ್ಸಿಗೆ ಶಾಂತಿ, ನೆಮ್ಮದಿ ದೊರಕುತ್ತದೆ. ರೇಣುಕಾಚಾರ್ಯರು ಜಾತಿ ಧರ್ಮ ನೋಡದೆ ತತ್ವ ಬೋಧಿಸಿದರು. ಅದರಂತೆ ಗವಿಮಠದಲ್ಲಿಯೂ ಸರ್ವರನ್ನು ಸಮಾನರನ್ನಾಗಿ ನೋಡಲಾಗುತ್ತಿದೆ ಎಂದರು.

ತಾಲ್ಲೂಕು ಪಂಚಾಯಿತಿ ಅಧ್ಯಕ್ಷೆ ಯಶೋದಾ ರಾಠೋಡ ಮಾತನಾಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ರುದ್ರಮಣಿ ಮಠಪತಿ, ಸದ್ಬೋಧನಾ ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ, ನಗರಸಭೆ ಸದಸ್ಯರಾದ ನಾಗಣ್ಣ ಚಾಮಲ್ಲೆ, ಡಾ.ಬಸವರಾಜ ಸ್ವಾಮಿ, ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ಕಾಶಿನಾಥ ಸ್ವಾಮಿ, ದಿಲೀಪ ಪಾಟೀಲ, ಭಾಗೀರಥಿ ಮಠಪತಿ ಇದ್ದರು. ಪ್ರೊ.ರುದ್ರೇಶ್ವರ ಗೋರಟಾ ಸ್ವಾಗತಿಸಿದರು. ಕಾಶಿನಾಥ ಸ್ವಾಮಿ ವಂದಿಸಿದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಗುರುವಾರ ಸಿದ್ಧಾಂತ ಶಿಖಾಮಣಿ ಪ್ರವಚನಕ್ಕೆ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ನಿರ್ದೇಶಕ ನೀಲಕಂಠ ರಾಠೋಡ ಚಾಲನೆ ನೀಡಿದರು

ಶನಿವಾರ ● ಆಗಸ್ಟ್ 6, 2016 ಪ್ರಜಾವಾಣಿ

Scanned with CamScanner

# ಅರಿವಿನ ಮನೆ : ಜಪ ಮುಕ್ತಾಯ ಕಾರ್ಯಕ್ರಮ

ಬಸವಕಲ್ಯಾಣ : ನಗರದ ಅರಿವಿನ ಮನೆಯಲ್ಲಿ ಅಕ್ಕನ ಬಳಗದ ವತಿಯಿಂದ ಆಷಾಢ ಮಾಸದ ನಿಮಿತ್ಯ ಜಪ ಮುಕ್ತಾಯ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ತ್ರಿಪುರಾಂತ ಗವಿ ಮಠದ ಪೀಠಾಧ್ಯಕ್ಷ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ದಿವ್ಯ ಸಾನಿಧ್ಯ ವಹಿಸಿದರು. ಇಂದಿನ ಆಧುನಿಕ ಯುಗದಲ್ಲಿ ಶಾಂತಿ ನೆಮ್ಮದಿ ಸುಖ ದೊರೆಯಬೇಕಾದರೆ ಗುರುವಿನ ಮಾರ್ಗದರ್ಶನ ಅಗತ್ಯವಾಗಿದೆ. ಭಗವಂತನ ನಾಮ ಸ್ಮರಣೆ ಜತೆಗೆ ಜಪ ಮಾಡುವುದು ಅವಶ್ಯಕವಾಗಿದೆ ಎಂದರು.

ಚಂಪಾವತಿ ಮಹಾಜನ್ ಮಾತನಾಡಿ ಬಸವಾದಿ ಶರಣರು ಏಕಾಂತ ಸ್ಥಳದಲ್ಲಿ ತಮ್ಮ ಆರಾಧ್ಯ ಭಗವತನ ನಿತ್ಯ ಸ್ಮರಣೆ ಮಾಡಿದರು. ಆ ಮೂಲಕ ವಚನಗಳನ್ನು ರಚಿಸಿ ಅಮರರಾಗಿದ್ದರೆ. ಹೀಗಾಗಿ ಕಳೆದ ಹತ್ತು ವರ್ಷಗಳಿಂದ ಬಸವಣ್ಣನವರ ಅರಿವಿನ ಮನೆಯ ಅಕ್ಕನ ಬಳಗದವರು ಆಷಾಢ ಮಾಸದ ಪ್ರತಿದಿನ ಬೆಳಿಗ್ಗೆ ಜಪ ಮಾಡುವುದು ಪುಣ್ಯದ ಕೆಲಸವಾಗಿದೆ ಎಂದು ಅಭಿಪ್ರಾಯ ಪಟ್ಟರು.



ಬಸವಕಲ್ಯಾಣ ನಗರದ ಅರಿವಿನ ಮನೆಯಲ್ಲಿ ಅಕ್ಕನ ಬಳಗದ ವತಿಯಿಂದ ಆಷಾಢ ಮಾಸದ ನಿಮಿತ್ಯ ಜಪಃ ಮುಕ್ತಾಯ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಈ ಸಂದರ್ಭದಲ್ಲಿ ರಾಜೇಶ್ರೀ ಅಕ್ಕ, ಸುಲೋಚನಾ ಮಾಮ, ಸತ್ಯಾವತಿ ಸ್ವಾಮಿ, ಸುಲೋಚನಾ ಗುದಗೆ, ಜ್ಯೋತಿ ಕಾಡದೆ, ಲಲಿತಾ ಖಿಸಗೆ, ಕೋಮಲಾ ಶಿರೆಗೆರೆ, ಬಸಮ್ಮ ಫಾಳೆ, ಶೋಭಾ ನಿಟ್ಟೂರೆ, ಶೋಭಾ ಪೂಜಾರಿ, ಶೈಲಾ ಗೋಕಳೆ, ಮಾಲಾ ಬಿರಾದಾರ, ಸರೋಜನಿ ಹೋಳಕುಂದೆ, ಪೂಜಾ ಕಾಡಾದೆ, ಬಸವಣ್ಣಪ್ಪ ಇಜಾರೆ, ಬಾಬು ಸ್ವಾಮಿ, ಬಸವಣ್ಣಪ್ಪ ತಿಬಶೇಟ್ಟಿ, ಕಾಶಪ್ಪ ಜವಳಗಾ ಅನೇಕರು ಪಾಲ್ಗೊಂಡಿದ್ದರು.

ಸಂಯುಕ್ತ ಕರ್ನಾಟಕ ಶನಿವಾರ, 30, ಜುಲೈ, 2016, ಕಲಬುರಗಿ

ಶ್ರಾವಣ ಮಾಸದ ನಿಮಿತ್ತ ಗವಿಮಠದಲ್ಲಿ ಉಪನ್ಯಾಸ

# 'ಮೋಕ್ಷ ಸಾಧನೆಗೆ ಇಷ್ಟಲಿಂಗ ದೀಕ್ಷೆ ಪಡೆಯಿರಿ'

**ವಿಕ ಸುದ್ದಿಲೋಕ** ಬಸವಕಲ್ಯಾಣ

ಮೋಕ್ಷ ಸಾಧನೆಗಾಗಿ ಗುರುವಿನಿಂದ ಶಾಸ್ತ್ರಬದ್ಧವಾಗಿ ಇಷ್ಟಲಿಂಗ ದೀಕ್ಷೆ ಪಡೆಯಬೇಕು ಎಂದು ಗವಿಮಠದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಪವಿತ್ರ ಶ್ರಾವಣಮಾಸ ನಿಮಿತ್ತ ಬಸವಕಲ್ಯಾಣದ ಇತಿಹಾಸ ಪ್ರಸಿದ್ಧ ಗವಿಮಠದಲ್ಲಿ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಹಾಗೂ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಮಹೇಶ್ವರಸ್ಥಲದಲ್ಲಿಯ ಕ್ರಿಯಾಗಮಸ್ಥಲ ಕುರಿತು ಉಪನ್ಯಾಸ ನೀಡಿದರು. ಗುರು ಶಿಷ್ಯನ ವಾಮಹಸ್ತಪೀಠದಲ್ಲಿ ಇಷ್ಟಲಿಂಗವನ್ನಿಟ್ಟು ಕರ್ಣದಲ್ಲಿ ಮಹಾಮಂತ್ರವಾದ ಶಿವಪಂಚಾಕ್ಷರ ಬೋಧಿಸಬೇಕು. ಆ ಮೂಲಕ ಶಿಷ್ಯ ನಿತ್ಯ ಇಷ್ಟಲಿಂಗ ಕ್ರಿಯೆಯಲ್ಲಿ ಮಗ್ನವಾಗಿ ಮೋಕ್ಷ ಪಡೆಯುವ ವಿಧಾನವೇ ಕ್ರಿಯಾಗಮಸ್ಥಲವಾಗಿದೆ ಎಂದು ಹೇಳಿದರು. ಜ್ಞಾನ ಪಡೆದು ಕ್ರಿಯಾ ಮೂಲಕ ಮೋಕ್ಷ ಸಾಧಿಸುವ ವಿಧಾನವೇ ಕ್ರಿಯಾಗಮಸ್ಥಲವಾಗಿದೆ. ಗುರು ಕೊಟ್ಟ ಈ ಜ್ಞಾನ ಕ್ರಿಯಾರೂಪದಲ್ಲಿ ತಂದಾಗ ಮಾತ್ರ ಮುಕ್ತಿ ಪಡೆಯಲು ಸಾಧ್ಯ ಎಂದರು.



ಬಸವಕಲ್ಯಾಣ ಪವಿತ್ರ ಶ್ರಾವಣಮಾಸ ನಿಮಿತ್ತ ಗವಿಮಠದಲ್ಲಿ ಹಮ್ಮಿಕೊಂಡಿದ್ದ ಮಹೇಶ್ವರ ಸ್ಥಲದಲ್ಲಿಯ ಕ್ರಿಯಾಗಮಸ್ಥಲ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಮಾತನಾಡಿ, ವೀರಶೈವ ಧರ್ಮದಲ್ಲಿ ಗುರು ಕರುಣಿಸಿದ ಭಸ್ಮವನ್ನು ಇಷ್ಟಲಿಂಗಾರ್ಚನೆಗೂ ಮುಂಚೆ ಸಿದ್ಧಾಂತ ಶಿಖಾಮಣಿಯಲ್ಲಿ ಬೋಧಿಸಿದಂತೆ ಅಂಗಕ್ಕೆ ಭಸ್ಮಧಾರಣೆ ಮಾಡಬೇಕು. ಅಂಗದ ಮಸ್ತಕ, ಹಣೆ, ಕಂಠ, ಕರ್ಣಗಳು ಮೊದಲಾದ ಭಾಗಗಳಿಗೆ ಮಂತ್ರಪಠಿಸುತ್ತ ಭಸ್ಮಧಾರಣೆ ಮಾಡಬೇಕೆಂಬುದನ್ನು ಪ್ರಾತ್ಯಕ್ಷಿಕೆ ಮೂಲಕ ಪರಿಚಯಿಸಿದರು.

ಬಸಪ್ಪ ರಾಮಣ್ಣ ಧನ್ನೂರೆ ಅವರನ್ನು ಸತ್ಕರಿಸಲಾಯಿತು. ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ವೈಜನಾಥ ಕಣಸೂರೆ, ಗುರುಲಿಂಗಯ್ಯ ಸ್ವಾಮಿ ಗೋರ್ಟಾ, ರುದ್ರಮಣಿ ಮಠ, ರೇವಣಸಿದ್ಧಯ್ಯ ಮಠಪತಿ, ಸರಸ್ವತಿ ಬೆಂಬಳಗೆ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ, ಪ್ರೇಮಳಾ ರಾಮಣ್ಣ ಇತರರಿದ್ದರು.

ಪ್ರೊ.ಸೂರ್ಯಕಾಂತ ಶೀಲವಂತ ಸ್ವಾಗತಿಸಿದರು. ಪ್ರೊ.ರುದ್ರೇಶ್ವರ ಗೋರ್ಟಾ ನಿರೂಪಿಸಿದರು, ಕಾಶಿನಾಥ ಸ್ವಾಮಿ ವಂದಿಸಿದರು.

ವಿಜಯ ಕರ್ನಾಟಕ VK ಶುಕ್ರವಾರ,12 ಆಗಸ್ಟ್ 2016, ಕಲಬುರಗಿ

Scanned with CamScanner

# ‘ಸಮಾಜ ಸುಧಾರಕರಲ್ಲಿ ರೇಣುಕಾಚಾರ್ಯರು ಮೊದಲಿಗರು’

ಭಸವಕಲ್ಯಾಣ : ಪೂಜ್ಯ ಶ್ರೀ ಜಗದ್ಗುರು ರೇಣುಕಾಚಾರ್ಯರು ಕೆಳವರ್ಗದ ಅಗಸ್ತ್ಯ ಮಹರ್ಷಿಗಳಿಗೆ ಸಿದ್ಧಾಂತ ಸಿಖಾಮಣಿ ಭೋಧೀಸುವುದರ ಮೂಲಕ 12ನೇ ಶತಮಾನಕ್ಕೂ ಮುಂಚೆಯೇ ಸಾಮಾಜಿಕ ಸಮಾನತೆ ಸಾರಿದ ಮೊದಲ ಸಮಾಜ ಸುಧಾರಕರಾಗಿದ್ದಾರೆ ಎಂದು ತ್ರಿಪುರಾಂತ ಗವಿ ಮಠಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿಯ ತ್ರಿಪುರಾಂತದ ಗವಿ ಮಠದಲ್ಲಿ ಶ್ರೀಮದ್ವೀರಶ್ರೈವ ಸದ್ಬೋಧನ ಸಂಸ್ಥೆ ತಾಲೂಕಾ ಘಟಕ ಬಸವಕಲ್ಯಾಣ ಹಾಗೂ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ ತ್ರೀಪೂರಾಂತ ಸಹಯೋಗದಲ್ಲಿ ನಡೆಯುತ್ತಿರುವ ಪವಿತ್ರ ಶ್ರಾವಣ ಮಾಸದಲ್ಲಿ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ನಿತ್ಯ ಪಠಣ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಪೂಜ್ಯರು ಶ್ರಾವಣ ಮಾಸ ಅತ್ಯಂತ ಪವಿತ್ರ ಮಾಸವಾಗಿದ್ದು, ಈ ಮಾಸದಲ್ಲಿ ಪೂಜ್ಯರ ಸುವಿಚಾರಗಳನ್ನು ಶ್ರವಣ ಮಾಡುವುದಕ್ಕೆ ಶ್ರಾವಣ ಎಂದು ಕರೆಯಲಾಗಿದೆ ಎಂದು ಪ್ರತಿಪಾದಿಸಿದರು.

ತಾಲೂಕಾ ಪಂಚಾಯತಿಯ ಅಧ್ಯಕ್ಷೆ ಯಶೋದಾ ನೀಲಕಂಠ ರಾಠೋಡ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಗವಿಮಠವು ಒಂದು ಐತಿಹಾಸಿಕ ಮಠವಾಗಿದ್ದು, ತಾಲೂಕಾ ಪಂಚಾಯತವತಿಯಿಂದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಾತನಾಡಿದ ತಾಂಡಾ ಅಭಿವೃದ್ಧಿ ನಿಗಮದ ನಿರ್ದೇಶಕ ನೀಲಕಂಠ ರಾಠೋಡ ಇಂದಿನ ಅಶಾಂತಿಯ ಯುಗದಲ್ಲಿ ಪೂಜ್ಯರು ಬಸವಕಲ್ಯಾಣದಲ್ಲಿ ಇಂತಹ ಸತ್ಸಂಗ ಕಾರ್ಯಕ್ರಮ ನಡೆಯುತ್ತಿರುವುದು ಮಹತ್ವದಾಗಿದೆ. ಚಿಕ್ಕವರಾಗಿದ್ದರೂ ಸಹ ಯಾವತ್ತು ಕ್ರಿಯಶೀಲರಾಗಿ ನಿರಂತರ · ಇಂತಹ ಕಾರ್ಯಕ್ರಮಗಳನ್ನು ಮಾಡುತ್ತ ಬರುತ್ತಿದ್ದಾರೆ. ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಸಿಖಾಮಣಿ ಪಠಣ ಮಾಡುವುದರಿಂದ ನಮ್ಮ ಬದುಕು ಪಾವನವಾಗುತ್ತದೆ.



ಬಸವಕಲ್ಯಾಣದ ತ್ರಿಪುರಾಂತದ ಗವಿ ಮಠದಲ್ಲಿ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮಗ್ರಂಥ “ಸಿದ್ಧಾಂತ ಶಿಖಾಮಣಿ” ನಿತ್ಯ ಪಠಣ ಕಾರ್ಯಕ್ರಮವನ್ನು ತಾಲೂಕಾ ಪಂಚಾಯತಿಯ ಅಧ್ಯಕ್ಷೆ ಯಶೋದಾ ರಾಠೋಡ ಉದ್ಘಾಟಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಸ್ವಾಮಿ, ನೀಲಕಂಠ ರಾಠೋಡ ಉಪಸ್ಥಿತರಿದ್ದರು.

ಹಾಗೇಯೇ ಯಾವುದೆ ಜಾತಿ ಧರ್ಮ, ಬೇಧ ಎನಿಸದೆ ಪೂಜ್ಯರು ಸಮಾಜಿಕ ಸಮಾನತೆ ತತ್ವ ಅನುಸರಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಟ್ರಸ್ಟ್ ಕಾರ್ಯಧ್ಯಕ್ಷ ಶರಣಪ್ಪ ಬಿರಾದಾರ ಮಾತನಾಡಿ ಜಗದ್ಗುರು ರೇಣುಕಾಚಾರ್ಯರಿಂದ ಸ್ಥಾಪಿತವಾದ ವಿರಶೈವ ಧರ್ಮ ಅತ್ಯಂತ ಪ್ರಾಚೀನ ದರ್ಮವಾಗಿದು, ಶಿವಾಗಮಗಳಲ್ಲಿ ಇದರ ತತ್ವಗಳು ಹುಟ್ಟಿಕೊಂಡಿರುವುದನ್ನು ಕಾಣಬಹುದಾಗಿದೆ ಎಂದರು.

ಈ ಕಾರ್ಯಕ್ರಮದಲ್ಲಿ ನಗರ ಸಭೆ ಸದಸ್ಯರಾದ ನಾಗಣ್ಣ ಚಾಮಲ್ಲೆ, ಬಸವರಾಜ ಸ್ವಾಮಿ, ವೀರಣ್ಣ ಶೀಲವಂತ, ರುದ್ರಮಣಿ ಮಠ, ಪ್ರೊ.ಸೂರ್ಯಕಾಂತ ಶೀಲವಂತ, ಕಾಶಿನಾಥ ಸ್ವಾಮಿ, ದಿಲೀಪ ಪಾಟೀಲ ಬೇಲೂರ, ಶಾಂತವೀರ ಸಾಮಿ ಪೂಜಾರಿ, ಮಲ್ಲಿಕಾರ್ಜುನ ಶೀಲವಂತ, ಮಲ್ಲರೆಡ್ಡಿ ಪಾಟೀಲ ಕಿಟ್ಟಾ, ತುಳಸಿರಾಮ ಪವಾರ, ವಸಂತ ರಾಠೋಡ, ಸಂತೋಷ ಪಾಟೀಲ, ವಿಮಲಾಬಾಯಿ ಮಾಣಿಕಪ್ಪಾ ಬಿರಾದಾರ, ಭಾಗಿರತಿ ಮಠಪತಿ, ವಿಲಾಸವತಿ, ವೈಜಿನಾಥಯ್ಯ ಸ್ವಾಮಿ ಉಪಸ್ಥಿತರಿದ್ದರು. ಪ್ರೋ. ರುದ್ರೇಶ್ವರ ಸ್ವಾಮಿ ಗೋರಟಾ ಸ್ವಾಗತಿಸಿದರು. ರಾಚೋಟೇಶ್ವರ ಪೂರ್ವ ಪ್ರಾಥಮಿಕ ಶಾಲೆಯ ಅಧ್ಯಕ್ಷ ಕಾಶಿನಾಥ ಸ್ವಾಮಿ ವಂದಿಸಿದರು.

ಸಂಯುಕ್ತ ಕರ್ನಾಟಕ
ಸೋಮವಾರ, 8, ಆಗಸ್ಟ್, 2016, ಕಲಬುರಗಿ

Scanned with CamScanner

# ಸಿದ್ಧಾಂತ ಶಿಖಾಮಣಿ ಪಠಣಕ್ಕೆ ಚಾಲನೆ

**ವಿಶ್ವವಾಣಿ ಸುದ್ದಿಮನೆ** ಬಸವಕಲ್ಯಾಣ

ಶ್ರಾವಣ ಮಾಸದಲ್ಲಿ ಪ್ರತಿಯೊಬ್ಬರು ದೇವರ ಧ್ಯಾನ, ಪೂಜೆ ಮಾಡಬೇಕು ಎಂದು ತಾಲೂಕು ಪಂಚಾಯಿತಿ ಅಧ್ಯಕ್ಷೆ ಯಶೋಧಾ ನೀಲಕಂಠ ರಾಠೋಡ್ ಹೇಳಿದರು.

ತ್ರಿಪುರಾಂತದ ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಶ್ರೀಮದ್ವೀಶ್ವರ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಹಾಗೂ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ಸಹ ಯೋಗದಲ್ಲಿ ನಡೆಯುತ್ತಿರುವ ವೀರಶೈವ ಲಿಂಗಾಯತ ಧರ್ಮ ಗ್ರಂಥ ಸಿದ್ಧಾಂತ ಶಿಖಾಮಣಿ ನಿತ್ಯ ಪಠಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಗವಿಮಠ ಅಭಿವೃದ್ಧಿಗೆ ಅಗತ್ಯ ಸಹಕಾರ ನೀಡಲಾಗುತ್ತದೆ ಎಂದು ಹೇಳಿದರು. ಸಾನ್ನಿಧ್ಯ ವಹಿಸಿದ್ದ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು.



ಬಸವಕಲ್ಯಾಣದ ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಪಠಣಕ್ಕೆ ಚಾಲನೆ ನೀಡಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ನೀಲಕಂಠ ರಾಠೋಡ್, ಯಶೋಧಾ ರಾಠೋಡ್ ಇದ್ದರು.

ಶ್ರಾವಣ ಮಾಸ ಅತ್ಯಂತ ಪವಿತ್ರವಾಗಿದೆ. ಸುವಿಚಾರಗಳನ್ನು ಶ್ರವಣ ಮಾಡುವುದಕ್ಕೆ ಶ್ರಾವಣ ಎಂದು ಕರೆಯಲಾಗಿದೆ ಎಂದರು.

ಜಗದ್ಗುರು ರೇಣುಕಾಚಾರ್ಯರು ಕೆಳ ವರ್ಗದ ಅಗಸ್ತ್ಯ ಮಹರ್ಷಿಗಳಿಗೆ ಸಿದ್ಧಾಂತ ಶಿಖಾಮಣಿ ಬೋಧಿಸುವುದರ ಮೂಲಕ 12ನೇ ಶತಮಾನಕ್ಕೂ ಮುಂಚೆ ಯೇ ಸಾಮಾಜಿಕ ಸಮಾನತೆ ಸಾರಿದ ಮೊದಲ ಸಮಾಜ ಸುಧಾರಕರಾಗಿದ್ದಾರೆ ಎಂದು ನುಡಿದರು. ನಾಗಣ್ಣ ಚಾಮಲ್ಲೆ, ಬಸವರಾಜ ಸ್ವಾಮಿ, ವೀರಣ್ಣ ಶೀಲವಂತ, ರುದ್ರಮಣಿ ಮಠ, ಸೂರ್ಯ ಕಾಂತ ಶೀಲವಂತ, ಕಾಶೀನಾಥ ಸ್ವಾಮಿ, ದಿಲೀಪ ಪಾಟೀಲ ಬೇಲೂರ, ಶಾಂತವೀರ ಸ್ವಾಮಿ ಪೂಜಾರಿ, ಮಲ್ಲಿಕಾರ್ಜುನ ಶೀಲ ವಂತ, ಮಲ್ಲರೆಡ್ಡಿ ಪಾಟೀಲ ಕಿಟ್ಟಾ, ತುಳಸಿ ರಾಮ ಪವಾರ, ವಸಂತ ರಾಠೋಡ, ಸಂತೋಷ ಪಾಟೀಲ, ವಿಮಲಾಬಾಯಿ ಮಾಣಿಕಪ್ಪಾ ಬಿರಾದಾರ, ಭಾಗಿರತಿ ಮಠಪತಿ, ವಿಲಾಸವತಿ, ವೈಜಿನಾಥಯ್ಯ ಸ್ವಾಮಿ ಇದ್ದರು.

vishwavani.news
09.08.2016
ಮಂಗಳವಾರ

# ಸಿದ್ಧಾಂತ ಶಿಖಾಮಣಿ ನಿತ್ಯ ಪಠಣಕ್ಕೆ ಚಾಲನೆ

ಬಸವಕಲ್ಯಾಣ: ಐತಿಹಾಸಿಕ ತ್ರಿಪುರಾಂತ ಗವಿ ಮಠದ ಪರಿಸರದಲ್ಲಿ ಅಭಿವೃದ್ಧಿ ಕೆಲಸಗಳಾಬೇಕಾದ ಅಗತ್ಯ ಇದೆ ಎಂದು ತಾಪಂ ಅಧ್ಯಕ್ಷೆ ಯಶೋಧಾ ರಾಠೋಡ ಹೇಳಿದರು.

ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಹಾಗೂ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ನ ಸಹಯೋಗದಲ್ಲಿ ತ್ರಿಪುರಾಂತನ ಗವಿ ಮಠದಲ್ಲಿ ಶ್ರಾವಣ ಮಾಸ ನಿಮಿತ್ತ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ನಿತ್ಯ ಪಠಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಭಿವೃದ್ಧಿ ಕಾರ್ಯಗಳಿಗೆ ಸಹಾಯ-ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಸನ್ಮಾನ ಸ್ವೀಕರಿಸಿದ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ನಿರ್ದೇಶಕ ನೀಲಕಂಠ ರಾಠೋಡ ಮಾತನಾಡಿ, ಧಾರ್ಮಿಕ ಕಾರ್ಯಕ್ರಮಗಳ ಜತೆಗೆ ಜನಪರ ಕಾರ್ಯ ಚಟುವಟಿಕೆಗಳಲ್ಲಿ ತೊಡಿಸಿಕೊಂಡಿರುವ ತ್ರಿಪುರಾಂತ ಶ್ರೀಗಳು ಸದಾ ಕ್ರಿಯಾಶೀಲರಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶ್ರೀ ಸಾನ್ನಿಧ್ಯ ವಹಿಸಿದ್ದರು. ನಗರ ಸಭೆ ಸದಸ್ಯರಾದ ನಾಗಣ್ಣ ಚಾಮಲೆ, ಬಸವರಾಜ ಸ್ವಾಮಿ, ವೀರಣ್ಣ ಶೀಲವಂತ, ರುದ್ರಮಣಿ ಮಠ, ಪ್ರೊ.ಸೂರ್ಯಕಾಂತ ಶೀಲವಂತ, ಕಾಶಿನಾಥ ಸ್ವಾಮಿ, ದಿಲೀಪ ಪಾಟೀಲ್ ಬೇಲೂರ, ಶಾಂತವೀರ ಸ್ವಾಮಿ ಪೂಜಾರಿ, ಮಲ್ಲಿಕಾರ್ಜುನ ಶೀಲವಂತ, ಮಲ್ಲರೆಡ್ಡಿ ಪಾಟೀಲ್ ಕಿಟ್ಟಾ, ತುಳಸಿರಾಮ ಪವಾರ, ವಸಂತ ರಾಠೋಡ, ಸಂತೋಷ ಪಾಟೀಲ್, ವಿಮಲಾಬಾಯಿ ಮಾಣಿಕಪ್ಪಾ ಬಿರಾದಾರ, ಭಾಗಿರತಿ ಮಠಪತಿ, ವಿಲಾಸವತಿ, ವೈಜಿನಾಥಯ್ಯ ಸ್ವಾಮಿ ಉಪಸ್ಥಿತರಿದ್ದರು.

ಪ್ರೊ. ರುದ್ರೇಶ್ವರ ಸ್ವಾಮಿ ಗೋರಟಾ ಸ್ವಾಗತಿಸಿದರು. ಕಾಶಿನಾಥ ಸ್ವಾಮಿ ವಂದಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI « KALABURAGI
ಭಾನುವಾರ
7 ಆಗಸ್ಟ್ 2016
7 AUGUST 2016



ಹೆಬ್ಬಾಳ (ಬಿ) ಗ್ರಾಮದಲ್ಲಿ ಶತಾಯುಷಿ ಸಂಗನ ಅಡಯ್ಯ ಸ್ವಾಮಿ ಮುಡಬಿ (102) ಅವರಿಗೆ ಕುಟುಂಬ ವರ್ಗದಿಂದ ನಡೆದ ಶತಮಾನೋತ್ಸವ ಹಾಗೂ ತುಲಾಭಾರ ಹಲವಾರು ಶ್ರೀಗಳ, ಗಣ್ಯರ ಮಧ್ಯೆ ನೆರವೇರಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI « KALABURAGI
ಭಾನುವಾರ
23 ಅಕ್ಟೋಬರ್ 2016
23 OCTOBER 2016

Scanned with CamScanner

# 'ಜ್ಞಾನ, ಕ್ರಿಯಾ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ'

ಬಸವಕಲ್ಯಾಣ : ಗುರು ಕೊಟ್ಟ ಜ್ಞಾನ ಕ್ರಿಯಾ ರೂಪದಲ್ಲಿ ತಂದಾಗ ಮಾತ್ರ ಮುಕ್ತಿ ಪಡೆಯಲು ಸಾಧ್ಯ ಈ ಕುರಿತು– 'ನ ಕ್ರಿಯಾ ರಹಿತಂ ಜ್ಞಾನ, ನ ಜ್ಞಾನ ರಹಿತಂ ಕ್ರಿಯಾ", ಅಂದರೆ ಜ್ಞಾನ ಮತ್ತು ಕ್ರೀಯಾ ಎರಡು ಒಂದನ್ನೊಂದು ಬೆರೆತಿವೆ. ಹೀಗಾಗಿ ಇವೆರಡು ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಬಸವಕಲ್ಯಾಣಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿನ ತ್ರಿಪುರಾಂತ ಗವಿಮಠದಲ್ಲಿ ಪವಿತ್ರ ಶ್ರಾವಣಮಾಸ ನಿಮಿತ್ಯ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆತಾಲೂಕುಘಟಕಬಸವಕಲ್ಯಾಣ ಹಾಗೂ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ಸಹಯೋಗದಲ್ಲಿ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಮಹೇಶ್ವರಸ್ಥಲದಲ್ಲಿಯ ಕ್ರಿಯಾಗಮಸ್ಥಲಕುರಿತುಹಮ್ಮಿಕೊಂಡ ಉಪನ್ಯಾಸ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ ವೀರಶೈವ ಧರ್ಮ ಸ್ಥಾಪಕರಾದ ಜಗದ್ಗುರು ರೇಣುಕಾಚಾರ್ಯ ಶಿಷ್ಯ



ಬಸವಕಲ್ಯಾಣ ನಗರದ ತ್ರಿಪುರಾಂತದ ಗವಿಮಠದಲ್ಲಿ ಶ್ರಾವಣ ಮಾಸದ ಪ್ರಯುಕ್ತ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಮಹೇಶ್ವರಸ್ಥಲದಲ್ಲಿಯ ಕ್ರಿಯಾಗಮಸ್ಥಲ ಕುರಿತು ಹಮ್ಮಿಕೊಂಡ ಉಪನ್ಯಾಸ ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಸ್ವಾಮಿ ಮಾತನಾಡಿದರು.

ಅಗಸ್ತ ಮಹರ್ಷಿಗೆ ಕ್ರಿಯಾಗಮಸ್ಥಲ ಕುರಿತು ಬೋಧಿಸುವಾಗ ಗುರು–ಶಿಷ್ಯ ಸಂಬಂಧವು ಲಿಂಗಾಂಗ ಸಾಮರಸ್ಯ ಸಂಬಂಧವಾಗಿದೆ. ಮಾನವ ಮೋಕ್ಷ ಸಾಧನೆಗಾಗಿ ಗುರುವಿನಿಂದ ಶಾಸ್ತ್ರಬದ್ಧವಾಗಿ ಇಷ್ಟಲಿಂಗ ದೀಕ್ಷೆ ಪಡೆಯಬೇಕು. ಈ ಸಂದರ್ಭದಲ್ಲಿ ಗುರುವು ಶಿಷ್ಯನ ವಾಮಹಸ್ತ ಪೀಠದಲ್ಲಿ ಇಷ್ಟಲಿಂಗವನ್ನಿಟ್ಟು ಕರ್ಣದಲ್ಲಿ ಮಹಾಮಂತ್ರವಾದ ಶಿವಪಂಚಾಕ್ಷರ ಬೋಧಿಸಬೇಕು. ಆ ಮೂಲಕ ಶಿಷ್ಯ ನಿತ್ಯ ಇಷ್ಟಲಿಂಗ ಕ್ರಿಯೆಯಲ್ಲಿ ಮಗ್ನವಾಗಿ ಮೋಕ್ಷ ಪಡೆಯುವ ವಿಧಾನವೇ ಕ್ರಿಯಾಗಮಸ್ಥಲವಾಗಿದೆ.

ಕ್ರಿಯಾಗಮಸ್ಥಲದಲ್ಲಿ ಜ್ಞಾನ ಹಾಗೂ ಕ್ರಿಯಾ ಎರಡು ವಿಷಯಗಳು ಸೇರಿವೆ. ಗುರು ಶಿಷ್ಯನಿಗೆ ಬೋಧಿಸುವುದು ಜ್ಞಾನವಾದರೆ ಅದನ್ನು ಶಿಷ್ಯ ನಿತ್ಯ ಆಚಾರಣೆಯಲ್ಲಿ ತರುವುದೇ ಕ್ರಿಯಾ ಆಗಿದೆ. ಜ್ಞಾನ ಪಡೆದು ಕ್ರಿಯಾ ಮೂಲಕ ಮೋಕ್ಷ ಸಾಧಿಸುವ ವಿಧಾನವೇ ಕ್ರಿಯಾಗಮಸ್ಥಲವಾಗಿದೆ.

ಶಿವ ಸ್ವರೂಪಿಯಾದ ಇಷ್ಟಲಿಂಗವನ್ನು ಗುರು ಬೋಧನೆಯಂತೆ ನಿತ್ಯ ನಿಯಮಿತವಾಗಿ ಪೂಜೆ, ಜಪ, ಧ್ಯಾನ ಮಾಡುವುದರ ಮೂಲಕ ಶಿವನ ಸಾನಿಧ್ಯ ಪಡೆಯಬಹುದು. ಅಂತಹ ಇಷ್ಟಲಿಂಗ ಪೂಜೆಯಲ್ಲಿ ಅದ್ಭುತವಾದ ಶಕ್ತಿಯಿದೆ. ಹೀಗಾಗಿ ಇಷ್ಟಲಿಂಗ ಕ್ರಿಯೆಯು ವೀರಶೈವ ಧರ್ಮದ ಒಂದು ಮುಖ್ಯ ವಿಧಾನವಾಗಿದೆ. ಇಷ್ಟಲಿಂಗ ಪೂಜೆಯನ್ನು ಮಾಡಿದರೆ ಎಲ್ಲಾ ದೇವರುಗಳ ಪೂಜೆ ಮಾಡಿದಂತೆ. ಶಿವ ಸ್ವರೂಪಿ ಇಷ್ಟಲಿಂಗದಲ್ಲಿ ಜಗತ್ತೆ ಅಡಗಿದೆ. ಹೀಗಾಗಿ 'ಲಿಂಗ ಮಧ್ಯೆ ಜಗತ್‌ಸರ್ವಂ' ಎಂದು ಹೇಳಲಾಗಿದೆ. ನಿತ್ಯ ನಿಯಮಿತವಾಗಿ ಕ್ರಿಯಾ ಅಂದರೆ ಇಷ್ಟಲಿಂಗ ಪೂಜೆ ಮಾಡುವುದರಿಂದ ಭವರೋಗದಿಂದ ಬಿಡುಗಡೆಯಾಗಬಹುದು. ಹೀಗಾಗಿ ಜ್ಞಾನ ಕುಂಟನಿದ್ದಂತೆ, ಕ್ರಿಯಾ ಕುರುಡನಿದ್ದಂತೆ ಇಬ್ಬರೂ ಪರಸ್ಪರ ಸಹಕಾರದಿಂದ ಮಾತ್ರ ಭವಸಾಗರ ದಾಟಲು ಸಾಧ್ಯ. ಹೀಗಾಗಿ ಇಷ್ಟಲಿಂಗ ಪೂಜೆಯೂ ಕೂಡಾ ಒಂದು ಯೋಗವಾಗಿದೆ ಎಂದು ನುಡಿದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪಾ ಲವಾರೆ ಅವರು ಮಾತನಾಡಿ ವೀರಶೈವ ಧರ್ಮದಲ್ಲಿ ಗುರು ಕರುಣಿಸಿದ ಭಸ್ಮವನ್ನು ಇಷ್ಟಲಿಂಗಾರ್ಚನೆಗೂ ಮುಂಚೆ ಸಿದ್ಧಾಂತ ಶಿಖಾಮಣಿಯಲ್ಲಿ ಬೋಧಸಿದಂತೆ ಅಂಗಕ್ಕೆ ಭಸ್ಮಧಾರಣೆ ಮಾಡಬೇಕು. ಅಂಗದ ಮಸ್ತಕ, ಹಣೆ, ಕಂಠ, ಕರ್ಣಗಳು ಮೊದಲಾದ ಭಾಗಗಳಿಗೆ ಮಂತ್ರಪಠಿಸುತ್ತ ಭಸ್ಮಧಾರಣೆ ಮಾಡಬೇಕೆಂಬುದನ್ನು ಪ್ರಾತ್ಯಕ್ಷಿಕೆಯ ಮೂಲಕ ಪರಿಚಯಿಸಿದರು. ಆ ಮೂಲಕ ಅಂಗವನ್ನು ಲಿಂಗವನ್ನಾಗಿಸಿಕೊಳ್ಳಬ 'ೇಕೆಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಬಸಪ್ಪರಾಮಣ್ಣಧನ್ನೂರೆ ಅವರನ್ನು ಸತ್ಕರಿಸಲಾಯಿತು. ಈ ಸಂದರ್ಭದಲ್ಲಿ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ವೈಜಿನಾಥ ಕನಸೂರೆ, ಗುರುಲಿಂಗಯ್ಯ ಸ್ವಾಮಿ ಗೋರ್ಟಾ, ರುದ್ರಮಣಿ ಮಠ, ರೇವಣಸಿದ್ಧಯ್ಯ ಮಠಪತಿ ಸರಸ್ವತಿ ಬೆಂಬಳಗೆ, ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ, ಪ್ರೇಮಳಾ ರಾಮಣ್ಣ ಅನೇಕರು ಉಪಸ್ಥಿತರಿದ್ದರು. ಪ್ರೋ. ಸೂರ್ಯಕಾಂತ ಶೀಲವಂತ ಸ್ವಾಗತಿಸಿದರು. ಕಾಶಿನಾಥ ಸ್ವಾಮಿ ವಂದಿಸಿದರು. ಪ್ರೋ.ರುದ್ರೇಶ್ವರ ಗೋರ್ಟಾ ನಿರೂಪಿಸಿದರು.

ಸಂಯುಕ್ತ ಕರ್ನಾಟಕ
ಶುಕ್ರವಾರ, 12, ಆಗಸ್ಟ್, 2016, ಕಲಬುರಗಿ

Scanned with CamScanner

# ಶಿಷ್ಯನ ಸ್ಥಾನ ಗುರುವಿನಷ್ಟೇ ಶ್ರೇಷ್ಠ : ಅಭಿನವಶ್ರೀ

ಬಸವಕಲ್ಯಾಣ : ಶಿಷ್ಯನಿಂದ ಗುರುವಿನ ಕೀರ್ತಿಯು ದಶ-ದಿಕ್ಕುಗಳಲ್ಲಿ ಪಸರಿಸುತ್ತದೆ. ಹೀಗಾಗಿ ಧರ್ಮ ಹಾಗೂ ಅಧ್ಯಾತ್ಮದಲ್ಲಿ ಶಿಷ್ಯ ಸ್ಥಾನವು ಗುರುವಿನಷ್ಟೇ ಶ್ರೇಷ್ಠವಾಗಿದೆ ಎಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದರು.

ತ್ರಿಪುರಾಂತದ ಗವಿ ಮಠದಲ್ಲಿ ಪವಿತ್ರ ಶ್ರಾವಣಮಾಸದ ನಿಮಿತ್ತ ಶ್ರೀಮದ್ವೀರ ಶೈವ ಸದ್ಬೋಧನ ಸಂಸ್ಥೆ ತಾಲೂಕ ಘಟಕ ಹಾಗೂ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ ಸಹಯೋಗದಲ್ಲಿ ಶ್ರೀ ಜಗದ್ಗುರು ರೇಣುಕ ಚಾರ್ಯರು ಬೋಧಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿಯಲ್ಲಿನ "ಶಿಷ್ಯ ಸ್ಥಲ" ಎಂಬ ವಿಷಯ ಕುರಿತು ನೀಡಿದ ಉಪನ್ಯಾಸ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡುತ್ತಿದ್ದರು.




ಬಸವಕಲ್ಯಾಣ ತ್ರಿಪುರಾಂತದ ಗವಿ ಮಠದಲ್ಲಿ ಶ್ರಾವಣ ಮಾಸದ ನಿಮಿತ್ಯ ನಡೆಯುತ್ತಿರುವ ಸಿದ್ಧಾಂತ ಶಿಖಾಮಣಿಯಲ್ಲಿಯ ಶಿಷ್ಯಸ್ಥಲ ಎಂಬ ವಿಷಯದ ಕುರಿತು ಆಯೋಜಿಸಿದ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ಶ್ರೀಗಳು ದೇವರನ್ನು ಆರಾಧಿಸುವನನ್ನು ಭಕ್ತ ಎಂದು ಕರೆದರೆ ಗುರುವನ್ನು ಆರಾಧಿಸುವನನ್ನು ಶಿಷ್ಯ ಎಂದು ಕರೆಯಲಾಗುತ್ತದೆ. ಗುರುವು ಶಿಷ್ಯನಿಗೆ ಇಷ್ಟ ಲಿಂಗ ದೀಕ್ಷೆ ಕೊಟ್ಟ ನಂತರ ಗುರು ಶಿಷ್ಯರಲ್ಲಿ ಅವಿನಾಭಾವ ಸಂಬಂಧ ಮೂಡುತ್ತದೆ. ಶಿಷ್ಯ-ಗುರು ಬೋಧನೆಯಂತೆ ಧರ್ಮದ ಮಾರ್ಗದಲ್ಲಿ ಸಾಗಬೇಕು. ಆಗ ಶಿಷ್ಯ ಗುರುವಿನ ಮಾರ್ಗ ದರ್ಶನದಂತೆ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಪುರುಷಾರ್ಥ ಮಾರ್ಗದಲ್ಲಿ ಸಾಗಿದಾಗ ಜಿವನ ಸಾರ್ಥಕಗೊಳ್ಳುತ್ತದೆ ಎಂದರು.

ನೇತೃತ್ವವಹಿಸಿದ್ಧರಾಜೇಶ್ವರದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಶಿಷ್ಯಸ್ಥಲ ಕುರಿತು ಶಿಷ್ಯ ಗುರುವಿನಿಂದ ಮಾತ್ರ ಲೌಕಿಕ ಬಂಧನಗಳಿಂದ ಬಿಡುಗಡೆ ಗೊಂಡು ಅಲೌಕಿಕ್ ಸು:ಖ ಪಡೆಯಲು ಸಾಧ್ಯ ಎಂದರು.

ರಾಷ್ಟ್ರಕವಿ ಕುವೆಂಪು ಶಾಲೆಯ ಅಧ್ಯಕ್ಷ ಪ್ರಕಾಶ ವಿಶ್ವನಾಥ ಬಿರಾದಾರ ಮಾತಾನಾಡಿ ಪ್ರತಿವರ್ಷ ಈ ಗವಿಮಠದಲ್ಲಿ ಶ್ರೀಗಳು ಪ್ರವಚನ ಒಂದು ಸಾರಿ ಕೇಳಿದರೇ ಸಾಕು ಪ್ರತಿಯೊಬ್ಬರ ಬದುಕು ಪಾವನವಾಗುತ್ತದೆ ಎಂದು ಬಣ್ಣಿಸಿದರು. ಮುಖ್ಯ ಅತಿಥಿಯಾಗಿದ್ದ ನಿವೃತ ಶಿಕ್ಷಕ ಬಾಬುರಾವ ಉಳ್ಳೆ ಅವರನ್ನು ಪೂಜ್ಯರು ಸನ್ಮಾನಿಸಿದರು.

ಟ್ರಸ್ಟ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಎ.ಜಿ.ಪಾಟೀಲ, ಕೆ.ಎನ್. ಮಡೋಳಿ, ರಾಜಕುಮಾರ ಪಾಲಾಪೂರೆ, ಮಲ್ಲಿಕಾರ್ಜುನ ಹುಗ್ಗೆ ಪಾಟೀಲ, ಬಾಬುರಾವ ಚಳಕಾಪೂರೆ, ರುದ್ರಮುನಿ ಮಠ, ರೇವಣಸಿದ್ಧಯ್ಯಾ ಮಠಪತಿ, ಪ್ರೋ ರುದ್ರೇಶ್ವರ ಗೋರ್ಟಾ ಉಪಸ್ಥಿತರಿದ್ದರು. ಸೋಮುವಾರ ಪೇಟೆಯ ಜೈ ಬಂಜ ರಂಗ ಬಲಿ ಭಜನಾ ಮಂಡಳಿಯವರು ಪಂಚಾಚಾರ್ಯರ ಭಜನೆ ಕಾರ್ಯಕ್ರಮ ನಡೆಸಿದರು. ಪ್ರೋ ಸುರೇಖಾ ಶೀಲವಂತ ಸ್ವಾಗತಿಸಿದರು. ಬಸವಂತಪ್ಪ ಲವಾರೆ ವಂದಿಸಿದರು. ಪ್ರೋ ಸೂರ್ಯಕಾಂತ ಶೀಲವಂತ ನಿರೂಪಿಸಿದರು.

ಸಂಯುಕ್ತ ಕರ್ನಾಟಕ

ಮಂಗಳವಾರ, 23, ಆಗಸ್ಟ್, 2016, ಕಲಬುರಗಿ

## ತ್ರಿಪುರಾಂತ ಗವಿ ಮಠದಲ್ಲಿ ಉಪನ್ಯಾಸ

ಬಸವಕಲ್ಯಾಣ: ಮಾನವ ಮೋಕ್ಷ ಸಾಧನೆಗಾಗಿ ಗುರುವಿನಿಂದ ಶಾಸ್ತ್ರಬದ್ಧವಾಗಿ ಇಷ್ಟಲಿಂಗ ದೀಕ್ಷೆ ಪಡೆಯಬೇಕು. ಈ ಸಂದರ್ಭದಲ್ಲಿ ಗುರುವು ಶಿಷ್ಯನ ವಾಮಹಸ್ತಪೀಠದಲ್ಲಿ ಇಷ್ಟಲಿಂಗವನ್ನಿಟ್ಟು ಕರ್ಣದಲ್ಲಿ ಮಹಾಮಂತ್ರವಾದ ಶಿವಪಂಚಾಕ್ಷರ ಬೋಧಿಸಬೇಕು. ಆ ಮೂಲಕ ಶಿಷ್ಯ ನಿತ್ಯ ಇಷ್ಟಲಿಂಗ ಕ್ರಿಯೆಯಲ್ಲಿ ಮಗ್ನವಾಗಿ ಮೋಕ್ಷ ಪಡೆಯುವ ವಿಧಾನವೇ ಕ್ರಿಯಾಗಮಸ್ಥಲವಾಗಿದೆ ಎಂದು ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶ್ರೀ ನುಡಿದರು. ಶ್ರಾವಣ ಮಾಸ ನಿಮಿತ್ತ ತ್ರಿಪುರಾಂತ ಗವಿಮಠದಲ್ಲಿ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಹಾಗೂ ಜಗದ್ಗುರು ಘನಲಿಂಗ ರುದ್ರಮುನಿ ಶ್ರೀ ಗವಿಮಠ ಟ್ರಸ್ಟ್ ಸಹಯೋಗದಲ್ಲಿ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಮಹೇಶ್ವರಸ್ಥಲದಲ್ಲಿಯ ಕ್ರಿಯಾಗಮಸ್ಥಲ ಕುರಿತು ನಡೆದ ಉಪನ್ಯಾಸದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಸಿದ್ಧಾಂತ ಶಿಖಾಮಣಿ ಸನ್ಮಾರ್ಗ ತೋರುತ್ತದೆ ಎಂದರು. ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬಸಪ್ಪ ರಾಮಣ್ಣ ಧನ್ನೂರೆ ಅವರನ್ನು ಸನ್ಮಾನಿಸಲಾಯಿತು. ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ವೈಜಿನಾಥ ಕನಸೂರೆ, ಗುರುಲಿಂಗಯ್ಯ ಸ್ವಾಮಿ ಗೋರ್ಟಾ, ರುದ್ರಮಣಿ ಮಠ, ರೇವಣಸಿದ್ದಯ್ಯ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI « KALABURAGI
ಶುಕ್ರವಾರ 19 ಆಗಸ್ಟ್ 2016
19 AUGUST 2016
5

Scanned with CamScanner

ಸಂಯುಕ್ತ ಕರ್ನಾಟಕ

ಶುಕ್ರವಾರ,19, ಆಗಸ್ಟ್, 2016, ಕಲಬುರಗಿ



# ಅನ್ಯಾಯದಿಂದ ಗಳಿಸಿದ ಸಂಪತ್ತು ಶಾಶ್ವತವಲ್ಲ : ಘನಲಿಂಗ ಶ್ರೀ

**ಬಸವಕಲ್ಯಾಣ :** ನ್ಯಾಯುತ ವಾಗಿಯೇ ಸಂಪತ್ತನ್ನು ಗಳಿಸಬೇಕೆ ಹೊರತು ಅನ್ಯಾಯದಿಂದಲ್ಲ. ಅನ್ಯಾಯದಿಂದ ಗಳಿಸಿದ ಸಂಪತ್ತು ಶಾಶ್ವತವಾಗಿರಲು ಸಾಧ್ಯವಿಲ್ಲವೆಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಭಿಪ್ರಾಯ ಪಟ್ಟರು.

ತ್ರಿಪೂರಾಂತದ ಗವಿ ಮಠದಲ್ಲಿ ಪವಿತ್ರ ಶ್ರಾವಣ ಮಾಸದ ನಿಮತ್ತ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಹಾಗೂ ಶ್ರೀ ಜಗದ್ಗುರು ಘಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಧರ್ಮಾಚಾರ ಸ್ಥಲ ಎಂಬ ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ ಅನ್ನದಾನ ಮಾಡುವುದು ಧರ್ಮವೇ. ದುರ್ಮಾರ್ಗದಲ್ಲಿ ನಡೆಯುತ್ತಿರುವವನಿಗೆ ದಶಧರ್ಮ ಸೂತ್ರಗಳ ಮಹತ್ವ ತಿಳಿಹೇಳಿ ಧರ್ಮ ಮಾರ್ಗದಲ್ಲಿ ನಡೆಯುವಂತೆ ಮಾಡುವುದು ಧರ್ಮಚಾರವಾಗಿದೆ. ಯಾರಿಗೂ ಅನ್ಯಾಯ ಮಾಡದೆ ನ್ಯಾಯುತವಾಗಿ ಬದುಕಬೇಕು. ಕೇವಲ ದೇವರ ಆರಾಧನೆ ಅಲ್ಲ ಅದು ಅಹಿಂಸಾ, ಸತ್ಯ, ಅಸ್ತೇಯ, ದಯಾ, ಕ್ಷಮಾ, ದಾನ, ಧ್ಯಾನ, ಮೊದಲಾದ 10 ತತ್ವಗಳ ಆಚರಣೆಯಾಗಿದೆ. ಅದನ್ನು ದಶಧರ್ಮ ಸೂತ್ರಗಳೆಂದು ಭೋಧಿಸಿದ್ದಾರೆ. ಅವುಗಳ ಆಚರಣೆಯೇ ಧರ್ಮಾಚಾರ ಸ್ಥಲ. ಧರ್ಮಾಚಾರಣೆಯಿಂದ ಮಾನವನಾಗಿ ಉತ್ತಮ ಬದುಕು ರೂಪಿಸಿಕೊಳ್ಳಲು ಸಾಧ್ಯ. ಕಾರಣ 84 ಲಕ್ಷ ಜೀವರಾಶಿಗಳಲ್ಲಿ ಮಾನವ ಜನ್ಮ ದೊಡ್ಡದು. ಹೀಗಾಗಿ ಧರ್ಮದಿಂದ ನಡೆದರೆ ಧರ್ಮ ನಮಗೆ ಭಗವಂತನ ಸಾನಿಧ್ಯಕ್ಕೆ ಕರೆದ್ಯೋಯುತ್ತದೆ. ಆದ್ದರಿಂದ ಪ್ರತಿಯೊಬ್ಬರು ದಶ 'ಧರ್ಮ ಸೂತ್ರಗಳಂತೆ ಧರ್ಮಾಚಾರ ಗೈದು ಜೀವನ ಪಾವನ ಗೊಳಿಸಿಕೊಳ್ಳಬೇಕೆಂದು ಹೇಳಿದರು.



ಬಸವಕಲ್ಯಾಣ ತ್ರಿಪೂರಾಂತದ ಗವಿ ಮಠದಲ್ಲಿ ಪವಿತ್ರ ಶ್ರಾವಣ ಮಾಸದ ನಿಮತ್ತ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಪ್ರವಚನದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯರು ಮಾತನಾಡಿದರು.

ವೀರಣ್ಣ ಶಿಲವಂತ ಮಾತನಾಡಿ ಭಗವಂತನ ಸಾನಿಧ್ಯ ಪಡೆಯಲು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಧರ್ಮಾಚಾರ ಸ್ಥಲವು ಮಾನವನ ಬದುಕಿಗೆ ಮಾರ್ಗ ದರ್ಶಿಯಾಗಿದೆ ಎಂದರು. ನಗರಸಭೆ ಸದಸ್ಯ ನಾಗಪ್ಪ ಚಾಮಲ್ಲೆ ಮಾತನಾಡಿ ಈ ಪವಿತ್ರ ಶ್ರಾವಣ ಮಾಸದಲ್ಲಿ ಗುರುವಿನ ಅಮೃತವಾಣಿ ಕೇಳುವುದರ ಮೂಲಕ ಪುಣ್ಯ ಸಂಪಾದಿಸಿಕೊಳ್ಳುವ ಭಾಗ್ಯ ದೊರೆತಿರುವುದು ಸಂತಸದ ವಿಷಯವಾಗಿದೆ ವೆಂದರು. ಅತಿಥಿಗಳಾಗಿ ಪಾಲ್ಗೊಂಡಿದ್ದ ವೀರಶೇಟ್ಟಿ ಮಲಶೆಟ್ಟಿ ಬೇಲೂರ ಮಾತನಾಡಿದರು. ಬೇಲೂರಿನ ಭಜನಾ ಮಂಡಳಿಯಿಂದ ಭಜನೆ ಮಾಡಿದರು.

ಟ್ರಸ್ಟ್‌ಕಾರ್ಯಧ್ಯಕ್ಷಶರಣಪ್ಪಬಿರಾದಾರ, ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಸವೀತಾ ರಮೇಶ ಸ್ವಾಮಿ, ಗುರುಲಿಂಗಯ್ಯ ಮಠಪತಿ, ಮಲ್ಲರೆಡ್ಡಿ .ಪಾಟೀಲ ಕಿಟ್ಟಾ, ರುದ್ರಮಣಿ ಮಠ, ಪ್ರೊ.ಸೂರ್ಯಕಾಂತ ಶೀಲವಂತ, ಪತ್ರಕರ್ತ ಶಿವಕುಮಾರ ಮಠಪತಿ, ರೇವಣಸಿದ್ದಯ್ಯ ವಸ್ತ್ರದ, ರೇವಣಸಿದ್ದಯ್ಯ ಮಠಪತಿ, ವಿಶ್ವನಾಥ ಬಿರಾದಾರ ಖಂಡಾಳ ಇತರರು ಉಪಸ್ಥಿತರಿದ್ದರು. ಪ್ರೊ. ರುದ್ರೇಶ್ವರ ಗೋರಟಾ ಪ್ರಾರ್ಥಿಸಿದರು. ಬಸವಂತಪ್ಪಾ ಲವಾರೆ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು.

# ತ್ರಿಪುರಾಂತ ಗವಿಮಠ : ದಸರಾ ಉತ್ಸವ



ಬಸವಕಲ್ಯಾಣ : ನಗರದ ತ್ರಿಪುರಾಂತದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠದಲ್ಲಿ ಅಕ್ಟೋಬರ್ 11 ರಂದು ಮಂಗಳವಾರ ಸಾಯಂಕಾಲ 5.30 ಗಂಟೆಗೆ ವಿಜಯ ದಶಮಿ ಉತ್ಸವ ಬನ್ನಿ ಮರದ ಪೂಜೆ ಶ್ರೀ ಷಟಸ್ಥಲ ಪರಬ್ರಹ್ಮೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ದಿವ್ಯ ಸಾನಿಧ್ಯದಲ್ಲಿ ಸಂಭ್ರಮದಿಂದ ಆಚರಿಸಲಾಗುವುದು ಎಂದು ತಿಳಿಸಿದ್ದಾರೆ.

ಪೂಜ್ಯರ ನೇತ್ರತ್ವದಲ್ಲಿ ಸಿಮೋಲ್ಲಂಘನೆ ಹೊರಡಿ ಬನ್ನಿ ಮರಕ್ಕೆ ವಿಶೇಷ ಪೂಜೆ ಸಮರ್ಪಿಸಲಾಗುವುದು. ನಾಡಹಬ್ಬ ದಸರಾ ಆಚರಣೆ ಅದ್ಧೂರಿಯಾಗಿ ಹಮ್ಮಿಕೊಳ್ಳಲಾಗುತ್ತಿದೆ. ಆದಕಾರಣ ಸಕಲ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಗವಿಮಠ ಟ್ರಸ್ಟ್ ಪ್ರಮುಖರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಯುಕ್ತ ಕರ್ನಾಟಕ

ಸೋಮವಾರ, 10, ಅಕ್ಟೋಬರ್, 2016, ಕಲಬುರಗಿ

Scanned with CamScanner

# ‘ಧರ್ಮ ಕೇವಲ ದೇವರ ಆರಾಧನೆಯಲ್ಲ’

**ವಿಕ ಸುದ್ದಿಲೋಕ** ಬಸವಕಲ್ಯಾಣ

ಧರ್ಮ ಎಂದರೆ ಕೇವಲ ದೇವರ ಆರಾಧನೆ ಅಲ್ಲ. ಅದು ಅಹಿಂಸಾ, ಸತ್ಯ ಇತರ ತತ್ವಗಳ ಆಚರಣೆಯಾಗಿದೆ ಎಂದು ಶ್ರೀ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಶ್ರಾವಣ ಮಾಸದ ನಿಮತ್ತ ತ್ರಿಪುರಾಂತನ ಗವಿಮಠದಲ್ಲಿ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ, ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ಸಹಯೋಗದಲ್ಲಿ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಧರ್ಮಾಚಾರ ಸ್ಥಲ ವಿಷಯದ ಕುರಿತು ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ಧರ್ಮ ಮಾರ್ಗದಲ್ಲಿ ನಡೆಯುವಂತೆ ಮಾಡುವುದೂ ಧರ್ಮಾಚಾರವಾಗಿದೆ. ಯಾರಿಗೂ ಅನ್ಯಾಯ ಮಾಡದೆ ನ್ಯಾಯಯುತವಾಗಿ ಬದುಕಬೇಕು ಎಂದರು.

ವೀರಣ್ಣಾ ಶೀಲವಂತ ಮಾತನಾಡಿ, ಭಗವಂತನ ಸಾನ್ನಿಧ್ಯ ಪಡೆಯಲು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಧರ್ಮಾಚಾರ ಸ್ಥಲವು ಮಾನವನ ಬದುಕಿಗೆ ಮಾರ್ಗದರ್ಶಿಯಾಗಿದೆ ಎಂದರು.

ನಗರಸಭೆ ಸದಸ್ಯ ನಾಗಪ್ಪ ಚಾಮಲ್ಲೆ ಮಾತನಾಡಿ, ಭಕ್ತರ ನೆರವಿನಿಂದ ಮಠದ ಅಭಿವೃದ್ಧಿ ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಬೇಕೆಂದು ಹೇಳಿದರು. ವೀರಶೆಟ್ಟಿ ಮಲಶೆಟ್ಟಿ ಬೇಲೂರ ಮಾತನಾಡಿದರು.

ಟ್ರಸ್ಟ್ ಕಾರ್ಯಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ, ಗುರುಲಿಂಗಯ್ಯ ಮಠಪತಿ, ಮಲ್ಲರೆಡ್ಡಿ ಪಾಟೀಲ ಕಿಟ್ಟಾ, ರುದ್ರಮಣಿ ಮಠ, ಪ್ರೊ. ಸೂರ್ಯಕಾಂತ ಶೀಲವಂತ, ಪತ್ರಕರ್ತ ಶಿವಕುಮಾರ ಮಠಪತಿ, ರೇವಣಸಿದ್ದಯ್ಯ ವಸ್ತ್ರದ, ರೇವಣಸಿದ್ದಯ್ಯ ಮಠಪತಿ, ವಿಶ್ವನಾಥ ಬಿರಾದಾರ ಖಂಡಾಳ ಇತರರಿದ್ದರು. ಪ್ರೊ.ರುದ್ರೇಶ್ವರ ಗೋರಟಾ ಪ್ರಾರ್ಥಿಸಿದರು. ಬಸವಂತಪ್ಪ ಲವಾರೆ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು.



ಬಸವಕಲ್ಯಾಣ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಧರ್ಮಾಚಾರ ಸ್ಥಲ ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ವಿಜಯ ಕರ್ನಾಟಕ VK
ಶುಕ್ರವಾರ,19 ಆಗಸ್ಟ್ 2016, ಕಲಬುರಗಿ

ಸಂಯುಕ್ತ ಕರ್ನಾಟಕ
ಶನಿವಾರ, 27, ಆಗಸ್ಟ್, 2016, ಕಲಬುರಗಿ

# ಮನಸ್ಸನ್ನು ಭಗವಂತನಿಗೆ ಅರ್ಪಿಸುವುದೇ ಭಾವ : ಘನಲಿಂಗ ಶ್ರೀ

ಬಸವಕಲ್ಯಾಣ : ಭಾವ ಎಂದರೆ ಮನಸ್ಸನ್ನು ಭಗವಂತನಿಗೆ ಅರ್ಪಿಸುವುದು. ಎಂದರೆ ಭಕ್ತನು ತನ್ನನ್ನು ತಾನು ಗುರುವಿಗೆ ಅರ್ಪಿಸಿ ಕೊಳ್ಳುವುದು ಎಂದರ್ಥ ಎಂದು ಶ್ರೀಗಳಾದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತ್ರಿಪೂರಾಂತದ ಗವಿ ಮಠದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕ ಘಟಕ ಹಾಗೂ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ ಸಹಯೋಗದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ವೀರಶೈವ ಲಿಂಗಾಯತ ಧರ್ಮಗ್ರಂಥವಾದ ಸಿದ್ಧಾಂತ ಶಿಖಾಮಣಿಯಲ್ಲಿಯ ಭಾವಸ್ಥಲ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀಗಳು ಮಾತನಾಡಿದರು.

ಭಾವರ್ಪಿತು ಸ್ಥಲ ಕುರಿತು ಶ್ರೀ ಜಗದ್ಗುರು ರೇಣುಕಾಚಾರ್ಯರು ಶಿಷ್ಯರಾದ ಭೋಧಿಸಿದಂತೆ ಭಾವರ್ಪಿತ ಎಂದರೆ ಭಕ್ತ ಭಗವಂತನ ಕೃಪೆ. ಆ ಭಾವ ಭಕ್ತಿ ಎಂಬ ಪರಿಶುದ್ಧ ಭಾವದಿಂದ ಗುರು ಲಿಂಗ ಜಂಗಮರನ್ನು ಆರಾಧಿಸುವುದೇ ಭಾವರ್ಪಿತ ಸ್ಥಲವಾಗಿದೆ. ನದಿಯ ನೀರು ಸದಾ ಸಮುದ್ರದತ್ತ ಮುಖಮಾಡಿ ಹರಿಯುವಂತೆ ಭಾವ ಎಂದರೆ ಮನಸ್ಸು ಸದಾ ಪರಮಾತ್ಮನಲ್ಲಿ ಲೀನವಾಗಲು ಪ್ರಯತ್ನಿಸಬೇಕು. ಅದಕೋಸ್ಕರ ಮನುಷ್ಯ ಸದಾ ತನು,ಮನ,ಧನ ತ್ರಿವಿಧ ಪೂರ್ವಕ ಭಾವರ್ಪಿತಗೊಳಿಸಿ ಭಗವಂತನ ಕೃಪೆಗೆ ಪಾತ್ರನಾಗಬೇಕು ಎಂದರು.

ನೇತೃತ್ವ ವಹಿಸಿದ್ದ ಸಸ್ತಾಪೂರದ ಶ್ರೀ ಸದಾನಂದ ಅಪ್ಪಗಳವರು ಶ್ರಾವಣ ಮಾಸದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿ ಶ್ರವಣ ಮಾಡಿಕೊಂಡು ಜೀವನ ಪಾವನ 'ಗೊಳಿಸಿಕೊಳ್ಳ ಬೇಕೆಂದರು. ತಾಲೂಕು ಕನ್ನಡ ಸಾಹಿತ್ಯ ಪರಿಷತ ಅಧ್ಯಕ್ಷ ಪ್ರೊ. ರುದ್ರಮಣಿ ಮಠಪತಿ ಮಾತನಾಡಿ ಜೀವಾತ್ಮನು ಭಾವವನ್ನು ಇಷ್ಟ ಲಿಂಗದಲ್ಲಿ ನೆಲೆಗೊಳ್ಳುವಂತೆ ಮಾಡುವುದೇ ಭಾವರ್ಪಿತ ಸ್ಥಲ ಎಂದು ನುಡಿದರು.

ನಿವೃತ ಕೃಷಿ ಅಧಿಕಾರಿ ಮಲ್ಲಿಕಾರ್ಜನ ನಂದಿ ಅಧ್ಯಕ್ಷತೆ ವಹಿಸಿದ್ದರು. ಬಸವಣ್ಣನವರ ಅರಿವು ಮನೆಯ ಭಜನಾ ಮಂಡಳಿಯಿಂದ ಭಜನಾ ಸೇವೆ ಜರುಗಿತು. ವಿರುಪಾಕ್ಷಯ್ಯಾ ಶಿವಲಿಂಗಯ್ಯ ಮಠಪತಿ, ಟ್ರಸ್ಟ ಕಾರ್ಯಾಧ್ಯಕ್ಷಶರಣಪ್ಪಾಬಿರಾದರ, ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ, ಸುಭದ್ರಾಬಾಯಿವೀರಯ್ಯಾಸ್ವಾಮಿ, ಸುನಂದಾ ನಂದಿ, ಶೀಲಾದೇವಿ ಬಸವವಂತಪ್ಪಾ ಲವಾರೆ, ರೇಣುಕಾ ರೇವಣಸಿದ್ದಯ್ಯಾ ಮಠಪತಿ, ಮಡಿವಾಳಪ್ಪಾ ಕುಂಬಾರ, ಲೋಕೇಶಕುಮಾರ ಕಾಗೆ ಉಪಸ್ಥಿತರಿದ್ದರು. ಜ್ಯೋತಿ ಶಿವಪುತ್ರ ಕಾಡಾದಿ ಪ್ರಾರ್ಥಾನೆ ಗೀತೆ ಹಾಡಿದರು ವೀರಣ್ಣಾ ಶೀಲವಂತ ಸ್ವಾಗತಿಸಿದರು. ಶಶಿಕಾಂತ ಶೀಲವಂತ ವಂದಿಸಿದರು. ಪ್ರೋ ರುದ್ರೇಶ್ವರ ಗೋಟಾ್ ನಿರೂಪಿಸಿದರು.



ಬಸವಕಲ್ಯಾಣ ತ್ರಿಪೂರಾಂತದ ಗವಿ ಮಠದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಉಪನ್ಯಾಸಕ ಮಾಲಿಕೆಯಲ್ಲಿ ತಿಪರಾಂತಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

Scanned with CamScanner

## ಸಿದ್ಧಾಂತ ಶಿಖಾಮಣಿ ಕುರಿತು ಉಪನ್ಯಾಸ | ಬಸವಕಲ್ಯಾಣ ಗವಿ ಮಠದಲ್ಲಿ ಆಯೋಜನೆ

# ಧರ್ಮ ಮಾರ್ಗದಲ್ಲಿ ನಡೆಯುವುದೇ ಧರ್ಮಾಚಾರ

**ವಿಜಯವಾಣಿ ಸುದ್ದಿಜಾಲ** ಬಸವಕಲ್ಯಾಣ

ಅನ್ನದಾನ ಮಾಡುವುದು ಧರ್ಮ. ದಶ ಧರ್ಮ ಸೂತ್ರಗಳ ಮಹತ್ವ ತಿಳಿಹೇಳಿ ಧರ್ಮ ಮಾರ್ಗದಲ್ಲಿ ನಡೆಯುವಂತೆ ಮಾಡುವುದೇ ಧರ್ಮಾಚಾರವಾಗಿದೆ ಎಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಪವಿತ್ರ ಶ್ರಾವಣ ಮಾಸದ ನಿಮತ್ತ ಗವಿಮಠದಲ್ಲಿ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ, ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಧರ್ಮಾಚಾರ ಸ್ಥಲ ಕುರಿತು ಉಪನ್ಯಾಸ ಕಾರ್ಯಕ್ರಮ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಯಾರಿಗೂ ಅನ್ಯಾಯ ಮಾಡದೆ ನ್ಯಾಯುತವಾಗಿ ಬದುಕಿ, ಸಂಪತ್ತನ್ನು ಬೇಳಸಬೇಕು. ಅನ್ಯಾಯದಿಂದ ಸಂಪಾದಿಸಿದ ಸಂಪತ್ತು ಶಾಶ್ವತವಲ್ಲ. ಈ ಕುರಿತು ಶ್ರೀ ಜಗದ್ಗುರು ರೇಣುಕಾಚಾರ್ಯರು ಅನ್ಯಾಯದ ಸಂಪತ್ತು ಶಾಶ್ವತವಲ್ಲ ಎಂದು ಭೋದಿಸಿದ್ದಾರೆ ಎಂದರು.



ಬಸವಕಲ್ಯಾಣದಲ್ಲಿ ಶ್ರಾವಣ ಮಾಸದ ನಿಮಿತ್ತ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ವೀರಣ್ಣ ಶೀಲವಂತ, ನಾಗಪ್ಪ ಚಾಮಲೆ ಇದ್ದರು.

ಅಧ್ಯಕ್ಷತೆ ವಹಿಸಿದ್ದ ವೀರಣ್ಣ ಶೀಲವಂತ ಮಾತನಾಡಿ, ಭಗವಂತನ ಸಾನಿಧ್ಯ ಪಡೆಯಲು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಧರ್ಮಾಚಾರ ಸ್ಥಲವು ಮಾನವನ ಬದುಕಿಗೆ ಮಾರ್ಗದರ್ಶಿಯಾಗಿದೆ ಎಂದರು.

ನಗರ ಸಭೆ ಸದಸ್ಯ ನಾಗಪ್ಪ ಚಾಮಲ್ಲೆ, ವೀರಶೇಟ್ಟಿ ಮಲಶೆಟ್ಟಿ ಬೇಲೂರ ಮಾತನಾಡಿದರು. ರಾಷ್ಟಕವಿ ಕುವೆಂಪು ಶಾಲೆಯ ಮಕ್ಕಳಿಂದ ದೇಶ ಭಕ್ತಿ ಬಿಂಬಿಸುವ ನೃತ್ಯ ಪ್ರದರ್ಶಿಸಲಾಯಿತು. ಬೇಲೂರಿನ ಭಜನಾ ಮಂಡಳಯವರಿಂದ ಭಜನೆ ಸೇವೆ ನಡೆಯಿತು.

ಶರಣಪ್ಪ ಬಿರಾದಾರ, ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಸವೀತಾ ರಮೇಶ ಸ್ವಾಮಿ, ಗುರುಲಿಂಗಯ್ಯ ಮಠಪತಿ, ಮಲ್ಲರೆಡ್ಡಿ ಪಾಟೀಲ, ಕಿಟ್ಟಾ, ರುದ್ರಮಣಿ ಮಠ, ಪ್ರೊ.ಸೂರ್ಯಕಾಂತ ಶೀಲವಂತ, ಶಿವಕುಮಾರ ಮಠಪತಿ, ರೇವಣಸಿದ್ದಯ್ಯ ವಸ್ತ್ರದ, ರೇವಣಸಿದ್ದಯ್ಯ ಮಠಪತಿ, ವಿಶ್ವನಾಥ ಬಿರಾದಾರ ಖಂಡಾಳ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI « KALABURAGI
ಶನಿವಾರ
20 ಆಗಸ್ಟ್ 2016
20 AUGUST 2016
5

## ತಡೋಳಾ ಗುರುಕುಲಾಶ್ರಮದಲ್ಲಿ ಸನ್ಮಾನ ಸ್ವೀಕರಿಸಿದ ಸಚಿವ ಈಶ್ವರ ಖಂಡ್ರೆ ಭರವಸೆ

# ಬೀದರ್‌ನಲ್ಲಿ ರೈತ ಸಂಶೋಧನಾ ಕೇಂದ್ರ

**ವಿಜಯವಾಣಿ ಸುದ್ದಿಜಾಲ** ಬಸವಕಲ್ಯಾಣ

ಬೀದರ್ ಜಿಲ್ಲೆಯಲ್ಲಿ ರೈತರ ಸಂಶೋಧನಾ ಕೇಂದ್ರ ಆರಂಭಿಸುವ ನಿಟ್ಟಿನಲ್ಲಿ ಪರಿಶೀಲಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಭರವಸೆ ನೀಡಿದರು.

ತಡೋಳಾ ಗುರುಕುಲಾಶ್ರಮದಲ್ಲಿ ವಿಶ್ವ ಶಾಂತಿ ಟ್ರಸ್ಟ್ ಆಯೋಜಿಸಿದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ರೈತನ ಸಂಶೋಧನೆಗಳನ್ನು ಪ್ರಯೋಗಿಸುವ ಕೇಂದ್ರ ಆರಂಭಿಸಿಸುವ ಬಗ್ಗೆ ತಜ್ಞರೊಂದಿಗೆ ಚರ್ಚಿಸಲಾಗುವುದು ಎಂದರು.

ಜಿಲ್ಲೆಯ ಸಮಗ್ರ ವಿಕಾಸಕ್ಕೆ ತಾವು ಬದ್ಧರಿದ್ದು, ಮಹಿಳೆಯರಿಗಾಗಿ ಗುಡಿ ಕೈಗಾರಿಕೆ, ಹೊಲಿಗೆ ತರಬೇತಿ ಕೇಂದ್ರ ಸೇರಿದಂತೆ ಕೌಶಲ ತರಬೇತಿ ಕೇಂದ್ರ ಆರಂಭಿಸಲು ಒತ್ತು ನೀಡಲಾಗುವುದು. ಜಿಲ್ಲೆಯ ಬಿದ್ರಿ ಕಲೆ ಮತ್ತು ದೇವಣಿ ತಳಿ ಗೋವಂಶ ನಾಡಿನ ಎಲ್ಲೆಡೆ ಪರಿಚಯಿಸಲು ಯೋಜನೆ ರೂಪಿಸಲಾಗುವುದು. ಜಿಲ್ಲೆಯ ನೀರಾವರಿ ಯೋಜನೆಗೆ ಆದ್ಯತೆ ಮೇರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಹೆಚ್ಚಿನ ಅನುದಾನ ಒದಗಿಸಲು ಪ್ರಯತ್ನಿಸುವುದಾಗಿಯೂ ಹೇಳಿದರು.

ನೇತೃತ್ವ ವಹಿಸಿದ್ದ ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಮಾತನಾಡಿ, ಜಿಲ್ಲೆಯಲ್ಲಿ ಹರಿಯುವ ನದಿಗಳ ಆಳ ಹಾಗೂ ಅಗಲ ಹೆಚ್ಚಿಸುವ ಮತ್ತು ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಹರಿಯುವ ಹಳ್ಳಗಳ ನೀರು ತಡೆಗೆ ಯೋಜನೆ ರೂಪಿಸಬೇಕು. ಆಗ್ರೋ ಟೂರಿಜಮ್‌ಗೆ ಜಿಲ್ಲೆಯಲ್ಲಿ ಸಾಕಷ್ಟು ಅವಕಾಶವಿದ್ದು, ಇದಕ್ಕಾಗಿ ಅನುದಾನ ಕಲ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ಕೇಳಿಕೊಂಡರು. ಇದಕ್ಕೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದರು.



ತಡೋಳಾದಲ್ಲಿ ಸಚಿವ ಈಶ್ವರ ಖಂಡ್ರೆ ಅವರನ್ನು ಶ್ರೀ ರಾಜೇಶ್ವರ ಶಿವಾಚಾರ್ಯರು ಸನ್ಮಾನಿಸಿ ಆಶೀರ್ವದಿಸಿದರು.

ರಾಜೇಶ್ವರದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಚನ್ನಮಲ್ಲ ದೇವರು, ಶ್ರೀ ಶಿವಾನಂದ ದೇವರು, ಕಾಯಕಲ್ಪ ರೈತ ಸಮುದಾಯದ ಅಧ್ಯಕ್ಷ ಗುರುಶಾಂತ ಹಿರೇಮಠ, ಬಿಕೆಡಿಬಿ ಸದಸ್ಯ ಶಿವರಾಜ ನರಶೆಟ್ಟಿ, ಗ್ರಾಪಂ ಅಧ್ಯಕ್ಷ ರೇವಣಸಿದ್ಧಪ್ಪ ಬಿರಾದಾರ ಇತರರು ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ತಡೋಳಾ ಗ್ರಾಪಂ ಬಳಿ ಸಚಿವ ಖಂಡ್ರೆ ಅವರನ್ನು ಸ್ವಾಗತಿಸಿ ಸನ್ಮಾನಿಸಲಾಯಿತು. ಮಹಾದೇವ ಯಲ್ಲಾಪಿ, ರಜನೀಶ ಧೂಳೆ, ಶಿವಶರಣ ಹಿರೋಳೆ, ಮಲ್ಲಪ್ಪ ಕಾಂಬಳೆ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI « KALABURAGI
14
ಬುಧವಾರ
24 ಆಗಸ್ಟ್ 2016
24 AUGUST 2016

Scanned with CamScanner

# 'ಕ್ರಿಯಾ, ಜ್ಞಾನ, ಭಾವಗಳ ಸಂಗಮವೇ ಸುಖ ತೃಪ್ತಿಗೆ ಕಾರಣ'

ಬಸವಕಲ್ಯಾಣ : ಶಿವ ತತ್ವ ಪ್ರಾಪ್ತಿಗೆ ಶಿವನೇ ನಾನು ಎಂಬ ಭಾವವು ಕಾರಣ. ಲೌಕಿಕ ಬದುಕಿನಲ್ಲಿ ಕೂಡ ಕ್ರಿಯಾ ಜ್ಞಾನ ಮತ್ತು ಭಾವಗಳ ಸಂಗಮವೇ ಬದುಕಿನ ಸುಖದ ತೃಪ್ತಿಗೆ ಕಾರಣವಾಗುತ್ತದೆ ಎಂದು ಮಠಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತ್ರಿಪುರಾಂತದ ಗವಿ ಮಠದಲ್ಲಿ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯಟ್ರಸ್ಟ್‌ಹಾಗೂಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿರುವ ಪವಿತ್ರ ಶ್ರಾವಣ ಮಾಸ ನಿಮಿತ್ತ ವೀರಶೈವ ಲಿಂಗಾಯತರ ಪವೀತ್ರ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಹಾಗೂ ಪಠಣ ಕಾರ್ಯಕ್ರಮದ ಸಾನಿಧ್ಯ ವಹಿಸಿ ಪ್ರವಚನ ನೀಡಿದ ಶಿವಾಚಾರ್ಯರು ಮಾತನಾಡಿ ಕ್ರೀಯಾ ಜ್ಞಾನ ಮತ್ತು ಭಾವಾಗಮಸ್ಥಲ ಕುರಿತು ಜಗದ್ಗುರು ರೇಣುಕಾಚಾರ್ಯರ ಭೋಧಿಸಿದಂತೆ ಶಿವೋ ಅಮತಿ ಭಾವೋ ಅಪಿ ಶಿವತಾ ಪತಿಕಾನಂ ಜ್ಞಾನಮಂತ್ರಂನ ಆಚಾರಃ



ಬಸವಕಲ್ಯಾಣ : ತ್ರಿಪುರಾಂತದ ಗವಿ ಮಠದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲೆ ಹಾಗೂ ಪಠಣ ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಬಸವರಾಜ ಸ್ವಾಮಿ, ಮಲರೆಡ್ಡಿ ಇತರರಿದ್ದರು.

ಭಾವಯುಕ್ತಾಹ ಶಿವೋ ಭವತೆ ಹಣ್ಣಿನ ರಸದ ಜ್ಞಾನ ಅದನ್ನು ಸೇವಿಸುವ ಕ್ರೀಯೆ ಮತ್ತು ಅದರಿಂದುಂಟಾಗುವ ಭಾವಗಳು ಒಟ್ಟಿಗೆ ಸೇರಿದಾಗ ರಸದ ತೃಪ್ತಿದಾಯಕ ಅನುಭವವಾಗುತ್ತದೆ.

ಹಾಗೇಯೇ ಶಿನಾನಂದವು ಸಿಗಬೇಕಾದರೆ ಶಾಸ್ತ್ರ ಮತ್ತು ಗುರುಗಳ ಮುಖಾಂತರ ಉಂಟಾಗುವ ಶಿವಜ್ಞಾನವು ಕ್ರೀಯಾಜ್ಞಾನ ಮತ್ತು ಶಿವನ ಬಗೆಗಿನ ಭಾವವು ಒಂದಾಗಬೇಕಾಗುತ್ತದೆ ಎಂದು ಇವುಗಳ ಸಮನ್ವಯದಿಂದ ಶಿವಜ್ಞಾನ ಪ್ರಾಪ್ತಿಯಾಗುತ್ತದೆ ಎಂದು ಹೇಳಿ ಶ್ರಾವಣ ಮಾಸದಲ್ಲಿ ಸಕಲ ಭಕ್ತರ ಇಂತಹ ಪ್ರಯತ್ನ ಮಾಡಬೇಕೆಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಿಂಡಿಕೇಟ್ ಬ್ಯಾಂಕ ನಿವೃತ್ತ ಮಾನ್ಯೇಜರ್ ಬಸವರಾಜಸ್ವಾಮಿಮಾತನಾಡಿಗವಿಮಠದಲ್ಲಿ ಆಧ್ಯಾತ್ಮಿಕ ಚಿಂತನೆ ನಡೆಯುತ್ತಿರುವುದು ಸಂತಸದ ಸಂಗತಿ. ಸಮಾಜ ಕಾರ್ಯಕ್ಕೆ ಸಹಕಾರ ನೀಡುವುದಾಗಿ ಎಂದರು.

ಹೇಮರೆಡ್ಡಿ ಮಲ್ಲಮ ಟ್ರಸ್ಟ್‌ನ ಅಧ್ಯಕ್ಷ ಮಲ್ಲರೆಡ್ಡಿ ಸತ್ಯವೇ ದೇವರು ಸತ್ಯವನ್ನೇ ನಂಬಬೇಕು. ಸತ್ಯದ ಮಾರ್ಗದಲ್ಲಿ ನಡೆಯ ಬೇಕೆಂದು ತಿಳಿಸಿ ಗವಿಮಠದ ಜೀರ್ಣೋಧಾರಕ್ಕಾಗಿ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ದಾನ-ದೇಣಿಗೆ ಸಲ್ಲಿಸ ಬೇಕೆಂದು ಕರೆ ನೀಡಿದರು.

ಬೇಲೂರಿನ ಜೈ ಭವಾನಿ ಭಜನಾ ಮಂಡಳಿಯಿಂದ ಭಜನೆ ಕಾರ್ಯಕ್ರಮ ನಡೆಸಿಕೊಟ್ಟರು.ಶರಣಪ್ಪಬಿರಾದಾರ,ವೀರಣ್ಣ ಶೀಲವಂತ, ಪ್ರೊ.ರುದ್ರೇಶ್ವರ ಗೋರ್ಟಾ, ರಾಕೇಶ ಮರವಂತ, ಶಾಂತವೀರ ಸ್ವಾಮಿ, ರುದ್ರಮುನಿ ಹಿರೇಮಠ, ಸವಿತಾ ರಮೇಶ ಸ್ವಾಮಿ, ರೇಣುಕಾ ಮಠಪತಿ, ಶ್ರೀಮತಿ ಲವಾರೆ ಸೇರಿದಂತೆ ಉಪಸ್ಥಿತರಿದ್ದರು. ಪ್ರೊ. ಸೂರ್ಯಕಾಂತ ಶೀಲವಂತ ಸ್ವಾಗತಿಸಿದರು. ಕಾಶಿನಾಥ ಸ್ವಾಮಿ ನಿರೂಪಿಸಿದರು. ರುದ್ರಮುನಿ ಗಚ್ಚಿನಮಠ ವಂದಿಸಿದರು.

ಸಂಯುಕ್ತ ಕರ್ನಾಟಕ ಸೋಮವಾರ, 15, ಆಗಸ್ಟ್, 2016, ಕಲಬುರಗಿ

Scanned with CamScanner

# ಅಂಗವೇ ಲಿಂಗವಾಗಿಸಿಕೊಳ್ಳುವುದೇ ಕಾಯಾರ್ಪಿತ ಸ್ಥಲವಾಗಿದೆ : ಅಭಿನವ ಘನಲಿಂಗಶ್ರೀ

ಬಸವಕಲ್ಯಾಣ : ಕಾಯ ಎಂದರೆ ಅಂಗ. ಗುರುವಿನಿಂದ ಪಡೆದ ಇಷ್ಟ ಲಿಂಗವನ್ನು ಸದಾ ಅಂಗದ ಮೇಲೆ ಧರಿಸಿ ಗುರು ಬೋಧನೆಯಂತೆ ಸದಾ ಇಷ್ಟ ಲಿಂಗಾರ್ಚನೆ ಮಾಡುತ್ತ ಅಂಗವೇ ಲಿಂಗವಾಗಿಸಿಕೊಳ್ಳುವುದೇ ಕಾಯಾರ್ಪಿತ ಸ್ಥಲವಾಗಿದೆ ಎಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತ್ರಿಪುರಾಂತದ ಗವಿಮಠದಲ್ಲಿ ಪವಿತ್ರ ಶ್ರಾವಣ ಮಾಸದ ನಿಮಿತ್ತ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕಾ ಘಟಕ ಹಾಗೂ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರು ಗವಿಮಠ ಟ್ರಸ್ಟ್ ಸಹಯೋಗದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರುಭೋಧಿಸಿದವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿಯಲ್ಲಿಯ ಕಾಯಾರ್ಪಿತ ಸ್ಥಲ ಎಂಬ ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮದ ಸಾನಿಧ್ಯ ವಹಿಸಿದ ಶಿವಾಚಾರ್ಯರು ಮಾತನಾಡಿದರು.

ಕಾಯಾರ್ಪಿತ ಸ್ಥಲದ ಕುರಿತು ಪ್ರತಿಯೊಬ್ಬರಿಗೂ ಗುರು ಬೇಕು. ಗುರುವಿನ ಮಾರ್ಗದರ್ಶನದಿಂದ ಮಾತ್ರ ಭಗವಂತನ ಸಾನಿಧ್ಯ ಪಡೆಯಲು ಸಾಧ್ಯ. ಶರಣರು ಶರಣ ಸತಿ ಲಿಂಗ ಪತಿ ಎಂದು ಕನ್ನಡದಲ್ಲಿ ಮನ ಮುಟ್ಟುವಂತೆ ಸರಳಿಕರಿಸಿದ್ದಾರೆ. ಸಿದ್ಧಾಂತ ಶಿಖಾಮಣಿಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಜಗತ ಪಿತರೌ ಒಂದೇ ಪಾರ್ವತಿ ಪರಮೇಶ್ವರಂ ಎಂಬುದನ್ನೇ ಬಸವಣ್ಣನವರು ಆ ಪರಮಾತ್ಮನನ್ನು ತಂದೆ ನೀನು ತಾಯಿ ನೀನು ಎಂದೆಲ್ಲ ಕೂಡಲ ಸಂಗಮನನ್ನ ಕೊಂಡಾಡಿದ್ದಾರೆ. ಅಂತಹ ಭಗವಂತನಿಗೆ ತನ್ನನ್ನು ತಾನು ಅರ್ಪಿಸಿ ಕೊಂಡವನೇ ಸಾಕ್ಷಾತ ಶಿವ ಸ್ವರೂಪಿ ಎಂದು ಹೇಳಿದರು.



ಬಸವಕಲ್ಯಾಣ ತ್ರಿಪುರಾಂತದ ಗವಿ ಮಠದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಉಪನ್ಯಾಸ ಮಾಲಿಕೆ ಕಾರ್ಯ ಕ್ರಮದಲ್ಲಿ ಪೂಜ್ಯ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಂಜೀವಿನಿ ಆಯುರ್ವೇದ ಚಿಕಿತ್ಸಾ ಕೇಂದ್ರದ ಡಾ. ಬಸವರಾಜ ಸ್ವಾಮಿ ಮಾತನಾಡಿ ಪಂಚ ಸೂತ್ರ ಗವಿಯಲ್ಲಿ ಗಂಗಾಬಿಕೆ, ಹಾವಿನಹಾಳ ಕಲ್ಲಯ್ಯ ಮೊದಲಾದ ಶರಣರಿಗೆ ಇಷ್ಟಲಿಂಗ ದೀಕ್ಷೆ ದಯ ಪಾಲಿಸಿದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಕಲ್ಯಾಣ ಕ್ರಾಂತಿಯ ನಂತರವು ಕಲ್ಯಾಣದಲ್ಲಿಯೆ ನೆಲೆ ನಿಂತು ವೀರಶೈವ ಲಿಂಗಾಯತ ಧರ್ಮ ಉಳಿಸಿ ಬೆಳೆಸಿದ ಮಹಾ ಸತ್ಪುರುಷರಾಗಿದ್ದಾರೆ. ಹಾಗೇಯೆ ಶ್ರೀ ಜಗದ್ಗುರು ರೇಣುಕಾ ಚಾರ್ಯರು ಸಿದ್ಧಾಂತ ಶಿಖಾಮಣಿ "ವೃತ್ತಿಶ್ಚೈತನ್ಯ ಸ್ವರೂಪಿಣಿ" ಎಂದು ಕಾಯಕದ ಮಹತ್ವದ ಕುರಿತು ಬೋಧಿಸಿದರು. ಅದನ್ನೆ ಶಿವ ಶರಣರು 12ನೇ ಶತಮಾನದಲ್ಲಿ ಜನ ಸಾಮಾನ್ಯರಿಗೆ ಅರ್ಥವಾಗುವಂತೆ ಕನ್ನಡದಲ್ಲಿ " ಕಾಯಕವೇ ಕೈಲಾಸ್ " ಎಂದು ಸಾರಿದರು. ಹೀಗಾಗಿ ಶ್ರೀ ಜಗದ್ಗುರು ರೇಣುಕಾ ಚಾರ್ಯರು ಬೋಧಿಸಿದ ಸಂಸ್ಕೃತ ಭಾಷೆಯ ಸಿದ್ಧಾಂತ ಶಿಖಾಮಣಿಯ ಪ್ರಭಾವಸಾರ ಆಗಿರಬಹುದೆಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ ಮಾತನಾಡಿ ಜೀವನ ಸಾರ್ಥಕಗೊಳಿಸಿ ಕೊಳ್ಳಲು ಪ್ರತಿಯೊಬ್ಬರೂ ನಿತ್ಯ ಗುರು ಲಿಂಗ ಜಂಗಮ ಆರಾಧನೆ ಮಾಡಬೇಕು ಎಂದರು. ಪ್ರಸಾದ ಸೇವೆಗೈದ ಚನ್ನವೀರಯ್ಯಾ ಹಿರೇಮಠ ಖಾನಾಪೂರ ಅವರನ್ನ ಸತ್ಕರಿಸಲಾಯಿತು. ಬೇಲೂರಿನ ಅಕ್ಕಮಹಾದೇವಿ ಭಜನಾ ಮಂಡಳಿ ಹಾಗೂ ಈಶ್ವರ ನಗರದ ಶ್ರೀ ರೇವಣಸಿದ್ಧೇಶ್ವರ ಭಜನಾ ಮಂಡಳಿಯವರಿಂದ ಭಜನೆ ಸೇವೆ ಜರುಗಿತು.

ಈ ಸಂದರ್ಭದಲ್ಲಿ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ, ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂದಿ, ವೀರಶೆಟ್ಟಿ ಮಲಶೆಟ್ಟಿ ಬೇಲೂರ, ಮಲ್ಲಿಕಾರ್ಜುನ ಶೀಲವಂತ ಧನ್ನೂರಕರ, ದಿಲೀಪ ಪಾಟೀಲ್ ಬೇಲೂರ, ಶಿವಕುಮಾರ ಮಠ ರಾಯಪಳ್ಳಿ, ರಾಜಕುಮಾರ ದೇಗಾಂವ, ರುದ್ರಮುನಿ ಗಚ್ಚಿನಮಠ, ಬಸವರಾಜ ಪೋಲಿಸ್ ಪಾಟೀಲ್, ಸಿದ್ಧಲಿಂಗ ಮುಳೆ, ಮಲ್ಲಿಕಾರ್ಜುನ ಸ್ವಾಮಿ, ಪ್ರೊ. ರುದ್ರೇಶ್ವರ ಗೋರ್ಟಾ, ಚಂದ್ರಶೇಖರ ಶೀಲವಂತ, ಬಸವರಾಜ ಮಠಪತಿ, ಸುಭದ್ರಾಬಾಯಿ ವೀರಯ್ಯ ಸ್ವಾಮಿ ಶಾಂತಾಬಾಯಿ ದುಂಡಪ್ಪಸೊನ್ನಗಿ, ಚಂದ್ರಪ್ಪ ಶಟಗಾರ, ಶೀಲಾದೇವಿ ಲವಾರೆ, ರೇಣುಕಾ ಮಠಪತಿ, ಸುನಂದಾ ನಂದಿ, ಲಕ್ಷ್ಮಿಬಾಯಿ ಹಿರೆಮಠ, ವಿಲಾಸಮತಿ ಪಾಟೀಲ ಉಪಸ್ಥಿತರಿದ್ದರು. ರೇವಣಸಿದ್ದಯ್ಯ ಮಠಪತಿ ಪ್ರಾರ್ಥಿಸಿದರು. ಪ್ರೊ. ಸೂರ್ಯಕಾಂತ ಶೀಲವಂತ ವಂದಿಸಿದರು. ಕಾಶಿನಾಥ ಸ್ವಾಮಿ ನಿರೂಪಿಸಿದರು.

ಸಂಯುಕ್ತ ಕರ್ನಾಟಕ
ಬುಧವಾರ, 31, ಆಗಸ್ಟ್, 2016, ಕಲಬುರಗಿ

# ಉಪನ್ಯಾಸ ಮಾಲೆ ಸಮಾರೋಪ

ಬಸವಕಲ್ಯಾಣ: ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕದ ಆಶ್ರಯದಲ್ಲಿ ಶ್ರಾವಣ ಮಾಸದ ನಿಮಿತ್ತ ನಡೆದ ಸಿದ್ಧಾಂತ ಶಿಖಾಮಣಿ ನಿತ್ಯ ಪಠಣ ಮತ್ತು ಉಪನ್ಯಾಸ ಮಾಲೆ ಸಮಾರೋಪ ಕಾರ್ಯಕ್ರಮ ಸೆ.1ರಂದು ಬೆಳಗ್ಗೆ 11:00 ಗಂಟೆಗೆ ತ್ರಿಪುರಾಂತ ಗವಿ ಮಠದಲ್ಲಿ ನಡೆಯಲಿದೆ.

ತಡೋಳಾದ ರಾಜೇಶ್ವರ ಶಿವಾಚಾರ್ಯರು ಸಾನ್ನಿಧ್ಯ, ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಲಿದ್ದು, ಶಾಸಕ ಮಲ್ಲಿಕಾರ್ಜುನ ಖೂಬಾ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಹಾಯಕ ಆಯುಕ್ತ ಡಾ। ಶರಣಬಸಪ್ಪ ಕೊಟಪ್ಪಗೋಳ, ಬಿಕೆಡಿಬಿ ಸದಸ್ಯ ಶಿವರಾಜ ನರಶೆಟ್ಟಿ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸುನೀಲ ಪಾಟೀಲ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಸೂರ್ಯಕಾಂತ ಶೀಲವಂತ ವಿಶೇಷ ಉಪನ್ಯಾಸ ನೀಡಲಿದ್ದು, ಗವಿಮಠ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸುವರು ಎಂದು ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ ತಿಳಿಸಿದ್ದಾರೆ.

Scanned with CamScanner

# ಗವಿ ಮಠದಲ್ಲಿ ಶಾಂತಿ ನೆಮ್ಮದಿ ಪ್ರಾಪ್ತಿ : ಖೂಬಾ

ಬಸವಕಲ್ಯಾಣ : ಜಗದ್ಗುರು ಘನಲಿಂಗ ರುದ್ರಮುನಿಯವರ ಗವಿಮಠದಲ್ಲಿ ಭಕ್ತಿಯಿಂದ ಬಂದಂತಹವರಿಗೆ ಸು: ಖ, ಶಾಂತಿ, ನೆಮ್ಮದಿ ಪ್ರಾಪ್ತಿಯಾಗುತ್ತದೆ ಎಂದು ಶಾಸಕ ಮಲ್ಲಿಕಾರ್ಜುನ ಖೂಬಾ ಹೇಳಿದರು.

ತ್ರಿಪುರಾಂತದ ಗವಿಮಠದಲ್ಲಿ ಪವಿತ್ರ ಶ್ರಾವಣ ಮಾಸದ ನಿಮಿತ್ತ ಶ್ರೀಮದ್ವಿರ ಶೈವ ಸದ್ಬೋಧನ ಸಂಸ್ಥೆ ತಾಲೂಕಾ ಘಟಕ ಹಾಗೂ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚ್ಚಾರ್ಯರು ಗವಿಮಠ ಟ್ರಸ್ಟ್ ಸಹಯೋಗದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಭೋಧಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿಯ ಸಮಾರೂಪ ಸಮಾರಂಭವನ್ನು ಉದ್ಘಾಟನೆ ನೆರವೇರಿಸಿ ಮಾತನಾಡಿದ ಶಾಸಕರು ಜಗದ್ಗುರು ರೇಣುಕಾಚಾರ್ಯರ ಮಾನಸ ಪುತ್ರರಾಗಿ ಅವತರಿಸಿದ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರು ಬಹಳಷ್ಟು ಪವಾಡಪುರುಷರಾಗಿದ್ದವರು.ಬೇಡಿದವರಿಗೆ ವರವನ್ನು ಕೊಡುವವರಾಗಿದ್ದರಿಂದ ಅಂತಹವರ ಪುಣ್ಯ ಸ್ಥಳವನ್ನು ಪ್ರೇಕ್ಷಣಿಯ ಸ್ಥಳವನ್ನಾಗಿ ಮಾಡಬೇಕೆಂಬುದು ಆಸೆಯಾಗಿದೆ. ಸ್ವಾರ್ಥದಿಂದ ಬಂದವರಿಗೆ ಗುರುವಿನ ಆಶಿರ್ವಾದ ಸಿಗುವುದಿಲ್ಲ, ಅದೇ ನಿಸ್ವಾರ್ಥದಿಂದ ಬಂದವರಿಗೆ ಗುರುಗಳ ಆಶೀರ್ವಾದ ಸಿಗುತ್ತದೆ. ಚಿಕ್ಕವಯಸ್ಸಿನಲ್ಲಿ ಅಭಿನವ ಶ್ರೀಗಳು ಧಾರ್ಮಿಕ ಕಾರ್ಯಕ್ರಗಳು ಹಮ್ಮಿಕೊಳ್ಳುತ್ತಿರುವುದು ನಿಜಕ್ಕೂ ಒಳ್ಳೆಯ ಸಂಗತಿಯಾಗಿದೆ. ಮಠದ ಅಭಿವೃದ್ಧಿಗಾಗಿ ಸದಾ ಸಹಕರಿಸುವದಾಗಿ ತಿಳಿಸಿ ಮಠದದ ಆವರಣದಲ್ಲಿ ಯಾತ್ರಿ ನಿವಾಸ ನಿರ್ಮಾಣ ಕಾರ್ಯ ಸರಕಾರದಿಂದ ಇಗಾಗಲೇ ಪ್ರಾರಂಭವಾಗಿದೆ ಎಂದರು.



ಬಸವಕಲ್ಯಾಣದ ತ್ರಿಪುರಾಂತದ ಗವಿಮಠದಲ್ಲಿ ಪವಿತ್ರ ಶ್ರಾವಣ ಮಾಸದ ನಿಮಿತ್ತ ಆಯೋಜಿಸಿದ ಸಿದ್ಧಾಂತ ಶಿಖಾಮಣಿಯ ಸಮಾರೂಪ ಸಮಾರಂಭವನ್ನು ಶಾಸಕ ಮಲ್ಲಿಕಾರ್ಜುನ ಎಸ್. ಖೂಬಾ ಉದ್ಘಾಟಿಸಿದರು.

ತಡೋಳಾದ ಪೂಜ್ಯ ರಾಜೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡುತ್ತ ವಚನ ಸಾಹಿತ್ಯ ರಕ್ಷಿಸುವಲ್ಲಿ ಮಹತ್ವದ ಪಾತ್ರವನ್ನುಜಗದ್ಗುರುಘನಲಿಂಗರುದ್ರಮುನಿ ಶಿವಾಚಾರ್ಯರು ವಹಿಸಿದ್ದಾರೆ. ಪುಣ್ಯ ಕ್ಷೇತ್ರದ ಅಭಿವೃದ್ಧಿಗೆ ಕೈಜೋಡಿಸಬೇಕೆಂದು ಹೇಳಿದರು. ಅಲ್ಲದೇ ಕೆರೆಯ ಮಧ್ಯದಲ್ಲಿ ಜಗದ್ಗುರು ರೇಣುಕಾಚಾರ್ಯರು ಹಾಗೂ ಸುತ್ತಲು ಘನಲಿಂಗ ರುದ್ರಮುನಿ ಸೇರಿ ಎಲ್ಲಾ ಶರಣರ ಮೂರ್ತಿಗಳನ್ನು ಸುಂದರವಾಗಿ ಪ್ರತಿಷ್ಠಾಪಿಸಿ ಇತಿಹಾಸ ನಿರ್ಮಿಸುವ ಕಾರ್ಯ ಮಾಡುವುದು ಅವಶ್ಯಕವಾಗಿದೆ ಎಂದು ಶಾಸಕರಿಗೆ ಮನವರಿಗೆ ಮಾಡಿಕೊಟ್ಟರು.

ವಿಶೇಷ ಉಪನ್ಯಾಸ ನೀಡಿದ ಪ್ರೋ. ಸೂರ್ಯಕಾಂತ ಶೀಲವಂತ ಮಾತನಾಡಿ ಲೋಕೋದ್ಧಾರಕ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರು ಎಂಬ ವಿಷಯದ ಕುರಿತು ಮಾತನಾಡಿ ಜಗದ್ಗುರು ಘನಲಿಂಗರು ಆಯುರ್ವೇದ ವೈದ್ಯರಾಗಿ, ಕಾಲಜ್ಞಾನಿಗಳಾಗಿ, ವೀರಶೈವ ಲಿಂಗಾಯತ ಧರ್ಮವನ್ನು ಪ್ರಸಾರ ಮಾಡುತ್ತ ಕ್ರಾಂ-ತಿಯ ನಂತರವು ಕಲ್ಯಾಣದಲ್ಲಿ ಉಳಿದು ವಚನ ಸಾಹಿತ್ಯವನ್ನು ಸಂಗ್ರಹಿಸಿ ಉಳಿವಿಗೆ ಕೊಂಡೋಯ್ದು ರಕ್ಷಿಸುವುದರ ಮೂಲಕ ಇವತ್ತಿನ ವಚನ ಸಾಹಿತ್ಯದ ಉಳಿವಿಗೆ ಕಾರಣರಾದ ಮಹಾಪುರುಷರಾಗಿದ್ದಾರೆ ಎಂದರು. ಸಂಸ್ಥಾನ ಮಠದ ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತ್ರತ್ವ ವಹಿಸಿದ್ದರು.

ವೇದಿಕೆಯ ಮೇಲೆ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸುನೀಲ್ ಪಾಟೀಲ್, ಅಧ್ಯಕ್ಷತೆಯನ್ನು ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆಯ ಅಧ್ಯಕ್ಷ ವೀರಣ್ಣ ಶೀಲವಂತ ಉಪಸ್ಥಿತರಿದ್ದರು. ಪ್ರೋ. ರುದ್ರೇಶ್ವರ ಸ್ವಾಮಿ ಗೋರ್ಟಾ, ಕಾಶಿನಾಥ ಬಿ. ಸ್ವಾಮಿ ಇದ್ದರು. ಈ ಸಂದರ್ಭದಲ್ಲಿ ಜೆ.ಡಿ.ಎಸ್. ಜಿ.ಪಂ ಮಾಜಿ ಸದಸ್ಯ ಸುಧಾಕರ ಮದನೆ, ಮುಖಂಡ ಕೇಶಪ್ಪ ಬಿರಾದಾರ, ಕಾಳಿದಾಸ ಜಾಧವ, ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ, ನಿವೃತ್ತ ಶಿಕ್ಷಣಾಧಿಕಾರಿ ಬಸವರಾಜ ಮಠಪತಿ, ಮಲ್ಲಿಕಾರ್ಜುನ ನಂದಿ, ವಿಶ್ವನಾಥಪ್ಪ ಬಿರಾದಾರ, ಗುರುಲಿಂಗಯ್ಯ ಕಟಗಿಮಠ, ರಮೇಶ ರಾಜೋಳೆ ಉಪಸ್ಥಿತರಿದ್ದರು.

Scanned with CamScanner

ಉಪನ್ಯಾಸ ಸಮಾರೋಪ ■ ಕಷ್ಟಗಳಿಂದ ಹೊರಬರಲು ಬೇಕು ಗುರು ಮಾರ್ಗದರ್ಶನ

# ನೆಮ್ಮದಿ ಬದುಕಿಗೆ ಪೂಜೆ-ಪ್ರಾರ್ಥನೆ ಅವಶ್ಯ

ಬಸವಕಲ್ಯಾಣ: ನೆಮ್ಮದಿ ಬದುಕಿಗೆ ಪೂಜೆ, ಪ್ರಾರ್ಥನೆ, ದೇವರ ಸ್ಮರಣೆ ಅವಶ್ಯ ಎಂದು ಶಾಸಕ ಮಲ್ಲಿಕಾರ್ಜುನ ಖೂಬಾ ಹೇಳಿದರು.

ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠ ಹಾಗೂ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕು ಘಟಕದ ಆಶ್ರಯದಲ್ಲಿ ತ್ರಿಪುರಾಂತ ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ನಡೆದ ಸಿದ್ಧಾಂತ ಶಿಖಾಮಣಿ ಕುರಿತ ಉಪನ್ಯಾಸ ಮಾಲೆ ಸಮಾರೋಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಮಾತನಾಡಿದರು.

ಭಕ್ತಿ ಮಾರ್ಗದ ಜತೆಗೆ ಗುರುವಿನ ಮಾರ್ಗದರ್ಶನದಲ್ಲಿ ನಾವೆಲ್ಲರು ನಡೆಯಬೇಕಿದೆ. ಜೀವನದಲ್ಲಿ ಎದುರಾಗುವ ಕಷ್ಟಗಳಿಂದ ಹೊರ ಬರಲು ಗುರು ಮಾರ್ಗದರ್ಶನ ಬೇಕು. ಕಷ್ಟ ಬಂದಾಗ ದೇವರನ್ನು ನೆನೆಯದೇ ಪ್ರತಿನಿತ್ಯ ದೇವರಲ್ಲಿ ಗುರುಗಳಲ್ಲಿ ಭಕ್ತಿ ಇಡಬೇಕು ಎಂದು ಹೇಳಿದರು. ಸಾನ್ನಿಧ್ಯ ವಹಿಸಿದ್ದ ತಡೋಳಾದ ರಾಜೇಶ್ವರ ಶಿವಾಚಾರ್ಯರು ಮಾತನಾಡಿ, ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠ ಅಭಿವೃದ್ಧಿಗಾಗಿ ಭಕ್ತರ ಸಹಾಯ, ಸಹಕಾರ ಅವಶ್ಯಕವಾಗಿದೆ ಎಂದು ಹೇಳಿದರು.



ಬಸವಕಲ್ಯಾಣ: ತ್ರಿಪುರಾಂತ ಗವಿಮಠದಲ್ಲಿ ನಡೆದ ಉಪನ್ಯಾಸ ಮಾಲೆ ಸಮಾರೋಪ ಕಾರ್ಯಕ್ರಮವನ್ನು ಶಾಸಕ ಮಲ್ಲಿಕಾರ್ಜುನ ಖೂಬಾ ಉದ್ಘಾಟಿಸಿದರು.

ಅಧ್ಯಕ್ಷತೆ ವಹಿಸಿದ್ದ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಮಾತನಾಡಿ,

ಗವಿಮಠದಲ್ಲಿ ಯಾತ್ರಿ ನಿವಾಸ ನಿರ್ಮಾಣಕ್ಕಾಗಿ ಸರ್ಕಾರದಿಂದ 50 ಲಕ್ಷ ರೂ. ಅನುದಾನ ಮಂಜೂರಾಗಿ ಕೆಲಸ ಆರಂಭವಾಗಿದೆ ಎಂದು ಹೇಳಿದರು.

ಸೂರ್ಯಕಾಂತ ಶೀಲವಂತ ವಿಶೇಷ ಉಪನ್ಯಾಸ ನೀಡಿದರು.

ನೇತೃತ್ವ ವಹಿಸಿದ್ದ ತ್ರಿಪುರಾಂತರದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸುನೀಲ ಪಾಟೀಲ, ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷ ವೀರಣ್ಣ ಶೀಲವಂತ ಇದ್ದರು.

ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಸ್ವಾಗತಿಸಿದರು. ರುದ್ರೇಶ್ವರ ಸ್ವಾಮಿ ಗೋರ್ಟಾ ನಿರೂಪಿಸಿದರು. ಕಾಶಿನಾಥ ಸ್ವಾಮಿ ವಂದಿಸಿದರು.

ಕಲಬುರಗಿ ಉದಯವಾಣಿ
ಶುಕ್ರವಾರ | ಸೆಪ್ಟೆಂಬರ್ | 2 | 2016

ಪ್ರಜಾವಾಣಿ
ಶುಕ್ರವಾರ • ಸೆಪ್ಟೆಂಬರ್ 2, 2016

ತಡೋಳಾ ರಾಜೇಶ್ವರ ಶಿವಾಚಾರ್ಯರ ಆಗ್ರಹ

# ‘ರೇವಣಸಿದ್ಧರ ಪ್ರತಿಮೆ ನಿರ್ಮಿಸಿ’

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ‘ತ್ರಿಪುರಾಂತ ಕೆರೆಯ ಮಧ್ಯದಲ್ಲಿ ರೇವಣಸಿದ್ಧರ ಮತ್ತು ಘನಲಿಂಗ ರುದ್ರಮುನಿ ಶಿವಾಚಾರ್ಯರ ಬೃಹತ್ ಪ್ರತಿಮೆ ನಿರ್ಮಿಸಬೇಕು’ ಎಂದು ತಡೋಳಾ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ ಆಗ್ರಹಿಸಿದರು.

ತ್ರಿಪುರಾಂತ ಗವಿಮಠದಲ್ಲಿ ಗುರುವಾರ ನಡೆದ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಗ್ರಂಥ ಪ್ರವಚನಮಾಲೆಯ ಸಮಾರೋಪದಲ್ಲಿ ಅವರು ಮಾತನಾಡಿದರು.

‘ರೇವಣಸಿದ್ಧರು ಕೆರೆಯ ನಿರ್ಮಾತೃ. ಆದ್ದರಿಂದ, ಅವರ ಪ್ರತಿಮೆ ನಿರ್ಮಿಸು-ವುದು ಅವಶ್ಯ. ಇದಲ್ಲದೆ ಸುತ್ತಲಿನಲ್ಲಿ 12ನೇ ಶತಮಾನದ ವಿವಿಧ ಶರಣರ ಪ್ರತಿಮೆಗಳನ್ನು ಕೂಡ ಪ್ರತಿಷ್ಠಾಪಿಸ-ಬೇಕು. ಶರಣರನ್ನು ಬಿಟ್ಟು ಘನಲಿಂಗ ರುದ್ರಮುನಿ ಶಿವಾಚಾರ್ಯರಿಲ್ಲ. ಅವರ ಕೆಲ ವಚನಗಳು ಹಸ್ತಪ್ರತಿಯಲ್ಲಿದ್ದು ಅವುಗಳನ್ನು ಪ್ರಕಟಿಸಬೇಕು. ಶರಣರ ಬಗ್ಗೆ ಸತ್ಯ ಸಂಶೋಧಿಸಬೇಕು. ವಾಸ್ತವ-ವನ್ನು ಜನರೆದುರಿಗೆ ಇಡುವ ಕಾರ್ಯ-ವಾಗಬೇಕು. ಸಿದ್ಧಾಂತ ಶಿಖಾಮಣಿಯಲ್ಲಿ ಲೋಕೋದ್ಧಾರದ ತತ್ವಗಳಿದ್ದು ಅದರ ಪಠಣ ಎಲ್ಲೆಡೆ ನಡೆಯಲಿ’ ಎಂದರು.

ಶಾಸಕ ಮಲ್ಲಿಕಾರ್ಜುನ ಖೂಬಾ ಮಾತನಾಡಿ, ಗವಿಮಠವು ಐತಿಹಾಸಿಕ ಮಹತ್ವದ್ದಾಗಿದೆ. ಎದುರಲ್ಲಿ ಬೃಹತ್ ಕೆರೆ, ಗಿಡಮರ ಇಲ್ಲಿನ ಪರಿಸರದ ಸೌಂದರ್ಯ ಹೆಚ್ಚಿಸಿದ್ದುಮ ಧ್ಯಾನಕ್ಕೆ ಪ್ರಶಸ್ತ ಸ್ಥಳವಾಗಿದೆ. ಕೆರೆಯಲ್ಲಿ ಅಭಿವೃದ್ಧಿ ಮಂಡಳಿಯಿಂದ ಬಸವಾದಿ ಶರಣರ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲು ಒತ್ತಾಯಿಸಲಾಗುವುದು ಎಂದರು.



ಬಸವಕಲ್ಯಾಣದಲ್ಲಿ ಗುರುವಾರ ನಡೆದ ಸಿದ್ಧಾಂತ ಶಿಖಾಮಣಿ ಗ್ರಂಥ ಪ್ರವಚನಮಾಲೆ ಸಮಾರೋಪವನ್ನು ಶಾಸಕ ಮಲ್ಲಿಕಾರ್ಜುನ ಖೂಬಾ ಉದ್ಘಾಟಿಸಿದರು. ರಾಜೇಶ್ವರ ಶಿವಾಚಾರ್ಯರು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸುನೀಲ ಪಾಟೀಲ ಪಾಲ್ಗೊಂಡಿದ್ದರು

**ಗವಿಮಠದ ಆವರಣದಲ್ಲಿ ₹50 ಲಕ್ಷ ವೆಚ್ಚದಲ್ಲಿ ಯಾತ್ರಿ ನಿವಾಸ ನಿರ್ಮಿಸಲಾಗುತ್ತಿದೆ. ಎದುರಿನ ತ್ರಿಪುರಾಂತ ಕೆರೆಯ ವಿಕಾಸಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ**

**ಮಲ್ಲಿಕಾರ್ಜುನ ಖೂಬಾ**
ಶಾಸಕ

ಪುಣ್ಯಕೋಟಿ ಕಾಲೇಜಿನ ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಮಾತನಾಡಿ, ಘನಲಿಂಗ ರುದ್ರಮುನಿ ಶಿವಾಚಾರ್ಯರು ಹಲವು ಲೋಕೋದ್ಧಾರದ ಕಾರ್ಯ ಕೈಗೊಂಡಿದ್ದಾರೆ. ಕಾಲಜ್ಞಾನ ಮತ್ತಿತರೆ ವಚನಗಳನ್ನು ರಚಿಸಿದ್ದಾರೆ ಎಂದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನಿಧ್ಯ ವಹಿಸಿದ್ದರು. ಬಿಜೆಪಿ ಜಿಲ್ಲಾ ಘಟಕದ ಉಪಾಧ್ಯಕ್ಷ ಸುನೀಲ ಪಾಟೀಲ, ಸದ್ಬೋಧನಾ ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ, ಮಠ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ ಉಪಸ್ಥಿತ-ರಿದ್ದರು. ಶ್ರೀಗುರು ಮಹಾಲಿಂಗೇಶ್ವರ ಶಾಲೆ ಮಕ್ಕಳಿಂದ ವಚನ ನೃತ್ಯ ನಡೆಯಿತು. ಬೇಲೂರ ಮತ್ತು ಈಶ್ವರ ನಗರ ಭಜನಾ ತಂಡದವರಿಂದ ಭಜನೆ ಹಮ್ಮಿಕೊಳ್ಳಲಾಗಿತ್ತು. ಕೃಷಿ ಇಲಾಖೆಯ ನಿವೃತ್ತ ಅಧಿಕಾರಿ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಉಪನ್ಯಾಸಕ ರುದ್ರೇಶ್ವರ ಗೋರಟಾ ನಿರೂಪಿಸಿದರು. ಕಾಶಿನಾಥಸ್ವಾಮಿ ವಂದಿಸಿದರು.

Scanned with CamScanner

### ಗವಿಮಠದಲ್ಲಿ ಶ್ರಾವಣದ ಉಪನ್ಯಾಸ ಮಾಲೆ ಸಮಾರೋಪದಲ್ಲಿ ಸರ್ಕಾರಕ್ಕೆ ಖೂಬಾ ಒತ್ತಾಯ

# ಬಿಕೆಡಿಬಿಗೆ 250 ಕೋಟಿ ಕೊಡಿ

**■ ವಿಜಯವಾಣಿ ಸುದ್ದಿಜಾಲ** ಬಸವಕಲ್ಯಾಣ

ಬಸವಕಲ್ಯಾಣ ಅಭಿವೃದ್ಧಿ ಮಂಡಳಿಗೆ ಸರ್ಕಾರ 250 ಕೋಟಿ ಅನುದಾನ ನೀಡಬೇಕು. ಇಲ್ಲವಾದರೆ ಭಕ್ತರಿಂದ ದೇಣಿಗೆ ಸಂಗ್ರಹಿಸಿ ಶರಣರ ಸ್ಮಾರಕಗಳ ಅಭಿವೃದ್ಧಿ ಮಾಡಲಾಗುವುದು ಎಂದು ಶಾಸಕ ಮಲ್ಲಿಕಾರ್ಜುನ ಖೂಬಾ ಹೇಳಿದರು.

ತ್ರಿಪುರಾಂತ ಗವಿ ಮಠದಲ್ಲಿ ಶ್ರಾವಣ ನಿಮಿತ್ತ ಹಮ್ಮಿಕೊಂಡ ಸಿದ್ಧಾಂತ ಶಿಖಾಮಣಿ ಕುರಿತ ಉಪನ್ಯಾಸ ಮಾಲೆ ಸಮಾರೋಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಿಕೆಡಿಬಿಗೆ ಅನುದಾನ ಕೊರತೆಯಿಂದ ಅಭಿವೃದ್ಧಿ ಕೆಲಸಗಳಿಗೆ ಹಿನ್ನಡೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನೆಮ್ಮದಿ ಬದುಕಿಗೆ ಪೂಜೆ, ಪ್ರಾರ್ಥನೆ, ದೇವ ಸ್ಮರಣೆ ಅಗತ್ಯ. ಭಕ್ತಿ ಮಾರ್ಗ, ಗುರುವಿನ ಮಾರ್ಗದರ್ಶನದಲ್ಲಿ ನಾವೆಲ್ಲರೂ ನಡೆಯಬೇಕಿದೆ. ಕಷ್ಟ ಬಂದಾಗ ದೇವರನ್ನು ನೆನೆಯದೆ ಸದಾ ದೇವರು, ಗುರುಗಳಲ್ಲಿ ಭಕ್ತಿ ಇಡಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಮಾತನಾಡಿ, ನಮ್ಮ ಸಂಸ್ಕೃತಿ ರಕ್ಷಣೆ ಮಾಡಬೇಕು. ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿ ಮಠ ಅಭಿವೃದ್ಧಿಗೊಳಿಸಬೇಕಿದ್ದು, ಭಕ್ತರ ನೆರವು ಅವಶ್ಯಕವಾಗಿದೆ ಎಂದರು. ಮಠದ ಪರಂಪರೆ ಜತೆಗೆ ತ್ರಿಪುರಾಂತ ಶ್ರೀಗಳು ಜನಪರ ಕಾರ್ಯಗಳನ್ನು ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಅಧ್ಯಕ್ಷತೆ ವಹಿಸಿದ್ದ ಶರಣಪ್ಪ ಬಿರಾದಾರ ಮಾತನಾಡಿ, ಗವಿ ಮಠದಲ್ಲಿ 50 ಲಕ್ಷ ರೂ. ವೆಚ್ಚದ ಯಾತ್ರಿ ನಿವಾಸ ಕೆಲಸ ಆರಂಭಿಸಲಾಗಿದೆ ಎಂದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಪ್ರೊ.ಸೂರ್ಯಕಾಂತ ಶೀಲವಂತ ವಿಶೇಷ ಉಪನ್ಯಾಸ ನೀಡಿದರು. ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸುನೀಲ ಪಾಟೀಲ್, ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ವೀರಣ್ಣ ಶೀಲವಂತ ಉಪಸ್ಥಿತರಿದ್ದರು. ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಕಾಶೀನಾಥ ಬಿ.ಸ್ವಾಮಿ ವಂದಿಸಿದರು. ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ನಿರೂಪಿಸಿದರು. ಶ್ರೀ ಗುರು ಮಹಾಲಿಂಗೇಶ್ವರ ಶಾಲೆ ಮಕ್ಕಳ ನೃತ್ಯ ಎಲ್ಲರ ಗಮನ ಸೆಳೆಯಿತು.

> 100 ಎಕರೆ ಪ್ರದೇಶದಲ್ಲಿ ಅಕ್ಷರಧಾಮ ಮಾದರಿಯಲ್ಲಿ ಬಸವಕಲ್ಯಾಣದಲ್ಲಿ ಹೊಸದಾಗಿ ಶ್ರೀ ಬಸವೇಶ್ವರ ದೇವಸ್ಥಾನ ನಿರ್ಮಿಸುವ ಯೋಜನೆ ಇದೆ. ಇದಕ್ಕಾಗಿ ಸ್ಥಳ ಗುರುತಿಸಲಾಗುತ್ತಿದೆ. ಐತಿಹಾಸಿಕ ತ್ರಿಪುರಾಂತ ಕೆರೆ ತೀರದಲ್ಲಿ ಶರಣ ಮೂರ್ತಿಗಳನ್ನು ಸ್ಥಾಪಿಸುವ ಸಂಬಂಧ ಯೋಜನೆ ರೂಪಿಸಿ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಲಾಗಿದೆ.
>
> । ಮಲ್ಲಿಕಾರ್ಜುನ ಖೂಬಾ ಬಸವಕಲ್ಯಾಣ ಶಾಸಕ



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಶ್ರಾವಣ ನಿಮಿತ್ತ ಹಮ್ಮಿಕೊಂಡ ಉಪನ್ಯಾಸ ಮಾಲೆ ಸಮಾರೋಪ ಕಾರ್ಯಕ್ರಮವನ್ನು ಶಾಸಕ ಮಲ್ಲಿಕಾರ್ಜು ಖೂಬಾ ಉದ್ಘಾಟಿಸಿದರು. ಶ್ರೀ ರಾಜೇಶ್ವರ ಶಿವಾಚಾರ್ಯರು, ತ್ರಿಪುರಾಂತ ಶ್ರೀ, ಸುನೀಲ ಪಾಟೀಲ್, ಪ್ರೊ.ಸೂರ್ಯಕಾಂತ ಶೀಲವಂತ, ಮಾಣಿಕಪ್ಪ ಬಿರಾದಾರ ಇದ್ದರು.

> ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರು ಅದ್ವಿತೀಯ ಪಾಂಡಿತ್ಯ ಹೊಂದಿದ್ದರು. ಕಾಲ ಜ್ಞಾನಿ, ತತ್ವ ಜ್ಞಾನಿಯಾಗಿದ್ದರು. ಅವರು ಕಾಲ ಜ್ಞಾನದ 100 ವಚನಗಳನ್ನು ರಚಿಸಿದ್ದಾರೆ.
>
> । ಪ್ರೊ.ಸೂರ್ಯಕಾಂತ ಶೀಲವಂತ

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI « KALABURAGI
4 | ಶುಕ್ರವಾರ 2 ಸೆಪ್ಟೆಂಬರ್ 2016
2 SEPTEMBER 2016
ಶುಕ್ರವಾರ,2 ಸೆಪ್ಟೆಂಬರ್ 2016,ಕಲಬುರಗಿ

# 100 ಎಕರೆಯಲ್ಲಿ ಬಸವೇಶ್ವರ ದೇವಸ್ಥಾನ ನಿರ್ಮಾಣ: ಖೂಬಾ

**■ ವಿಕ ಸುದ್ದಿಲೋಕ** ಬಸವಕಲ್ಯಾಣ

ಈಗಿರುವ ಬಸವೇಶ್ವರ ದೇವಸ್ಥಾನ ಸಣ್ಣದಾಗಿರುವುದರಿಂದ ಸುಮಾರು 100 ಎಕರೆಯಲ್ಲಿ ದೇವಸ್ಥಾನ ನಿರ್ಮಿಸಿ ಎಲ್ಲ 770 ಶರಣರ ವಚನಗಳು ಹಾಕಲಾಗುವುದು. ಇದಕ್ಕಾಗಿ ಈಗಾಗಲೇ ಸ್ಥಳ ಗುರುತಿಸಲಾಗಿದೆ ಎಂದು ಶಾಸಕ ಮಲ್ಲಿಕಾರ್ಜುನ ಎಸ್.ಖೂಬಾ ಹೇಳಿದರು.

ತ್ರಿಪುರಾಂತನ ಗವಿ ಮಠದಲ್ಲಿ ಶ್ರಾವಣ ಮಾಸದ ನಿಮಿತ್ಯ ಆಯೋ ಜಿಸಿದ್ದ ಸಿದ್ಧಾಂತ ಶಿಖಾಮಣಿ ನಿತ್ಯ ಪಠಣ ಹಾಗೂ ಉಪನ್ಯಾಸ ಮಾಲೆ ಸಮಾರೋಪ ಸಮಾರಂಭದಲ್ಲಿ ಮಾತನಾ ಡಿದರು. ಗುರು ಹಾಗೂ ಭಕ್ತಿ ಇದ್ದಲ್ಲಿ ಎಂದಿಗೂ ಶಕ್ತಿ ಕುಗ್ಗುವುದಿಲ್ಲ. ಹೀಗಾಗಿ ಗುರುಗಳು ತೋರಿದ ಮಾರ್ಗ ದಲ್ಲಿ ಎಲ್ಲರೂ ನಡೆಯಬೇಕಿದೆ. ವೀರಶೈವ ಲಿಂಗಾಯತ ಸ್ವಾಮೀಜಿ ಗಳಲ್ಲಿಯೇ ಒಡಕಿರುವುದರಿಂದ ಲಿಂಗಾ ಯತರಿಗೆ ಪ್ರಾತಿನಿಧ್ಯ ಸಿಗುತ್ತಿಲ್ಲ, ಹೀಗಾಗಿ ಎಲ್ಲರೂ ಒಂದಾಗಿ ವೀರಶೈವ ಲಿಂಗಾಯತ ಧರ್ಮದಲ್ಲಿ ನಡೆದರೆ ಎಲ್ಲವೂ ಸಿಗಲು ಸಾಧ್ಯ. ತ್ರಿಪುರಾಂತ ಕೆರೆ ಅಭಿವೃದ್ಧಿಗಾಗಿ ಈಗಾಗಲೇ 3 ಕೋಟಿ ರೂ. ಬಿಡುಗಡೆಗೊಳಿಸಿ ಕೆರೆ ಅಭಿವೃದ್ಧಿಗೊಳಿಸುವುದರ ಜೊತೆಗೆ ಕೆರೆಯ ದಡದಲ್ಲಿ ಶರಣರ ಚಿತ್ರಗಳು ಅಳವಡಿಸಬೇಕು ಎಂದು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಬಿಕೆಡಿಬಿಗೆ 250ಕೋಟಿ ರೂ. ಬಿಡುಗಡೆಗೊಳಿಸಬೇಕು. ಇಲ್ಲವಾದರೆ ಭಕ್ತರ ಬಳಿ ಹೋಗಿ ಚಂದಾ ಮಾಡಿ ಹಣ ಸಂಗ್ರಹಿಸಿ ಬಸವಕಲ್ಯಾಣದಲ್ಲಿ ಶರಣರ ಸ್ಮಾರಕಗಳು ಅಭಿವೃದ್ಧಿಗೊಳಿಸಲಾಗುವುದು ಎಂದರು. ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಮಾತನಾಡಿ, ಗವಿ ಮಠದಲ್ಲಿ ಯಾತ್ರಿ ನಿವಾಸಕ್ಕಾಗಿ 50 ಲಕ್ಷ ರೂ. ಮಂಜೂರು ಮಾಡಲಾಗಿದ್ದು, ಕೆಲಸ ಆರಂಭಿಸ ಲಾಗಿದೆ ಎಂದರು. ತಡೋಳಾದ ರಾಜೇಶ್ವರ ಶಿವಾಚಾರ್ಯರು, ಪ್ರಾಚಾ ರ್ಯ ಸೂರ್ಯಕಾಂತ ಶೀಲವಂತ ಮಾತನಾಡಿದರು. ತ್ರಿಪುರಾಂತನ ಶ್ರೀ ಘನಲಿಂಗ ರುದ್ರಮುನಿ ಶಿವಾಚಾ ರ್ಯರು, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸುನೀಲ ಎಂ.ಪಾಟೀಲ, ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷ ವೀರಣ್ಣ ಎಸ್.ಶೀಲವಂತ ಉಪಸ್ಥಿತ ರಿದ್ದರು. ಶ್ರೀ ಗುರು ಮಹಾಲಿಂಗೇಶ್ವರ ಶಾಲೆ ಮಕ್ಕಳ ನೃತ್ಯ ಎಲ್ಲರ ಗಮನ ಸೆಳೆಯಿತು. ಬಸವಂತಪ್ಪ ಲವಾರೆ ಸ್ವಾಗತಿಸಿದರು. ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ನಿರೂಪಿಸಿದರು, ಕಾಶಿನಾಥ ಬಿ.ಸ್ವಾಮಿ ವಂದಿಸಿದರು. ಮಠದಲ್ಲಿ ಪ್ರಸಾದವನ್ನು ನೆರೆದ ಭಕ್ತರು ಸ್ವೀಕರಿಸಿದರು.



ಬಸವಕಲ್ಯಾಣದ ತ್ರಿಪುರಾಂತ ಗವಿ ಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ನಿತ್ಯ ಪಠಣ ಹಾಗೂ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭವನ್ನು ಶಾಸಕ ಮಲ್ಲಿಕಾರ್ಜುನ ಎಸ್.ಖೂಬಾ ಉದ್ಘಾಟಿಸಿದರು.

ವಿಜಯ ಕರ್ನಾಟಕ VK

Scanned with CamScanner

# ಶಿಷ್ಯ ಗುರುವಿನ ಆರಾಧಕ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಗುರು ಹಾಗೂ ಶಿಷ್ಯ ಸಂಬಂಧ ಆಧ್ಯಾತ್ಮಿಕ ಸಂಬಂಧವಾಗಿದೆ ಎಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತ್ರಿಪುರಾಂತನ ಗವಿಮಠದಲ್ಲಿ ಪವಿತ್ರ ಶ್ರಾವಣಮಾಸದ ನಿಮಿತ್ತ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕ ಘಟಕ ಹಾಗೂ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ ಸಂಯುಕ್ತಾಶ್ರಯದಲ್ಲಿ ಸಿದ್ಧಾಂತ ಶಿಖಾಮಣಿಯಲ್ಲಿ ಶಿಷ್ಯಸ್ಥಲ ಎಂಬ ವಿಷಯ ಕುರಿತು ಮಾತನಾಡಿದ ಅವರು, ಗುರುವು ಶಿಷ್ಯನಿಗೆ ಇಷ್ಟಲಿಂಗ ದೀಕ್ಷೆ ಕೊಟ್ಟ ನಂತರ ಗುರು ಶಿಷ್ಯರಲ್ಲಿ ಅವಿನಾಭಾವ ಸಂಬಂಧ ಮೂಡುತ್ತದೆ. ಅಂಥಾ ಶಿಷ್ಯ ಗುರುಬೋಧನೆಯಂತೆ ಧರ್ಮಮಾರ್ಗದಲ್ಲಿ ಸಾಗಬೇಕು ಎಂದು ಹೇಳಿದರು.

ನೇತೃತ್ವ ವಹಿಸಿದ ರಾಜೇಶ್ವರನ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ಧ ರಾಷ್ಟಕವಿ ಕುವೆಂಪು ಶಾಲೆ ಅಧ್ಯಕ್ಷ ಪ್ರಕಾಶ ಬಿರಾದಾರ ಮಾತನಾಡಿದರು. ನಿವೃತ ಶಿಕ್ಷಕ ಬಾಬುರಾವ ಉಳ್ಳೆ ಅವರನ್ನು ಸತ್ಕರಿಸಲಾಯಿತು.




ವಿಜಯವಾಣಿ ಚಿತ್ರ

ಬಸವಕಲ್ಯಾಣ ತ್ರಿಪುರಾಂತದ ಗವಿಮಠದಲ್ಲಿ ಶಿಷ್ಯಸ್ಥಲ ವಿಷಯ ಕುರಿತ ಉಪನ್ಯಾಸದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶ್ರೀಗಳು ಮಾತನಾಡಿದರು.

ಟ್ರಸ್ಟ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಎ.ಜಿ.ಪಾಟೀಲ, ಕೆ.ಎನ್.ಮಡೋಳಿ, ರಾಜಕುಮಾರ ಪಾಲಾಪೂರೆ, ಮಲ್ಲಿಕಾರ್ಜುನ ಹುಗ್ಗೆ ಪಾಟೀಲ, ಬಾಬುರಾವ ಚಳಕಾಪೂರೆ, ರುದ್ರಮುನಿ ಮಠ, ರೇವಣಸಿದ್ಧಯ್ಯಾ ಮಠಪತಿ,ಪ್ರೊ. ರುದ್ರೇಶ್ವರ ಗೋರ್ಟಾ ಉಪಸ್ಥಿತರಿದ್ದರು. ಪ್ರೊ. ಸುರೇಖಾ ಶೀಲವಂತ ಸ್ವಾಗತಿಸಿದರು, ಬಸವಂತಪ್ಪ ಲವಾರೆ ವಂದಿಸಿದರು. ಪ್ರೊ. ಸೂರ್ಯಕಾಂತ ಶೀಲವಂತ ನಿರೂಪಿಸಿದರು.

ಶನಿವಾರ 27 ಆಗಸ್ಟ್ 2016
27 AUGUST 2016
12
ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI « KALABURAGI

### ಗಣೇಶ ಉತ್ಸವ ನಿಮಿತ್ತ ಜಾಫರವಾಡಿಯಲ್ಲಿ ಧಾರ್ಮಿಕ ಸಭೆ

# ಸೌಹಾರ್ದತೆಗೆ ಹಬ್ಬಗಳು ಸಹಕಾರಿ

ಬಸವಕಲ್ಯಾಣ: ಮನಸ್ಸುಗಳನ್ನು ಪರಿಶುದ್ಧಗೊಳಿಸುವ ಮೂಲಕ ಗ್ರಾಮದಲ್ಲಿ ಶಾಂತಿ-ಸೌಹಾರ್ದತೆ ಮೂಡಿಸುವಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ ಎಂದು ತ್ರಿಪುರಾಂತನ ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ತಾಲೂಕಿನ ಜಾಫರವಾಡಿ ಗ್ರಾಮದಲ್ಲಿ ಗಣೇಶ ಉತ್ಸವ ನಿಮಿತ್ತ ಗಣೇಶ ಯುವಕ ಮಂಡಳದಿಂದ ಆಯೋಜಿಸಿದ ಧಾರ್ಮಿಕ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀಗಳು ಆಶೀರ್ವಚನ ನೀಡಿದರು.

ಉದ್ಘಾಟಿಸಿದ ತಾಪಂ ಅಧ್ಯಕ್ಷೆ ಯಶೋಧಾ ರಾಠೋಡ ಮಾತನಾಡಿ,ಪ್ರತಿ ಮಗುವಿಗೂ ಗುಣಮಟ್ಟದ ಶಿಕ್ಷಣ, ಉತ್ತಮ ಸಂಸ್ಕಾರ ಕಲ್ಪಿಸುವ ಮೂಲಕ ಅವರನ್ನು ಸಮಾಜದಲ್ಲಿ ಉನ್ನತ ಹುದ್ದೆಗೆ ಏರಿಸುವ ಪ್ರಯತ್ನ ಪಾಲಕರಿಂದ ನಡೆಯಬೇಕು ಎಂದು ಸಲಹೆ ನೀಡಿದರು.

> ಸಂಘಟನೆ ಉದ್ದೇಶದಿಂದ ನಡೆಸಲಾಗುತ್ತಿರುವ ಗಣೇಶ ಉತ್ಸವ ಜಾತಿ, ಧರ್ಮಗಳ ಮಧ್ಯೆ ಒಡಕು ಮೂಡಿಸಲು ಅವಕಾಶ ನೀಡ ಬಾರದು, ಓಣಿ, ಓಣಿಗಳಲ್ಲಿ ಗಣೇಶ ಸ್ಥಾಪಿಸುವ ಬದಲು ಪ್ರತಿ ಗ್ರಾಮಕ್ಕೆ ಒಂದೇ ಗಣೇಶ ಮೂರ್ತಿ ಸ್ಥಾಪಿಸಿ, ಉತ್ಸವ ಆಚರಿಸಿದರೆ ಸಮಾಜಕ್ಕೆ ಉತ್ತಮ ಸಂದೇಶ ಸಾರಲು ಸಾಧ್ಯ.
>
> 
>
> । ಸುಧೀರ ಕಾಡಾದಿ ಜಿಪಂ ಸದಸ್ಯ.

ಮಂಠಾಳ ಠಾಣೆ ಪಿಎಸ್ಐ ಅಮೂಲ ಕಾಳೆ, ಜೆಡಿಎಸ್ ಮುಖಂಡ ಪುಷ್ಪರಾಜ ಹಾರಕೂಡೆ ಮಾತನಾಡಿದರು. ಮುಖಂಡ ಶಾಂತವಿಜಯ ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ಗ್ರಾಪಂ ಸದಸ್ಯ ಚಂದ್ರಕಾಂತ ಮುಳೆ, ಮಂಜುಳಾ ಮುಳೆ, ಪ್ರಮುಖರಾದ ಮಹಾರಾಜಪ್ಪ ಮುಳೆ, ತುಕರಾಮ ಕೋಪ್ಟೆ, ಜಗನ್ನಾಥ ಜೈರಾಮ, ಉದಯಕುಮಾರ ಮುಳೆ, ಗಣಪತಿ ದಾಸೂರೆ, ಅಂಬಾರಾಯ ಮೇತ್ರೆ, ಲಲಿತಾಬಾಯಿ ರಾಠೋಡ, ಗಣೇಶ ಯುವಕ ಮಂಡಳದ ಪ್ರಮುಖರಾದ ಭೀಮಾಶಂಕರ ಪಾಟೀಲ, ಅಂಬ್ರೀಷ ಮುಳೆ, ಕಮಲಾಕರ ಬಿರಾದಾರ, ಶಿವರಾಜ ಮುಳೆ, ಭಾಗ್ಯವಂತ ಅಲಗೂಡೆ, ಮಹೇಶ ಮುಳೆ, ಶ್ರೀಶೈಲ ಮೇತ್ರೆ, ಶಿವಕುಮಾರ ಪಾಟೀಲ, ಭಾಗವಹಿಸಿದ್ದರು. ನಾಗರಾಜ ಬಿರಾದಾರ ಸ್ವಾಗತಿಸಿದರು. ಸಿದ್ರಾಮಪ್ಪ ಬಿರಾದಾರ ನಿರೂಪಿಸಿದರು.

ಬುಧವಾರ 14 ಸೆಪ್ಟೆಂಬರ್ 2016
14 SEPTEMBER 2016
ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI « KALABURAGI



ವಿಜಯವಾಣಿ ಚಿತ್ರ

ಬಸವಕಲ್ಯಾಣದ ತ್ರಿಪುರಾಂತನ ಗವಿಮಠದಲ್ಲಿ ಆಯೋಜಿಸಿದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 30ನೇ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ಶ್ರೀ ರಾಜೇಶ್ವರ ಶಿವಾಚಾರ್ಯರು, ತ್ರಿಪುರಾಂತ ಶ್ರೀಗಳು, ಬಿಕೆಡಿಬಿ ಸದಸ್ಯ ಶಿವರಾಜ ನರಶೆಟ್ಟೆ, ಜಿಪಂ ಸದಸ್ಯ ಅಣ್ಣಾರಾವ ರಾಠೋಡ, ಶರಣಪ್ಪ ಬಿರಾದಾರ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI « KALABURAGI
ಶನಿವಾರ 1 ಅಕ್ಟೋಬರ್ 2016
1 OCTOBER 2016

Scanned with CamScanner

vishwavani.news
01.09.2016
ಗುರುವಾರ

# ಲಿಂಗಾಯತ ಧರ್ಮ ಉಳಿಸಿದ ರುದ್ರಮುನಿ ಶ್ರೀ

ವಿಶ್ವವಾಣಿ ಸುದ್ದಿಮನೆ ಬಸವಕಲ್ಯಾಣ

ಪಂಚಸೂತ್ರ ಗವಿಯಲ್ಲಿ ಗಂಗಾಬಿಕೆ, ಹಾವಿನಹಾಳ ಕಲ್ಲಯ್ಯ ಮೊದಲಾದ ಶರಣರಿಗೆ ಇಷ್ಟಲಿಂಗ ದೀಕ್ಷೆ ದಯಪಾಲಿಸಿದ ಘನಲಿಂಗ ರುದ್ರಮುನಿ ಶಿವಾಚಾರ್ಯರು ಕಲ್ಯಾಣ ಕ್ರಾಂತಿಯ ನಂತರವೂ ಕಲ್ಯಾಣದಲ್ಲಿಯೆ ನೆಲೆ ನಿಂತು ವೀರಶೈವ ಲಿಂಗಾಯತ ಧರ್ಮ ಉಳಿಸಿ ಬೆಳೆಸಿದ ಮಹಾ ಸತ್ಪುರುಷರು ಎಂದು ಡಾ. ಬಸವರಾಜ ಸ್ವಾಮೀಜಿ ನುಡಿದರು.

ಇಲ್ಲಿನ ತ್ರಿಪುರಾಂತ ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಶ್ರೀಮದ್ವೀರಶೈವ ಸದ್ಬೋಧನ ಹಾಗೂ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರು ಗವಿಮಠ ಟ್ರಸ್ಟ್ ಸಹಯೋಗದಲ್ಲಿ ನಡೆಯುತ್ತಿರುವ, ಸಿದ್ಧಾಂತ ಶಿಖಾಮಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಶಿವಶರಣರು 12ನೇ ಶತಮಾನದಲ್ಲಿ ಜನ ಸಾಮಾನ್ಯರಿಗೆ ಅರ್ಥವಾಗುವಂತೆ ಕನ್ನಡದಲ್ಲಿ ಕಾಯಕವೇ ಕೈಲಾಸ ಎಂದು ಸಾರಿದ್ದರು. ಹೀಗಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಸಂಸ್ಕೃತ ಭಾಷೆಯ ಸಿದ್ಧಾಂತ ಶಿಖಾಮಣಿಯ ಪ್ರಭಾವ ಆಗಿರಬಹುದು ಎಂದು ಅಭಿಪ್ರಾಯಪಟ್ಟರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಕಾಯಾರ್ಪಿತ ಸ್ಥಲದ ಕುರಿತು ಕಾಯ ಎಂದರೆ ಅಂಗ ಗುರುವಿನಿಂದ ಪಡೆದ ಇಷ್ಟಲಿಂಗವನ್ನು ಸದಾ ಅಂಗದ ಮೇಲೆ ಧರಿಸಿ ಗುರು ಬೋಧೆಯಂತೆ ಸದಾ ಇಷ್ಟಲಿಂಗಾರ್ಚನೆ ಮಾಡುತ್ತ ಅಂಗವನ್ನೇ ಲಿಂಗವಾಗಿಸಿಕೊಳ್ಳುವುದೇ ಕಾಯಾರ್ಪಿತ ಸ್ಥಲವಾಗಿದೆ ಎಂದು ಹೇಳಿದರು.



ತ್ರಿಪುರಾಂತ ಗವಿಮಠದಲ್ಲಿ ನಡೆದ ಪ್ರವಚನದಲ್ಲಿ ಡಾ. ಬಸವರಾಜ ಸ್ವಾಮಿ ಮಾತನಾಡಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು.

ಪ್ರತಿಯೊಬ್ಬರಿಗೆ ಗುರು ಬೇಕು. ಗುರುವಿನ ಮಾರ್ಗದರ್ಶನದಿಂದ ಭಗವಂತನ ಸಾನ್ನಿಧ್ಯ ಪಡೆಯಲು ಸಾಧನ ಅದುವೇ ಲಿಂಗಾಂಗ ಸಾಮರಸ್ಯವಾಗಿದೆ. ಇದನ್ನೇ ಶರಣರು ಶರಣಸತಿ ಲಿಂಗ ಪತಿ ಎಂದು ಕನ್ನಡದಲ್ಲಿ ಮನ ಮುಟ್ಟುವಂತೆ ಸರಳೀಕರಿಸಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ ಮಾತನಾಡಿ, ಜೀವನ ಸಾರ್ಥಕಗೊಳಿಸಿಕೊಳ್ಳಲು ಪ್ರತಿಯೊಬ್ಬರೂ ನಿತ್ಯ ಗುರು ಲಿಂಗ ಜಂಗಮ ಆರಾಧನೆ ಮಾಡಬೇಕು. ಮಕ್ಕಳ ಭವಿಷ್ಯಕ್ಕಾಗಿ ಧರ್ಮ ಹಾಗೂ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕು ಎಂದು ಸಲಹೆ ನೀಡಿದರು.

ಪ್ರಸಾದ ಸೇವೆಗೈದ ಚನ್ನವೀರಯ್ಯಾ ಹಿರೇಮಠ ಖಾನಾಪೂರ ಅವರನ್ನು ಸತ್ಕರಿಸಲಾಯಿತು. ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಅಧ್ಯಕ್ಷ ವೀರಣ್ಣ ಶೀಲವಂತ, ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂದಿ, ವೀರಶೆಟ್ಟಿ ಮಲಶೆಟ್ಟಿ ಬೇಲೂರ, ಮಲ್ಲಿಕಾರ್ಜುನ ಶೀಲವಂತ ಧನ್ನೂರಕರ, ದಿಲೀಪ ಪಾಟೀಲ್ ಬೇಲೂರ, ಶಿವಕುಮಾರ ಮಠ ರಾಯಪಳ್ಳಿ, ರಾಜಕುಮಾರ ದೇಗಾಂವ, ರುದ್ರಮುನಿ ಗಚ್ಚಿನಮಠ, ಬಸವರಾಜ ಪೊಲೀಸ್ ಪಾಟೀಲ್ ಕೋಳಕುರ, ಸಿದ್ಧಲಿಂಗ ಮುಳೆ, ಮಲ್ಲಿಕಾರ್ಜುನ ಸ್ವಾಮಿ, ಪ್ರೊ. ರುದ್ರೇಶ್ವರ ಗೋರ್ಟಾ, ಚಂದ್ರಶೇಖರ ಶೀಲವಂತ, ಬಸವರಾಜ ಮಠಪತಿ, ಸುಭದ್ರಾಬಾಯಿ ವೀರಯ್ಯ ಸ್ವಾಮಿ ಶಾಂತಾಬಾಯಿ ದುಂಡಪ್ಪಸೊನ್ನಗಿ, ಚಂದ್ರಪ್ಪ ಶಟಗಾರ, ಶೀಲಾದೇವಿ ಲವಾರೆ, ರೇಣುಕಾ ಮಠಪತಿ, ಸುನಂದಾ ನಂದಿ, ಲಕ್ಷ್ಮಿಬಾಯಿ ಹಿರೆಮಠ, ವಿಲಾಸಮತಿ ಪಾಟೀಲ, ರೇವಣಸಿದ್ದಯ್ಯ ಮಠಪತಿ, ಕಾಶಿನಾಥ ಸ್ವಾಮಿ, ಪ್ರೊ. ಸೂರ್ಯ ಕಾಂತ ಶೀಲವಂತ ಉಪಸ್ಥಿತರಿದ್ದರು.

ಬೇಲೂರಿನ ಅಕ್ಕಮಹಾದೇವಿ ಭಜನಾ ಮಂಡಳಿ, ಬಸವಕಲ್ಯಾಣ ಈಶ್ವರ ನಗರದ ರೇವಣಸಿದ್ದೇಶ್ವರ ಭಜನಾ ಮಂಡಳಿಯವರಿಂದ ಭಜನೆ ಸೇವೆ ಜರುಗಿತು.

# ತಾಲೂಕು ಅಧ್ಯಕ್ಷರಾಗಿ ಬಸವಂತಪ್ಪ ಆಯ್ಕೆ

ಬಸವಕಲ್ಯಾಣ: ಶ್ರೀಮದ್ವಿರಶೈವ ಸದ್ಬೋಧನ ಸಂಸ್ಥೆ, ತಾಲೂಕಾ ಘಟಕದ ನೂತನ ಅಧ್ಯಕ್ಷರನ್ನಾಗಿ ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ಕಾರ್ಯದರ್ಶಿಯಾಗಿ ಕಾಶಿನಾಥ ಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ.

ಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಸವಂತಪ್ಪ ಲವಾರೆಗೆ ಪಂಚಾಚಾರ್ಯರ ಧ್ವಜ ನೀಡಿ ಅಧಿಕಾರ ಹಸ್ತಾಂತರಿಸಲಾಯಿತು.

ನೇತೃತ್ವ ವಹಿಸಿದ ಸಂಸ್ಥೆಯ ಗೌರಾವಾಧ್ಯಕ್ಷ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ವಿಜ್ಞಾನ, ವೈಚಾರಿಕತೆ, ಆಧುನಿಕತೆಯ ಭರಾಟೆಯಲ್ಲಿ ಸನಾತನೆ ಧರ್ಮ ಪರಂಪರೆ ಸಂಸ್ಕೃತಿ ನಾಶವಾಗಬಾರದು ಎಂದರು.

ಅಧಿಕಾರ ಸ್ವೀಕರಿಸಿದ ಬಸವಂತಪ್ಪ ಲವಾರೆ ಮಾತನಾಡಿ, ತಮ್ಮೆಲ್ಲರ ಸಹಕಾರದಿಂದ ಉತ್ತಮ ರೀತಿ ಸಂಸ್ಥೆಯ ಧಾರ್ಮಿಕ, ಸಂಸ್ಕೃತಿಕ, ಸಮಾಜಿಕ ಚಟುವಟಿಕೆ, ನಡೆಸಿಕೊಂಡು ಬರುವದಾಗಿ ತಿಳಿಸಿದರು.

ಎ.ಜಿ. ಪಾಟೀಲ, ಡಾ.ಬಸವರಾಜ ಸ್ವಾಮಿ, ಚಂದ್ರಕಾಂತ ಸ್ವಾಮಿ, ಪ್ರೊ. ದಯಾನಂದ ಶೀಲವಂತ, ರೇವಣಸಿದ್ದಯ್ಯ ಸ್ವಾಮಿ, ನೀಲಕಂಠಪ್ಪ ಮುನ್ನಳ್ಳಿ, ಪ್ರಭುಲಿಂಗಯ್ಯಾ ಟಂಕಸಾಲಿಮಠ, ಚನ್ನಬಸವಾ ಬಿರಾದಾರ, ಧೂಳಪ್ಪ ಸುಂಟನೂರೆ, ವೀರಶೆಟ್ಟಿ ಬೇಲೂರ, ಹಾವಯ್ಯಾ ಸ್ವಾಮಿ, ರಮೇಶ ಸ್ವಾಮಿ, ಬಸಪ್ಪ ಧನ್ನೂರೆ, ರಮೇಶ ರಾಜೋಳೆ, ಕಲ್ಪನಾ ಶೀಲವಂತ ಉಪಸ್ಥಿತರಿದ್ದರು.

ಸಂಸ್ಥೆಗೆ ಈ ಬಾರಿ ಹೊಸದಾಗಿ 36 ಜನರನ್ನು ನೇಮಕ ಮಾಡಲಾಯಿತು.

ವಿಜಯವಾಣಿ ಚಿತ್ರ



ತ್ರಿಪುರಾಂತ ಗವಿ ಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಮದ್ವಿರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕದ ನೂತನ ಅಧ್ಯಕ್ಷ ಬಸವಂತಪ್ಪ ಲವಾರೆಗೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಶುಕ್ರವಾರ
28 ಅಕ್ಟೋಬರ್ 2016

Scanned with CamScanner

# ಏಕತಾ ಮನೋಭಾವನೆ ಮೂಡಲು ಗಣೇಶ ಹಬ್ಬ ಆಚರಣೆ

ಬಸವಕಲ್ಯಾಣ : ಸಂಘಟನೆ, ಏಕತೆ ಮನೋಭಾವ ಮೂಡಿಸುವ ಉದ್ದೇಶದಿಂದ ಗಣೇಶನನ್ನು ಪ್ರತಿಷ್ಠಾಪಿಸಿ ಉತ್ಸವ ಆಚರಿಸಲಾಗುತ್ತಿದೆ ಎಂದು ತ್ರಿಪುರಾಂತನ ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.



ಬಸವಕಲ್ಯಾಣ ತಾಲೂಕಿನ ಜಾಫರವಾಡಿ ಗ್ರಾಮದಲ್ಲಿ ಗಣೇಶ ಉತ್ಸವ ನಿಮಿತ್ತ ಗಣೇಶ ಯುವಕ ಮಂಡಳದಿಂದ ಆಯೋಜಿಸಿದ ಧಾರ್ಮಿಕ ಸಮಾರಂಭವನ್ನು ತ್ರಿಪುರಾಂತನ ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು.

ತಾಲೂಕಿನ ಜಾಫರವಾಡಿ ಗ್ರಾಮದಲ್ಲಿ ಗಣೇಶ ಉತ್ಸವ ನಿಮಿತ್ತ ಗಣೇಶ ಯುವಕ ಮಂಡಳದಿಂದ ಆಯೋಜಿಸಿದ ಧಾರ್ಮಿಕ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿ ಗಣೇಶನ ಹೆಸರಿನಲ್ಲಿ ಸಂಗ್ರಹಿಸಿದ ಹಣ ವ್ಯರ್ಥವಾಗಿ ಖರ್ಚುಮಾಡದೆ ಸಮಾಜದಲ್ಲಿ ವಿಭಿನವಾದ ಕಾರ್ಯಚಟುವಟಿಕೆ ನಡೆಸುವ ಕೆಲಸ ಪ್ರತಿಯೊಬ್ಬರಿಂದಲೂ ನಡೆಯಬೇಕು. ಅನಗತ್ಯವಾದ ದುಂದುವೆಚ್ಚಕ್ಕೆ ಕಡಿವಾಣ ಹಾಕಬೇಕು ಎಂದು ಸಲಹೆ ನೀಡಿದರು.

ಜಿಪಂ ಸದಸ್ಯ ಸುಧೀರ ಕಾಡಾದಿ ಮಾತನಾಡಿ, ಓಣಿ, ಓಣಿಗಳಲ್ಲಿ ಗಣೇಶ ಸ್ಥಾಪಿಸುವ ಬದಲು ಪ್ರತಿ ಗ್ರಾಮಕ್ಕೆ ಒಂದೇ ಗಣೇಶ ಮೂರ್ತಿ ಸ್ಥಾಪಿಸಿ, ಉತ್ಸವ ಆಚರಿಸಿದರೆ ಸಮಾಜಕ್ಕೆ ಉತ್ತಮ ಸಂದೇಶ ಸಾರಲು ಸಾಧ್ಯ. ಈ ನಿಟ್ಟಿನಲ್ಲಿ ಪ್ರತಿ ಗ್ರಾಮದವರು ಆಲೋಚನೆ ಮಾಡಬೇಕು ಎಂದ ಅವರು, ಗಣೇಶ ಉತ್ಸವ ನಿಮಿತ್ತ ಪ್ರತಿ ವರ್ಷ ಜಾಫರವಾಡಿ ಗ್ರಾಮದಲ್ಲಿ ಧಾರ್ಮಿಕ ಸಭೆ ಆಯೋಜಿಸುತ್ತಿರುವ ಯುವಕರ ಕಾರ್ಯ ಇತರರಿಗೆ ಮಾದರಿಯಾಗಿದೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ತಾಪಂ ಅಧ್ಯಕ್ಷೆ ಯಶೋಧಾ ನೀಲಕಂಠರಾಠೋಡಮಾತನಾಡಿ, ಮಕ್ಕಳಲ್ಲಿ ಬೇಧ ಭಾವ ಮಾಡದೆ ಪ್ರತಿ ಮಗುವಿಗು ಗುಣಮಟ್ಟದ ಶಿಕ್ಷಣ, ಉತ್ತಮ ಸಂಸ್ಕಾರ ಕಲ್ಪಿಸುವ ಮೂಲಕ ಅವರನ್ನು ಸಮಾಜದಲ್ಲಿ ಉನ್ನತ ಹುದ್ದೆಗೆ ಏರಿಸುವ ಪ್ರಯತ್ನ ಪಾಲಕರಿಂದ ನಡೆಯಬೇಕು ಎಂದು ಸಲಹೆ ನೀಡಿದರು.

ಮಂಠಾಳ ಠಾಣೆ ಪಿಎಸ್‌ಐ ಅಮೂಲ ಕಾಳೆ ಸಹ ಮಾತನಾಡಿದರು.

ಗ್ರಾಮದ ಮುಖಂಡ ಶಾಂತವಿಜಯ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಗ್ರಾಪಂ ಸದಸ್ಯ ಚಂದ್ರಕಾಂತ ಮುಳೆ, ಮಂಜುಳಾ ಉದಯಕುಮಾರ ಮುಳೆ, ಪ್ರಮುಖರಾದ ಮಹಾರಾಜಪ್ಪಮುಳೆ, ತುಕರಾಮ ಕೋಪ್ಪೆ, ಜಗನ್ನಾಥ ಜೈರಾಮ, ಉದಯಕುಮಾರ ಮುಳೆ, ಗಣಪತಿ ದಾಸೂರೆ, ಅಂಬಾರಾಯ ಮೇತ್ರೆ, ಲಲಿತಾಬಾಯಿ ರಾಠೋಡ ಉಪಸ್ಥಿತರಿದ್ದರು. ನಾಗರಾಜ ಬಿರಾದಾರಸ್ವಾಗತಿಸಿದರು,ಸಿದ್ರಾಮಪ್ಪ ಬಿರಾದಾರ ನಿರೂಪಿಸಿದರು.

ಗಣೇಶ ಯುವಕ ಮಂಡಳದ ಪ್ರಮುಖರಾದ ಭೀಮಾಶಂಕರ ಪಾಟೀಲ, ಅಂಬ್ರೀಷ ಮುಳೆ, ಕಮಲಾಕರ ಬಿರಾದಾರ, ಶಿವರಾಜ ಮುಳೆ, ಭಾಗ್ಯವಂತ ಆಲಗೂಡೆ, ಮಹೇಶ ಮುಳೆ, ಶ್ರೀಶೈಲ ಮೇತ್ರೆ, ಶಿವಕುಮಾರ ಪಾಟೀಲ, ಸುನೀಲ ಹಂಡಿಗೆ,ಅನೀಲಮುಳೆ,ಚನ್ನವೀರ ಬಿರಾದಾರ, ಷಣ್ಮುಕಯ್ಯ ಸ್ವಾಮಿ, ಬಸವರಾಜ ಮುಳೆ, ಪ್ರಕಾಶ ಪಾಟೀಲ, ಅಣವೀರ ಬಿರಾದಾರ್, ಪವನ ಮುಳೆ, ಮೌನೇಶ ಪಂಚಾಳ ಭಾಗವಹಿಸಿದ್ದರು.

ಸಂಯುಕ್ತ ಕರ್ನಾಟಕ

ಬುಧವಾರ, 14, ಸೆಪ್ಟೆಂಬರ್, 2016, ಕಲಬುರಗಿ

ಬಸವಕಲ್ಯಾಣ : ತಾಲ್ಲೂಕಿನ ಘಾಟ್‌ಹಿಪ್ಪರ್ಗಾ ಗ್ರಾಮದಲ್ಲಿ ಜೈ ಬಜರಂಗಬಲಿ ಭಜನಾ ಸಂಘದಿಂದ ಆಯೋಜಿಸಿದ ಶ್ರಾವಣ ಮಾಸದ ಮುಕ್ತಾಯ ಸಮಾರಂಭದಲ್ಲಿ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗರುದ್ರಮುನಿಆಶೀರ್ವಚನ ನೀಡಿದರು.



ಸಂಯುಕ್ತ ಕರ್ನಾಟಕ

ಮಂಗಳವಾರ, 29, ಆಗಸ್ಟ್, 2017, ಕಲಬುರಗಿ

Scanned with CamScanner

vishwavani.news
04.09.2016
ಭಾನುವಾರ

# ಸತ್ಸಂಗದಿಂದ ಜೀವನದಲ್ಲಿ ನೆಮ್ಮದಿ: ಶ್ರೀ

**ವಿಶ್ವವಾಣಿ ಸುದ್ದಿಮನೆ** ಬಸವಕಲ್ಯಾಣ

ಶ್ರಾವಣ ಮಾಸದಲ್ಲಿ ಪುರಾಣ ಕೇಳುವದರಿಂದ ನೆಮ್ಮದಿ ಸಿಗುತ್ತದೆ ಎಂದು ತ್ರಿಪುರಾಂತದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತಾಲೂಕಿನ ಮಂತಾಳ ಗ್ರಾಮದ ಮಹಾದೇವ ಮಂದಿರಲ್ಲಿ ಸುಕ್ಷೇತ್ರ ಮುತ್ಯಾನ ಬಬಲಾದದ ಶ್ರೀ ಚನ್ನವೀರ ಶಿವಯೋಗಿಗಳ ಪುರಾಣ ಮಂಗಲ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮೊಬೈಲ್ ಟಿವಿ ಯಿಂದಾಗಿ ನೆಮ್ಮದಿ ಇಲ್ಲದಂತಾಗಿದೆ ಎಂದರು. ಧಾರ್ಮಿಕ ಕಾರ್ಯಕ್ರಮಗಳಿಂದಾಗಿ ಜನರಲ್ಲಿ ಜಾಗೃತಿ ಮೂಡುತ್ತದೆ ಎಂದು ಹೇಳಿದರು.

ವೇದಮೂರ್ತಿ ನೀಲಕಂಠಯ್ಯಾ ಮರಿದೇವರ ಮಠ ಅವರು ಪುರಾಣ ನಡೆಸಿಕೊಟ್ಟರು.

ಕಾಂಬಳೆವಾಡಿಯ ನಾರಾಯಣ ಮಹಾರಾಜ ಆಶಿರ್ವಚನ ನೀಡಿದರು. ಗುರುಪಾದಲಿಂಗ ಶ್ರೀಗಳು ಅಧ್ಯಕ್ಷತೆ ವಹಿಸಿದ್ದರು.

ಗುಹೇಶ್ವರ ಮಹಾಸ್ವಾಮಿ, ಜಗನ್ನಾಥ ಪಾಟೀಲ, ಕಾಶಣ್ಣಾ ಸಾತಬಾಯಿ, ಮಲ್ಲಪ್ಪ ಶಾಯ್ಯಪ್ಪಾ, ಕಲ್ಲಪ್ಪಾ ಖಿಸ್ಗೆ ಉಪಸ್ಥಿತರಿದ್ದರು.

ರವೀಂದ್ರ ಶಾಯ್ಯಪ್ಪ ನಿರೂಪಿಸಿದರು. ಮಲ್ಲಿಕಾರ್ಜುನ ಮಹಾಜನ, ಗುರುರಾಜ ಬಿರಾದಾರ, ಶಿವುಕುಮಾರ ಸಂಗನಬಟ್ಟೆ, ಶಿವಕುಮಾರ ಮಾಮನೆ, ಸಂತೋಷ ಸಂಗನಬಟ್ಟೆ, ನಾಗೇಶ ಝುಂಜಾ, ಕಸಾಪ ಮಂತಾಳ ವಲಯ ಅಧ್ಯಕ್ಷ ಶಂಕರ ಕುಕ್ಕಾಪಾಟೀಲ, ಮಂತಾಳ ವಲಯ ವಚನ ಸಾಹಿತ್ಯ ಪರಿಷತ್ತು ಅಧ್ಯಕ್ಷ ಅಂಬಯ್ಯಾ



ಬಸವಕಲ್ಯಾಣ ತಾಲೂಕಿನ ಮಂತಾಳ ಗ್ರಾಮದ ಮಹಾದೇವ ಮಂದಿರಲ್ಲಿ ಶ್ರೀ ಚನ್ನವೀರ ಶಿವಯೋಗಿಗಳ ಪುರಾಣ ಶ್ರಾವಣ ಮಾಸದ ನಿಮಿತ್ತ ಪುರಾಣ ಮಂಗಲ ಸಮಾರಂಭದಲ್ಲಿ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿ ಮಾತನಾಡಿದರು.

ಎಸ್. ಹಿರೇಮಠ, ಶಿವಾನಂದ ಮಾಲಿಪಾಟೀಲ, ನಟರಾಜ ಚಿಚಕೋಟೆ, ಬಾಬು ರಾವ ಪೂಜಾರಿ, ಶಿವಪ್ಪ ಹರಕೂಡೆ, ರಾಚಣ್ಣ ಚಕಾರೆ, ಮಲ್ಲಿಕಾರ್ಜುನ್ ಕುಂಟನೂರ, ಆದರ್ಶ ಶಾಯ್ಯಪ್ಪ, ಸೂರ್ಯಕಾಂತ ಚಕಾರೆ, ಶಶಿಕಾಂತ ಝುಂಜಾ, ಸಿದ್ದು ಸಿಂಪೆ ಇದ್ದರು.

ಕಲಾವಿದ ಸೂರ್ಯಕಾಂತ ಬಿರಾದಾರ ಖಾನಾಪುರ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ವಿಠಲ್ ಪೂಜಾರಿ ತಬಲಾ, ದಿಲೀಪಕುಮಾರ ದೇಸಾಯಿ, ಶರಣಪ್ಪ ಜಮಾದಾರ ಹಾರ್ಮೋನಿಯಂ ಸಾಥ್ ನೀಡಿದರು.

ಬೆಳಮಗಿಯ ಸಿದ್ರಾಮೇಶ್ವರ ಭಜನಾ ಮಂಡಳಿ, ಬೀರಲಿಂಗೇಶ್ವರ ಭಜನಾ ಮಂಡಳಿ ಗುಂಡೂರು ಹಾಗೂ ಮಹಾದೇವ ಮಂದಿರದ ಕಮಿಟಿ ಬಳಗದಿಂದ ಭಜನೆ ನಡೆಯಿತು.

# ದೇಶಿಯ ಸಂಸ್ಕೃತಿ ಉಳಿಸಿ ಬೆಳೆಸಲು ಸಲಹೆ

**ವಿಕಸುದ್ದಿಲೋಕ** ಬಸವಕಲ್ಯಾಣ

ಇಂದಿನ ಯುವಜನತೆ ದೇಶಿಯ ಸಂಸ್ಕೃತಿ ಉಳಿಸಿ ಬೆಳೆಸಲು ಮುಂದಾ ಗಬೇಕಿದೆ ಎಂದು ತ್ರಿಪುರಾಂತದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತಾಲೂಕಿನ ಮಂತಾಳ ಗ್ರಾಮದಲ್ಲಿ ಶ್ರಾವಣ ಮಾಸದ ಪುರಾಣ ಮಂಗಲ ಕಾರ್ಯಕ್ರಮದಲ್ಲಿ ಚೆನ್ನವೀರ ಶಿವಯೋಗಿಗಳ ಕುರಿತು ನಡೆದ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾ ಡಿದರು. ಶ್ರಾವಣ ತಿಂಗಳವು ಅತ್ಯಂತ ಪವಿತ್ರವಾಗಿದೆ. ಹೀಗಾಗಿ ಇಂತಹ ಆಧ್ಯಾತ್ಮಿಕ ಪ್ರವಚನಗಳಲ್ಲಿ ಭಾಗವಹಿಸಿ ಮನಸ್ಸು ಶುಚಿತ್ವಗೊಳಿಸಿಕೊಳ್ಳಬೇಕು

ತಂದೆ- ತಾಯಿಗಳು ತಮ್ಮ ಮಕ್ಕಳಿಗೆ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ ನೀಡಬೇಕು.ಪುರಾಣ ಕೇಳುವುದರಿಂದ ಮನಸ್ಸಿಗೆ ಸುಖ, ಶಾಂತಿ ಸಿಗುತ್ತದೆ. ದೇವರನ್ನು ಭಕ್ತಿಯಿಂದ ನೆನೆದಾಗ ದೇವರ ಸ್ವರೂಪ ಕಾಣುತ್ತೇವೆ.ಅದಕ್ಕಾಗಿ ಎಲ್ಲರು ಪೂಜೆ ಮಾಡುವುದು, ದೇವರನ್ನು ನೆನೆಯುವದು ಮಾಡ 'ಬೇಕು.ತಂದೆ ತಾಯಿ, ಗುರುಹಿರಿಯನ್ನು ಗೌರವಿಸಬೇಕು ಎಂದರು.

ಕಾಂಬಳ 'ವಾಡಿಯ ನಾರಾಯಣ ಮಹಾರಾಜರು ಮಾತ ನಾಡಿ, ಮಂತಾಳ ಕ್ಷೇತ್ರದಲ್ಲಿ ಇಂತಹ ಕಾರ್ಯಕ್ರಮಗಳು ಹೆಚ್ಚಾಗಿ ನಡೆಸಬೇಕು. ಜತೆಗೆ ಪಾಲಕರು ತಮ್ಮೊಂದಿಗೆ ಮಕ್ಕಳನ್ನು ಕರೆದುಕೊಂಡು ಬರಬೇಕು ಎಂದರು.

ಗುರುಪಾದಲಿಂಗ ವಿರಕ್ತ ಮಠ ಮುತ್ಯಾನ ಬಬಲಾದ,ಗುಹೇಶ್ವರ ಮಾಹಾಸ್ವಾಮಿ, ಮುಖಂಡ ಜಗನ್ನಾಥ ಪಾಟೀಲ್, ಕಾಶಣ್ಣಾ ಸಾತಬಾಯಿ, ಮಲ್ಲಪ್ಪಾ ಶ್ಯಾಯಪ್ಪಾ, ಕಲ್ಲಪ್ಪಾ ಖಿಸ್ಗೆ, ರವೀಂದ್ರ ಶ್ಯಾಯಪ್ಪಾ, ಮಲ್ಲಿಕಾರ್ಜುನ ಮಾಹಾಜನ, ಗುರುರಾಜ ಬಿರಾದಾರ, ಶಿವುಕುಮಾರ ಸಂಗನಬಟ್ಟೆ, ಶಿವುಕುಮಾರ ಮಾಮನೆ, ಸಂತೋಷ ಸಂಗನಬಟ್ಟೆ, ನಾಗೇಶ ಝುಂಜಾ, ಕಸಾಪ ಮಂತಾಳ ವಲಯ ಅಧ್ಯಕ್ಷ ಶಂಕರ ಕುಕ್ಕಾ ಪಾಟೀಲ್, ಮಂತಾಳ ವಲಯ ವಚನ ಸಾಹಿತ್ಯ ಪರಿಷತ್ ಅಧ್ಯಕ್ಷ ಅಂಬಯ್ಯ ಎಸ್. ಹಿರೇಮಠ, ಶಿವಾನಂದ ಮಾಲಿ ಪಾಟೀಲ್ ನಟರಾಜ ಚಿಚಕೋಟೆ, ಬಾಬುರಾವ ಪೂಜಾರಿ, ಶಿವಪ್ಪಾ ಹರಕೂಡೆ, ರಾಚಣ್ಣಾ ಚಕಾರೆ, ಮಲ್ಲಿಕಾರ್ಜುನ್ ಕೂಂಟನೂರ, ಆದರ್ಶ ಶ್ಯಾಯಪ್ಪಾ, ಸೂರ್ಯಕಾಂತ ಚಕಾರೆ, ಶಶಿಕಾಂತ ಝುಂಜಾ, ಸಿದ್ದು ಸಿಂಪೆ ಇತರರಿದ್ದರು.

ಖಾನಾಪುರದ ಕಲಾವಿದ ಸೂರ್ಯಕಾಂತ ಬಿರಾದಾರ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ವಿಠಲ್ ಪೂಜಾರಿ ತಬಲಾ ಸಾಥ್, ದಿಲೀಪಕುಮಾರ ದೇಸಾಯಿ, ಶರಣಪ್ಪ ಜಮಾದಾರ ಹಾರ್ಮೋನಿಯಂ ಸಾಥ್ ನೀಡಿದರು. ಬೆಳಮಗಿ ಸಿದ್ರಾಮೇಶ್ವರ ಭಜನಾ ಮಂಡಳಿ ಮತ್ತು ಗುಂಡೂರಿನ ಶ್ರೀ ಬೀರಲಿಂಗೇಶ್ವರ ಭಜನಾ ಮಂಡಳಿ, ಮಹಾದೇವ ಮಂದಿರದ ಕಮಿಟಿ ಬಳಗ ಮತ್ತು ಮಂತಾಳ ಗ್ರಾಮದ ಭಕ್ತರು ಪಾಲ್ಗೊಂಡಿದ್ದರು.



ಬಸವಕಲ್ಯಾಣ ತಾಲೂಕಿನ ಮಂತಾಳ ಗ್ರಾಮದಲ್ಲಿ ಶ್ರಾವಣ ಮಾಸದ ಪುರಾಣ ಮಂಗಲ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಕಲಾವಿದ ಸೂರ್ಯಕಾಂತ ಬಿರಾದಾರ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ವಿಜಯ ಕರ್ನಾಟಕ VK
ಭಾನುವಾರ,4 ಸೆಪ್ಟೆಂಬರ್ 2016, ಕಲಬುರಗಿ

Scanned with CamScanner

## ಬಸವಕಲ್ಯಾಣದ ತ್ರಿಪುರಾಂತ ಗವಿ ಮಠದಲ್ಲಿ ಉಪನ್ಯಾಸ ಕಾರ್ಯಕ್ರಮ

# ಮೋಕ್ಷ ಸಾಧನೆಗೆ ಬೇಕು ಇಷ್ಟಲಿಂಗ ದೀಕ್ಷೆ

ಬಸವಕಲ್ಯಾಣ: ಮಾನವ ಮೋಕ್ಷ ಸಾಧನೆಗಾಗಿ ಗುರುವಿನಿಂದ ಶಾಸ್ತ್ರಬದ್ಧವಾಗಿ ಇಷ್ಟಲಿಂಗ ದೀಕ್ಷೆ ಪಡೆಯಬೇಕು ಎಂದು ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣಮಾಸ ನಿಮಿತ್ತ ತ್ರಿಪುರಾಂತ ಗವಿಮಠದಲ್ಲಿ ಶ್ರೀಮದ್ ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಹಾಗೂ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ಸಹಯೋಗದಲ್ಲಿ 'ಸಿದ್ಧಾಂತ ಶಿಖಾಮಣಿ ಪ್ರತಿಪಾದಿತ ಮಹೇಶ್ವರ ಸ್ಥಲದಲ್ಲಿಯ ಕ್ರಿಯಾಗಮಸ್ಥಲ' ಕುರಿತ ಉಪನ್ಯಾಸ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಗುರು ಶಿಷ್ಯನ ವಾಮಹಸ್ತ ಪೀಠದಲ್ಲಿ ಇಷ್ಟಲಿಂಗವನ್ನಿಟ್ಟು ಕರ್ಣದಲ್ಲಿ ಮಹಾಮಂತ್ರ ಶಿವಪಂಚಾಕ್ಷರ ಬೋಧಿಸಬೇಕು. ಆ ಮೂಲಕ ಶಿಷ್ಯ ನಿತ್ಯ ಇಷ್ಟಲಿಂಗ ಕ್ರಿಯೆಯಲ್ಲಿ ಮಗ್ನವಾಗಿ ಮೋಕ್ಷ ಪಡೆಯುವ ವಿಧಾನವೇ ಕ್ರಿಯಾಗಮಸ್ಥಲವಾಗಿದೆ ಎಂದರು. ಕ್ರಿಯಾಗಮಸ್ಥಲದಲ್ಲಿ ಜ್ಞಾನ ಹಾಗೂ ಕ್ರಿಯಾ ಎರಡು ವಿಷಯಗಳು ಸೇರಿವೆ. ಗುರು ಶಿಷ್ಯನಿಗೆ ಬೋಧಿಸುವುದು ಜ್ಞಾನವಾದರೆ ಅದನ್ನು ಶಿಷ್ಯ ನಿತ್ಯ ಆಚಾರಣೆಯಲ್ಲಿ ತರುವುದೇ ಕ್ರಿಯಾ ಆಗಿದೆ. ಜ್ಞಾನ ಪಡೆದು ಕ್ರಿಯಾ ಮೂಲಕ ಮೋಕ್ಷ ಸಾಧಿಸುವ ವಿಧಾನವೇ ಕ್ರಿಯಾಗಮಸ್ಥಲವಾಗಿದೆ. ಗುರು ಕೊಟ್ಟ ಈ ಜ್ಞಾನ ಕ್ರಿಯಾರೂಪದಲ್ಲಿ ತಂದಾಗ ಮಾತ್ರ ಮುಕ್ತಿ ಪಡೆಯಲು ಸಾಧ್ಯ ಎಂದರು. ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಮಾತನಾಡಿ, ವೀರಶೈವ ಧರ್ಮದಲ್ಲಿ ಗುರು ಕರುಣಿಸಿದ ಭಸ್ಮವನ್ನು ಇಷ್ಟಲಿಂಗಾರ್ಚನೆಗೂ ಮುಂಚೆ ಸಿದ್ಧಾಂತ ಶಿಖಾಮಣಿಯಲ್ಲಿ ಬೋಧಿಸಿದಂತೆ ಅಂಗಕ್ಕೆ ಭಸ್ಮ ಧಾರಣೆ ಮಾಡಬೇಕು. ಅಂಗದ ಮಸ್ತಕ, ಹಣೆ, ಕಂಠ, ಕರ್ಣಗಳು ಮೊದಲಾದ ಭಾಗಗಳಿಗೆ ಮಂತ್ರ ಪರಿಸುತ್ತ ಭಸ್ಮ ಧಾರಣೆ ಮಾಡಬೇಕೆಂಬುದನ್ನು ಪ್ರಾತ್ಯಕ್ಷಿಕೆ ಮೂಲಕ ಪರಿಚಯಿಸಿದರು.

ಬಸಪ್ಪ ಧನ್ನೂರೆ ಅವರನ್ನು ಇದೇ ವೇಳೆ ಸತ್ಕರಿಸಲಾಯಿತು. ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ವೈಜಿನಾಥ ಕನಸೂರೆ, ಗುರುಲಿಂಗಯ್ಯ ಸ್ವಾಮಿ ಗೋರ್ಟಾ, ರುದ್ರಮಣಿ ಮಠ, ರೇವಣಸಿದ್ಧಯ್ಯ ಮಠಪತಿ ಸರಸ್ವತಿ ಬೆಂಬಳಗೆ, ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ, ಪ್ರೇಮಳಾ ರಾಮಣ್ಣನವರ, ಮೋದಲಾದವರು ಉಪಸ್ಥಿತರಿದ್ದರು. ಸೂರ್ಯಕಾಂತ ಶೀಲವಂತ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ರುದ್ರೇಶ್ವರ ಮಠಪತಿ ನಿರೂಪಿಸಿದರು. ಕಾಶಿನಾಥ ಸ್ವಾಮಿ ವಂದಿಸಿದರು.



ಬಸವಕಲ್ಯಾಣ: ತ್ರಿಪುರಾಂತ ಗವಿಮಠದಲ್ಲಿ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಉದಯವಾಣಿ ಕಲಬುರಗಿ
ರವಿವಾರ | ಆಗಸ್ಟ್ | 14 | 2016

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI « KALABURAGI
ಸೋಮವಾರ
3 ಅಕ್ಟೋಬರ್ 2016
3 OCTOBER 2016

# ಅನಾಥರ ಬಾಳಿಗೆ ಬೆಳಕು ನೀಡಿದ ತೆರೇಸಾ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಬಡವರ, ಅನಾಥರ ಸೇವೆ ಮಾಡಿ ಅವರ ಬಾಳಿನಲ್ಲಿ ಬೆಳಕು ಮೂಡಿಸಿದ ಮದರ ತೆರೇಸಾ ಮಹಾ ಚೇತನ ಎಂದು ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಪರ್ತಾಪುರ ರಸ್ತೆ ಬದಿಯಲ್ಲಿರುವ ಸತ್ಯಾನುಭವ ಸಂವಾದ ಕೇಂದ್ರದಲ್ಲಿ ಆಯೋಜಿಸಿದ ಮದರ ತೆರಿಸಾ ಅವರ ನುಡಿ ನಮನ ಕಾರ್ಯಕ್ರಮ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀಗಳು, ಅನಾಥ, ಬಡವರ, ರೋಗಗಳಿಂದ ಬಳಲುತ್ತರುವರ ಸೇವೆಗೆ ಜೀವನ ಮುಡಿಪಿಟ್ಟಿದ್ದ ಮದರ ತೆರೇಸಾ ಅವರ ಸೇವೆ ಅಜರಾಮರ ಎಂದರು.

ಅಧ್ಯಕ್ಷತೆ ವಹಿಸಿದ ಕಲಬುರಗಿಯ ಕಥೋಲಿಕ ಕ್ರೈಸ್ತ ಧರ್ಮಕ್ಷೇತ್ರದ ಗುರು ಫಾದರ್ ಸ್ಟೇನಿ ಲೋಬೊ ಮಾತನಾಡಿ, ಮದರ ತೆರೆಸಾ ಅವರ ನುಡಿನಮನ ಕಾರ್ಯಕ್ರಮ ಆಯೋಜಿಸುವ ಮೂಲಕ ಅವರ ಸೇವೆ, ಮಾಡಿದ ಸಾಧನೆ ತಿಳಿಸಿಕೊಡುವ ಕೆಲಸ ನಡೆಯುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ನಂತರ ನಗರಸಭೆ ಅಧ್ಯಕ್ಷ ಮೀರ ಅಜರ ನವರಂಗಲಿ ಮಾತನಾಡಿ, ಸತ್ಯಾನುಭವ ಕೇಂದ್ರಕ್ಕೆ ಸಿಸಿ ರಸ್ತೆ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳುವದಾಗಿ ಭರವಸೆ ನೀಡಿದರು. ಐಡಿಯಲ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮುಜಾಹಿದ್ ಪಾಶಾ ಮಾತನಾಡಿದರು. ಅಂತರಧರ್ಮಿಯರ ವೇದಿಕೆ ಅಧ್ಯಕ್ಷ ಅರ್ಜುನ ಕನಕ ಪ್ರಾಸ್ತಾವಿಕ ಮಾತನಾಡಿದರು. ಆರ್ಬಿಟ್ ಸಂಸ್ಥೆಯ ನಿರ್ದೇರ್ಶಕ ಫಾದರ್ ಬಾಪು, ಮದರ್ ತೆರಿಸಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಭರತ್ ಸಿಂಗ್ ಠಾಕೂರ, ಮುಖ್ಯ ಗುರು ಸಿಸ್ಟರ್ ಐರಿನ್, ಸತ್ಯಾನುಭವ ಅಂತರ್ಧರ್ಮಿಯರ ಸಂವಾದ ಕೇಂದ್ರದ ನಿರ್ದೇಶಕ ಫಾದರ್ ಜೋಶೆಫ್, ಡಿಸಿಸಿ ಬ್ಯಾಂಕ ನಿರ್ದೇಶಕ ಸಂಜಯಸಿಂಗ್ ಹಜಾರಿ, ಸಿಸ್ಟರ್ ಅಂಜೆಲಿನ್, ಫಾದರ್ ಕ್ಲೇರಿ, ಫಾದರ್ ಸಿರಿಲ್, ಶ್ವೇತಾ ಆಲಶೆಟ್ಟಿ, ಜ್ಯೋತಿ ಚಹ್ವಾಣ, ಸವಿತಾ ಬೆಲೂರೆ, ಆರತಿ ಗುತ್ತೆದಾರ, ದೀಪಾ ಲಕ್ಷ್ಮೀ, ಜ್ಯೋತಿ ಚಹ್ವಾಣ, ಸವಿತಾ ಬೆಲೂರೆ, ಆರತಿ ಗುತ್ತೆದಾರ, ದೀಪಾ ಲಕ್ಷ್ಮೀ , ಬಾಲಿಕಾ ಮೇತ್ರೆ, ಮಂದಾಕಿನಿ ಭಾಗವಹಿಸಿದ್ದರು.

**ದೇಣಿಗೆ:** ವಿಶ್ವ ದೆವಲಪರ್ಸ್‌ನ ಬಸವರಾಜ ಸ್ವಾಮಿ ಹಾಗೂ ಶಶಿಕಾಂತ ದುರ್ಗೆ ಅವರು ಇದೇ ಸಂದರ್ಭದಲ್ಲಿ ಅನಾಥ ಮಕ್ಕಳ ಆಶ್ರಮಕ್ಕೆ 21 ಸಾವಿರ ರೂ ದೇಣಿಗೆ ನೀಡಿದರು.

Scanned with CamScanner

# ‘ಸನ್ಮಾರ್ಗ ತೋರುವವನೇ ನಿಜವಾದ ಗುರು’

ವಿಜಯ ಕರ್ನಾಟಕ VK
ಗುರುವಾರ, 29 ಸೆಪ್ಟೆಂಬರ್ 2016, ಕಲಬುರಗಿ

**ವಿಕ ಸುದ್ದಿಲೋಕ** ಬಸವಕಲ್ಯಾಣ

ಮನುಷ್ಯನ ಬದುಕಿನಲ್ಲಿ ಗುರುವಿನ ಪಾತ್ರ ಅಮೂಲ್ಯವಾಗಿದೆ.

ತಾಯಿ ಜನ್ಮ ನೀಡಿದರೆ ಗುರು ದೀಕ್ಷೆ ನೀಡಿ ಸನ್ಮಾರ್ಗದತ್ತ ಕೊಂಡೊಯ್ಯುತ್ತಾರೆ ಎಂದು ತಡೋಳಾದ ರಾಜೇಶ್ವರ ಶಿವಾಚಾರ್ಯರು ಹೇಳಿದರು.

ನಗರದ ಹೊರವಲಯದಲ್ಲಿರುವ ತ್ರಿಪುರಾಂತನ ಮರಿದೇವರ ಗುಡ್ಡದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ 30ನೇ ಜನ್ಮದಿನೋತ್ಸವ ಹಾಗೂ 11ನೇ ಪಟ್ಟಾಧಿಕಾರ ವರ್ದಂತಿ ಮಹೋತ್ಸವದ ಸಾನ್ನಿಧ್ಯವಹಿಸಿ ಮಾತನಾಡಿ, ಮನುಷ್ಯನ ಸುಂದರ ಜೀವನಕ್ಕೆ ಗುರು ಉತ್ತಮ ಸಂಸ್ಕಾರ ನೀಡುತ್ತಾರೆ ಎಂದರು.

ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಸದಸ್ಯ ಶಿವರಾಜ ನರಶೆಟ್ಟಿ ಮಾತನಾಡಿ, ಈ ಕೆರೆ ದಡದಲ್ಲಿ ಶ್ರೀ ರೇಣುಕಾಚಾರ್ಯರ ಮೂರ್ತಿ ಪ್ರತಿಷ್ಠಾಪಿಸಲು ಬಿಕೆಡಿಬಿಯಿಂದ ಹಾಗೂ ಸರಕಾರದಿಂದ ಪ್ರಯತ್ನಿಸಲಾಗುವುದು ಎಂದರು.

ನಗರಸಭೆ ಅಧ್ಯಕ್ಷ ಮೀರ್ಅಜರಲಿ ನವರಂಗ ಮಾತನಾಡಿ, ಮಠದಲ್ಲಿ ಸಿಸಿ ರಸ್ತೆ ನಿರ್ಮಿಸಲಾಗುವುದು ಎಂದು ಭರವಸೆ ನೀಡಿ, ನಗರಕ್ಕೆ ವಿಶೇಷ 50 ಕೋಟಿ ರೂ. ಅನುದಾನ ತಂದು ಅಭಿವೃದ್ಧಿಪಡಿಸಲಾಗುವುದು ಎಂದರು.



ಬಸವಕಲ್ಯಾಣ ತ್ರಿಪುರಾಂತನ ಮರಿದೇವರ ಗುಡ್ಡದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ 30ನೇ ಜನ್ಮ ದಿನೋತ್ಸವ ಹಾಗೂ 11ನೇ ಪಟ್ಟಾಧಿಕಾರ ವರ್ದಂತಿ ಮಹೋತ್ಸವದಲ್ಲಿ ತಡೋಳಾದ ರಾಜೇಶ್ವರ ಶಿವಾಚಾರ್ಯರು ಮಾತನಾಡಿದರು.

ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪರ್ತಾಪುರ ಜಿಪಂ ಸದಸ್ಯ ಅಣ್ಣಾರಾವ್ ರಾಠೋಡ, ನಗರಸಭೆ ಉಪಾಧ್ಯಕ್ಷೆ ಚಮಾಬಾಯಿ ಮಾಲಗಾರ, ಗವಿ ಮಠದ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ನಗರಸಭೆ ನಾಮ ನಿರ್ದೇಶಿತ ಸದಸ್ಯ ನಾಗನಾಥ ಚಾಮಾಲೆ, ಪ್ರೊ.ಸೂರ್ಯಕಾಂತ ಶೀಲವಂತ ಇತರರಿದ್ದರು. ದಿಲೀಪಕುಮಾರ ಗದಲೇಗಂವ ಸ್ವಾಗತಿಸಿದರು. ಎಸ್ಎಂ ಭಕ್ತ ಕುಂಬಾರ ನಿರೂಪಿಸಿದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI « KALABURAGI
ಗುರುವಾರ 6 ಅಕ್ಟೋಬರ್ 2016
6 OCTOBER 2016

## ಡಿಸೆಂಬರ್ 11ರಂದು ಕೂಡಲ ಸಂಗಮದಲ್ಲಿ ಆಯೋಜಿಸಲಾಗಿದೆ ಸಮಾಜದ ಸಮಾವೇಶ

# ಚೈತನ್ಯ ಜ್ಯೋತಿ ಯಾತ್ರೆಗೆ ಭವ್ಯ ಸ್ವಾಗತ

**ವಿಜಯವಾಣಿ ಸುದ್ದಿಜಾಲ** ಬಸವಕಲ್ಯಾಣ

ಸಾಧ್ವಿ ಶಿರೋಮಣಿ, ಮಹಾ ಶಿವಶರಣೆ ಹೇಮರಡ್ಡಿ ಮಲ್ಲಮ್ಮನವರ ಜೀವನ ಚರಿತ್ರೆ, ಸಾರಿದ ಸಂದೇಶಗಳನ್ನು ಜನರಿಗೆ ತಿಳಿಸುವ ಉದ್ದೇಶದಿಂದ ಶ್ರೀಶೈಲ್ ಮಲ್ಲಿಕಾರ್ಜುನ ಸಮಾಜೋತ್ಥಾನ ಫೌಂಡೇಶನ್ ಮತ್ತು ಕರ್ನಾಟಕ ರಡ್ಡಿ ಸಮಾಜದ ಆಶ್ರಯದಲ್ಲಿ ಆಯೋಜಿಸಿರುವ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಚೈತನ್ಯ ಜ್ಯೋತಿ ರಥ ಯಾತ್ರೆಗೆ ನಗರದಲ್ಲಿ ಬುಧವಾರ ಭವ್ಯ ಸ್ವಾಗತ ನೀಡಲಾಯಿತು.

ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕದಲ್ಲಿ ಸಂಚರಿಸುತ್ತಿರುವ ಚೈತನ್ಯ ಜ್ಯೋತಿ ರಥಯಾತ್ರೆಗೆ ತ್ರಿಪುರಾಂತ ಪ್ರವಾಸಿ ಮಂದಿರದ ಬಳಿ ಜೈಘೋಷಗಳ ಮಧ್ಯೆ ಶ್ರದ್ಧಾ ಭಕ್ತಿಯಿಂದ ಸ್ವಾಗತಿಸಿ ಬರಮಾಡಿಕೊಳ್ಳಲಾಯಿತು.

ರಥ ಯಾತ್ರೆಗೆ ಪೂಜೆ ಸಲ್ಲಿಸುವ ಮೂಲಕ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು. ಸಾಂಸ್ಕೃತಿಕ ವೈಭವದೊಂದಿಗೆ ನಗರದ ಮುಖ್ಯರಸ್ತೆ ಮಾರ್ಗವಾಗಿ ಬಸವೇಶ್ವರ ವೃತ್ತದವರೆಗೆ ಮೆರವಣಿಗೆ ಜರುಗಿತು.

ಮೆರವಣಿಗೆಯಲ್ಲಿ ಸಿಡಿಮದ್ದುಗಳ ಸದ್ದಿನ ಮಧ್ಯೆ ಡೊಳ್ಳು ಕಲಾ ಕಂಡದಿಂದ ನಡೆದ ಪ್ರದರ್ಶನ, ತಾಲೂಕಿನ ತೊಗಲೂರನ ಹೇಮರಡ್ಡಿ ಮಲ್ಲಮ್ಮ ಮಹಿಳಾ ಭಜನಾ ಮಂಡಳಿಯ ಸದಸ್ಯರ ಭಜನೆ ಮೆರಗು ನೀಡಿತು.

ಜಿಪಂ ಸದಸ್ಯ ಗುಂಡುರೆಡ್ಡಿ, ತಾಲೂಕು ರೆಡ್ಡಿ ಸಮಾಜದ ಅಧ್ಯಕ್ಷ ಮಲ್ಲರೆಡ್ಡಿ ಪಾಟೀಲ್, ತಾಪಂ

ವಿಜಯವಾಣಿ ಚಿತ್ರ



ಚೈತನ್ಯ ಜ್ಯೋತಿ ರಥಯಾತ್ರೆಗೆ ಬಸವಕಲ್ಯಾಣ ನಗರದಲ್ಲಿ ಬುಧವಾರ ಸ್ವಾಗತಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಜಿಪಂ ಸದಸ್ಯ ಗುಂಡುರೆಡ್ಡಿ, ಮಲ್ಲಾರೆಡ್ಡಿ ಪಾಟೀಲ್ ಇತರರಿದ್ದರು.

## ಗವಿಮಠ : ಸಾಮೂಹಿಕ ಇಷ್ಟಲಿಂಗ ಪೂಜೆ ಇಂದು



ಬಸವಕಲ್ಯಾಣ : ಮಹಾ ಶಿವರಾತ್ರಿ ನಿಮಿತ್ಯ ಮರಿದೇವರ ಗುಡ್ಡದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ಕರ್ತೃ ಗದ್ದುಗೆಯ ಮಠದಲ್ಲಿ ಗವಿ ಮಠ ಟ್ರಸ್ಟ ಹಾಗೂ ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕಾ ಘಟಕದ ವತಿಯಿಂದ ನಾಳೆ ಶುಕ್ರವಾರ ಮಧ್ಯಾಹ್ನ 1.30 ಗಂಟೆಗೆ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನಿಧ್ಯದಲ್ಲಿ ಇಷ್ಟಲಿಂಗ ದೀಕ್ಷೆ ಹಾಗೂ ಸಾಮೂಹಿಕ ಇಷ್ಟಲಿಂಗ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ.

ಆದ್ದರಿಂದ ಸಕಲ ಸದ್ಭಕ್ತರು ಈ ಇಷ್ಟಲಿಂಗ ಪೂಜೆಯಲ್ಲಿ ಪಾಲ್ಗೊಂಡು ಕೃತಾರ್ಥರಾಗಲು ಗವಿಮಠದ ಪ್ರಕಟಣೆಯಲ್ಲಿ ತಿಳಿಸಿದೆ.

## ಗವಿಮಠದಲ್ಲಿ ಪೂಜೆ

ಬಸವಕಲ್ಯಾಣ: ಮಹಾಶಿವರಾತ್ರಿ ನಿಮಿತ್ತ ತ್ರಿಪುರಾಂತನ ಗವಿಮಠದಲ್ಲಿ ಗವಿಮಠ ಟ್ರಸ್ಟ ಹಾಗೂ ಶ್ರೀ ಮದ್ವೀರಶೈವ ಸದ್ಬೋದನಾ ಸಂಸ್ಥೆ ತಾಲೂಕಾ ಘಟಕದ ಆಶ್ರಯದಲ್ಲಿ ಶುಕ್ರವಾರ ಮಧ್ಯಾಹ್ನ 1.30ಕ್ಕೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಇಷ್ಟಲಿಂಗ ದೀಕ್ಷೆ ಹಾಗೂ ಸಾಮೂಹಿಕ ಇಷ್ಟಲಿಂಗ ಪೂಜೆಯನ್ನು ಆಯೋಜಿಸಲಾಗಿದ್ದು, ಭಕ್ತರು ಭಾಗವಹಿಸಬೇಕು ಎಂದು ಕೋರಲಾಗಿದೆ.

Scanned with CamScanner

ಶುಕ್ರವಾರ, 14, ಅಕ್ಟೋಬರ್, 2016, ಕಲಬುರಗಿ
ಸಂಯುಕ್ತ ಕರ್ನಾಟಕ

# ಗವಿ ಮಠದಲ್ಲಿ ನಾಡಹಬ್ಬ ಆಚರಣೆ

ಬಸವಕಲ್ಯಾಣ : ಇತಿಹಾಸ ಪ್ರಸಿದ್ಧ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠದಲ್ಲಿ ಪೂಜ್ಯ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನಿಧ್ಯದಲ್ಲಿ ಶಮಿ(ಬನ್ನಿ) ಮರಕ್ಕೆ ಪೂಜೆ ಸಲ್ಲಿಸುವುದರ ಮೂಲಕ ನಾಡಹಬ್ಬ ದಸರಾವನ್ನು ಆಚರಿಸಲಾಯಿತು.

ಈ ಸಂದಂರ್ಭದಲ್ಲಿ ಆಶೀರ್ವಚನ ನೀಡಿದ ಪೂಜ್ಯರು ತಾಯಿ ಜಗನ್ಮಾತೆಯು ಮಹಾಶಕ್ತಿಯಾಗಿದ್ದು, ದುಷ್ಟಶಕ್ತಿಯನ್ನು ಸಂಹರಿಸಿ ನಮ್ಮನ್ನು ರಕ್ಷಿಸಿದ್ದಕ್ಕಾಗಿ ಒಂಬತ್ತು ದಿನಗಳ ಕಾಲ ದೇವಿಯನ್ನು ಪೂಜಿಸಿ ಹಾಗೇಯೆ ಪಾಂಡವರು ವಿಜಯವನ್ನು ಸಾಧಿಸಿದ ಸಂಕೇತವಾಗಿ ವಿಜಯದಶಮಿಯನ್ನು ನಾಡಹಬ್ಬ ದಸರಾ ಎಂದು ವಿಜೃಂಬಣೆಯಿಂದ ಆಚರಿಸಲಾಗುತ್ತಿದೆ.

ಹೀಗಾಗಿ ಎಲ್ಲರಿಗೂ ಜಗನ್ಮಾತೆಯು ಆಶೀರ್ವದಿಸಿ ರಕ್ಷಿಸಲೆಂದು ಹಾರೈಸಿದರು. ಈ ಸಂದಂರ್ಭದಲ್ಲಿ ಶರಣಪ್ಪಾ ಬಿರಾದಾರ, ವೀರಣ್ಣಾ ಶೀಲವಂತ, ರುದ್ರಮಣಿ ಮಠ, ಪ್ರೊ. ಸೂರ್ಯಕಾಂತ ಶೀಲವಂತ, ಪ್ರೊ. ರುದ್ರೇಶ್ವರ ಗೋರ್ಟಾ, ಮಹಾದೇವ ಪಾಟೀಲ್, ಕಾಶಿನಾಥ ಸ್ವಾಮಿ, ಚಂದ್ರಕಾಂತ ಪಾಟೀಲ್, ರೇವಣ್ಣಸಿದ್ಧ ವಸ್ತ್ರದ, ಗೌರೀಶಂಕರ ಇದ್ದರು.



ಬಸವಕಲ್ಯಾಣ ನಗರದ ತ್ರಿಪೂರಾಂತದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ನಾಡಹಬ್ಬವನ್ನು ಆಚರಿಸಲಾಯಿತು.

ವಿಜಯ ಕರ್ನಾಟಕ VK
ಶುಕ್ರವಾರ, 14 ಅಕ್ಟೋಬರ್ 2016, ಕಲಬುರಗಿ

# ಗವಿ ಮಠದಲ್ಲಿ ದಸರಾ ಆಚರಣೆ



ಬಸವಕಲ್ಯಾಣದ ತ್ರಿಪುರಾಂತನ ಗವಿ ಮಠದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಶಮಿ (ಬನ್ನಿ) ಮರಕ್ಕೆ ಪೂಜೆ ಸಲ್ಲಿಸುವುದರ ಮೂಲಕ ನಾಡ ಹಬ್ಬ ದಸರಾ ಆಚರಿಸಲಾಯಿತು. ಪ್ರಮುಖರು ಇದ್ದರು.

**ಬಸವಕಲ್ಯಾಣ:** ಇಲ್ಲಿಯ ತ್ರಿಪುರಾಂತನ ಐತಿಹಾಸಿಕ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿ ಮಠದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರ ಸಾನ್ನಿಧ್ಯದಲ್ಲಿ ಶಮಿ (ಬನ್ನಿ) ಮರಕ್ಕೆ ಪೂಜೆ ಸಲ್ಲಿವುದರ ಮೂಲಕ ನಾಡ ಹಬ್ಬ ದಸರಾವನ್ನು ಸಂಭ್ರಮದಿಂದ ಆಚರಿಸ ಲಾಯಿತು.

ಆಶೀರ್ವಚನ ನೀಡಿದ ಅಭಿನವ ಶ್ರೀಗಳು ತಾಯಿ ಜಗನ್ಮಾತೆಯು ಮಹಾ ಶಕ್ತಿಯಾಗಿದ್ದು, ದುಷ್ಟಶಕ್ತಿಯನ್ನು ಸಂಹರಿಸಿ ನಮ್ಮನ್ನು ರಕ್ಷಿಸಿದ್ದಕ್ಕಾಗಿ ಒಂಬತ್ತು ದಿನಗಳ ಕಾಲ ದೇವಿಯನ್ನು ಪೂಜಿಸಿ ಹಾಗೇ ಪಾಂಡವರು ವಿಜಯವನ್ನು ಸಾಧಿಸಿದ ಸಂಕೇತವಾಗಿ ವಿಜಯ ದಶಮಿಯನ್ನು ನಾಡಹಬ್ಬ ದಸರಾ ಎಂದು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಹೀಗಾಗಿ ಎಲ್ಲರಿಗೂ ಜಗನ್ಮಾತೆಯು ಆಶೀರ್ವದಿಸಿ ರಕ್ಷಿಸಲೆಂದು ಹಾರೈಸಿದರು

ಶರಣಪ್ಪಾ ಬಿರಾದಾರ, ವೀರಣ್ಣಾ ಶೀಲವಂತ, ರುದ್ರಮಣಿ ಮಠ, ಪ್ರೊ .ಸೂರ್ಯಕಾಂತ ಶೀಲವಂತ, ಪ್ರೊ. ರುದ್ರೇಶ್ವರ ಗೋರ್ಟಾ, ಮಹಾದೇವ ಪಾಟೀಲ್, ಕಾಶಿನಾಥ ಸ್ವಾಮಿ, ಚಂದ್ರಕಾಂತ ಪಾಟೀಲ್, ರೇವಣ್ಣಸಿದ್ಧ ವಸ್ತ್ರದ, ಗೌರಿಶಂಕರ ಮತ್ತಿತರರು ಭಾಗವಹಿಸಿದ್ದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ದಸರಾ ಹಬ್ಬದ ನಿಮಿತ್ತ ಶಮಿ ( ಬನ್ನಿ ) ಮರಕ್ಕೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪೂಜೆ ಸಲ್ಲಿಸಿದರು. ಶರಣಪ್ಪಾ ಬಿರಾದಾರ್, ವೀರಣ್ಣ ಶೀಲವಂತ, ರುದ್ರಮಣಿ ಮಠ, ಪ್ರೊ.ಸೂರ್ಯಕಾಂತ ಶೀಲವಂತ, ಪ್ರೊ.ರುದ್ರೇಶ್ವರ ಗೋರ್ಟಾ, ಮಹಾದೇವ ಪಾಟೀಲ್, ಚಂದ್ರಕಾಂತ ಪಾಟೀಲ್, ರೇವಣ್ಣಸಿದ್ಧ ವಸ್ತ್ರದ ಭಾಗವಹಿಸಿದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI «KALABURAGI
ಶುಕ್ರವಾರ 14 ಅಕ್ಟೋಬರ್ 2016
14 OCTOBER 2016

Scanned with CamScanner

ಗುರುವಾರ
2 ಮಾರ್ಚ್ 2017
2 MARCH 2017

## ದಿನದ ಚಿತ್ರ

ವಿಜಯವಾಣಿ ಚಿತ್ರ



### ಹಿಂದುಗಳ ರಕ್ಷಣೆಗೆ ಮನವಿ

ಕೇರಳದಲ್ಲಿನ ಹಿಂದುಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಹಿಂದುಪರ ಸಂಘಟನೆ ಪ್ರಮುಖರು, ಸಂತರು ಮನವಿ ಪತ್ರ ಸಲ್ಲಿಸಿದರು.

# ಬದುಕಿಗಾಗಿ ಆಹಾರ ಸೇವಿಸಿ, ಆಹಾರಕ್ಕಾಗಿ ಬದುಕಬೇಡಿ : ಮಠಪತಿ

ಬಸವಕಲ್ಯಾಣ : ನಮ್ಮ ಬದುಕಿಗೆ ಅವಶ್ಯಕತೆ ಇರುವಷ್ಟು ಮಾತ್ರ ಆಹಾರ ಸೇವಿಸಬೇಕು. ಆಹರ ಸೇವನೆಆಗಿ ಬದುಕುವ ಜೀವನ ವ್ಯರ್ಥ ಎಂದು ವೈದ್ಯಾಧಿಕಾರಿ ಡಾ. ವಿ.ಎಸ್. ಮಠಪತಿ ಹೇಳಿದರು.

ಇಲ್ಲಿನ ಆರ್ಯ ಸಮಾಜ ಭವನದಲ್ಲಿ ಹಮ್ಮಿಕೊಂಡ ಮಹರ್ಷಿ ದಯಾನಂದ ಸರಸ್ವತಿ ಮಹಾನಿರ್ವಾಣ ಜಯಂತಿ ಹಾಗೂ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ ನಾವು ಸೇವಿಸುವ ಆಹಾರ ಶುದ್ಧವಾಗಿರಬೇಕು. ಆಹಾರದ ಇತಿ ಮಿತಿಯೊಂದಿಗೆ ಯೋಗಾಸನ, ವ್ಯಾಯಾಮ, ಪ್ರಾಣಾಯಾಮ ಮುಂತಾದ ಚ ಟ ಎ ವ ಟ ಕ ಗ ಳ ನ ಅಳವಡಿಸಿಕೊಳ್ಳುವುದರಿಂದ ದಿನನಿತ್ಯದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಿದೆ ಎಂದು ನುಡಿದರು.




ಬಸವಕಲ್ಯಾಣ ಆರ್ಯಸಮಾಜ ಭವನದಲ್ಲಿ ಹಮ್ಮಿಕೊಂಡ ಮಹರ್ಷಿ ದಯಾನಂದ ಸರಸ್ವತಿ ಮಹಾನಿರ್ವಾಣ ಹಾಗೂ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ. ವಿಸ್. ಮಠಪತಿ ಮಾತನಾಡಿದರು.

ನಂತರ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿ ನೇತ್ರತ್ವ ವಹಿಸಿ ಮಾತನಾಡಿ ಆಯುರ್ವೇದ ಪದ್ಧತಿ ವಿಶ್ವಕ್ಕೆ ಅತಿ ಬಹುದೊಡ್ಡ ಕೊಡುಗೆಯಾಗಿದೆ. ಇದರಲ್ಲಿ ಔಷಧ ಮತ್ತು ಆಹಾರ ರೂಪದಲ್ಲಿ ಬಳಸಿದರೆ ಹಲವಾರು ರೋಗಗಳಿಂದ ಗುಣ ಮುಕ್ತರಾಗಬಹುದು. ರೈತರು ತಮ್ಮ ಹೊಲಗದ್ದೆಗಳಲ್ಲಿ ಬೆಳೆಸುವಂತ ಬೆಳೆಗಳಿಗೆ ರಾಸಾಯನಿಕ ಸಿಂಪರಣೆ ಮಾಡುವದನ್ನು ಕಡಿಮೆ ಮಾಡಿ ಸಾವಯಕ(ತಿಪ್ಪೆ) ಗೋಬ್ಬರ ಬಳಸುವದರಿಂದ ಬೆಳೆ ಸಮೃದ್ಧವಾಗಿ ಬೆಳೆಯುವದಲ್ಲದೇ ಆಹಾರದ ಗುಣಮಟ್ಟದಿಂದ ಕೂಡಿರುತ್ತದೆ. ಹೀಗಾಗಿ ರೈತರು ರಾಸಾಯನಿಕ ಬಳಕೆ ಮಾಡಬೇಡಿ ಸಲಹೆ ನೀಡಿದರು.

ರಾಮಚಂದ್ರ ವೀರಪ್ಪಾ ಮಹಿಳಾ ಕಾಲೇಜ್ ಪ್ರೋ. ಭೀಮರಾವ ಕುಲಕರ್ಣಿ ಉಪನ್ಯಾಸ ನೀಡುತ್ತ ಆಹಾರ ಸರ್ವಾಧಿಕಾರದಿಂದ ಮನುಷ್ಯನ ಆಹಾರ ಪದ್ಧತಿ ಹದಗೆಡುತ್ತಿದೆ ಎಂದರು. ಆರ್ಯ ಸಮಾಜ ಅಧ್ಯಕ್ಷ ನಾರಾಯಣ ಬುನ್ನಾ ಅಧ್ಯಕತೆ ವಹಿಸಿದರು. ಡಾ. ಬಸವರಾಜ್ಞ ಸ್ವಾಮಿ ಪ್ರಾಸ್ತಾವಿಕ ಮಾತನಾಡಿದರು. ದೇವಿಂದ್ರ ಬರಗಾಲೆ ನಿರೂಪಿಸಿದರು. ಶರಣ್ಪ ಗದಲೆಗಾಂವ ಸ್ವಾಗತಿಸಿದರು. ಭೀಮಾಶಂಕರ ಬೀರಾದಾರ ವಂದಿಸಿದರು.

ಸಂಯುಕ್ತ ಕರ್ನಾಟಕ
ಮಂಗಳವಾರ, 1, ನವೆಂಬರ್, 2016, ಕಲಬುರಗಿ

Scanned with CamScanner

ಪ್ರಜಾವಾಣಿ • ಶುಕ್ರವಾರ • ನವೆಂಬರ್ 4, 2016

## ಬಸವಕಲ್ಯಾಣ: ರಾಷ್ಟ್ರೀಯ ಆಯುರ್ವೇದ ದಿನಾಚರಣೆಯಲ್ಲಿ ಅಭಿಮತ

# ‘ಬರೀ ಮಾತು ಸಾಕು, ಪರಿವರ್ತನೆಗೆ ಯತ್ನಿಸಿ’

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ‘ಬರೀ ಮಾತಾಡುವುದು ಸಾಕು. ಸಮಾಜ ಮತ್ತು ಜೀವನ ಕ್ರಮದಲ್ಲಿ ಪರಿವರ್ತನೆ ತರಲು ಎಲ್ಲರೂ ಪ್ರಯತ್ನಿಸಬೇಕು’ ಎಂದು ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರ ಮುನಿ ಶಿವಾಚಾರ್ಯರು ಸಲಹೆ ನೀಡಿದರು.

ಪತಂಜಲಿ ಯೋಗ ಸಮಿತಿ ಆಶ್ರಯದಲ್ಲಿ ಇಲ್ಲಿನ ಆರ್ಯಸಮಾಜ ಭವನದಲ್ಲಿ ಈಚೆಗೆ ಆಯೋಜಿಸಿದ್ದ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಮತ್ತು ಸ್ವಾಮಿ ದಯಾನಂದ ಸರಸ್ವತಿ ಪುಣ್ಯತಿಥಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಸಾಯನಿಕ ಗೊಬ್ಬರದ ಬಳಕೆ ಮತ್ತು ಔಷಧ ಸಿಂಪಡಣೆಯಿಂದ ಆಹಾರ ವಿಷಯುಕ್ತ ಆಗುತ್ತಿದೆ. ಆದ್ದರಿಂದ ಸಾವಯವ ಪದ್ಧತಿಯಿಂದ ಬೆಳೆದ ಆಹಾರ ಸೇವಿಸಬೇಕು ಎಂದು ಅವರು ತಿಳಿಸಿದರು.

ಸಿರಿಧಾನ್ಯಗಳ ಬಳಕೆಯಿಂದ ಸಕ್ಕರೆ ಕಾಯಿಲೆ, ರಕ್ತದ ಒತ್ತಡ ಹಿಡಿತದಲ್ಲಿ ಇಡಬಹುದು. ಬೆಳಿಗ್ಗೆ ಹಸಿರು ಚಹಾ ಸೇವನೆ ಮಾಡಬೇಕು. ಚಹಾಕ್ಕೆ ಬಿಲ್ವಪತ್ರೆ ಎಲೆಗಳನ್ನು ಸೇರಿಸಿ ಕುದಿಸಿದರೆ ಉತ್ತಮ ಚಹಾ ಸಿದ್ಧವಾಗುತ್ತದೆ.

ಊರ ಹೊರಗೆ ಓಡಾಡಿದರೆ ಉತ್ತಮ ಗಾಳಿ ಯಿಂದ ಆಮ್ಲಜನಕ ಪಡೆಯಬಹುದು ಎಂದರು.



ಬಸವಕಲ್ಯಾಣದಲ್ಲಿ ಈಚೆಗೆ ಆಯೋಜಿಸಿದ್ದ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯಲ್ಲಿ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಡಾ.ಬಸವರಾಜ ಸ್ವಾಮಿ ಪಾಲ್ಗೊಂಡಿದ್ದರು

ಸಾರ್ವಜನಿಕ ಆಸ್ಪತ್ರೆ ಮುಖ್ಯವೈದ್ಯ ಡಾ.ವಿ.ಎಸ್.ಮಠಪತಿ ಮಾತನಾಡಿ, ಎಷ್ಟು ಬೇಕೋ ಅಷ್ಟೇ ಆಹಾರವನ್ನು ಸೇವಿಸಬೇಕು. ಹೆಚ್ಚಿಗೆ ತಿಂದು ಬೊಜ್ಜು ಬೆಳೆಸಿಕೊಳ್ಳುವುದು ಬೇಡ ಎಂದರು.

ಧನ್ವಂತರಿ ಮೊಟ್ಟ ಮೊದಲನೇ ಶಸ್ತ್ರ ಚಿಕಿತ್ಸಕ ಎಂದು ಹೇಳಲಾಗುತ್ತದೆ. ಅವರ ಜಯಂತಿಯೂ ಇದೇ ದಿನ ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಉಪನ್ಯಾಸಕ ಭಗವಾನರಾವ ಕುಲಕರ್ಣಿ ಮಾತನಾಡಿ, ಯೋಗ ಸಾಧನೆಯಿಂದ ರೋಗವನ್ನು ದೂರ ಇಡಬಹುದು. ರಾಮದೇವ ಬಾಬಾ ಅವರು ಯೋಗಕ್ಕೆ ಮಹತ್ವ ಬರುವಲ್ಲಿ ಸಾಕಷ್ಟು ಪ್ರಯತ್ನಿಸಿದ್ದಾರೆ. ಇದಕ್ಕೆ ಜಾಗತಿಕ ಮನ್ನಣೆ ದೊರಕಿಸಿ ಕೊಟ್ಟಿದ್ದಾರೆ ಎಂದರು.

ಪತಂಜಲಿ ಯೋಗ ಸಮಿತಿ ತಾಲ್ಲೂಕು ಘಟಕದ ಅಧ್ಯಕ್ಷ ಡಾ.ಬಸವ ರಾಜ ಸ್ವಾಮಿ ಮಾತನಾಡಿ, ಆಯುರ್ವೇದದಿಂದ ಪ್ರತಿ ರೋಗ ಗುಣಪಡಿಸಬಹುದು. ಅಲೋಪಥಿಯಿಂದ ಸಾಧ್ಯ ಆಗದಿರುವುದು ಆಯುರ್ವೇದದಿಂದ ಸಾಧ್ಯ. ಇದಕ್ಕೆ ಖರ್ಚು ಕೂಡ ಕಡಿಮೆ ಬರುತ್ತದೆ. ಕೇಂದ್ರ ಸರ್ಕಾರ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಆಚರಿಸುವ ನಿರ್ಣಯ ತೆಗೆದುಕೊಂಡಿರುವುದು ಸಂತಸದ ಸಂಗತಿ ಎಂದರು.

**ಮುಖ್ಯಾಂಶಗಳು**

- ಉತ್ತಮ ಆರೋಗ್ಯ ವೃದ್ಧಿಸಿಕೊಳ್ಳಲು ಸಲಹೆ
- ನೈಸರ್ಗಿಕ ಅಂಶಗಳಿಗೆ ಒತ್ತು ನೀಡಲು ಮನವಿ
- ರೋಗ ನಿವಾರಣೆಗೆ ಆಯುರ್ವೇದ ಸೂಕ್ತ

ಹಿರಿಯರಾದ ಮಾಣಿಕರಾವ ಲಾಡ ಮಾತನಾಡಿ, ದಯಾನಂದ ಸರಸ್ವತಿ ಅವರು ಸರ್ವಸಮಾನತೆ ಸಾರುವ ಮತ್ತು ವೇದಗಳ ಮಾರ್ಗದಲ್ಲಿ ಸಾಗುವ ಆರ್ಯಸಮಾಜ ವನ್ನು ಸ್ಥಾಪಿಸಿದರು. ಮಾನವ ಒಳಿತಿಗೆ ಅವರ ಕೊಡುಗೆ ದೊಡ್ಡದು ಎಂದರು.

ನಾರಾಯಣ ಬುನ್ನಾ ಅಧ್ಯಕ್ಷತೆ ವಹಿಸಿದ್ದರು. ದೇವೇಂದ್ರ ಬರಗಾಲೆ ಸ್ವಾಗತಿಸಿದರು. ಶರಣಪ್ಪ ಗದ್ದೇಗಾಂವ ನಿರೂಪಿಸಿದರು. ಭೀಮಾಶಂಕರ ಬಿರಾದಾರ ವಂದಿಸಿದರು.

## ಬಸವಕಲ್ಯಾಣ ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ

# ಕಾರ್ಯಕಾರಣಿ ಸಮಿತಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ತ್ರಿಪುರಾಂತ ಗವಿ ಮಠದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆಯ ತಾಲೂಕು ಘಟಕದ ಕಾರ್ಯಕಾರಣಿ ಸಮಿತಿ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, 9 ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಹಾಗೂ 56 ಜನರನ್ನು ಸಂಸ್ಥೆಯ ಸದಸ್ಯರನ್ನಾಗಿ ನೇಮಕ ಮಾಡಲಾಯಿತು.

ಪ್ರಮುಖರಾದ ಸುನೀಲ ಪಾಟೀಲ, ಎ.ಜಿ. ಪಾಟೀಲ, ರೇವಣಸಿದ್ದಯ್ಯ ಮಠಪತಿ, ಡಾ. ಬಸವರಾಜ ಸ್ವಾಮಿ, ಮಾಜಿ ಸೈನಿಕ ಶಿವಕುಮಾರ ಸ್ವಾಮಿ, ಚಂದ್ರಕಾಂತ ಸ್ವಾಮಿ, ಮಹಾದೇವ ಕಾಮಶೆಟ್ಟಿ, ಬಸಲಿಂಗಯ್ಯ ಸ್ವಾಮಿ, ರಾಜಕುಮಾರ ದೇವಗಾಂವ, ಸುರೇಶ ಸ್ವಾಮಿ, ಚಂದ್ರಶೇಖರ ಪಾಟೀಲ, ರಮೇಶ ಬುಕ್ಕಿಗಾರ ಇದ್ದರು. ಪದಾಧಿಕಾರಿಗಳು: ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು (ಗೌರವಾಧ್ಯಕ್ಷರು), ಬಸವಂತಪ್ಪ ಲವಾರೆ(ಅಧ್ಯಕ್ಷ) ದಯಾನಂದ ಶೀಲವಂತ (ಉಪಾಧ್ಯಕ್ಷ), ರುದ್ರೇಶ್ವರ ಗೋರ್ಟಾ (ಪ್ರಧಾನ ಕಾರ್ಯದರ್ಶಿ), ಕಾಶಿನಾಥ ಸ್ವಾಮಿ (ಕಾರ್ಯದರ್ಶಿ), ವೀರಶೆಟ್ಟಿ ಮಲಶೆಟ್ಟಿ(ಸಹಕಾರ್ಯದರ್ಶಿ), ಮಲ್ಲಿಕಾರ್ಜುನ ನಂದಿ (ಕೋಶಾಧ್ಯಕ್ಷ) ರಮೇಶ ರಾಜೋಳೆ (ಸಂಘಟನಾ ಕಾರ್ಯದರ್ಶಿ), ಪ್ರಭುಲಿಂಗಯ್ಯ ಟಂಕಸಾಲಿಮಠ (ಪ್ರಚಾರ ಸಮಿತಿ ಸದಸ್ಯ).

ವಿಜಯವಾಣಿ ಚಿತ್ರ



ಬಸವಕಲ್ಯಾಣ ತ್ರಿಪುರಾಂತ ಗವಿ ಮಠದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆಯ ತಾಲೂಕು ಘಟಕದ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI »KALABURAGI
ಗುರುವಾರ
10 ನವೆಂಬರ್ 2016
10 NOVEMBER 2016

ವಿಜಯವಾಣಿ ಚಿತ್ರ



ಬಸವಕಲ್ಯಾಣದ ತ್ರಿಪುರಾಂತನ ಗವಿಮಠದಲ್ಲಿ 68ನೇ ಗಣರಾಜೋತ್ಸವ ಆಚರಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಬಿಕೆಡಿಬಿ ಸದಸ್ಯ ಶಿವರಾಜ ನರಶೆಟ್ಟಿ, ಶ್ರೀಮದವೀರಶೈವ ಸದಭೋದನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂಧಿ ಇತರರಿದ್ದರು.

ಸೋಮವಾರ
30 ಜನವರಿ 2017
30 JANUARY 2017

Scanned with CamScanner

## ಹುಲಸೂರನ ಅನುಭವ ಮಂಟಪ ಪರಿಸರದಲ್ಲಿ ಮಠಾಧೀಶರ ಸಮಾವೇಶ

# ಮಠಗಳ ಕೊಡುಗೆ ಅನನ್ಯ

**ವಿಜಯವಾಣಿ ಸುದ್ದಿಜಾಲ** ಬಸವಕಲ್ಯಾಣ

ಸಮಾಜದಲ್ಲಿ ಸಾಮರಸ್ಯ ಮೂಡಿಸುವ ಜತೆಜತೆಗೆ ನಾಡಿನ ಪ್ರಗತಿಯಲ್ಲಿ ಮಠಗಳ ಕೊಡುಗೆ ಅನನ್ಯವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ತಾಲೂಕಿನ ಹುಲಸೂರ ಹೊರವಲಯದ ಶ್ರೀ ಜಗದ್ಗುರು ಅಲ್ಲಮಪ್ರಭು ಶೂನ್ಯ ಪೀಠ, ಅನುಭವ ಮಂಟಪ ಪರಿಸರದಲ್ಲಿ ಭಾನುವಾರ ಸಂಜೆ ಆಯೋಜಿಸಿದ ಹಾನಗಲ್ ಕುಮಾರ ಶಿವಯೋಗಿಗಳ 150ನೇ ಜಯಂತಿ ಮಹೋತ್ಸವ ಹಾಗೂ ಜಿಲ್ಲಾ ಮಠಾಧೀಶರ ಸಮಾವೇಶದಲ್ಲಿ ಮಾತನಾಡಿದ ಸಚಿವರು, ಶೈಕ್ಷಣಿಕ ಪ್ರಗತಿಗೆ ನಾಡಿನ ಮಠಗಳು ನೀಡುತ್ತಿರುವ ಕೊಡುಗೆ ಶ್ಲಾಘನೀಯ ಎಂದರು.

ಅತಿವೃಷ್ಟಿಯಿಂದ ಜಿಲ್ಲೆಯಲ್ಲಿ ಸಂಭವಿಸಿದ ಬೆಳೆ ಹಾನಿಯಿಂದ ರೈತರು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಮುಖ್ಯಮಂತ್ರಿ ಜಿಲ್ಲೆಗೆ ಭೇಟಿ ಬೆಳೆ ಹಾನಿ ಕುರಿತು ವೀಕ್ಷಿಸಿ, ಪರಿಹಾರ ಬಿಡುಗಡೆ ಮಾಡಿದ್ದಾರೆ. ರೈತರ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಕ್ರಮ ಕೈಗೊಂಡಿದೆ. ಹುಲಸೂರನಲ್ಲಿ ಸ್ಮಶಾನ ಭೂಮಿ ಮಂಜೂರಿ ಮಾಡಬೇಕು ಎನ್ನುವ ಬೇಡಿಕೆ ಇದ್ದು, ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಚಿವರು ಭರವಸೆ ನೀಡಿದರು.

ಶಾಸಕ ಮಲ್ಲಿಕಾರ್ಜುನ ಖೂಬಾ ಮಾತನಾಡಿ, ಹುಲಸೂರ ಭಾಗದಲ್ಲಿ ರಸ್ತೆ, ಚರಂಡಿ ಸೇರಿದಂತೆ ಮೂಲ ಸೌಲಭ್ಯದ ಕೊರತೆ ಹಲವೆಡೆ ಇದ್ದು, ಇಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ನಡೆಯಬೇಕಿದೆ. ಹೆಚ್ಚಿನ ಅನುದಾನ ಕಲ್ಪಿಸಿ ಗಡಿ ಭಾಗದ ಜನರಿಗೆ ಅನುಕೂಲ ಕಲ್ಪಿಸಲು ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿ ಗ್ರಾಮದಲ್ಲಿ ಶ್ರೀ ಬಸವೇಶ್ವರರ ನೂತನ ಪ್ರತಿಮೆ ಸ್ಥಾಪನೆಗೆ ಕ್ರಮ ಕೈಗೊಂಡು ಜನರ ಸಮಸ್ಯೆಗಳಿಗೆ ಸ್ಪಂದಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಶಾಸಕ ಅಶೋಕ ಖೇಣಿ ಮಾತನಾಡಿ, ಈ ಭಾಗದಲ್ಲಿ ರಸ್ತೆಗಳು ಕೆಟ್ಟು ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ. ರಸ್ತೆ ಸೇರಿದಂತೆ ಅಭಿವೃದ್ಧಿ ಕೆಲಸಗಳಿಗೆ ಕಾಳಜಿ ವಹಿಸಿ ಎಂದು ವೇದಿಕೆಯಲ್ಲಿದ್ದ ಜಿಲ್ಲಾ ಉಸ್ತುವಾರಿ ಸಚಿವರಿಗೆ ಕೋರಿದರು.

ಸಾನ್ನಿಧ್ಯ ವಹಿಸಿದ ಶ್ರೀ ಶಿವಾನಂದ ಮಹಾಸ್ವಾಮೀಜಿ, ಗಡಿಗೌಡಗಾಂವನ ಶ್ರೀ ಶಾಂತವೀರ ಶಿವಾಚಾರ್ಯರು, ಮುಚಳಂಬ ಪ್ರಣವಾನಂದ ಮಹಾಸ್ವಾಮೀಜಿ, ಹಲಬರ್ಗಾದ ಶ್ರೀ ಹಾವಗಿಲಿಂಗೇಶ್ವರ ಸ್ವಾಮೀಜಿ, ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಕೆಪಿಸಿಸಿ ಕಾರ್ಯದರ್ಶಿ ಬಿ.ನಾರಾಯಣರಾವ, ವೈಜಿನಾಥ ಸಜ್ಜನಶೆಟ್ಟಿ ಮಾತನಾಡಿದರು.

ಭಾತಂಬ್ರಾದ ಶ್ರೀ ಜಗದ್ಗುರು ಶಿವಯೋಗಿಶ್ವರ ಸ್ವಾಮಿ, ಹಿರನಾಗಾಂವ ಶ್ರೀ ಜಯಶಾಂತಲಿಂಗ ಸ್ವಾಮೀಜಿ, ತಡೋಳದಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಗೋರ್ಟಾದ ಶ್ರೀ ಡಾ.ರಾಜಶೇಖರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಎಸಿ ಶರಣಬಸಪ್ಪ ಕೊಟ್ಟಪ್ಪಗೊಳ, ಜಿಪಂ ಸದಸ್ಯ ಸುಧೀರ ಕಾಡಾದಿ, ಬಿಕೆಡಿಬಿ ಸದಸ್ಯ ಶಿವರಾಜ ನರಶೆಟ್ಟಿ, ನಗರಸಭೆ ಅಧ್ಯಕ್ಷ ಅಜರಲಿ ನವರಂಗ, ಅನೀಲ ಭೂಸಾರೆ, ಮಲ್ಲಪ್ಪ ಧಬಾಲೆ, ಶಿವಶರಣ ಬಿರಾದಾರ್, ಜೈರಾಜ ಖಂಡ್ರೆ, ಬಸವರಾಜ ಡೊಣಗಾಂವಕರ, ಉದಯರಾಜ ಪಾರಶೆಟ್ಟಿ, ರಾಜಕುಮಾರ ನಿಡೋದೆ ಉಪಸ್ಥಿತರಿದ್ದರು.

ಸಿದ್ರಾಮ ದೇವರು ಸ್ವಾಗತಿಸಿದರು. ಶ್ರೀ ಶಿವಾನಂದ ದೇವರು ನಿರೂಪಿಸಿದರು. ಸಮಾವೇಶಕ್ಕೂ ಮುನ್ನ ಗ್ರಾಮದ ಪ್ರಮುಖ ರಸ್ತೆ ಮೂಲಕ ಶ್ರೀ ಹಾನಗಲ್ ಕುಮಾರ ಶಿವಯೋಗಿಗಳ ಭಾವಚಿತ್ರದೊಂದಿಗೆ ಮಠಾಧೀಶರ ಭವ್ಯ ಮೆರವಣಿಗೆ ಜರುಗಿತು.

ವಿಜಯವಾಣಿ ಚಿತ್ರ




ಹುಲಸೂರನಲ್ಲಿ ನಡೆದ ಜಿಲ್ಲಾ ಮಠಾಧೀಶರ ಸಮಾವೇಶದಲ್ಲಿ ಸಚಿವ ಈಶ್ವರ ಖಂಡ್ರೆ, ಶಾಸಕ ಮಲ್ಲಿಕಾರ್ಜುನ ಖೂಬಾ, ಸಚಿವ ಖೇಣಿ ಅವರನ್ನು ಸನ್ಮಾನಿಸಲಾಯಿತು.

### ಮೂರ್ತಿಗಳ ಅನಾವರಣ

ಹುಲಸೂರದ ಹೊರವಲಯದಲ್ಲಿ ನಿರ್ಮಾಣಗೊಳ್ಳುತ್ತಿರುವ ಶ್ರೀ ಜಗದ್ಗುರು ಅಲ್ಲಮ ಪ್ರಭುದೇವರ ಶೂನ್ಯಪೀಠ, ಅನುಭವ ಮಂಟಪದ ಸ್ಥಳದಲ್ಲಿ ಧರ್ಮ ಗುರು ಬಸವಣ್ಣನವರು, ಶ್ರೀ ಚಿನ್ಮಯಜ್ಞಾನಿ ಚನ್ನಬಸವಣ್ಣನವರು, ವೈರಾಗ್ಯನಿಧಿ ಅಕ್ಕಮಹಾದೇವಿ, ಶ್ರೀ ಸಿದ್ಧರಾಮೇಶ್ವರ, ಶರಣೆ ನೀಲಮ್ಮತಾಯಿ, ಹಾನಗಲ್ ಕುಮಾರ ಕುಮಾರ ಶಿವಯೋಗಿಗಳ ಮೂರ್ತಿ ಅನಾವರಣ ಕಾರ್ಯಕ್ರಮ ಜರುಗಿತು. ಮಠಾಧೀಶರ ಸಮಾವೇಶದ ನಂತರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಮೂರ್ತಿಗಳನ್ನು ಅನಾವರಣಗೊಳಿಸಿದರು. ಶ್ರೀ ಶಿವಾನಂದ ಮಹಾಸ್ವಾಮೀಜಿ, ಮಠಾಧೀಶರು, ಶಾಸಕರು, ಪ್ರಮುಖರು ಭಾಗವಹಿಸಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI « KALABURAGI
ಮಂಗಳವಾರ
8 ನವೆಂಬರ್ 2016
8 NOVEMBER 2016

# 'ಶರಣರ ಶುದ್ಧ ನಡೆ– ನುಡಿಯೇ ವಚನಗಳಾಗಿವೆ'

ಬಸವಕಲ್ಯಾಣ : ವಚನಗಳೆಂದರೆ ಸಾಹಿತ್ಯವಲ್ಲ, ಕೊಟ್ಟ ಮಾತಲ್ಲ, ಬರಿ ಪದವಲ್ಲ, ಅದು ಶರಣರ ಶುದ್ಧ ನಡೆ–ನುಡಿಯೇ ವಚನಗಳಾಗಿವೆ ಎಂದು ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದರು.

ತ್ರಿಪುರಾಂತದಲ್ಲಿ ಮಡಿವಾಳ ಮಾಚೀದೇವರ ಜಾತ್ರಾ ಮಹೋತ್ಸವ ನಿಮಿತ್ತವಾಗಿ ಹಮ್ಮಿಕೊಂಡ ಪ್ರವಚನ ಕಾರ್ಯಕ್ರಮದದಿವ್ಯಸಾನಿಧ್ಯವಹಿಸಿ ಮಾತನಾಡಿದ ಶ್ರೀಗಳು ತಾಯಿ ಹಾಗೂ ಗುರುಗಳ ಋಣ ತಿರುಸಲು ಬರುವುದಿಲ್ಲ. ಅವರಿಗೆ ಗೌರವ ನೀಡಿ. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ಎಂದು ತಿಳಿಸಿ, ಈ ಒಂದು ಕಮಿಟಿಯ ಯುವಕರು ಉತ್ತಮ ಕಾರ್ಯ ಹಮ್ಮಿಕೊಂಡಿರುವುದಕ್ಕೆ ಅಭಿನಂದಿಸಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ವಿಶ್ವನಾಥ ಚನ್ನಮಲ್ಲೆ ನನ್ನ ಗ್ರಾಮದಲ್ಲಿ ಅದೂ ಪೂಜ್ಯ–ರಿಂದ ಸನ್ಮಾನಗೊಂಡಿರುವುದು ಅತಿವ ಸಂತೋಷ ನೀಡಿದೆ ಎಂದರು.

ಪ್ರವಚನಕಾರರಾದ ವೇ. ಅಮರೇಶ ಸ್ವಾಮಿಗಳು ಶರಣ ಬಸವೇಶ್ವರ ಜೀವನ ಚರಿತ್ರೆಕಾಯಕ, ದಾನದಬಗ್ಗೆವಿಸ್ತೃತವಾಗಿತಿಳಿಸಿದರು. ವೀರಶೈವ ಸದ್ಬೋದನಾ ಸಂಸ್ಥೆಯ ಅಧ್ಯಕ್ಷ ಬಸವಂತಪ್ಪ ಲವಾರೆ, ಶರಣಪ್ಪ ಬಿರಾದಾರ, ಹರತಲಾಲ ಶ್ರೀವಾಸ್ತವ, ಮಡಿವಾಳಪ್ಪ ಪೊ.ಪಾಟೀಲ, ಪತ್ರಕರ್ತ ನಾಗಪ್ಪಾ ನಿಣ್ಣೆ, ಹಣಮಂತ ಬೊಕ್ಕೆ, ರುದ್ರಪ್ಪ ಎಸ್ ಚನ್ನಮಲ್ಲೆ, ಕಾಂತ್ರಿಕುಮಾರ ಪಂಚಾಳ, ಮಲ್ಲಿಕಾರ್ಜುನ ನಂದಿ, ಸಂಗೀತ ಕಲಾವಿದರಾದ ಚಿದಾನಂದ ಜಳಕಿ, ವಿಶ್ವನಾಥ ಐನೋಳ್ಳೆ, ನಿಲ್ಲಯ್ಯ ಸ್ವಾಮಿ, ರಾಮಚಂದ್ರ ಕಲ್ಲಹಿಪ್ಪರ್ಗಿ, ಇನ್ನಿತರರರನ್ನು ಪೂಜ್ಯರು ಸನ್ಮಾನಿದರು/ ದೇವಸ್ಥಾನದ ಅಧ್ಯಕ್ಷ ಬಾಬುರಾವ ಬಿರಾದಾರ, ರಾಮಣ್ಣ ಬೊಕ್ಕೆ, ಚಂದ್ರಕಾಂತ ವಿ. ಬಿರಾದಾರ, ಮಹಾದೇವ ಚನ್ನಮಲ್ಲೆ, ಉಪಸ್ಥಿತರಿದ್ದರು. ನಿವೃತ್ತ ಶಿಕ್ಷಕ ಬಕ್ಕಯ್ಯ ಸ್ವಾಮಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

ಸಂಯುಕ್ತ ಕರ್ನಾಟಕ
ಸೋಮವಾರ, 16, ಜನವರಿ, 2017, ಕಲಬುರಗಿ

Scanned with CamScanner

# ಶ್ರೀ ಮದ್ವೀರಶೈವ ಸಂಸ್ಥೆ ಸಮಿತಿ ಸದಸ್ಯರ ನೇಮಕ

ಸಂಯುಕ್ತ ಕರ್ನಾಟಕ

ಬಸವಕಲ್ಯಾಣ : ನಗರದ ತ್ರಿಪುರಾಂತದ ಮರೀಡೇವರ ಗುಡ್ಡದ ಗವಿಮಠದಲ್ಲಿ ಪೂಜ್ಯ ಅಭಿವನ ಘನಲಿಂಗ ರುದ್ರಮುನಿ ಶಿವಚಾರ್ಯರ ನೇತೃತ್ವದಲ್ಲಿ ಸಭೆ ಸೇರಿ ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆಯ ತಾಲೂಕಾ ಘಟಕದ ಕಾರ್ಯಕಾರಣಿ ಸಮಿತಿ ನೇಮಕ ಮಾಡಲಾಯಿತು. ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲರ ಅನುಮೋದನೆ ಪಡೆಯಲಾಯಿತು ಎಂದು ಕಾರ್ಯದರ್ಶಿ ಕಾಶಿನಾಥ ಸ್ವಾಮಿ ಪತ್ರಿಕಾ ತಿಳಿಸಿದ್ದಾರೆ.

ಕಾರ್ಯಕಾರಣಿಯ ಸಮಿತಿಯ ಸದಸ್ಯರ ನೇಮಕ : ಪೂಜ್ಯ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಗೌರವಾಧ್ಯಕ್ಷರು, ಬಸವಂತಪ್ಪ ಲವಾರೆ ಅಧ್ಯಕ್ಷರು, ದಯಾನಂದ ವಿ. ಶೀಲವಂತ ಉಪಾಧ್ಯಕ್ಷರು, ರುದ್ರೇಶ್ವರ ವಿ. ಗೋರ್ಟಾ ಪ್ರಧಾನ



ಬಸವಕಲ್ಯಾಣ ತ್ರಿಪುರಾಂತದ ಮರಿ ದೇವರ ಗುಡ್ಡದ ಗವಿಮಠದ ಶ್ರೀ ಅಭಿವನ ಘನಲಿಂಗ ರುದ್ರಮುನಿ ಶಿವಚಾರ್ಯರ ನೇತೃತ್ವದಲ್ಲಿ ಸಭೆ ಸೇರಿ ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆಯ ತಾಲ್ಲೂಕು ಘಟಕ ಕಾರ್ಯಕಾರಣಿ ಸಮಿತಿ ನೇಮಕ ಮಾಡಲಾಯಿತು.

ಕಾರ್ಯದರ್ಶಿ, ಕಾಶಿನಾಥ ಬಸವರಾಜಸ್ವಾಮಿಕಾರ್ಯದರ್ಶಿ, ವೀರಶೇಟ್ಟಿ ಮಲಶೆಟ್ಟಿ ಬೇಲೂರ ಸಹಕಾರ್ಯದರ್ಶಿ, ಮಲ್ಲಿಕಾರ್ಜುನ ಕಲ್ಯಾಣಪ್ಪ ನಂದಿ ಕೋಶಾಧ್ಯಕ್ಷರು, ರಮೇಶ ತಿಪ್ಪಣ್ಣಾ ರಾಜೋಳೆ ಸಂಘಟನಾ ಕಾರ್ಯದರ್ಶಿ, ಪ್ರಭುಲಿಂಗಯ್ಯಾ ಬಿ. ಟಂಕಸಾಲಿಮಠ ಪ್ರಚಾರ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.

ಈ ಸಭೆಯಲ್ಲಿ ಎ.ಜಿ ಪಾಟೀಲ, ಸುನೀಲ್ ಎಮ್, ಪಾಟೀಲ್ ರೇವಣಸಿದ್ದಯ್ಯಾ ಮಠಪತಿ, ಡಾ. ಬಸವರಾಜ ಸ್ವಾಮಿ, ಶಿವಕುಮಾರ ಸ್ವಾಮಿ ಮಾಜಿ ಸೈನಿಕರು, ಚಂದ್ರಕಾಂತ ಸ್ವಾಮಿ ನಾರಾಯಣಪೂರ, ಮಹಾದೇವ ಕಾಮಶೆಟ್ಟಿ, ಬಸಲಿಂಗಯ್ಯಾ ಸ್ವಾಮಿ ಶಂಕರಗುಡಿ, ರಾಜಕುಮಾರ ದೇಗಾಂವ, ಸುರೇಶ ಸ್ವಾಮಿ, ಚಂದ್ರಶೇಖರ ಪಾಟೀಲ, ರಮೇಶ ಬುಕ್ಕಿಗಾರ ಉಪಸ್ಥಿತರಿದ್ದರು.

ಶನಿವಾರ, 12, ನವೆಂಬರ್, 2016, ಕಲಬುರಗಿ

# ಗವಿ ಮಠದಲ್ಲಿ ಶಿವಾನುಭವ ಚಿಂತನ ಕಾರ್ಯಕ್ರಮ



ಬಸವಕಲ್ಯಾಣ ಗವಿ ಮಠದಲ್ಲಿ ಆಯೋಜಿಸಿದ ಶಿವಾನುಭವ ಚಿಂತನ ಕಾರ್ಯಕ್ರಮವನ್ನು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಮಲ್ಲಣ್ಣ ಸಾವಳಗಿ, ಶರಣಪ್ಪ ಬಿರಾದಾರ, ಪ್ರೊ ಸೂರ್ಯಕಾಂತ ಶೀಲವಂತ, ಪ್ರೊ.ರುದ್ರೇಶ್ವರ ಗೋರಟಾ ಇದ್ದರು.

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಇಂದು ನಾವೆಲ್ಲರು ಮನುಷ್ಯರಾಗಿ ಈ ಜಗತ್ತಿನಲ್ಲಿ ಜನಿಸಿ ಒಳಿತನ್ನು ಮಾಡಿದರೆ ಕೊನೆಗೆ ಶಿವನ ಸನ್ನಿಧಾನ ಸಿಗುವುದು ಎಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಹೊರವಲಯದಲ್ಲಿರುವ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿ ಮಠದಲ್ಲಿ ಆಯೋಜಿಸಿದ ಶಿವಾನುಭವ ಚಿಂತನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಶಿವನು ಜಗತ್ತಿನ ಒಡೆಯನಾಗಿದ್ದು ನಾವೆಲ್ಲರೂ ಅವನ ಸನ್ನಿದಾನದ ಸೇವಕರು. ಈ ಕುರಿತು ಬದುಕುವ ಕಲೆಯನ್ನು ಕಲಿಸುವುದೆ ಶಿವಾನುಭವ ಚಿಂತನ ವಾಗಿದೆ ಎಂದರು.

ಇಂತಹ ಬದುಕಿನ ಮಾರ್ಗದರ್ಶನ ಮಾಡುವ ಶ್ರೇಷ್ಠ ಪುಣ್ಯದ ಕಾರ್ಯವನ್ನು ಟ್ರಸ್ಟ್‌ನ ಪದಾಧಿಕಾರಿಗಳು ನಿರಂತರವಾಗಿ ಎಲ್ಲರಿಗೂ ಧರ್ಮದ ಮಾರ್ಗ ತೋರುವ ಕಾರ್ಯಕ್ರಮ ಆಯೋಜಿಸಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದು ತಿಳಿಸಿದರು. ಆಳಂದನ ಹಿರಿಯ ಕಲಾವಿದ ಮಲ್ಲಣ್ಣ ಸಾವಳಗಿ ಮಾತನಾಡಿ, ಇಂದಿನ ಅಶಾಂತಿಯ ಜಗತ್ತಿನಲ್ಲಿ ನೆಮ್ಮದಿ ಬದುಕು ಅವಶ್ಯಕವಾಗಿದೆ. ನೆಮ್ಮದಿ ತರುವಂತಹ ಪುಣ್ಯದ ಕಾರ್ಯ ಗವಿಮಠದಲ್ಲಿ ನಡೆಯುತ್ತಿರುವುದು ನಮ್ಮೆಲ್ಲರ ಭಾಗ್ಯವಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಮಾತನಾಡಿ, ಪರಮಾತ್ಮ ನಮ್ಮೆಲ್ಲರ ಶ್ರೇಷ್ಠವಾದ ಮನುಷ್ಯ ಜನ್ಮವನ್ನು ದಯಾಪಾಲಿಸಿದ್ದಾನೆ. ವೀರಶೈವ ಧರ್ಮ ಸನಾತನ ಧರ್ಮವಾಗಿದ್ದು ಎಲ್ಲರಿಗೂ ಸನ್ಮಾರ್ಗ ಪಡೆಯಲು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

ಪುಣ್ಯಕೋಟಿ ಕಾಲೇಜಿನ ಅಧ್ಯಕ್ಷ ಪ್ರೊ. ಸೂರ್ಯಕಾಂತ ಶೀಲವಂತ ಸ್ವಾಗಿತಿಸಿದರು. ಉಪನ್ಯಾಸಕ ಪ್ರೊ. ರುದ್ರೇಶ್ವರ ಗೋರಟಾ ನಿರೂಪಿಸಿದರು. ಕಾಶಿನಾಥ ಸ್ವಾಮಿ ವಂದಿಸಿದರು.

ವಿಜಯ ಕರ್ನಾಟಕ VK

ಗುರುವಾರ,1 ಡಿಸೆಂಬರ್ 2016, ಕಲಬುರಗಿ

Scanned with CamScanner

# ‘ಶಿವಾನುಭವದಿಂದ ಬದುಕುವ ಕಲೆ’

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಮಂಗಳವಾರ ನಡೆದ ಶಿವಾನುಭವ ಚಿಂತನಗೋಷ್ಠಿಯನ್ನು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು

ಬಸವಕಲ್ಯಾಣ: ಶಿವಾನುಭವ ಚಿಂತನದಿಂದ ಬದುಕು ಸುಂದರವಾಗುತ್ತದೆ. ಮನುಷ್ಯನು ಸನ್ಮಾರ್ಗದಲ್ಲಿ ಸಾಗಲು ಪ್ರೇರಣೆ ದೊರಕುತ್ತದೆ ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ತ್ರಿಪುರಾಂತ ಗವಿಮಠದಲ್ಲಿ ಮಂಗಳವಾರ ಆಯೋಜಿಸಿದ್ದ ಶಿವಾನುಭವ ಚಿಂತನಗೋಷ್ಠಿ ಸಾನಿಧ್ಯ ವಹಿಸಿ ಮಾತನಾಡಿದರು.

ಕೆಲವರಿಗೆ ಹೇಗೆ ಬದುಕಬೇಕು ಎಂಬುದು ಗೊತ್ತಿರುವುದಿಲ್ಲ. ಸಮಾಜದೊಂದಿಗೆ ಹೊಂದಾಣಿಕೆ ಸಾಧ್ಯವಾಗುವುದಿಲ್ಲ. ಶಿವಾನುಭವ ಬದುಕುವ ಕಲೆ ಹೇಳಿಕೊಡುತ್ತದೆ. ಉತ್ತಮ ವ್ಯಕ್ತಿತ್ವವನ್ನು ರೂಪಿಸುತ್ತದೆ. ಶಿವನ ಆರಾಧನೆಯಿಂದ ಜೀವನದಲ್ಲಿ ಸಮೃದ್ಧಿ, ಶಾಂತಿ, ನೆಮ್ಮದಿ ದೊರಕುತ್ತದೆ ಎಂದು ಹೇಳಿದರು.

ಕಲಾವಿದ ಮಲ್ಲಣ್ಣ ಸಾವಳಗಿ ಮಾತನಾಡಿ, ಇಂದಿನ ತಾಂತ್ರಿಕ ಯುಗದಲ್ಲಿ ಭೌತಿಕ ಸುಖದ ಸಾಧನಗಳಿಗೆ ಕೊರತೆಯಿಲ್ಲ. ಆದರೆ ಒತ್ತಡದ ಬದುಕಿನಿಂದ ನೆಮ್ಮದಿ ದೊರೆಯುತ್ತಿಲ್ಲ. ಉತ್ಸಾಹ ಉಲ್ಲಾಸ ಎದ್ದು ಕಾಣುತ್ತಿಲ್ಲ. ಶಿವನಾಮ ಸ್ಮರಣೆಯಿಂದ ಬದುಕನ್ನು ಸುಖಕರವಾಗಿಸಬಹುದು ಎಂದರು.

ನಿವೃತ್ತ ಎಂಜಿನಿಯರ್ ಶರಣಪ್ಪ ಬಿರಾದಾರ, ರುದ್ರಮಣಿ ಮಠ, ರಾಜಕುಮಾರ ದೇಗಾಂವ ಪಾಲ್ಗೊಂಡಿದ್ದರು.

ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಸ್ವಾಗತಿಸಿದರು. ಪ್ರೊ. ರುದ್ರೇಶ್ವರ ಗೋರಟಾ ನಿರೂಪಿಸಿದರು. ಕಾಶಿನಾಥಸ್ವಾಮಿ ವಂದಿಸಿದರು.

ಗುರುವಾರ • ಡಿಸೆಂಬರ್ 1, 2016 ಪ್ರಜಾವಾಣಿ



ವಿಜಯವಾಣಿ ಚಿತ್ರ

ಶುಕ್ರವಾರ 19 ಮೇ 2017
19 MAY 2017

ಭಾಲ್ಕಿ ತಾಲೂಕಿನ ಡೊಣಗಾಪುರದಲ್ಲಿ ಗುರುವಾರ ಏರ್ಪಡಿಸಿದ ಸಂಗಪ್ಪ ಬಿರಾದಾರರ ಅಮೃತ ಮಹೋತ್ಸವಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಚಾಲನೆ ನೀಡಿದರು. ಬಾಳೆಹೊನ್ನೂರಿನ ಶ್ರೀ ವೀರಸೋಮೇಶ್ವರ ರಂಭಾಪುರಿ ಜಗದ್ಗುರುಗಳು, ಡಾ.ಭೀಮಣ್ಣ ಖಂಡ್ರೆ, ರಾಜೇಶ್ವರ ಶ್ರೀ ಇತರರಿದ್ದರು.



ಬಸವಕಲ್ಯಾಣ ಗವಿಮಠದಲ್ಲಿ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ವತಿಯಿಂದ ಆಯೋಜಿಸಿದ ಶಿವಾನುಭವ ಚಿಂತನಗೋಷ್ಠಿ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

# ‘ಬದುಕುವ ಕಲೆ ಕಲಿಸುವುದೇ ಶಿವಾನುಭವ ಚಿಂತನ’

ಬಸವಕಲ್ಯಾಣ : ಶಿವಾನುಭವ ಚಿಂತನ ಗೋಷ್ಠಿಯಂತ ಕಾರ್ಯಕ್ರಮಗಳಿಂದ ಬದುಕುವ ಕಲೆಯನ್ನು ಕಲಿಸುತ್ತದೆ ಎಂದು ಮಠದ ಶ್ರೀಗಳಾದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಗವಿಮಠದಲ್ಲಿ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ವತಿಯಿಂದ ಗವಿಮಠದಲ್ಲಿ ಆಯೋಜಿಸಿದ ಶಿವಾನುಭವ ಚಿಂತನ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದ ಶ್ರೀಗಳು ಬಳಿಕ ಮಾತನಾಡಿ ಶಿವನು ಜಗತ್ತಿನ ಒಡೆಯನಾಗಿದ್ದು. ನಾವೇಲ್ಲರೂ ಅವನ ಸನ್ನಿದಾನದ ಸೇವಕರು. ನಾವು ಮನುಷ್ಯರಾಗಿ ಈ ಜಗತ್ತಿನಲ್ಲಿ ಆ ಶಿವನ ಕೃಪೆಯಿಂದ ಜನಿಸಿ ಅವನ ಕೃಪಾರ್ಶಿವಾದದ ಮೂಲಕವೇ ಬದುಕಿ ಕೊನೆಗೆ ಅವನ ಸನ್ನಿಧಾನವನ್ನೆ ಸೇರಬೇಕಾಗುತ್ತದೆ ಎಂದರು.

ಅತಿಥಿಗಳಾಗಿ ಆಗಮಿಸಿದ ಹಿರಿಯ ಕಲಾವಿದ ಆಳಂದ ತಾಲೂಕಿನ ನರೋಣಾದ ಮಲ್ಲಣ್ಣ ಸಾವಳಗಿ ಮಾತನಾಡಿ ಇಂದಿನ ಅಶಾಂತಿಯ ಜಗತ್ತಿನಲ್ಲಿ ನೆಮ್ಮದಿ ಬದುಕು ಅವಶ್ಯಕವಾಗಿದೆ. ನೆಮ್ಮದಿ ತರುವಂತಹ ಪುಣ್ಯದ ಕಾರ್ಯ ಗವಿಮಠದಲ್ಲಿ ಪೂಜ್ಯರ ದಿವ್ಯ ಸಾನಿಧ್ಯದಲ್ಲಿ ನಡೆಯುತ್ತಿರುವುದು ನಮ್ಮೆಲ್ಲರ ಭಾಗ್ಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ ಟ್ರಸ್ಟ್‌ನ ಕಾರ್ಯಧ್ಯಕ್ಷ ಶರಣಪ್ಪ ಬಿರಾದಾರ ಮಾತನಾಡಿ ಪರಮಾತ್ಮ ನಮ್ಮೆಲ್ಲರ ಶ್ರೇಷ್ಠವಾದ ಮನುಷ್ಯ ಜನ್ಮವನ್ನು ದಯಪಾಲಿಸಿದ್ದಾನೆ. ಇದು ನಮ್ಮ ಪೂರ್ವ ಜನ್ಮದ ಪುಣ್ಯ. ಅದೇ ರೀತಿ ನಮ್ಮ ವೀರಶೈವ ಧರ್ಮ ಸನಾತನ ಧರ್ಮವಾಗಿದ್ದು ಯಾವುದು ಬೇಧ ಭಾವವಿಲ್ಲದೆ ಎಲ್ಲರಿಗೂ ಸನ್ಮಾರ್ಗ ದೊರೆಯಲಿ ಎಂಬ ಉದ್ದೇಶದಿಂದ ಗವಿಮಠದಲ್ಲಿ ಪೂಜ್ಯರ ದಿವ್ಯ ಸಾನಿಧ್ಯದಲ್ಲಿ ಈ ಶ್ರೇಷ್ಠ ಕಾರ್ಯಕ್ರಮವನ್ನು ಆರಂಭಿಸಿದ್ದು ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದರು.

ತ್ರಿಪುರಾಂತದ ಅಕ್ಕ ಮಹಾದೇವಿ ಭಜನಾ ಮಂಡಳದವರು ಪಾಲ್ಗೊಂಡಿದ್ದರು. ಜೊತೆಗೆ ರುದ್ರಮಣಿ ಮಠ, ರಾಜಕುಮಾರ ದೇಗಾಂವ ಇನ್ನಿತರರಿದ್ದರು. ಪ್ರೊ. ಸೂರ್ಯಕಾಂತ ಶೀಲವಂತ ಸ್ವಾಗತಿಸಿದರು. ಕಾಶಿನಾಥ ಸ್ವಾಮಿ ವಂದಿಸಿದರು. ಪ್ರೊ. ರುದ್ರೇಶ್ವರ ಗೋರಟಾ ನಿರೂಪಿಸಿದರು.

ಸಂಯುಕ್ತ ಕರ್ನಾಟಕ ಗುರುವಾರ, 1, ಡಿಸೆಂಬರ್, 2016, ಕಲಬುರಗಿ

Scanned with CamScanner

## ಬಸವಕಲ್ಯಾಣ ತಾಲೂಕಿನ ಕನ್ನಡಾನುಭವ ಮಂಟಪ ಉದ್ಘಾಟಿಸಿದ ಮುಖಂಡ ಸುನೀಲ ಪಾಟೀಲ

# ಗಡಿಯಲ್ಲಿ ಕನ್ನಡ ಬೆಳೆಯಲಿ

**ವಿಜಯವಾಣಿ ಸುದ್ದಿಜಾಲ** ಬಸವಕಲ್ಯಾಣ

ಗಡಿ ಗ್ರಾಮಗಳಲ್ಲಿ ಕನ್ನಡ ಕಾರ್ಯಚಟುವಟಿಕೆಗಳನ್ನು ಆಯೋಜಿಸಿವ ಮೂಲಕ ಕನ್ನಡಮಯ ವಾತಾವರಣ ನಿರ್ಮಾಣಕ್ಕೆ ಕನ್ನಡ ಪರ ಸಂಘಟನೆಗಳು ಮುಂದಾಗಬೇಕು ಎಂದು ಮುಖಂಡ ಸುನೀಲ ಪಾಟೀಲ್ ಸಲಹೆ ನೀಡಿದರು.

ನಗರದ ಹಳೆ ತಹಸಿಲ್ ಕಚೇರಿಯಲ್ಲಿಯ ಕನ್ನಡ ಭವನದಲ್ಲಿ ಆಯೋಜಿಸಿದ ಕನ್ನಡಾನುಭವ ಮಂಟಪ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅವರು, ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿ ಬೆಳವಣಿಗೆಗಾಗಿ ಪೂರಕವಾದ ಕಾರ್ಯ ಚಟುವಟಿಕೆಗಳಿಗೆ ಪ್ರತಿಯೊಬ್ಬರು ಸಹಕರಿಸಬೇಕು ಎಂದರು.

ಅನ್ಯ ಭಾಷೆ ಪ್ರಭಾವ ಹೊಂದಿರುವ ರಾಜ್ಯದ ಗಡಿಯಲ್ಲಿರುವ ಗ್ರಾಮಗಳಲ್ಲಿ ಹೆಚ್ಚಿನ ಕಾರ್ಯ ಚಟುವಟಿಕೆ ನಡೆಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ಕೇಂದ್ರ ಸಮಿತಿ ಗಮನ ಹರಿಸಬೇಕು. ಗಡಿ ಭಾಗದ ಶಾಲೆಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸುವ ಜತೆಗೆ ಮಾತೃಭಾಷೆ ಶಿಕ್ಷಣಕ್ಕೆ ಆದ್ಯತೆ ಸಿಗುಂವತ ವ್ಯವಸ್ಥೆ ಜಾರಿಗೆ ಬರಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಕನ್ನಡ ಸಾಹಿತ್ಯ, ಸಂಸ್ಕೃತಿಯ ಕುರಿತು ಚಿಂತನೆಗಾಗಿ ಕಸಾಪ ಸ್ಥಳೀಯ ಘಟಕದಿಂದ ಪ್ರಾರಂಭಿಸಲಾದ ಕನ್ನಡಾನುಭವ ಮಂಟಪ ಚಿಂತನಾ ಸಮಾರಂಭದ ಮೂಲಕ ಹೊಸ ಚಿಂತನೆಗಳು ನಡೆಯಲಿ ಎಂದರು.

> ಕನ್ನಡ, ಭಾಷೆ ಸಂಸ್ಕೃತಿ ಬೆಳವಣಿಗೆಗೆ ಕನ್ನಡಾನುಭವ ಮಂಟಪ ವೇದಿಕೆ ಕಲ್ಪಿಸುವ ಜತೆಗೆ ಗ್ರಾಮೀಣ ಭಾಗದ ಜನರಿಗೆ ಅಗತ್ಯವಿರುವ ಸೌಕರ್ಯಕ್ಕಾಗಿ ಸಂಬಂಧಪಟ್ಟವರ ಗಮನ ಸೆಳೆಯುವ ನಿಟ್ಟಿನಲ್ಲಿ ಕೆಲಸ ಮಾಡಬೇಕು.
>
> ಪ್ರೊ.ಸೂರ್ಯಕಾಂತ ಶೀಲವಂತ




ಬಸವಕಲ್ಯಾಣ ಕನ್ನಡ ಭವನದಲ್ಲಿ ಆಯೋಜಿಸಿದ ಕನ್ನಡಾನುಭವ ಮಂಟಪ ಕಾರ್ಯಕ್ರಮವನ್ನು ಯುವ ಮುಖಂಡ ಸುನೀಲ ಪಾಟೀಲ್ ಉದ್ಘಾಟಿಸಿದರು. ತ್ರಿಪುರಾಂತ ಶ್ರೀ, ಶರಣಬಸಪ್ಪ ಬಿರಾದಾರ, ಶಿವಕುಮಾರ ಜಡಗೆ, ರವಿಂದ್ರರೆಡ್ಡಿ, ಡಾ. ಚಿತ್ರಶೇಖರ ಇದ್ದರು.

ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಭೀಮಾಶಂಕರ ಬಿರಾದಾರ, ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ರುದ್ರಮಣಿ ಮಠಪತಿ ಮಾತನಾಡಿದರು. ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ವಿಶೇಷ ಉಪನ್ಯಾಸ ನೀಡಿದರು. ದೇವಿಂದ್ರ ಬರಗಾಲೆ ಸ್ವಾಗತಿಸಿದರು. ರಮೇಶ ಉಮ್ಮಾಪೂರೆ ನಿರೂಪಿಸಿದರು. ಶಾಲಿವಾನ ಕಾಕನಾಳೆ ವಂದಿಸಿದರು.

ಪ್ರಮುಖರಾದ ಶರಣಬಸಪ್ಪ ಬಿರಾದಾರ, ಶಿವಕುಮಾರ ಜಡಗೆ, ರವಿಂದ್ರರೆಡ್ಡಿ, ಡಾ. ಚಿತ್ರಶೇಖರ ಚಿರಳ್ಳಿ, ಮಹಾದೇವಪ್ಪ ಇಜಾರೆ, ಶಂಕರ ಕುಕಾಪಾಟೀಲ, ನಾಗೇಂದ್ರ ಬಿರಾದಾರ, ಧನ್ನರಾಜ ರಾಜೋಳೆ, ಬಸವರಾಜ ಗೋನಾಕಿ, ಪ್ರಕಾಶ ಮಹಾಲಿಂಗ, ಲಕ್ಷ್ಮೀಬಾಯಿ ಪಾಟೀಲ್, ಶ್ರೀದೇವಿ ಬಿರಾದಾರ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI « KALABURAGI

ಮಂಗಳವಾರ
20 ಡಿಸೆಂಬರ್ 2016
20 DECEMBER 2016

# ಜಾತ್ರಾ ಮಹೋತ್ಸವ ಇಂದು

ಬಸವಕಲ್ಯಾಣ : ಇಲ್ಲಿಯ ತ್ರಿಪುರಾಂತದಲ್ಲಿ ಶ್ರೀ ಮಡಿವಾಳ ಮಾಚೀಶ್ವರ ಅವರ ಜಾತ್ರಾ ಮಹೋತ್ಸವವು ನಾಳೆ ಜನವರಿ 16 ರಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ನಡೆಯಲಿದೆ.

ಬೆಳಗ್ಗೆ 4 ಗಂಟೆಗೆ ಪಲ್ಲಕ್ಕಿ ಮೆರವಣಿಗೆ ನಡೆಯಲಿದೆ.

9 ಗಂಟೆಗೆ ಅಗ್ನಿಪೂಜೆ ಹಾಗೂ ಅಗ್ನಿ ಪ್ರವೇಶ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

Scanned with CamScanner

# ಕನ್ನಡ ಭಾಷೆ ಬೆಳವಣಿಗೆ ಕಾರ್ಯ ಚಟುವಟಿಕೆಗಳು ನಡೆಯಲಿ: ಪಾಟೀಲ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಗಡಿ ಭಾಗದಲ್ಲಿಕನ್ನಡ ಭಾಷೆ, ಸಂಸ್ಕೃತಿ ಬೆಳವಣಿಗೆಗಾಗಿ ಪೂರಕ ಕಾರ್ಯ ಚಟುವಟಿಕೆಗಳು ನಿರಂತರ ನಡೆಯಲಿ ಎಂದು ಯುವ ಮುಖಂಡ ಸುನೀಲ ಪಾಟೀಲ ಸಲಹೆ ನೀಡಿದರು.

ನಗರದ ಹಳೇ ತಹಸಿಲ್ ಕಚೇರಿಯಲ್ಲಿಯ ಕನ್ನಡ ಭವನದಲ್ಲಿ ಆಯೋಜಿಸಿದ್ದ ಕನ್ನಡಾನುಭವ ಮಂಟಪ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದಲು. ಕನ್ನಡದ ಕಾರ್ಯಗಳಿಗೆ ಪ್ರತಿಯೊಬ್ಬರು ಸಹಕರಿಸಬೇಕು. ಕನ್ನಡ ಕಾರ್ಯಕ್ರಮಗಳು ಎಂದರೆ ಕೇವಲ ಬೆಂಗಳೂರು, ಮೈಸೂರು ಭಾಗಗಳಿಗೆ ಸೀಮಿತ ಎನ್ನುವ ವಾತಾವರಣ ನಿರ್ಮಾಣವಾಗಿದೆ, ಇದು ದೂರವಾಗಬೇಕು. ರಾಜ್ಯದ ಗಡಿಯಲ್ಲಿರುವ ಗ್ರಾಮಗಳಲ್ಲಿ ಹೆಚ್ಚಿನ ಕಾರ್ಯ ಚಟುವಟಿಕೆ ನಡೆಸುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ಕೇಂದ್ರ ಸಮಿತಿ ಗಮನ ಹರಿಸಬೇಕು. ಗಡಿ ಭಾಗದ ಶಾಲೆಗಳಲ್ಲಿ ಮಾತೃಭಾಷೆ ಶಿಕ್ಷಣಕ್ಕೆ ಆದ್ಯತೆ ಸಿಗುಂಥ ವ್ಯವಸ್ಥೆ ಜಾರಿಗೆ ಬರಬೇಕು ಎಂದರು.

ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಮಾತನಾಡಿ, ಕನ್ನಡ, ಭಾಷೆ ಸಂಸ್ಕೃತಿ ಬೆಳವಣಿಗೆಗೆ ಕನ್ನಡಾನುಭವ ಮಂಟಪ ವೇದಿಕೆ ಕಲ್ಪಿಸುವ ಜತೆಗೆ ಗ್ರಾಮೀಣ ಜನರಿಗೆ ಆಗತ್ಯವಿರುವ ಮೂಲ ಸೌಕರ್ಯಕ್ಕಾಗಿ ಗಮನ ಸೆಳೆಯುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದರು.

ತ್ರಿಪುರಾಂತನ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಕನ್ನಡ ಸಾಹಿತ್ಯ, ಸಂಸ್ಕೃತಿಯ ಕುರಿತು ಚಿಂತನೆಗಾಗಿ ಕಸಾಪ ಸ್ಥಳೀಯ ಘಟಕದಿಂದ ಆರಂಭಿಸಲಾದ ಕನ್ನಡಾನುಭವ ಮಂಟಪ ಚಿಂತನಾ ಸಮಾರಂಭದ ಮೂಲಕ ಹೊಸ, ಹೊಸ ಚಿಂತನೆಗಳು ನಡೆಯಲಿ, ಜನರಲ್ಲಿ ಕನ್ನಡಾಭಿಮಾನ ಜಾಗೃತಗೊಳಿಸುವ ಕೆಲಸ ನಡೆಯಲಿ ಎಂದು ಸದಾಶಯ ವ್ಯಕ್ತಪಡಿಸಿದರು.




ಬಸವಕಲ್ಯಾಣ ಹಳೇ ತಹಸಿಲ್ ಕಚೇರಿಯಲ್ಲಿಯ ಕನ್ನಡ ಭವನದಲ್ಲಿ ಆಯೋಜಿಸಿದ್ದ ಕನ್ನಡಾನುಭವ ಮಂಟಪ ಕಾರ್ಯಕ್ರಮವನ್ನು ಯುವ ಮುಖಂಡ ಸುನೀಲ ಪಾಟೀಲ ಉದ್ಘಾಟಿಸಿದರು.

### ಸಮ್ಮೇಳನ ಮುಂದೂಡಿಕೆ

ಡಿ.19ರಂದು ತಾಲೂಕಿನ ಹಾರಕೂಡದಲ್ಲಿ ನಡೆಯಬೇಕಿದ್ದ ತಾಲೂಕು ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನ ಕಾರಣಾಂತರದಿಂದ ಮುಂದೂಡಲಾಗಿದೆ. ಶೀಘ್ರ ದಿನಾಂಕ ಘೋಷಿಸಲಾಗುವುದು ಎಂದು ಕಸಾಪ ಕಾರ್ಯದರ್ಶಿ ದೇವಿಂದ್ರ ಬರಗಾಲೆ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ರುದ್ರಮಣಿ ಮಠಪತಿ, ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಭೀಮಾಶಂಕರ ಬಿರಾದಾರ ಮಾತನಾಡಿದರು. ದೇವಿಂದ್ರ ಬರಗಾಲೆ ಸ್ವಾಗತಿಸಿದರು. ರಮೇಶ ಉಮ್ಮಾಪುರೆ ನಿರೂಪಿಸಿದರು. ಶಾಲಿವಾನ ಕಾಕನಾಳೆ ವಂದಿಸಿದರು.

ಶರಣಬಸಪ್ಪ ಬಿರಾದಾರ, ಶಿವಕುಮಾರ ಜಡಗೆ, ರವಿಂದ್ರರೆಡ್ಡಿ, ಡಾ.ಚಿತ್ರಶೇಖರ ಚಿರಳ್ಳಿ, ಮಹಾದೇವಪ್ಪ ಇಜಾರೆ, ಶಂಕರ ಕುಕ್ಕಾ ಪಾಟೀಲ, ನಾಗೇಂದ್ರ ಬಿರಾದಾರ, ಧನ್ನರಾಜ ರಾಜೋಳೆ, ಬಸವರಾಜ ಗೋನಾಕಿ, ಪ್ರಕಾಶ ಮಹಾಲಿಂಗ, ಲಕ್ಷ್ಮಿಬಾಯಿ ಪಾಟೀಲ, ಶ್ರೀದೇವಿ ಬಿರಾದಾರ ಉಪಸ್ಥಿತರಿದ್ದರು.

ವಿಜಯ ಕರ್ನಾಟಕ VK

ಬುಧವಾರ,21 ಡಿಸೆಂಬರ್ 2016, ಕಲಬುರಗಿ



ಬಸವಕಲ್ಯಾಣತಾಲ್ಲೂಕಿನಮೈಸಲಗಾಗ್ರಾಮದಲ್ಲಿ5ನೇವರ್ಷದಮಹಾಲಕ್ಷ್ಮೀ ಜಾತ್ರಾ ಮಹೋತ್ಸವದ ನಿಮಿತ್ಯ ಹಮ್ಮಿಕೊಂಡ ಮಹಾದಾಸೋಹಿ ಶರಣಬಸವೇಶ್ವರ ಮಹಾಪುರಾಣ ಕಾರ್ಯಕ್ರಮ ನಡೆಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು.

# ಸ್ವದೇಶಿ ಮಾರ್ಗದಲ್ಲಿ ಸಾಗಲು ಕರೆ

ಬಸವಕಲ್ಯಾಣ : ನಾವು ವಿದೇಶಿ ಸಂಸ್ಕೃತಿ ಅಳವಡಿಸಿಕೊಳ್ಳದೆಸ್ವದೇಶಿಸಂಸ್ಕೃತಿಅಳವಡಿಸಿಕೊಳ್ಳಬೇಕೆಂದು ತ್ರೀಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮನಿ ಶೀವಾಚಾರ್ಯರು ತಿಳಿಸಿದರು. ತಾಲ್ಲೂಕಿನ ಮೈಸಲಗಾ ಗ್ರಾಮದ 5ನೇ ವರ್ಷದ ಮಹಾಲಕ್ಷ್ಮೀ ಜಾತ್ರಾ ಮಹೋತ್ಸವದ ನಿಮಿತ್ಯವಾಗಿ ಹಮ್ಮಿಕೊಂಡ ಮಹಾ ದಾಸೋಹಿ ಶರಣಬಸವೇಶ್ವರ ಮಹಾ ಪುರಾಣದ ಉದ್ಘಾಟನೆ ನೆರವೇರಿಸಿ ಮಾತನಾಡಿ, ಶ್ರೀಗಳು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ಧರ್ಮದ ಮಾರ್ಗದಲ್ಲಿ ಸಾಗಲು ಕರೆ ನೀಡಿದರು. ಪ್ರವಚನ ವೇ.ಮೂ. ನೀಲಕಂಠಯ್ಯಾ ಸ್ವಾಮಿ ಶಾಸ್ತ್ರೀ ನಡೆಸಿದರು. ಗ್ರಾಮದ ಪ್ರಮುಖರಾದ ಸಿದ್ಧಾರೂಢ ಮಾಲಿ ಪಾಟೀಲ್, ಶಿವಶರಣಯ್ಯಾ ಸ್ವಾಮಿ, ರೇವಣಸಿದ್ಧ ಅಟ್ಟೂರ, ಪ್ರಭುಲಿಂಗ ಕಂಬಳಿಮಠ, ರಘುನಾಥ ಜಾಧವ, ಜಗನಾಥ ಕನ್ನಡಗೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಸಂಗೀತ ಸೇವೆ ಸೂರ್ಯಕಾಂತ ಬಿರಾದಾರ ಹಾಗೂ ಸಂಗಡಿಗರು ನಡೆಸಿಕೊಟ್ಟರು.

ಸಂಯುಕ್ತ ಕರ್ನಾಟಕ

ಶುಕ್ರವಾರ, 12, ಮೇ, 2017, ಕಲಬುರಗಿ

Scanned with CamScanner

# ಸಂಸ್ಥೆಗಳಲ್ಲಿ ರಚನಾತ್ಮಕ ಕಾರ್ಯಗಳು ನಡೆಯಲಿ:ಶ್ರೀ

**ವಿಕ ಸುದ್ದಿಲೋಕ** ಬಸವಕಲ್ಯಾಣ

ಇಂದು ಶಿಕ್ಷಣ ಸಂಸ್ಥೆಗಳಲ್ಲಿ ವಿಧಾಯಕ ಮತ್ತು ರಚನಾತ್ಮಕ ಕಾರ್ಯಗಳನ್ನು ನಡೆಸಬೇಕಾಗಿದೆ ಎಂದು ರಂಭಾಪುರಿ ಜಗದ್ಗುರುಗಳು ಹೇಳಿದರು.

ನಗರದ ಪುಣ್ಯಕೊಟಿ ಶಿಕ್ಷಣ ಸಂಸ್ಥೆಯ ಜೆಎಸ್ಎಸ್ ಶಾಲೆ ಮತ್ತು ಕಾಲೇಜು ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಆಯೋಜಿಸಿದ ಕಿಡ್ಸ್ ಕ್ರಾಫ್ಟ ಮತ್ತು ಕಲಾ ವಸ್ತು ಪ್ರದರ್ಶನ ಉದ್ಘಾಟಿಸಿ, ಭವ್ಯ ಭಾರತದ ಸಮರ್ಥ ವಿದ್ಯಾರ್ಥಿಗಳನ್ನು ನಿರ್ಮಿಸುವ ಕಾರ್ಯ ಶಾಲೆ ಮತ್ತು ಶಿಕ್ಷಕರದ್ದಾಗಿದೆ. ಇದಕ್ಕೆ ಪೂರಕವಾದ ವಾತಾವರಣ ಪಾಲಕರು ಮತ್ತು ಸರಕಾರ ಮಾಡಿಕೊಡಬೇಕೆಂದರು.

ಶಿಕ್ಷಣ ನಾಗಲೋಕದಲ್ಲಿ ಬೆಳೆಯು ತ್ತಿದೆ, ಎಷ್ಟು ಓದಿದರೂ ಕಡಿಮೆ. ಇಂದಿನ ಮಕ್ಕಳಲ್ಲಿ ಸಂಸ್ಕೃತಿ ಸಂಸ್ಕಾರ, ರಾಷ್ಟ್ರ ಪ್ರೇಮ, ವಿನಃ ಮುಂತಾದ ಮೌಲ್ಯಗಳು ಕಾಣಿಸುತ್ತಿಲ್ಲ, ಆದ್ದರಿಂದ ಇಂತಹ ಮೌಲ್ಯಗಳನ್ನು ಬೆಳೆಸುವ ಕಾರ್ಯ ಶಾಲೆಗಳಲ್ಲಿ ನಡೆಯಬೇಕೆಂದು ಆಶಿಸಿದರು.

ಗವಿ ಮಠದ ಅಭಿನವ ಘನಲಿಂಗ ಶ್ರೀಗಳು ಮಾತನಾಡಿ, ಮಕ್ಕಳಿಗೆ ಅವಕಾಶ ಕೊಟ್ಟಾಗ ತಮ್ಮಲಿರುವ ಸಾಮರ್ಥ್ಯವನ್ನು ಖಂಡಿತವಾಗಿ ಅತ್ಯಂತ ಉತ್ಸಾಹದಿಂದ ಅನಾವರಣಗೊಳಿಸುತ್ತಾರೆ ಎನ್ನಲು ಇಂದಿನ ಪ್ರದರ್ಶನಗಳೇ ಸಾಕ್ಷಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ತಡೋಳಾ ಶ್ರೀ, ಸದಲಾಪುರ ಶ್ರೀ, ಹಳಿಖೇಡ ಶ್ರೀ, ಶರಣಪ್ಪಾ ಬಿರಾದಾರ, ವಿರಣ್ಣ ಶೀಲವಂತ, ರಾಕೇಶ ಕುರವಂತ, ವೈಜು ಕನಸೂರೆ ಇದ್ದರು.ಪ್ರೊ.ಸೂರ್ಯಕಾಂತ ಶೀಲವಂತ, ಮಾಕಾಂತ ಶೀಲವಂತ, ಚಂದ್ರಕಲಾ ಸುಭಾಷ ಪಾಟೀಲ, ಚಂದ್ರಕಾಂತ ಶೀಲವಂತ, ಸುರೇಖಾ ಶೀಲವಂತ, ಕಾವೇರಿ ಶೀಲವಂತ ಉಪಸ್ಥಿತರಿದ್ದರು.

ಕಲ್ಪನಾ ಮತ್ತು ಶ್ರುತಿ ನಿರೂಪಿಸಿದರು, ಪ್ರಭಾಕಾರ ಬಿ. ರೋಹಿಣಿ ಮತ್ತು ಪ್ರಿಯಂಕಾ ವರದಿ ವಾಚಿಸಿದರು. ಶಶಿಕಾಂತ ಶೀಲವಂತ ವಂದಿಸಿದರು.



ಬಸವಕಲ್ಯಾಣದ ಜೆಎಸ್ ಎಸ್ ಶಾಲೆ ಮತ್ತು ಕಾಲೇಜು ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಆಯೋಜಿಸಿದ ಕಿಡ್ಸ್ ಕ್ರಾಫ್ಟ ಮತ್ತು ಕಲಾ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ರಂಭಾಪುರಿ ಜಗದ್ಗುರುಗಳು ಮಾತನಾಡಿದರು.

ವಿಜಯ ಕರ್ನಾಟಕ VK

ಭಾನುವಾರ,25 ಡಿಸೆಂಬರ್ 2016,ಕಲಬುರಗಿ

### ಪುಣ್ಯಕೋಟಿ ಕಾಲೇಜಿನಲ್ಲಿ ವಸ್ತು ಪ್ರದರ್ಶನ ಉದ್ಘಾಟಿಸಿದ ರಂಭಾಪುರಿ ಜಗದ್ಗುರು

# ರಚನಾತ್ಮಕ ಕಾರ್ಯಗಳು ನಡೆಯಲಿ

**ವಿಜಯವಾಣಿ ಸುದ್ದಿಜಾಲ** ಬಸವಕಲ್ಯಾಣ

ಶಿಕ್ಷಣ ಸಂಸ್ಥೆಗಳಲ್ಲಿ ವಿಧಾಯಕ ಮತ್ತು ರಚನಾತ್ಮಕ ಕಾರ್ಯಗಳು ನಡೆಯುವ ಅವಶ್ಯಕತೆ ಇದ್ದು, ಭವ್ಯ ಭಾರತದ ಸಮರ್ಥ ವಿದ್ಯಾರ್ಥಿಗಳನ್ನು ನಿರ್ಮಿಸುವ ಜವಾಬ್ದಾರಿ ಶಾಲೆ ಮತ್ತು ಶಿಕ್ಷಕರ ಮೇಲಿದೆ ಎಂದು ಶ್ರೀಮದ್ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ನುಡಿದರು.

ನಗರದ ಪೂಣ್ಯಕೊಟಿ ಶಿಕ್ಷಣ ಸಂಸ್ಥೆಯ ಜೆಎಸ್ಎಸ್ ಶಾಲೆ ಮತ್ತು ಕಾಲೇಜುಗಳ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಕಿಡ್ಸ್ ಕ್ರಾಫ್ಟ್ ಮತ್ತು ಕಲಾ ವಸ್ತು ಪ್ರದರ್ಶನ ಉದ್ಘಾಟಿಸಿ ಆಶೀರ್ವಚನ ನೀಡಿದ ಅವರು, ಬೌದ್ಧಿಕ ವಿದ್ಯಾ ಸಂಪಾದನೆ ಜತೆಗೆ ಭಾರತಿಯ ಶ್ರೇಷ್ಠ ಸಂಸ್ಕೃತಿಯನ್ನು ಉಳಿಸಿ ಬೆಳಸಬೇಕೆಂದು ಕರೆ ಕೊಟ್ಟರು.

ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದ ಸೊಗಸನ್ನು ಅರಿತು ಜೀವನ ವಿಕಾಸ ಮಾಡಿಕೊಳ್ಳಬೇಕು. ಶಿಕ್ಷಣ ನಾಗಲೋಕದಲ್ಲಿ ಬೆಳೆಯುತ್ತಿದೆ. ಇಂದಿನ ಮಕ್ಕಳಲ್ಲಿ ಸಂಸ್ಕಾರ, ರಾಷ್ಟ ಪ್ರೇಮ, ವಿನಯ ಮುಂತಾದ ಮೌಲ್ಯಗಳು ಕಾಣಿಸುತ್ತಿಲ್ಲ. ಆದ್ದರಿಂದ ಮೌಲ್ಯಗಳನ್ನು ಬೆಳಿಸುವ ಕಾರ್ಯ ಶಾಲೆಗಳಲ್ಲಿ ನಡೆಯಬೇಕೆಂದು ಆಶಯ ವ್ಯಕ್ತ ಪಡಿಸಿದರು.

ತ್ರಿಪುರಾಂತ ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಮಕ್ಕಳಿಗೆ ಅವಕಾಶ ಕೊಟ್ಟಾಗ ಅವರ ಪ್ರತಿಭೆ ಅನಾವರಣಗೊಳ್ಳುತ್ತದೆ ಎನ್ನಲು ಇಲ್ಲಿ ಆಯೋಜಿಸಿದ ಕಲಾ ವಸ್ತು ಪ್ರದರ್ಶನಗಳೇ ಸಾಕ್ಷಿ ಎಂದರು.

ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಸದಲಾಪೂರ ಶ್ರೀಗಳು ನೇತೃತ್ವ ವಹಿಸಿದ್ದರು. ಸಂಸ್ಥೆ ಅಧ್ಯಕ್ಷ ಪ್ರೊ.ಸೂರ್ಯಕಾಂತ ಶೀಲವಂತ ಅಧ್ಯಕ್ಷತೆ ವಹಿಸಿದರು. ಶರಣಪ್ಪ ಬಿರಾದಾರ್, ವೀರಣ್ಣ ಶೀಲವಂತ, ರಾಕೇಶ ಕುರವಂತ, ವೈಜು ಕನಸೂರೆ, ಸಂಸ್ಥೆ ಪದಾಧಿಕಾರಿಗಳಾದ ಚಂದ್ರಕಲಾ ಪಾಟೀಲ್, ಚಂದ್ರಕಾಂತ ಶೀಲವಂತ, ಸುರೇಖಾ ಶೀಲವಂತ, ಕಾವೇರಿ ಶೀಲವಂತ ಉಪಸ್ಥಿತರಿದ್ದರು.

ಸಂಸ್ಥೆ ಕಾರ್ಯದರ್ಶಿ ಉಮಾಕಾಂತ ಶೀಲವಂತ ಸ್ವಾಗತಿಸಿದರು. ಕೋಶಾಧ್ಯಕ್ಷ ಶಶಿಕಾಂತ ಶೀಲವಂತ ವಂದಿಸಿದರು. ಕಲ್ಪನಾ ಮತ್ತು ಶೃತಿ ನಿರೂಪಿಸಿದರು. ಪ್ರಭಾಕಾರ ರೋಹಿಣಿ ಮತ್ತು ಪ್ರಿಯಂಕಾ ವರದಿ ವಾಚಿಸಿದರು.



ಬಸವಕಲ್ಯಾಣದಲ್ಲಿ ಕಿಡ್ಸ್ ಕ್ರಾಫ್ಟ್ ಮತ್ತು ಕಲಾ ವಸ್ತು ಪ್ರದರ್ಶನವನ್ನು ಶ್ರೀ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ

VIJAYAVANI « KALABURAGI

ಶನಿವಾರ

24 ಡಿಸೆಂಬರ್ 2016

24 DECEMBER 2016

Scanned with CamScanner

## ದಿನದ ಚಿತ್ರ

ವಿಜಯವಾಣಿ ಚಿತ್ರ



### ಶ್ರೀಗಳ ಆಶೀರ್ವಚನ

ಬಸವಕಲ್ಯಾಣದಲ್ಲಿ ಸಂಕ್ರಾಂತಿ ನಿಮಿತ್ತ ತ್ರಿಪುರಾಂತ ಗವಿ ಮಠದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶ್ರೀ ಆಶೀರ್ವಚನ ನೀಡಿದರು.

ಮಂಗಳವಾರ
17 ಜನವರಿ 2017
17 JANUARY 2017

# ವೀರಶೈವ ಧರ್ಮ ಅತ್ಯಂತ ಪ್ರಾಚೀನ ಧರ್ಮ : ಅಭಿನವ ಶ್ರೀ

ಬಸವಕಲ್ಯಾಣ: ವೀರಶೈವ ಧರ್ಮ ವಿಶ್ವದ ಅತ್ಯಂತ ಪ್ರಾಚೀನ ಧರ್ಮವಾಗಿದೆ. ಶಿವನ ಸಂಕೇತವಾದ ಇಷ್ಟಲಿಂಗ ಪೂಜೆ ವೀರಶೈವ ಧರ್ಮದ ಒಂದು ಶ್ರೇಷ್ಠ ಆಚಾರವಾಗಿದೆ. ಹೀಗಾಗಿ ಎಲ್ಲಾ ಶಿವಾಚಾರ್ಯರು ಇಷ್ಟಲಿಂಗ ದೀಕ್ಷೆ ಕೊಡುವುದರ ಮೂಲಕ ಸಕಲ ಭಕ್ತರಿಗೆ ಮೋಕ್ಷದ ಮಾರ್ಗ ತೋರಬೇಕಾದದ್ದು ಅವಶ್ಯಕವಾಗಿದೆ ಎಂದು ಗವಿಮಠ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ತ್ರಿಪೂರಾಂತ 12ನೇ ಶತಮಾನದ ಶಿವ ಶರಣರ ದಿಕ್ಷಾ ಸ್ಥಳವೆಂದೆ ಇತಿಹಾಸ ಪ್ರಸಿದ್ಧವಾದ ಶ್ರೀಗಳ ಗವಿಮಠದಲ್ಲಿ ಜರುಗಿದ ಮಾಸಿಕ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು "ವಿರೋಧ ರಹಿತಂ ಶೈವಂ ಇತಿ ವೀರಶೈವಂ" ಎಂಬುದರ ಮೂಲಕ ವೀರಶೈವ ಧರ್ಮ ವಿಶ್ವ ಬಂಧುತ್ವ ಸಾರುವ ಒಂದು ಶ್ರೇಷ್ಠ ಮಾನವಿಯ ಧರ್ಮವಾಗಿದೆ. ವೀರಶೈವ ಹಾಗೂ ಲಿಂಗಾಯತ ಎರಡು ಒಂದೆ. ವೀರಶೈವ ನಿರಾಕಾರವಾದರೆ, ಲಿಂಗಾಯತ ಆಕಾರದ ಅರ್ಥ ಕೊಡುತ್ತದೆ. ಹೀಗಾಗಿ ಕೆಲ ಸ್ವ-ಹಿತ ಸಾಧಕರು ಈ ಎರಡು ಬೇರೆ ಬೇರೆ ಎಂದು ಹೇಳುವುದರ ಮೂಲಕ ವೀರಶೈವ-ಲಿಂಗಾಯತಧರ್ಮ-ಸಮಾಜವನ್ನು ಒಡೆಯುವ ಪ್ರಯತ್ನ ನಡೆಸುತ್ತಿವೆ. ಈ ಕುರಿತು ಭಕ್ತರನ್ನು ದಾರಿ ತಪ್ಪಿಸುವ ಕೆಲಸ ಕೆಲಕಾಣದ ಕೈಗಳು ಇವೆ. ಇದರಿಂದ ಜಾಗೃತಗೊಳ್ಳಬೇಕಾಗಿದೆ ಎಂದು ಪ್ರತಿಪಾದಿಸಿದರು.



ಬಸವಕಲ್ಯಾಣ ತ್ರಿಪೂರಾಂತದ ಗವಿ ಮಠದಲ್ಲಿ ಮಾಸಿಕ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆಯ ತಾಲೂಕಾ ಘಟಕದ ಅಧ್ಯಕ್ಷ ಬಸವಂತಪ್ಪಾ ಲವಾರೆ ಅಧ್ಯಕ್ಷತೆ ವಹಿಸಿ ಮಾತನಾಡಿ ಗವಿಮಠದ ಪೂಜ್ಯರ ದಿವ್ಯ ಸಾನಿಧ್ಯದಲ್ಲಿ ಶಿವಾನುವ ಚಿಂತನ ಕಾರ್ಯಕ್ರಮ ಮೂಲಕ ಧರ್ಮ ಜಾಗೃತಿ ಕಾರ್ಯಕ್ರಮ ನಡೆಯುತ್ತಿರುವುದು ಸಂತಸದ ಸಂಗತಿಯಾಗಿದೆ ಎಂದರು.

ರುದ್ರಮಣಿಮಠ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ನಂದಿ, ಹಾವಯ್ಯಾ ಸ್ವಾಮಿ, ರೇವಣಸಿದ್ದಯ್ಯಾ ಮಠಪತಿ, ಪ್ರೊ. ರುದ್ರೇಶ್ವರ ಸ್ವಾಮಿ ಗೋರ್ಟಾ, ರಾಜಕುಮಾರ ದೇಗಾಂವ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ

01 ಜನವರಿ, 2017
ಭಾನುವಾರ
ಕಲಬುರಗಿ

Scanned with CamScanner

# ಗವಿಮಠದಲ್ಲಿ ಶಿವಾನುಭವ ಚಿಂತನ

## ವಿಶ್ವ ಬಂಧುತ್ವ ಸಾರಿದ ವೀರಶೈವ ಧರ್ಮ ಎಂದ ತ್ರಿಪುರಾಂತ ಶ್ರೀ

**ವಿಜಯವಾಣಿ ಸುದ್ದಿಜಾಲ** ಬಸವಕಲ್ಯಾಣ

ವೀರಶೈವ ಧರ್ಮ ವಿಶ್ವ ಬಂಧುತ್ವ ಸಾರುವ ಒಂದು ಮಾನವೀಯ ಧರ್ಮವಾಗಿದೆ ಎಂದು ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಇಲ್ಲಿಯ ತ್ರಿಪುರಾಂತ ಗವಿಮಠದಲ್ಲಿ ನಡೆದ ಮಾಸಿಕ ಶಿವಾನುಭವ ಚಿಂತನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀಗಳು, ಶಿವನ ಸಂಕೇತವಾದ ಇಷ್ಟಲಿಂಗ ಪೂಜೆ ವೀರಶೈವ ಧರ್ಮದ ಒಂದು ಶ್ರೇಷ್ಠ ಆಚಾರ. ಹೀಗಾಗಿ ಎಲ್ಲ ಶಿವಾಚಾರ್ಯರು ಇಷ್ಟಲಿಂಗ ದೀಕ್ಷೆ ಕೊಡುವುದರ ಮೂಲಕ ಸಕಲ ಭಕ್ತರಿಗೆ ಮೋಕ್ಷದ ಮಾರ್ಗ ತೋರಬೇಕಾದದ್ದು ಅವಶ್ಯಕವಾಗಿದೆ ಎಂದರು.

ವೀರಶೈವ ಹಾಗೂ ಲಿಂಗಾಯತ ಎರಡು ಒಂದೇ. ವೀರಶೈವ ನಿರಾಕಾರವಾದರೆ, ಲಿಂಗಾಯತ ಆಕಾರದ ಅರ್ಥ ಕೊಡುತ್ತದೆ. ಹೀಗಾಗಿ ಕೆಲ ಸ್ವಹಿತ ಸಾಧಕರು ಈ ಎರಡು ಬೇರೆ ಬೇರೆ ಎಂದು ಹೇಳುವುದರ ಮೂಲಕ ಸಮಾಜದಲ್ಲಿ ಒಡಕು ಮೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ ಈ ಕುರಿತು ಭಕ್ತರು ಎಚ್ಚರ ವಹಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿದರು. ರುದ್ರಮಣಿಮಠ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ನಂದಿ, ಹಾವಯ್ಯ ಸ್ವಾಮಿ, ರೇವಣಸಿದ್ದಯ್ಯ ಮಠಪತಿ, ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ, ರಾಜಕುಮಾರ ದೇಗಾಂವ ಉಪಸ್ಥಿತರಿದ್ದರು.'



ಗವಿಮಠದಲ್ಲಿ ನಡೆದ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಬಸವಂತಪ್ಪ ಲವಾರೆ ಇದ್ದರು.


ಭಾನುವಾರ 1 ಜನವರಿ 2017
1 JANUARY 2017
ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI


ಎಬಿವಿಪಿ ವಿಭಾಗೀಯ ಸಂಚಾಲಕ ಜಾಡರ ಅಭಿಮತ

# ಯುವಕರು ಅನ್ಯಾಯದ ವಿರುದ್ಧ ಹೋರಾಡಲಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಯುವಕರು ಸಮಾಜದಲ್ಲಿ ನಿತ್ಯ ನಡೆಯುತ್ತಿರುವ ಅನ್ಯಾಯದ ವಿರುದ್ಧ ಹೋರಾಡಬೇಕು ಎಂದು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಕಲಬುರ್ಗಿ ವಿಭಾಗೀಯ ಸಂಚಾಲಕ ರೇವಣಸಿದ್ದಪ್ಪ ಜಾಡರ ಹೇಳಿದರು.

ಇಲ್ಲಿನ ಸದ್ಗುರು ಸದಾನಂದ ಸ್ವಾಮಿ ಮಠದ ಸಭಾಂಗಣದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನಿಂದ ಗುರುವಾರ ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ಯುವ ಸಮಾವೇಶದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಶಕ್ತಿ ಹಾಳು ಮಾಡುವ ಮತ್ತು ಯುವಜನತೆಯ ದಿಕ್ಕು ತಪ್ಪಿಸುವ ಹುನ್ನಾರಗಳು ದೇಶದಲ್ಲಿ ನಡೆಯುತ್ತಿವೆ. ಅದಕ್ಕೆ ಯಾರೂ ಕಿವಿಗೊಡಬಾರದು. ಸಮಾಜ ಘಾತುಕ ಶಕ್ತಿಗಳ ಬಗ್ಗೆ ಜಾಗೃತೆಯಿಂದಿರಬೇಕು. ನಾವು ಏನು ಮಡುತ್ತಿದ್ದೇವೆ ಎಂಬುದರ ಅರಿವು ನಮಗಿರಬೇಕು ಎಂದರು.

ಸ್ವಾಮಿ ವಿವೇಕಾನಂದರು ಧೈರ್ಯವಂತರಾಗಿದ್ದರು. ಮುಂದಾಲೋಚನೆಯುಳ್ಳವರು ಆಗಿದ್ದರು. ಆದಮ್ಯ ಉತ್ಸಾಹ ಹೊಂದಿದ್ದರೂ ಸಹನೆ, ತಾಳ್ಮೆಯಿಂದ ಇರುತ್ತಿದ್ದರು.



ಬಸವಕಲ್ಯಾಣದಲ್ಲಿ ಎಬಿವಿಪಿಯಿಂದ ಗುರುವಾರ ನಡೆದ ಸ್ವಾಮಿ ವಿವೇಕಾನಂದರ ಜಯಂತಿ,ಯುವ ಸಮಾವೇಶದ ಉದ್ಘಾಟನಾ ಕಾರ್ಯಕ್ರಮದಲ್ಲಿ ರೇವಣಸಿದ್ದಪ್ಪ ಜಾಡರ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪಾಲ್ಗೊಂಡಿದ್ದರು

ಇಂದಿನ ಯುವಜನತೆ ಅವರ ಸಂದೇಶ ಪಾಲಿಸಬೇಕು ಎಂದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಯುವಕರು ಸಜ್ಜನರ ಸಂಗ ಮಾಡಬೇಕು. ಸತ್ಪುರುಷರ ಜೀವನ ಚರಿತ್ರೆ ಓದಬೇಕು. ಆಗ ಆದರ್ಶ ವ್ಯಕ್ತಿತ್ವ ರೂಪುಗೊಳ್ಳಲು ಸಾಧ್ಯ. ದೇಶದ ಸಂಸ್ಕೃತಿ, ಪರಂಪರೆಯಂತೆ ಜೀವನ ಸಾಗಿಸಬೇಕು ಎಂದರು.

ದಾದಾ ಮಹಾರಾಜ ನಗರಕರ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣ ಪಡೆಯುವುದರ ಜತೆಯಲ್ಲಿ ಸಂಸ್ಕಾರವಂತರಾಗಲು ಪ್ರಯತ್ನಿಸಬೇಕು. ತಂದೆ, ತಾಯಿ, ಗುರು ಹಿರಿಯರನ್ನು ಗೌರವಿಸಬೇಕು ಎಂದರು.

ಪರಿಷತ್ ಜಿಲ್ಲಾ ಸಹ ಸಂಚಾಲಕ ಲೋಕೇಶ ಮೋಳಕೇರೆ, ವೀರಭದ್ರಪ್ಪ, ಸಂದೀಪ ಬಿರಾದಾರ, ಪ್ರಸಾದ ಮಠಪತಿ ಮಾತನಾಡಿದರು.

ಪ್ರಾಚಾರ್ಯ ಸೂರ್ಯಕಾಂತ 'ಶೀಲವಂತ, ಅಭಿಷೇಕ ಬಾಳೆ,

**ಮುಖ್ಯಾಂಶಗಳು**

- ವಿವೇಕಾನಂದ ಸಾಧನೆ, ಕೊಡುಗೆ ಸ್ಮರಣೆ
- ಜಾಗೃತರಾಗಲು ಯುವಕರಿಗೆ ಸಲಹೆ
- ಶಾಲಾಕಾಲೇಜು ವಿದ್ಯಾರ್ಥಿಗಳು ಹಾಜರ್

ಅಂಬರೀಶ ಸ್ವಾಮಿ, ಮಹಾದೇವ ಶಾಶೆಟ್ಟೆ, ಸಾಗರ ಕಾಮಣ್ಣ, ಮಹಾದೇವ ಮೇತ್ರೆ, ಸಾಯಿಪ್ರಕಾಶ, ರೇಣುಕಾ, ಸ್ನೇಹಾ ನಮ್ರತಾ, ಪ್ರಮೋದ, ಅರುಣ, ಪಾರ್ವತಿ ಪಾಲ್ಗೊಂಡಿದ್ದರು. ನವನಾಥ ಮೇತ್ರೆ ಸ್ವಾಗತಿಸಿದರು. ಪರಮೇಶ್ವರ ಗಿಲಕೆ ನಿರೂಪಿಸಿದರು. ರೋಹಿಣಿ ವಂದಿಸಿದರು.

ಕಾರ್ಯಕ್ರಮದ ಮೊದಲು ಮುಖ್ಯ ರಸ್ತೆಯಲ್ಲಿ ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ವಾಹನದಲ್ಲಿ ಇಟ್ಟು ಮೆರವಣಿಗೆ ಮಾಡಲಾಯಿತು. ಎಸ್.ಎಸ್.ಕೆ.ಬಸವೇಶ್ವರ ಕಾಲೇಜು, ಪುಣ್ಯಕೋಟಿ ಕಾಲೇಜು,

ಸಂಕಲ್ಪ ಅಕಾಡೆಮಿ, ಶಾಹೀನ್ ಪದವಿಪೂರ್ವ ಕಾಲೇಜು, ಮಹಾತ್ಮ ಗಾಂಧಿ ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.


ಪ್ರಜಾವಾಣಿ ಶುಕ್ರವಾರ • ಜನವರಿ 13, 2017



Scanned with CamScanner

ಟಾಪ್ ನ್ಯೂಸ್

**ಪದಾಧಿಕಾರಿಗಳ ಆಯ್ಕೆ**
ಮಾದನಹಿಪ್ಪರಗಿ: ಆಳಂದ ಪಟ್ಟಣ ದಸಂಸ ಪದಾಧಿಕಾರಿಗಳನ್ನು ಜಿಲ್ಲಾ ಸಂಚಾಲಕ ಮಹದೇವ ಕೊಳಕೂರ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಗಿದೆ. ಸಾಗರ ಸಾಲೇಗಾಂವ(ಸಂಚಾಲಕ) ಮುತ್ತಣ್ಣ ಜಂಗಲೇ, ಚಿದಾನಂದ ತೋಳೆ, ಮನೋಜ ಸಿಂಗೆ( ಸಂಘಟನಾ ಸಂಚಾಲಕರು), ಲಕ್ಷ್ಮಣ ನಡಗೇರಿ ( ಖಜಾಂಚಿ), ಮಹೇಶ ಲೋಖಂಡೆ, ಅಂಬರೀಶ, ಈರಣ್ಣ ಸಿಂಗೆ (ಕಾರ್ಯಕಾರಿ ಸಮಿತಿ ಸದಸ್ಯರು.)



ಸಸ್ತಾಪುರದಲ್ಲಿ ಶ್ರೀ ಸದ್ಗುರು ಯಲ್ಲಾಲಿಂಗೇಶ್ವರ ಪ್ರಭುಗಳ ಸ್ಮರಣೋತ್ಸವ | ಜಿಲ್ಲಾ ಆಧುನಿಕ ವಚನ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ

# ಬದುಕು ರೂಪಿಸುವ ಶಿಕ್ಷಣ ಬೇಕಿದೆ

**ವಿಜಯವಾಣಿ ಸುದ್ದಿಜಾಲ** ಬಸವಕಲ್ಯಾಣ

ಜನರ ಬದುಕು ರೂಪಿಸುವ ಶಿಕ್ಷಣ ವ್ಯವಸ್ಥೆ ಜಾರಿಗೆ ಬರಬೇಕಾದ ಅಗತ್ಯವಿದೆ ಎಂದು ಹಿರಿಯ ಸಾಹಿತಿ ಪ್ರೊ. ಸೂಗಯ್ಯ ಹಿರೇಮಠ ಅಭಿಪ್ರಾಯ ವ್ಯಕ್ತಪಡಿಸಿದರು.

ಸಸ್ತಾಪುರದ ಶ್ರೀ ಯಲ್ಲಾಲಿಂಗ ಮಠದ ಪರಿಸರದಲ್ಲಿ ಶ್ರೀ ಸದ್ಗುರು ಯಲ್ಲಾಲಿಂಗೇಶ್ವರ ಪ್ರಭುಗಳ 31ನೇ ಸ್ಮರಣೋತ್ಸವ ನಿಮಿತ್ತ ಆಯೋಜಿಸಿದ ಎರಡು ದಿನದ ಬೀದರ್ ಜಿಲ್ಲಾ 5ನೇ ಆಧುನಿಕ ವಚನ ಸಾಹಿತ್ಯ ಸಮ್ಮೇಳನವನ್ನು ಮಂಗಳವಾರ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಜಾರಿಯಲ್ಲಿರುವ ಬ್ರಿಟಿಷ್ ಮಾದರಿ ಶಿಕ್ಷಣ ಪದ್ಧತಿಯೇ ಇಂದಿನ ಎಲ್ಲ ಸಮಸ್ಯೆಗಳಿಗೆ ಕಾರಣ ಎಂದರು.

ವಚನ ಸಾಹಿತ್ಯ ವಿಶ್ವಕ್ಕೆ ಶರಣರು ನೀಡಿದ ಅದ್ಭುತ ಕೊಡುಗೆ. ಎಲ್ಲ ಕ್ಷೇತ್ರಗಳಲ್ಲಿಯೂ ಸಮಾನತೆಗಾಗಿ ಶರಣರು ನಡೆಸಿದ ಕ್ರಾಂತಿ ವಿಶ್ವದಲ್ಲೇ ವಿಶಿಷ್ಟವಾದುದು. ಅತ್ಯಂತ ಸರಳ ಭಾಷೆಯಲ್ಲಿರುವ ವಚನ ಸಾಹಿತ್ಯಕ್ಕೆ ಜನಸಾಮಾನ್ಯರ ಬದುಕು ಸುಂದರಗೊಳಿಸುವ ಶಕ್ತಿ ಇದೆ. ವಚನಗಳನ್ನು ಅರಿತು ಬದುಕಿನಲ್ಲಿ ಆಚರಣೆಗೆ ತರುವ ಪರಿಣಾಮಕಾರಿ ಪ್ರಯತ್ನ ನಡೆದಿದ್ದೇ ಆದರೆ ಸರ್ವ ಸಮಾನತೆಯ ಸುಂದರ ಸಮಾಜ ನಿರ್ಮಾಣ ಸಾಧ್ಯ ಎಂದು ಪ್ರತಿಪಾದಿಸಿದರು.

ಸಾನ್ನಿಧ್ಯ ವಹಿಸಿದ್ದ ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಶ್ರೀ ಶಿವಾನಂದ ಮಹಾಸ್ವಾಮೀಜಿ ಆಶೀರ್ವಚನ ನೀಡಿ, ವಚನಗಳು ಅಕ್ಷರ ಜೋಡಣೆ ಅಲ್ಲ. ಶರಣರ ಅನುಭವದಿಂದ ಬಂದ ಮಾತುಗಳು. ಕಾಯಕ ತತ್ವದ ತಳಹದಿಯಲ್ಲಿ ಎಲ್ಲರೂ ಸರಿಸಮನಾಗಿ ಬದುಕಬೇಕು ಎನ್ನುವದೇ ವಚನಗಳ ಆಶಯವಾಗಿದೆ ಎಂದರು.

ಆಡು ಭಾಷೆಯನ್ನು . ದೇವಭಾಷೆಯನ್ನಾಗಿಸಿದವರು ಶರಣರು. ಬದುಕಿನ ಮೌಲ್ಯಗಳು ವಚನಗಳಲ್ಲಿ ಅಡಗಿವೆ. ಮಾನವೀಯ ಬದುಕು, ಪ್ರೀತಿ-ಪ್ರೇಮದಿಂದ ಕೂಡಿದ ಸಾಮರಸ್ಯ ಸಮಾಜ ನಿರ್ಮಾಣಕ್ಕೆ ಅಗತ್ಯವಿರುವ ತತ್ವಗಳು ವಚನ ಸಾಹಿತ್ಯದಲ್ಲಿವೆ. ವಚನಗಳನ್ನು ಓದುವ ಜತೆಗೆ ಅವುಗಳಂತೆ ಬದುಕುವುದನ್ನು ರೂಢಿಸಿಕೊಳ್ಳಲು ಎಲ್ಲರೂ ಪ್ರಯತ್ನಿಸಬೇಕಿದೆ ಎಂದು ನುಡಿದರು.

ನೇತೃತ್ವ ವಹಿಸಿದ್ದ ಪೂಜ್ಯ ಶಿವಶರಣೆ ಮಹಾದೇವಿ ತಾಯಿ ಆಶೀರ್ವಚನ ನೀಡಿದರು. ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸಸ್ತಾಪುರದ ಶ್ರೀ ಸದಾನಂದ ಅಪ್ಪಗಳು, ಬೇಲೂರಿನ ಶ್ರೀ ಪಂಚಾಕ್ಷರಿ ಸ್ವಾಮೀಜಿ, ಬಸವ ಮಹಾಮನೆ ಶ್ರೀ ಬಸವಪ್ರಭು ಸ್ವಾಮೀಜಿ ಸಮ್ಮುಖ ವಹಿಸಿದ್ದರು.

ಸಮ್ಮೇಳನದ ಸರ್ವಾಧ್ಯಕ್ಷ ಸಾಹಿತಿ ಎಂ.ಜಿ.ದೇಶಪಾಂಡೆ ಅಧ್ಯಕ್ಷೀಯ ಭಾಷಣ ಮಾಡಿದರು. ಗ್ರಾಪಂ ಅಧ್ಯಕ್ಷ ಬ್ರಹ್ಮಾರೆಡ್ಡಿ ವೀರಾರೆಡ್ಡಿ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ನಾಗೇಂದ್ರ ಢೋಲೆ, ಜನಪದ ಕಲಾವಿದ ಶಂಭುಲಿಂಗ ವಾಲ್ದೊಡ್ಡಿ, ಬಾಲಾಜಿರೆಡ್ಡಿ ನಿವೃತ್ತರೆಡ್ಡಿ, ಡಾ.ಬಂಡೆಪ್ಪ ಕಾಳಗಿ, ನಿಕಟಪೂರ್ವ ಅಧ್ಯಕ್ಷರಾದ ಜಗದೇವಿ ದುಬಲಗುಂಡೆ, ಹಂಸಕವಿ ಇತರರಿದ್ದರು. ಸ್ವಾಗತ ಸಮಿತಿ ಕಾರ್ಯದರ್ಶಿ ಡಾ.ಬಲಿರಾಂ ಹುಡೆ ಸ್ವಾಗತಿಸಿದರು. ಸಂಯೋಜಕ ಡಾ.ಗವಿಸಿದ್ದಪ್ಪ ಪಾಟೀಲ್ ಪ್ರಾಸ್ತಾವಿಕ ಮಾತನಾಡಿದರು. ಸಂತೋಷಕುಮಾರ ಕರಹರಿ ನಿರೂಪಿಸಿದರು. ಸಂಜೆ ಆಧುನಿಕ ವಚನ ಗೋಷ್ಠಿ ಹಾಗೂ ಪೂಜ್ಯ ಮಾತೆ ಮಹಾದೇವಿ ತಾಯಿ ಅವರ 52ನೇ ಜನ್ಮ ದಿನ ಆಚರಿಸಲಾಯಿತು. ಇದೇ ವೇಳೆ ಭಕ್ತರು ಮಾತೆ ಮಹಾದೇವಿ ಅವರನ್ನು ಸತ್ಕರಿಸಿ ಆಶೀರ್ವಾದ ಪಡೆದರು.

## ಕಲ್ಯಾಣ ನಾಡಿನಲ್ಲಾಗಲಿ ವಚನ ವಿಶ್ವವಿದ್ಯಾಲಯ

**ಬಸವಕಲ್ಯಾಣ:** ವಿಶ್ವಕ್ಕೆ ಸಮಾನತೆ ಸಂದೇಶ ಸಾರಿದ ಕಲ್ಯಾಣ ನಾಡಿನಲ್ಲಿ ವಚನ ವಿಶ್ವವಿದ್ಯಾಲಯ ಸ್ಥಾಪನೆ ಆಗಬೇಕಾದ ಅಗತ್ಯ ಹಿಂದೆಂದಿಗಿಂತಲೂ ಈಗ ಜರೂರಿಯಾಗಿದೆ ಎಂದು ಸಮ್ಮೇಳನಾಧ್ಯಕ್ಷ ಸಾಹಿತಿ ಎಂ.ಜಿ.ದೇಶಪಾಂಡೆ ಅಭಿಪ್ರಾಯಪಟ್ಟರು.

ಸಸ್ತಾಪುರದಲ್ಲಿ ಶ್ರೀ ಸದ್ಗುರು ಯಲ್ಲಾಲಿಂಗೇಶ್ವರ ಪ್ರಭುಗಳ 31ನೇ ಸ್ಮರಣೋತ್ಸವ, ಜಿಲ್ಲಾ ಆಧುನಿಕ ವಚನ ಸಾಹಿತ್ಯ ಸಮ್ಮೇಳನ ಹಾಗೂ ಮಾತೆ ಶಿವಶರಣೆ ಮಹಾದೇವಿ 52ನೇ ಜನ್ಮ ದಿನ ಕಾರ್ಯಕ್ರಮದಲ್ಲಿ ಸರ್ವಾಧ್ಯಕ್ಷೀಯ ಭಾಷಣ ಮಾಡಿದ ಅವರು, ಈ ನಿಟ್ಟಿನಲ್ಲಿ ಸರ್ಕಾರ ಚಿಂತನೆ ನಡೆಸಲಿ ಎಂದು ಸಲಹೆ ನೀಡಿದರು.

ಕಲ್ಯಾಣ ನಾಡಿನಲ್ಲಿ 12ನೇ ಶತಮಾನದಲ್ಲಿ ಶರಣರು ವಚನಗಳ ಮೂಲಕ ಹೊಸ ಯುಗವನ್ನೇ ಸ್ಥಾಪಿಸಿದರು. ಜಾಗತೀಕ ಮೌಲ್ಯಗಳನ್ನು ಒಳಗೊಂಡಿರುವ ವಚನ ಸಾಹಿತ್ಯ ರಚನೆಯಾದ ಪವಿತ್ರ ನೆಲ ಕಲ್ಯಾಣ. ಈ ನಾಡಿನಲ್ಲಿ ವಚನ ವಿವಿ ಸ್ಥಾಪನೆಯಾಬೇಕು. ಶರಣರ ವಚನಗಳ ಜತೆಗೆ ಆಧುನಿಕ ವಚನಕಾರರ ವಚನಗಳು ಪ್ರಕಟವಾಗುವಂತಾಗಬೇಕು ಎಂದು ಆಶಿಸಿದರು.

ವಚನ ಸಾಹಿತ್ಯ, ಆಧುನಿಕ ವಚನಗಳ ವೈವಿಧ್ಯತೆ, ವಚನಕಾರರ ಬಗ್ಗೆ ಪ್ರಸ್ತಾಪಿಸಿದ ಸಮ್ಮೇಳನಾಧ್ಯಕ್ಷರು, ವಚನಗಳನ್ನು ಬರೆಯುವ ಜತೆಗೆ ನಡೆ ನುಡಿಗಳಲ್ಲಿ ಶುದ್ಧೀಕರಿಸಿಕೊಂಡರೆ ವಚನಗಳು ಬಹುಕಾಲದವರೆಗೆ ಗಟ್ಟಿಯಾಗಿ ನಿಲ್ಲುವ ಜತೆಗೆ ಸಮಾಜಕ್ಕೆ ಮಾರ್ಗದರ್ಶಿಯಾಗಬಲ್ಲವು ಎಂದರು.

ಶರಣರ ವಚನಗಳು ಜನಸಾಮಾನ್ಯರ ಸುಂದರ ಬದುಕಿಗೆ ಬೇಕಿರುವ ಆದರ್ಶ ಮೌಲ್ಯಗಳನ್ನು ಒಳಗೊಂಡಿದ್ದು, ಸಾರ್ವಕಾಲಿಕವೂ ಆಗಿವೆ. ಆಧುನಿಕ ವಚನಕಾರರ ಮೌಲಿಕ ವಚನಗಳು ಸಹ ಪ್ರಕಟಗೊಂಡು ಜನಸಾಮಾನ್ಯರ ಹೃದಯಗಳಿಗೆ ತಟ್ಟಬೇಕು. ಈ ನಿಟ್ಟಿನಲ್ಲಿ ಸರ್ಕಾರ ಮತ್ತು ಸಂಘ-ಸಂಸ್ಥೆಗಳು ಆಧುನಿಕ ವಚನಕಾರರನ್ನು ಗುರುತಿಸಿ ವಚನಗಳನ್ನು ಸಂಪುಟದಲ್ಲಿ ಪ್ರಕಟಿಸಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಆಧುನಿಕ ವಚನಕಾರರು ಅಧ್ಯಯನಶೀಲತೆ ಬೆಳೆಸಿಕೊಂಡು ಮೌಲಿಕ ವಚನಗಳನ್ನು ರಚಿಸಬೇಕು. ಈ ವಚನಗಳು ವಿವಿಧ ಭಾಷೆಗಳಿಗೆ ಭಾಷಾಂತರಗೊಳ್ಳಬೇಕು ಎಂದ ಅವರು, ಸದ್ಗುರು ಶ್ರೀ ಯಲ್ಲಾಲಿಂಗ ಮಠದಿಂದ ಪ್ರತಿವರ್ಷ ಸಮ್ಮೇಳನ ಆಯೋಜಿಸುವ ಮೂಲಕ ಮಹತ್ವದ ಕಾರ್ಯ ಮಾಡಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಈ ಮಠ ರಾಜ್ಯ ಮಟ್ಟದ ಸಮ್ಮೇಳನ ಆಯೋಜಿಸಬೇಕು. ರಾಜ್ಯದ ವಿವಿಧೆಡೆಯ ಆಧುನಿಕ ವಚನಕಾರರಿಗೆ ವೇದಿಕೆ ಕಲ್ಪಿಸಬೇಕು ಎಂದರು.



ಶ್ರೀ ಸದ್ಗುರು ಯಲ್ಲಾಲಿಂಗೇಶ್ವರ ಮೂರ್ತಿಯ ಅದ್ದೂರಿ ಮೆರವಣಿಗೆ ನಡೆಯಿತು.

### ಅಂಬಾರಿ ಮೇಲೆ ವೈಭವದ ಮೆರವಣಿಗೆ

ಶೃಂಗರಿಸಿದ ಆನೆ ಮೇಲೆ ಶ್ರೀ ಸದ್ಗುರು ಯಲ್ಲಾಲಿಂಗೇಶ್ವರ ಮೂರ್ತಿಯ ಸಾಂಸ್ಕೃತಿಕ ವೈಭವದ ಮೆರವಣಿಗೆ ತಾಳ-ಮೇಳ, ವಾದ್ಯಗಳೊಂದಿಗೆ ಸಸ್ತಾಪುರದಲ್ಲಿ ಜರುಗಿತು. ಸದ್ಗುರು ಯಲ್ಲಾಲಿಂಗೇಶ್ವರ ಮಠದಿಂದ ಪ್ರಮುಖ ಬೀದಿಗಳ ಮೂಲಕ ನಡೆದ ಮೆರವಣಿಗೆಯಲ್ಲಿ ಡೊಳ್ಳು ತಂಡ ಹಾಗೂ ಗದಗನ ಮಹಿಳಾ ಡೊಳ್ಳು ತಂಡದ ಪ್ರದರ್ಶನ ಗಮನ ಸೆಳೆಯಿತು. ಕುಂಭ ಕಳಸ ಹೊತ್ತ ಮುತ್ತೈದೆಯರು ಭಕ್ತಿಯಿಂದ ಹೆಜ್ಜೆ ಹಾಕಿದರೆ, ಭಜನಾ ತಂಡದವರು ಮೆರವಣಿಗೆಯುದ್ದಕ್ಕೂ ಭಜನೆ ಮಾಡುತ್ತಿದ್ದರು. ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ ಮೆರವಣಿಗೆಗೆ ಚಾಲನೆ ನೀಡಿದರು. ಪ್ರಭು ಮಡಿವಾಳಪ್ಪ ಪಾಟೀಲ್ ಧ್ವಜಾರೋಹಣ ನೆರವೇರಿಸಿದರು. ಸಮ್ಮೇಳನಾಧ್ಯಕ್ಷ ಸಾಹಿತಿ ಎಂ.ಜಿ.ದೇಶಪಾಂಡೆ, ಗ್ರಾಪಂ ಅಧ್ಯಕ್ಷ ಬ್ರಹ್ಮಾರೆಡ್ಡಿ, ತಾಪಂ ಸದಸ್ಯ ಬಾಲಾಜಿರೆಡ್ಡಿ, ಫಾಳೆಪ್ಪ ರೇಕುಳಗಿ, ಚಂದ್ರಕಾಂತ ಶೇರಿಕಾರ, ಕೃಷ್ಣಪ್ಪ ಬಿರಾದಾರ, ಬೀರಣ್ಣ ಪೂಜಾರಿ, ಬಾಬು ವಾಡಿಪಾಟೀಲ್, ಲಕ್ಷ್ಮಣ ಜಮಾದಾರ, ಚನ್ನಪ್ಪ ಟೊಣ್ಣೆ, ನಾಗಪ್ಪ ನಿಣ್ಣೆ, ಶ್ರೀಕಾಂತ, ಚಂದ್ರಕಾಂತ ಮೇತ್ರೆ, ವೆಂಕಟ ಜಮಾದಾರ, ವಿಠ್ಠಲ, ದಶವಂತ ಬಂಡೆ, ಮಲ್ಲಿಕಾರ್ಜುನ, ಮಾರುತಿ ಜಮಾದಾರ ಪಾಲ್ಗೊಂಡಿದ್ದರು.



ಸಸ್ತಾಪುರದಲ್ಲಿ ಆಯೋಜಿಸಿದ ಶ್ರೀ ಸದ್ಗುರು ಯಲ್ಲಾಲಿಂಗೇಶ್ವರ ಪ್ರಭುಗಳ ಸ್ಮರಣೋತ್ಸವ ಹಾಗೂ ಜಿಲ್ಲಾ 5ನೇ ಆಧುನಿಕ ವಚನ ಸಾಹಿತ್ಯ ಸಮ್ಮೇಳನವನ್ನು ಹಿರಿಯ ಸಾಹಿತಿ ಸೂಗಯ್ಯ ಹಿರೇಮಠ ಉದ್ಘಾಟಿಸಿದರು. ಸಮ್ಮೇಳನಾಧ್ಯಕ್ಷ ಎಂ.ಜಿ.ದೇಶಪಾಂಡೆ, ಶ್ರೀ ಶಿವಾನಂದ ಮಹಾಸ್ವಾಮೀಜಿ, ಮಾತೆ ಮಹಾದೇವಿ ತಾಯಿ, ಶ್ರೀ ಬಸವಪ್ರಭು ಸ್ವಾಮೀಜಿ, ತ್ರಿಪುರಾಂತ ಶ್ರೀ, ಪಂಚಾಕ್ಷರಿ ಶ್ರೀ, ಡಾ.ಗವಿಸಿದ್ಧಪ್ಪ ಪಾಟೀಲ ಉಪಸ್ಥಿತರಿದ್ದರು.

Scanned with CamScanner

### ಖಟಕ ಚಿಂಚೋಳಿಯಲ್ಲಿ ಲಿಂ. ಬಸವಲಿಂಗ ಶ್ರೀಗಳ ಪುಣ್ಯ ಸ್ಮರಣೋತ್ಸವ ಉದ್ಘಾಟನೆ

# ಶರಣರ ತತ್ವಾದರ್ಶ ಮೈಗೂಡಿಸಿಕೊಳ್ಳಿ

■ ವಿಜಯವಾಣಿ ಸುದ್ದಿಜಾಲ ಭಾಲ್ಕಿ

ಮನುಷ್ಯ ಸದಾ ಆನಂದದಿಂದಿರಬೇಕಾದರೆ ಬಸವಾದಿ ಶರಣರ ತತ್ವಾದರ್ಶಗಳನ್ನು ಮೂಗೂಡಿಸಿಕೊಂಡಾಗ ಮಾತ್ರ ಸಾಧ್ಯ ಎಂದು ಸಂಸದ ಭಗವಂತ ಖೂಬಾ ಹೇಳಿದರು.

ತಾಲೂಕಿನ ಖಟಕ ಚಿಂಚೋಳಿ ಗ್ರಾಮದ ಹುಗ್ಗೆಳ್ಳಿ ಹಿರೇಮಠದಲ್ಲಿ ಸೋಮವಾರ ನಡೆದ ಮಹಾತಪಸ್ವಿ ಲಿಂ ಬಸವಲಿಂಗ ಶ್ರೀಗಳ 66ನೇ ಪುಣ್ಯಸ್ಮರಣೋತ್ಸವದಲ್ಲಿ ಮಾತನಾಡಿದ ಅವರು, ಇಂಥ ಧಾರ್ಮಿಕ ಕ್ಷೇತ್ರದಲ್ಲಿ ಹಗಲಿರಳು ಶ್ರಮಿಸುತ್ತಿರುವ ಮಠ-ಮಾನ್ಯಗಳಿಗೆ ಅನುದಾನ ನೀಡಬೇಕು.

ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಅಶೋಕ ಖೇಣಿ ಮಾತನಾಡಿ, ಶರಣರ ತತ್ವಗಳು ಕೇವಲ ಹೇಳಿಕೆಗೆ ಸೀಮತಗೊಳಿಸದೆ ನಿತ್ಯ ಆಚರಣೆಯಲ್ಲಿ ತರಬೇಕು.

> ನಾನು ಪೂರ್ಣ ಪ್ರಮಾಣದ ರಾಜಕಾರಣಿಯಲ್ಲ, ಇಂದು ತಲಾ ತಲಾಂತರಿಂದ ರಾಜಕಾರಣ ಮಾಡುತ್ತಿರುವ ಕೆಲವು ರಾಜಕಾರಣಿಗಳು ನಿಜಾಮನ ಆಡಳಿತ ನಡೆಸುತ್ತಿರುವುದು ಖೇದಕರವಾಗಿದೆ. ನನ್ನ ಕ್ಷೇತ್ರದಲ್ಲಿ ಸೋಲಾರ್ ಪಂಪ್‌ಸೆಟ್ ಮತ್ತು ವೈಫೈ ಸೇವೆ ಒದಗಿಸಿರುವುದು ದೇಶಕ್ಕೆ ಮಾದರಿಯಾಗಿದೆ. ರಾಜಕಾರಣದ ವೈಭವೀಕರಣವಾಗಬಾರದು. ರಾಜಕೀಯದಲ್ಲಿ ಅಧಿಕಾರದಲ್ಲಿರುವವರು, ತಾರತಮ್ಯ ಮಾಡದೇ ಎಲ್ಲರನ್ನೂ ಸಮಾನವಾಗಿ ನೋಡುವ ದೃಷ್ಟಿ ಬೆಳೆಸಿಕೊಳ್ಳಬೇಕು.
>
> । ಅಶೋಕ ಖೇಣಿ, ಶಾಸಕ



ಭಾಲ್ಕಿ ತಾಲೂಕಿನ ಖಟಕ ಚಿಂಚೋಳಿ ಗ್ರಾಮದ ಹುಗ್ಗೆಳ್ಳಿ ಹಿರೇಮಠದಲ್ಲಿ ಜರುಗಿದ ಲಿಂ. ಬಸವಲಿಂಗ ಶ್ರೀಗಳ ಪುಣ್ಯ ಸ್ಮರಣೋತ್ಸವವನ್ನು ಶಾಸಕ ಅಶೋಕ ಖೇಣಿ ಉದ್ಘಾಟಿಸಿದರು. ಶ್ರೀ ಬಸವಲಿಂಗ ದೇವರು ಇದ್ದರು.

ಮಠಾಧೀಶರು ತಾವು ಮಾಡುವ ಕಾರ್ಯಗಳೊಂದಿಗೆ ಶೈಕ್ಷಣಿಕ ಅಭಿವೃದ್ಧಿ ಪಡಿಸುವ ಕಾರ್ಯವಾಗಬೇಕು ಎಂದು ಹೇಳಿದರು.

ಶ್ರೀನಿವಾಸ ಸರಡಗಿಯ ರೇವಣಸಿದ್ಧ ಶ್ರೀ, ಹಿರೇನಾಗಾಂವ ಜಯಶಾಂತಲಿಂಗ ಶ್ರೀ, ಅಭಿನವ ಘನಲಿಂಗ ರುದ್ರಮುನಿ ಶ್ರೀ ಸಾನ್ನಿಧ್ಯ ವಹಿಸಿದ್ದರು. ಮಾಜಿ ಶಾಸಕ ಪ್ರಕಾಶ ಖಂಡ್ರೆ, ಪ್ರೊ. ಚಂದ್ರಕಾಂತ ಬಿರಾದಾರ ಮಾತನಾಡಿದರು. ಡೊಂಗರಗಾಂವನ ಉದಯರಾಜ ದೇಶಿಕೇಂದ್ರ ಶ್ರೀ, ಚಾಂಬಾಳನ ಮುರೇಂದ್ರ ದೇವರು ನೇತೃತ್ವ ವಹಿಸಿದ್ದರು. ಹುಗ್ಗೆಳ್ಳಿಮಠ ಖಟಕಚಿಂಚೋಳಿಯ ರುದ್ರಮುನಿ ದೇವರು, ಶ್ರೀ ಬಸವಲಿಂಗ ದೇವರು ಸಮ್ಮುಖ ವಹಿಸಿದ್ದರು.

ಶಿವಕುಮಾರ ಪರ್ವತಮಠ, ಡಾ.ಕೆ.ಬಿ.ಮಜಗೆ, ದಯಾನಂದ ಸ್ವಾಮಿ, ಶಾಂತಪ್ಪಾ ಕಡಗಂಚಿ, ಡಾ.ಶಶಿಧರ ಹಿಬಾರೆ, ವಿ.ಬಿ.ಯಾದವಾಡ, ಡಾ.ಪ್ರಭುಲಿಂಗ ಸ್ವಾಮಿ, ಧನರಾಜ ಕರಂಜಿ, ಬಾಲಾಜಿ ಪಾಟೀಲ್, ಶಂಕ್ರಯ್ಯಾ ಸ್ವಾಮಿ, ರವಿ ಸ್ವಾಮಿ, ದತ್ತು ಬೆಂಡೆ, ರಾಜೇಂದ್ರ ಸಾಗರ, ಸಂಜೀವಕುಮಾರ ವಿಠಲಪೂರ ಇದ್ದರು. ಹುಗ್ಗೆಳ್ಳಿ ಹಿರೇಮಠದ ಪೂಜ್ಯ ಶ್ರೀ ಬಸವಲಿಂಗದೇವರು ಸ್ವಾಗತಿಸಿದರು. ಶ್ರೀ ರುದ್ರಮುನಿ ದೇವರು ನಿರೂಪಿಸಿದರು. ಶ್ರೀ ಮುರುಗೇಂದ್ರ ದೇವರು ವಂದಿಸಿದರು. ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿಯ ಸದಸ್ಯ ಶಿವಯ್ಯಾ ಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇವೇಳೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಪ್ರೊ. ಚಂದ್ರಕಾಂತ ಬಿರಾದಾರ, ಜಯರಾಜ ದಾಬಶೆಟ್ಟಿ, ಸೋಮನಾಥ ಮುದ್ದಾ, ಸುರೇಶ ಕನಶೆಟ್ಟಿ, ದಿಲೀಪ ಜೊಳದಪ್ಕೆಯವರಿಗೆ ಸನ್ಮಾನಿಸಿ ಸತ್ಕರಿಸಲಾಯಿತು.

# ಗವಿ ಮಠದಲ್ಲಿ ಮಹಾ ಶಿವರಾತ್ರಿ ಆಚರಣೆ

ಬಸವಕಲ್ಯಾಣ : ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿ ಶ್ರೀಮಠದಲ್ಲಿ ಶ್ರೀಗಳಾದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸಾನಿಧ್ಯದಲ್ಲಿ ಮಹಾ ಶಿವರಾತ್ರಿ ಹಿನ್ನಲೆಯಲ್ಲಿ ಸಮಾಹೂಹಿಕ ಇಷ್ಟಲಿಂಗ ಪೂಜೆ ನೆರವೇರಿಸಲಾಯಿತು.

ಅಭಿನವ ಶ್ರೀಗಳು ಭಕ್ತರಿಗೆ ವೀರಶೈವ ಧರ್ಮ ನಿಯಮಾನುಸಾರವಾಗಿಇಷ್ಟಲಿಂಗ ದೀಕ್ಷೆ ಕರುಣಿಸಿದರು. ಎಲ್ಲಾ ಭಕ್ತರು ಇಷ್ಟಲಿಂಗ ಪೂಜೆ ಪ್ರಾತ್ಯಕ್ಷಿಕೆ ಅನುಕರುಣಿಸೂವ ಮೂಲಕ ಸಾಮೂಹಿಕ ಇಷ್ಟಲಿಂಗ ಪೂಜೆ ಸಾಂಗವಾಗಿ ನೆರವೇರಿತು. ಪೂಜೆ ಬಳಿಕ ಶ್ರೀಗಳು ಮಾತನಾಡಿ ಎಲ್ಲರು ಧರ್ಮ ಮಾರ್ಗದಲ್ಲಿ ಮುನ್ನಡೆದು ಪರಮಾತ್ಮನ ಕೃಪೆಗೆ ಪಾತ್ರರಾಗಿ. ಧರ್ಮದಿಂದ ವಿಶ್ವಕ್ಕೆ ಶಾಂತಿ. ಮನಸ್ಸಿನ ಶಾಂತಿಯಿಂದಲೇ ಜೀವನ ಸಾರ್ಥಕಗೊಳಿಸಿಕೊಳ್ಳಬೆಕೆಂದು ಆಶೀರ್ವದಿಸಿದರು.

ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಶಂಕರಗೌಡ ಪಾಟೀಲ ಗಂವಾರ, ದೇಶಮುಖ ಸಾವಕಾರ ಚನ್ನೂರ, ಬಸವರಾಜ ಖನ್ನಾ, ಶಿವಕುಮಾರ ಮಠ, ಪ್ರೊ.ಸೂರ್ಯಕಾಂತ ಶೀಲವಂತ, ಪ್ರೊ. ರುದ್ರೇಶ್ವರ ಸ್ವಾಮಿ ಪುರವಂತ, ಸದಾನಂದ ಕಣಾಜೆ, ಗೋರ್ಟಾ, ಕಾಶಿನಾಥ ಸ್ವಾಮಿ, ಶಾಂತವೀರ ಸ್ವಾಮಿ ಅನೇಕರು ರೇವಣಸಿದ್ದಯ್ಯಾ ವಸ್ತದ, ರಾಕೇಶ ಉಪಸ್ಥಿತರಿದ್ದರು.



ಬಸವಕಲ್ಯಾಣ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿ ಘುಠದಲ್ಲಿ ಮಹಾ ಶಿವರಾತ್ರಿ ನಿಮಿತ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸಾನಿಧ್ಯದಲ್ಲಿ ಇಷ್ಟಲಿಂಗ ಪೂಜೆ ಕಾರ್ಯಕ್ರಮ ನೆರವೇರಿಸಲಾಯಿತು.

ಸಂಯುಕ್ತ ಕರ್ನಾಟಕ ಸೋಮವಾರ, 27, ಫೆಬ್ರವರಿ, 2017, ಕಲಬುರಗಿ

Scanned with CamScanner

# ತ್ರಿಪುರಾಂತ ಗವಿ ಮಠ : ಕ್ಯಾಲೇಂಡರ್ ಬಿಡುಗಡೆ

ಬಸವಕಲ್ಯಾಣ : ನಗರದ ಇತಿಹಾಸ ಪ್ರಸಿದ್ಧ ತ್ರಿಪೂರಾಂತ ಗವಿ ಮಠದಲ್ಲಿ ಶ್ರೀ ರಾಚೋಟೇಶ್ವರ ಪೂರ್ವ ಪ್ರಾಥಮಿಕ ಶಾಲೆಯ ವತಿಯಿಂದ ಪೂಜ್ಯ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರು ಹಾಗೂ ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಭಾವಚಿತ್ರಗಳುಳ್ಳ ಮೀನಿ ಕ್ಯಾಲೇಂಡರನ್ನು ಗಡಿಗೌಂಡಗಾಂವ್ ಶಾಂತವೀರ ಶಿವಾಚಾರ್ಯರು ಬಿಡುಗಡೆ ಮಾಡಿದರು.

ಬಳಿಕ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಸರ್ವಾಂಗೀಣ ಅಭಿವೃದ್ಧಿ ಕಾರ್ಯಕ್ಕಾಗಿ ಶಾಲೆಯ ಅಧ್ಯಕ್ಷ ಕಾಶಿನಾಥ, ಬಸವರಾಜ ಸ್ವಾಮಿ ಚಿಕ್ಕ ವಯಸ್ಸಿನಲ್ಲಿ ಪಡೆದ ಕಷ್ಟ ಮುಂದಿನ ಪೀಳಿಗೆಗೆ ಗುಣಮಟ್ಟದ ಶಿಕ್ಷಣ ಜತೆಗೆ ಸಂಸ್ಕೃತಿ ಕಲಿಸುವಂತೆ ಶ್ರೀ ರಾಚೋಟೇಶ್ವರ ಪೂರ್ವ ಪ್ರಾಥಮಿಕ ಶಾಲೆ ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯವಾಗಿದೆ ಎಂದರು.

ಮಹಾರಾಷ್ಟ್ರದ ಅಚಲೇರಿ ಮಠಶ್ರೀ ಶಿವಮೂರ್ತಿ ಶಿವಾಚಾರ್ಯರು, ಜವಳಿಮಠಶ್ರೀ ಗಂಗಾಧರ ಶಿವಾಚಾರ್ಯರು, ಗವಿ ಮಠ ಟ್ರಸ್ಟ್ ಕಾರ್ಯಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆಯ ತಾಲ್ಲೂಕು ಘಟಕದ ಅಧ್ಯಕ್ಷ ಬಸವಂತಪ್ಪ ಲವಾರೆ, ಶರಣೆ ಹೇಮರಡ್ಡಿ ಮಲ್ಲಮ್ಮ ಸಮಾಜದ ತಾಲ್ಲೂಕು ಘಟಕ ಅಧ್ಯಕ್ಷ ಮಲ್ಲರೆಡ್ಡಿ ಪಾಟೀಲ್, ಗಂಗಾಧರ ಸ್ವಾಮಿ, ಸೂರ್ಯಕಾಂತ ಈರಣ್ಣ ಉಪಸ್ಥಿತರಿದ್ದರು.



ಬಸವಕಲ್ಯಾಣ ತ್ರಿಪೂರಾಂತ ಗವಿ ಮಠದಲ್ಲಿ ಶ್ರೀ ರಾಚೋಟೇಶ್ವರ ಪೂರ್ವ ಪ್ರಾಥಮಿಕ ಶಾಲೆಯಿಂದ ಹೊಸ ನೂತನ ಕ್ಯಾಲೇಂಡರನ್ನು ಗಡಿಗೌಂಡಗಾಂವ ಶ್ರೀ ಶಾಂತವೀರ ಶಿವಾಚಾರ್ಯರು ಬಿಡುಗಡೆ ಮಾಡಿದರು.

ಸಂಯುಕ್ತ ಕರ್ನಾಟಕ ಭಾನುವಾರ, 8, ಜನವರಿ, 2017, ಕಲಬುರಗಿ

# ತ್ರಿಪುರಾಂತನಲ್ಲಿ ಪ್ರವಚನಕ್ಕೆ ಚಾಲನೆ

■ **ವಿಜಯವಾಣಿ ಸುದ್ದಿಜಾಲ** ಬಸವಕಲ್ಯಾಣ

ಮಡಿವಾಳ ಮಾಚಿದೇವರು ಜನಮನದ ಮೈಲಿಗೆಯನ್ನು ತೊಳೆದ ಶ್ರೇಷ್ಠ ಶರಣರಾಗಿದ್ದರು ಎಂದು ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶ್ರೀಗಳು ನುಡಿದರು.

ಇಲ್ಲಿನ ತ್ರಿಪುರಾಂತನಲ್ಲಿ ಮಡಿವಾಳ ಮಾಚಿದೇವರ ಜಾತ್ರಾಮಹೋತ್ಸವ ನಿಮಿತ್ತ ಆಯೋಜಿಸಿದ ಪ್ರವಚನ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ಭಕ್ತರಾದವರು ಭಗವಂತನಲ್ಲಿ ಅಚಲವಾದ ಭಕ್ತಿಯುಳ್ಳವನಾಗಿರಬೇಕು ಎಂದರು.

ಭಕ್ತಿಯಲ್ಲಿ ವಂಚನೆ ಇರಕೂಡದು. ಗುರು, ಲಿಂಗ ಮತ್ತು ಜಂಗಮ ಅರಿತಲ್ಲದೆ ಭಕ್ತನಿಗೆ ಪರಮಾತ್ಮನ ದರ್ಶನನಾಗುವುದಿಲ್ಲ. ಜಂಗಮರು ಶಂಭುವಿನ ಅವತಾರವೆಂಬುದು ಮಡಿವಾಳ ಮಾಚಯ್ಯನವರು ತಮ್ಮ ವಚನಗಳಲ್ಲಿ ತೋರಿಸಿಕೊಟಿದ್ದಾರೆ ಎಂದರು.

ಪ್ರವಚನಕಾರ ಅಮರೇಶ್ವರ ಶಾಸ್ತ್ರೀಗಳು ಮಾತನಾಡಿದರು. ಬಸಲಿಂಗಪ್ಪ ರಾಜೋಳೆ, ಮಡಿವಾಳಪ್ಪ ಪೊಲೀಸ್ ಪಾಟೀಲ, ಬಾಬು ಬಿರಾದಾರ, ನಾಗಯ್ಯ ಸ್ವಾಮಿ, ರಾಜಕುಮಾರ ಮುಚಳಂಬೆ, ಚಂದ್ರಕಾತ ಚನ್ನಮಲ್ಲೆ, ಬಸವರಾಜ ಮಾಲಿಪಾಟೀಲ್, ಮಾಹಾದೇವ ಚನ್ನಮಲ್ಲೆ, ದಯಾನಂದ ಪರ್ತಾಪುರೆ, ಮಡಿವಾಳಯ್ಯಾ ಸ್ವಾಮಿ, ಆಕಾಶ ಹೀರೆಮಠ ಇತರರಿದ್ದರು. ಬಕ್ಕಯ್ಯ ಸ್ವಾಮಿ ನಿರೂಪಿಸಿದರು.



ಬಸವಕಲ್ಯಾಣ ನಗರದ ತ್ರಿಪುರಾಂತನಲ್ಲಿ ಮಡಿವಾಳ ಮಾಚಿದೇವರ ಜಾತ್ರಾಮಹೋತ್ಸವ ನಿಮಿತ್ತ ಆಯೋಜಿಸಿದ ಪ್ರವಚನ ಕಾರ್ಯಕ್ರಮವನ್ನು ಅಭಿನವ ಘನಲಿಂಗ ರುದ್ರಮುನಿ ಶ್ರೀ ಉದ್ಘಾಟಿಸಿದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಶುಕ್ರವಾರ 13 ಜನವರಿ 2017 13 JANUARY 2017

ವಿವಿಧೆಡೆ ಸ್ವಾಮಿ ವಿವೇಕಾನಂದರ 154ನೇ ಜಯಂತಿ | ಭವ್ಯ ಶೋಭಾಯಾತ್ರೆ | ಜಯಂತಿ ನಿ

# ಸಾಧನೆಗೆ ಆತ್ಮವಿಶ್ವಾಸ ಅಗತ್ಯ

■ **ವಿಜಯವಾಣಿ ಸುದ್ದಿಜಾಲ** ಬಸವಕಲ್ಯಾಣ

ಜೀವನದಲ್ಲಿ ಮಹತ್ವದ ಸಾಧನೆಗೆ ಅಚಲವಾದ ಆತ್ಮವಿಶ್ವಾಸ ಮತ್ತು ಸಕಾರಾತ್ಮಕ ಆಲೋಚನೆ ಅಗತ್ಯವಾಗಿದೆ ಎಂದು ಪುಣೆಯ ದಾದಾ ಮಹಾರಾಜ ನಗರಕರ್ ಹೇಳಿದರು.

ಎಬಿವಿಪಿ ಬಸವಕಲ್ಯಾಣ ಶಾಖೆಯಿಂದ ನಗರದ ಸದ್ಗುರು ಸದಾನಂದ ಸ್ವಾಮಿ ಮಠದ ಪರಿಸರದಲ್ಲಿ ಸ್ವಾಮಿ ವಿವೇಕಾನಂದರ 154ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸತತ ಪರಿಶ್ರಮದಿಂದ ಮಾತ್ರ ಸಾಧನೆ ಮಾಡಲು ಸಾಧ್ಯ. ಹೀಗಾಗಿ ವಿವೇಕಾನಂದರ ತತ್ವಾದರ್ಶಗಳಿಂದ ಇಂದಿನ ಯುವಕರು ಸ್ಫೂರ್ತಿ ಪಡೆಯಬೇಕು ಎಂದು ಕಿವಿ ಮಾತು ಹೇಳಿದರು.



ಎಬಿವಿಪಿ ಬಸವಕಲ್ಯಾಣ ಶಾಖೆಯಿಂದ ನಗರದ ಸದ್ಗುರು ಸದಾನಂದ ಸ್ವಾಮಿ ಮಠದ ಪರಿಸರದಲ್ಲಿ ಸ್ವಾಮಿ ವಿವೇಕಾನಂದರ 154ನೇ ಜಯಂತಿಯನ್ನು ದಾದಾ ಮಹಾರಾಜ ನಗರಕರ್ ಉದ್ಘಾಟಿಸಿದರು. ತ್ರಿಪುರಾಂತ ಶ್ರೀ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
ಶುಕ್ರವಾರ 13 ಜನವರಿ 2017 13 JANUARY 2017

Scanned with CamScanner




Scanned with CamScanner